ಜಂಗಮ ಪುಂಗವರು

ಭಾಗ-೨

ಡಾ. ಎಂ. ಎಸ್. ಲಠ್ಠೆ



ಸದ್ಭಾವಗೋಷ್ಠಿ ಗದ್ದುಗೆಮಠ, ಗುಲಬರ್ಗಾ

ಜಂಗಮ ಪುಂಗವರು (ಭಾಗ ಎರಡು) : ಲೇಖಕರು : ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ, ಕನ್ನಡ ಪ್ರಾಧ್ಯಾಪಕರು (ನಿವೃತ್ತ) ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
ಪ್ರಕಾಶಕರು : ಸದ್ಭಾವಗೋಷ್ಠಿ ಗದ್ದುಗೆಮಠ ಮಕ್ತಂಪುರ, ಗುಲಬರ್ಗಾ.

ಮೊದಲ ಮುದ್ರಣ : ೨೦೦೫

ಪ್ರತಿಗಳು : ೧೦೦೦

ಪುಟಗಳು : xviii + ೧೫೪

ಬೆಲೆ : ರೂ. ೫೦/-

ಮುಖಪುಟ ವಿನ್ಯಾಸ :
ರವೀಂದ್ರ ವಿಶ್ವಜ್ಞ, ಧಾರವಾಡ.

ಮುದ್ರಕರು :
ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್
ಕಾಗದಗೇರಿ ಓಣಿ, ಗದಗ - ೫೮೨ ೧೦೧.
✆ (೦೮೩೭೨) ೨೩೭೫೬೬, ೨೩೫೫೦೯ (ಆ) ೨೩೬೫೭೮ (ಮ)

ಅರ್ಪಣೆ



ಶ್ರೀ ಮ. ನಿ. ಪ್ರ. ರೇವಣಸಿದ್ಧ ಮಹಾಸ್ವಾಮಿಗಳು
ಗದ್ದುಗೆಮಠ, ಕಲಬುರ್ಗಿ, ಹುಬ್ಬಳ್ಳಿ.

ಶುಭ ನುಡಿ

''ಅಯ್ಯಾ ನಿಮ್ಮ ಶರಣರು ಮೆಟ್ಟಿದ ಧರೆ ಪಾವನವಯ್ಯಾ
ಅಯ್ಯಾ ನಿಮ್ಮ ಶರಣರಿದ್ದ ಪುರವೆ ಕೈಲಾಸಪುರವಯ್ಯಾ
ಅಯ್ಯಾ ನಿಮ್ಮ ಶರಣರು ನಿಂದುದೆ ನಿಜನಿವಾಸವಯ್ಯಾ
ಚನ್ನಮಲ್ಲಿಕಾರ್ಜುನಯ್ಯಾ''......................

ಕನ್ನಡನಾಡು ಪುಣ್ಯದಬೀಡು, ಅನೇಕ ವರ್ಷಗಳಿಂದ ಈ ನಾಡನ್ನು ಬೆಳಗಿದವರು ಶರಣರೂ ಯೋಗಿಗಳೂ, ತಪಸ್ವಿಗಳೂ, ಜಂಗಮ ಪುಂಗವರೂ ಸಮಾಜ ಸುಧಾರಕರೂ , ಧರ್ಮದ ಕಾರ್ಯದಲ್ಲಿ ತಮ್ಮದೆ ಶಕ್ತಿಯಿಂದ ಸಾಹಸದ ಕಾರ್ಯಮಾಡಿ ಅಮರರಾಗಿದ್ದಾರೆ. ಈ ಪಂಕ್ತಿಗೆ ಸೇರಿದ ಶರಣರು ಈ ನಾಡಿನಲ್ಲಿ ಬೆಳಗಿ ಇಂದಿಗೂ ಅವರ ಕಾರ್ಯ ಭಕ್ತಸಮೂಹಕ್ಕೆ ಮಾರ್ಗದರ್ಶನವಾಗಿದೆ.

ಕಲಬುರ್ಗಿಗದ್ದುಗೆಮಠ ಪ್ರಾಚೀನಪರಂಪರೆಯ ಮಠವಾಗಿದೆ. ಶ್ರೀಮಠದ ಅನೇಕಪೂಜ್ಯರು ಭಕ್ತರಿಗೆ ಮಾರ್ಗದರ್ಶನ ಮಾಡುತ್ತ ಬಂದವರಾಗಿದ್ದಾರೆ. ಕನ್ನಡನಾಡಿನ ಜನತೆಯ ನೈತಿಕ, ಧಾರ್ಮಿಕ, ಆಧ್ಯಾತ್ಮಿಕ, ಕಲ್ಯಾಣರಾಜ್ಯದ ನಿರ್ಮಾಣಕ್ಕಾಗಿ ಶ್ರಮಿಸುತ್ತಿರುವದು ಸಂತಸದ ಸಂಗತಿಯಾಗಿದೆ. ಜನಸೇವೆಯೇ ಜನಾರ್ಧನಸೇವೆ ಎಂಬ ಆರ್ಷ ವಾಣಿಯಲ್ಲಿ ನಂಬಿಗೆಯನ್ನಿಟ್ಟು ಪ್ರತಿವರ್ಷ ಸದ್ಭಾವಗೋಷ್ಠಿಯ ಆಶ್ರಯದಲ್ಲಿ ಗ್ರಂಥ ಪ್ರಕಟನೆಯ ಕಾರ್ಯ ನಡೆಸಿಕೊಂಡು ಬಂದಿರುವದು ಹರ್ಷದ ಕಾರ್ಯವಾಗಿದೆ.

ಎರಡನೆಯ ಭಾಗ ''ಜಂಗಮ ಪುಂಗವರು'' ಎಂಬ ಪುಸ್ತಕ ಬರೆದ ಸಂಶೋಧಕರು, ಸಂಪಾದಕರು, ಲೇಖಕರು, ವಿದ್ವಾಂಸರಾದ ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆಯವರು ಕಂಡದ್ದನ್ನು, ನೋಡಿದ್ದನ್ನು, ಕೇಳಿದ್ದನ್ನು ಅನಿಸಿದ್ದನ್ನು ಓದಿದ್ದನ್ನು ವಾಸ್ತವ ಜೀವನವನ್ನು ಮುಕ್ತಮನಸ್ಸಿನಿಂದ ಬರೆದಿದ್ದಾರೆ. ಈ ಪುಸ್ತಕದಲ್ಲಿ ಜಗದ್ಗುರುಗಳು, ಉಪಾಚಾರ್ಯರು, ಶರಣರು

ಕೈಕೊಂಡ ಧಾರ್ಮಿಕ, ಸಾಮಾಜಿಕ ಸೇವೆಯನ್ನು ಹೃದಯಂಗಮವಾಗಿ ಬರೆದಿದ್ದಾರೆ. ಶಾಲೆ, ಕಾಲೇಜ, ಪ್ರಸಾದನಿಲಯ ಚರ್ಚಾಗೋಷ್ಠಿಗಳು ನಿರಾಶೆ ಹೊಂದಿದ ಭಕ್ತರಿಗೆ ಧೈರ್ಯ ತುಂಬಿ ಅವರ ಬದುಕಿಗೆ ಮಾರ್ಗದರ್ಶನ ನೀಡಿದ ಅನೇಕ ವಿಷಯಗಳನ್ನು ಬರೆದಿದ್ದಾರೆ.

ಲಿಂ. ಹಾನಗಲ್ ಕುಮಾರ ಮಹಾಸ್ವಾಮಿಗಳಿಂದ ಸ್ಥಾಪಿತವಾದ "ಅಖಿಲಭಾರತ ವೀರಶೈವ ಮಹಾಸಭೆಯ" ಶತಮಾನೋತ್ಸವದ ಸವಿನೆನಹಿನಲ್ಲಿ ಈ ಪುಸ್ತಕ ಮುದ್ರಣವಾಗುತ್ತಿದೆ. ಶ್ರೀಮಠದ ಸದ್ಭಾವಗೋಷ್ಠಿಯ ಮೂವತ್ತೆಂಟನೆಯ ವಾರ್ಷಿಕೋತ್ಸವದಲ್ಲಿ ಈ ಗ್ರಂಥ ಜನತೆಯ ಕೈಗೆ ಬರುತ್ತಿದೆ. ಈ ಪುಸ್ತಕದ ಮುದ್ರಣದ ವೆಚ್ಚವನ್ನು ಮಹಾತ್ಮಾಬಸವೇಶ್ವರನಗರದ ನಿವಾಸಿಗಳಾದ ಶ್ರೀ ನೀಲಕಂಠಪ್ಪ ರಾಜಾಪೂರ ಅವರು ತುಂಬ ಹೃದಯದಿಂದ ಧನಸಹಾಯ ನೀಡಿದ್ದಾರೆ. ಇವರಿಗೆ ಬಸವಾದಿ ಶರಣರು ಮಂಗಲವನ್ನು ನೀಡಲಿ. ಗ್ರಂಥ ಬರೆದ ಡಾ. ಲಠ್ಠೆಯವರಿಗೆ, ಸದ್ಭಾವಗೋಷ್ಠಿಯಲ್ಲಿ ದುಡಿಯುವ, ಶ್ರೀ ಶಿವಶರಣಪ್ಪ ಗೋಣಿ, ಶಂಕ್ರಪ್ಪ ಕಿಣಗಿ, ಶ್ರೀ ಬಸವರಾಜ ಭೀಮಳ್ಳಿ ಡಾ. ಬಸವರಾಜ ಸುರಳಿಕೇರಿಮಠ, ಚಂದ್ರಶೇಖರ ಮಾಸ್ತರ, ಶ್ರೀ ಶಿವಶರಣಪ್ಪ ಜೀವಣಗಿ, ಶ್ರೀ ಶಿವಶಂಕ್ರಪ್ಪ ಕಾಳಗಿ, ಡಾ. ಸಂಗಮೇಶ ಪಾಟೀಲ, ಶ್ರೀ ಎಂ. ಬಿ. ಓಣಿ, ಶ್ರೀ ಬಸವಣ್ಣೆಪ್ಪ ಉದನೂರು, ರೇಣುಕಾನಂದ ಚೌದ್ರಿ ಪ್ರತ್ಯಕ್ಷ ಅಪ್ರತ್ಯಕ್ಷ ಸೇವೆ ಸಲ್ಲಿಸುವ ಶರಣಬಳಗಕ್ಕೆ ಶುಭಮಂಗಲವನ್ನು ಶ್ರೀ ಗುರುದೇವನು ದಯಪಾಲಿಸಲೆಂದು ಹಾರೈಸುತ್ತೇವೆ.

ಸತ್ಯಂ ಶಿವಂ ಸುಂದರಂ

ಶ್ರೀ ಮ. ನಿ. ರೇವಣಸಿದ್ಧ ಮಹಾಸ್ವಾಮಿಗಳು
ಗದ್ದುಗೆಮಠ

ಲೇಖಕರ ನುಡಿ

ಕಲಬುರ್ಗಿ ಗದ್ದುಗೆಮಠದ ಪೂಜ್ಯ ಶ್ರೀ ಮ. ನಿ. ಪ್ರ. ರೇವಣಸಿದ್ಧ ಮಹಾಸ್ವಾಮಿಗಳವರ ಕೃಪಾಬಲದಿಂದ ಕ್ರಿ. ಶ. ೨೦೦೪ರಲ್ಲಿ ನಾನು ಆಗಾಗ ಬರೆದಿದ್ದ ಮಠದ ಪೀಠಾಧಿಪತಿಗಳ ಚರಿತ್ರೆಗೆ ಸಂಬಂಧಿಸಿದ ಲೇಖನಗಳನ್ನು 'ಜಂಗಮ ಪುಂಗವರು ಭಾಗ–ಒಂದು' ಹೆಸರಿನಲ್ಲಿ ಪ್ರಕಟಿಸಲಾಗಿತ್ತು. ಈ ವರುಷವೂ ಸದ್ಭಾವ ಗೋಷ್ಠಿಯ ವಾರ್ಷಿಕೋತ್ಸವದಲ್ಲಿ ಮತ್ತೆ ಭಾಗ–ಎರಡು ಜಂಗಮ ಪುಂಗವರು' ಗ್ರಂಥ ಪ್ರಕಟಗೊಳ್ಳುತ್ತಿರುವುದು ನನಗೆ ಸಂತೋಷ ವನ್ನುಂಟು ಮಾಡಿರುವುದು. ಪೂಜ್ಯ ಶ್ರೀ ಮ. ನಿ. ಪ್ರ. ರೇವಣ ಸಿದ್ಧಮಹಾಸ್ವಾಮಿಗಳವರಿಗೆ ಈ ಗ್ರಂಥವನ್ನು ಸಕಲಸದ್ಭಕ್ತರ ಪರವಾಗಿ ಅರ್ಪಿಸುವೆ.

ನಾನು ಆಗಾಗ ಬರೆದು ಪ್ರಕಟಿಸಿದ ಬಿಡಿಬಿಡಿ ಲೇಖನಗಳಾಗಿರುವ ೧. ಶ್ರೀಮದ್ರಂಭಾಪುರೀಪೀಠದ ವೀರಗಂಗಾಧರ ಜಗದ್ಗುರುಗಳು ೨. ಕೇದಾರಪೀಠದ ಜಗದ್ಗುರು ಶಾಂತಲಿಂಗ ಶಿವಾಚಾರ್ಯರು. ೩. ನಾಲವಾರದ ಕೋರಿಸಿದ್ಧೇಶ್ವರ ಮಹಾಸ್ವಾಮಿಗಳು. ೪. ಹಾರಕೂಡದ ಸದ್ಗುರು ಚನ್ನಬಸವ ಶಿವಯೋಗಿಗಳು ೫. ಭಾಲ್ಕಿಯ ಡಾ. ಚನ್ನಬಸವ ಪಟ್ಟದ್ದೇವರು. ೬. ತೇರದಾಳದ ಕಾಡದೇವರ ಸ್ವಾಮಿಗಳು ೭. ಚಿಕೇನಕೊಪ್ಪದ ಚನ್ನವೀರ ಶರಣರು ೮. ಮಹಾಲಿಂಗಪುರದ ಚನ್ನವೀರ ಶಿವಯೋಗಿಗಳು ೯. ಕಾದ್ರೊಳ್ಳಿಯ ಅಪ್ಪಯ್ಯ ಮಹಾಸ್ವಾಮಿಗಳು–ಈ ಒಂಭತ್ತು ಲೇಖನಗಳು 'ಜಂಗಮ ಪುಂಗವರು ಭಾಗ– ಎರಡು' ಗ್ರಂಥದಲ್ಲಿರುವವು. ಜಂಗಮ ಪುಂಗವರು ಭಾಗ ಒಂದರಲ್ಲಿ ೧. ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳು ೨. ಧಾರವಾಡದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ೩. ಹುಬ್ಬಳ್ಳಿಯ ಡಾ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ೪. ಗದುಗಿನ ಸಿದ್ಧಲಿಂಗ ಮಹಾಸ್ವಾಮಿಗಳು ೫. ಸಿದ್ಧಗಂಗಾಮಠದ ಡಾ. ಶಿವಕುಮಾರ

ಮಹಾಸ್ವಾಮಿಗಳು ೬. ನಿಂಬಾಳದ ಶ್ರೀಜಡೆಯಶಾಂತಲಿಂಗ ಮಹಾಸ್ವಾಮಿಗಳು ೭. ಕಲಬುರ್ಗಿ ಗದ್ದುಗೆಮಠದ ಆದಿರೇವಣಸಿದ್ಧ ಮಹಾಸ್ವಾಮಿಗಳು ೮. ಚರಲಿಂಗೇಶ್ವರ ಮಹಾಸ್ವಾಮಿಗಳು ೯. ಶಿವಮೂರ್ತಿ ಮಹಾಸ್ವಾಮಿಗಳು ೧೦. ನಿಡಸೋಸಿ ಜಗದ್ಗುರು ದುರದುಂಡೀಶ್ವರ ಮಹಾಸ್ವಾಮಿಗಳು ೧೧. ಶ್ರೀ ರೇವಣಸಿದ್ಧ ಮಹಾಸ್ವಾಮಿಗಳು ಹೀಗೆ ಒಟ್ಟು ಹನ್ನೊಂದು ಲೇಖನಗಳನ್ನು ಪ್ರಕಟಿಸಲಾಗಿತ್ತು. ಸ್ವಾಮಿಗಳ ಚರಿತ್ರೆ ಹೀಗೆಯೆ ಮುಂದುವರಿಯಲಿದೆ.

ಭಾಗ ಒಂದು ಗ್ರಂಥ ಪ್ರಕಟನೆಗೆ ಧನಸಹಾಯ ನೀಡಿದ ಗ್ರಂಥ ದಾಸೋಹಿ ಡಾ. ಸಂಗಮೇಶ ಪಾಟೀಲರೇ ತಮ್ಮ ಸ್ನೇಹಿತರಾದ ಶ್ರೀ ನೀಲಕಂಠಪ್ಪ ರಾಜಾಪುರ ಅವರಿಂದ ಭಾಗ ಎರಡರ ಗ್ರಂಥ ಪ್ರಕಟಣೆಗೆ ಧನಸಹಾಯ ಒದಗಿಸಿಕೊಟ್ಟಿದ್ದಾರೆ. ಡಾ. ಸಂಗಮೇಶ ಪಾಟೀಲ ಮತ್ತು ಶ್ರೀ ನೀಲಕಂಠಪ್ಪ ರಾಜಾಪುರ ಅವರೀರ್ವರಿಗೂ ನಾನು ಉಪಕೃತನಿರುವೆ. ಈ ಗ್ರಂಥಕ್ಕೂ 'ಶುಭನುಡಿ' ಬರೆದು ಕೊಟ್ಟು ಆಶೀರ್ವದಿಸಿರುವ ಪೂಜ್ಯ ಶ್ರೀ ಮ.ನಿ.ಪ್ರ. ರೇವಣಸಿದ್ಧ ಮಹಾಸ್ವಾಮಿಗಳವರಿಗೆ ನನ್ನ ಅನಂತಾನಂತ ಪ್ರಣಾಮಗಳು. ತಮ್ಮ ಸದ್ಭಾವಗೋಷ್ಠಿಯ ಪರವಾಗಿ ಈ ಗ್ರಂಥವನ್ನು ಪ್ರಕಟಿಸಿರುವ ಸದ್ಭಾವಗೋಷ್ಠಿಯ ಸಂಚಾಲಕರಾದ ಉತ್ಸಾಹಿ ಶ್ರೀ ಶಿವಶರಣಪ್ಪ ಗೋಗಿ ಮತ್ತು ಇತರ ಸದಸ್ಯರಿಗೂ ಅಂದವಾಗಿ ಮುದ್ರಣ ಮಾಡಿಕೊಟ್ಟ ಗದುಗಿನ ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್ ಸಂಚಾಲಕರಾದ ಶ್ರೀ ಕೆ. ಅಶೋಕ ಮತ್ತು ಉಳಿದ ಸಿಬ್ಬಂದಿಗೂ ನಾನು ಆಭಾರಿಯಿದ್ದೇನೆ. ಸಾರಸ್ವತ ಪ್ರಪಂಚ ಈ ಕೃತಿಯನ್ನು ಸಾದರದಿಂದ ಸ್ವಾಗತಿಸುವರೆಂದು ಬಲವಾಗಿ ನಂಬಿರುವೆ.

೨–೮–೨೦೦೫ ಡಾ. ಮಲ್ಲಿಕಾರ್ಜುನ ಶಿವಪ್ಪ ಲಠ್ಠೆ

ಕನ್ನಡ ಪ್ರಾಧ್ಯಾಪಕ (ನಿವೃತ್ತ)

ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಗ್ರಂಥದಾನಿಗಳ ಪರಿಚಯ



ಶ್ರೀ ನೀಲಕಂಠಪ್ಪ ಶ್ರೀಮತಿ ಕಾಂತಾಬಾಯಿ ರಾಜಾಪೂರ ದಂಪತಿಗಳು

ಶ್ರೀ ನೀಲಕಂಠಪ್ಪ ರಾಜಾಪೂರ ಅವರು ದಿ. ೧೮-೬-೧೯೪೦ರಂದು ಗುಲಬರ್ಗಾ ಜಿಲ್ಲಾ ಚಿತ್ತಾಪೂರತಾಲೂಕ ಕೊಡದೂರಗ್ರಾಮದಲ್ಲಿ ಜನಿಸಿರುವರು. ಇವರ ತಂದೆ ಮರಿಯಪ್ಪನವರು, ತಾಯಿ ಸಂಗಮ್ಮ. ತಂದೆ-ತಾಯಿಗಳ ಇಚ್ಛೆಯಂತೆ ಹಿರಿಯ ಮಗ ನೀಲಕಂಠಪ್ಪನವರು ಕಲಬುರ್ಗಿಯಲ್ಲಿದ್ದು ಶರಣಬಸವೇಶ್ವರ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಜಾಣ ವಿದ್ಯಾರ್ಥಿಯಾಗಿ ಪರಿಶ್ರಮಪಟ್ಟು ಬಿ.ಎ. ಪದವಿಯನ್ನೂ ಎಚ್.ಕೆ.ಇ. ಸಂಸ್ಥೆಯ ಲಾ ಕಾಲೇಜಿನಲ್ಲಿ ಕಾನೂನು ಅಭ್ಯಾಸ ಮಾಡಿ ಎಲ್.ಎಲ್.ಬಿ. ಪದವಿಯನ್ನೂ ಸಂಪಾದಿಸಿಕೊಂಡರು.

ಶ್ರೀ ನೀಲಕಂಠಪ್ಪನವರ ತಂದೆ ಮರಿಯಪ್ಪ ಮತ್ತು ತಾಯಿ ಸಂಗಮ್ಮನವರು ದೊಡ್ಡ ಗುಣದವರಾಗಿದ್ದರು. ಕೂಲಿಯಾಳುಗಳನ್ನು ತಮ್ಮ ಮನೆಯ ಮಕ್ಕಳಂತೆಯೇ ನೋಡಿಕೊಳ್ಳುತ್ತಿದ್ದರು. ನೂರಾ ಐವತ್ತು ಎಕರೆ ಭೂಮಿಯನ್ನು ನೂರಾರು ದನಕರುಗಳ, ನೂರಾರು ಮಾವಿನ ಮರಗಳ ಸಂಪತ್ತು ಹೊಂದಿದ್ದ

ಮರಿಯಪ್ಪನವರು ಕನ್ನಡಾಭಿಮಾನಿಗಳೂ ಆಗಿದ್ದರು. ನಿಜಾಮನ ಆಡಳಿತದಲ್ಲಿ ಬಹುದೂರದಿಂದ ತಮ್ಮ ಆಳುಮನುಷ್ಯನಿಂದ ಕಸ್ತೂರಿ, ಕರ್ಮವೀರ ಮತ್ತು ಸಂಯುಕ್ತ ಕರ್ನಾಟಕ ಕನ್ನಡ ಪತ್ರಿಕೆಗಳನ್ನು ಓದಲು ತರಿಸುತ್ತಿದ್ದರು.

ಶ್ರೀ ನೀಲಕಂಠಪ್ಪನವರ ಮನೆ ದೇವರು ದಂಡಗುಂಡ ಬಸವಣ್ಣ ಮನೆಯ ಗುರುಗಳು ಟೆಂಗಳಿ ಸಂಗಯ್ಯ ಸ್ವಾಮಿಗಳು. ಭರತನೂರದ ಶ್ರೀ ಮ.ನಿ.ಪ್ರ. ಗುರುನಂಜೇಶ್ವರ ಸ್ವಾಮಿಗಳು ಮತ್ತು ಹಾರಕೂಡದ ಸದ್ಗುರು ಷ. ಬ್ರ. ಚನ್ನಬಸವಶಿವಯೋಗಿಗಳವರ ದರ್ಶನಾಶೀರ್ವಾದ ಪಡೆದು ತನು–ಮನ–ಧನದಿಂದ ಗುರುಲಿಂಗ ಜಂಗಮಸೇವೆ ಸಲ್ಲಿಸುತ್ತ ಬಂದಿರುವ ಮನೆತನ ಇವರದು. ಶ್ರೀ ನೀಲಕಂಠಪ್ಪನವರು ಮುಕ್ತಂಪುರಕ್ಕೆ ಬಂದ ಮೇಲೆ ಗದ್ದುಗೆಮಠದ ಶ್ರೀ ಮ.ನಿ.ಪ್ರ. ರೇವಣಸಿದ್ಧ ಮಹಾಸ್ವಾಮಿಗಳವರಲ್ಲಿ ಅಧಿಕ ನಿಷ್ಠೆಯನ್ನಿಟ್ಟುಕೊಂಡು ಬಂದವರಾಗಿರುವರು.

ಶ್ರೀ ನೀಲಕಂಠಪ್ಪನವರು ಪದವೀಧರರಾದ ಬಳಿಕ ಕ್ರಿ. ಶ. ೧೯೬೫ ರಲ್ಲಿ ಎ.ಪಿ.ಎಂ.ಸಿ.ಯ ಸರಕಾರಿ ಕೆಲಸಕ್ಕೆ ಸೇರಿಕೊಂಡರು. ಕ್ರಿ. ಶ. ೧೯೬೮ರ ಬಸವ ಜಯಂತಿ ಶುಭ ಗಳಿಗೆಯಲ್ಲಿ ಮಾವಿನಸೂರ ಗ್ರಾಮದ ಶ್ರೀ ನೀಲಕಂಠರಾವ ಮತ್ತು ಸಿದ್ಧಮ್ಮ ಪಾಟೀಲ ದಂಪತಿಗಳ ಮಗಳು ಕಾಂತಾಬಾಯಿಯವರೊಂದಿಗೆ ಶ್ರೀ ನೀಲಕಂಠಪ್ಪ ರಾಜಾಪೂರ ಅವರ ಲಗ್ನವನ್ನು ಹಿರಿಯರು ಮಾಡಿದರು. ಸತಿಪತಿಗಳೊಂದಾದ ಈ ದಂಪತಿಗಳದು ಸುಖದ, ಸಮಾಧಾನಕರ ಜೀವನ. ವರ್ಗವಾದಲ್ಲೆಲ್ಲ ಹಾಜರಾಗುತ್ತ ಬಹು ನಿಷ್ಠೆಯಿಂದ ಶ್ರೀ ನೀಲಕಂಠಪ್ಪನವರು ಎ.ಪಿ.ಎಂ.ಸಿ.ಯಲ್ಲಿ ಮೂವತ್ಮೂರು ವರುಷಗಳ ಸೇವೆ ಸಲ್ಲಿಸಿರುವರು. ತಮ್ಮ ಮೇಲಾಧಿಕಾರಿಗಳ ಹಾಗೂ ಜನತೆಯ ಪ್ರೀತಿಗೆ ಪಾತ್ರರಾದ ಶ್ರೀ ನೀಲಕಂಠಪ್ಪನವರ ಜೀವನ ಅದು ಆದರ್ಶಪ್ರಾಯವಾಯಿತು. ಶ್ರೀ ನೀಲಕಂಠಪ್ಪನವರಿಗೆ ಶ್ರೀ ಸಿದ್ಧಲಿಂಗಪ್ಪ ಮತ್ತು ವಿಶ್ವನಾಥ ಈ ಇಬ್ಬರು ತಮ್ಮಂದಿರರಿದ್ದು ಎಲ್ಲರೂ ಮನೆತನದ ಪ್ರಗತಿಗಾಗಿ ದುಡಿಯುತ್ತಲಿರುವರು. ಮನೆಗೆ ಹಿರಿಯ ಮಗ ಶ್ರೀ ನೀಲಕಂಠಪ್ಪ ತಂದೆಯವರ ಮಾರ್ಗದರ್ಶನದಲ್ಲಿ ಹಿರಿಯರು ಗಳಿಸಿಟ್ಟಿದ್ದ ಆಸ್ತಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತ, ಮನೆತನದ ಗೌರವವನ್ನು ಹೆಚ್ಚಿಸುತ್ತ

ಬಂದಿರುವರು. ಶ್ರೀ ನೀಲಕಂಠಪ್ಪನವರು ಕ್ರಿ.ಶ. ೧೯೯೮ರಲ್ಲಿ ರಾಯಚೂರು ಎ.ಪಿ.ಎಂ.ಸಿ. ಸಹಾಯಕ ನಿರ್ದೇಶಕ ಹುದ್ದೆಯಿಂದ ನಿವೃತ್ತಿ ಹೊಂದಿರುವರು.

ಶ್ರೀ ನೀಲಕಂಠಪ್ಪ ಮತ್ತು ಶ್ರೀಮತಿ ಕಾಂತಾಬಾಯಿಯವರದು ಸತಿಪತಿಗಳೊಂದಾದ ಜೀವನ. ಇವರ ಭಕ್ತಿಗೆ ಶಿವ ಮೆಚ್ಚಿ ಕರುಣಿಸಿದ್ದಾನೆ. ಅಂತೆಯೇ ಈ ದಂಪತಿಗಳಿಗೆ ಮುತ್ತಿನಂತಹ ಮೂವರು ಗಂಡು ಮಕ್ಕಳು ಜನಿಸಿರುವರು. ಅವರ ಪಾಲನೆ, ಪೋಷಣೆ ಹಾಗೂ ವಿದ್ಯಾಭ್ಯಾಸದಲ್ಲಿ ವಿಶೇಷ ಕಾಳಜಿ ವಹಿಸಿ, ಅವರನ್ನು ಸುಸಂಸ್ಕೃತರನ್ನಾಗಿ ಬೆಳೆಸಿ ವಿದ್ಯಾಭ್ಯಾಸ ವನ್ನು ಕೊಡಿಸಿ ದೊಡ್ಡವರನ್ನಾಗಿ ಮಾಡಿದ್ದಾರೆ.

ಹಿರಿಯ ಮಗ ಶ್ರೀ ರವೀಂದ್ರಕುಮಾರರು ಎಂ.ಬಿ.ಬಿ.ಎಸ್. ಡಿ.ಎಂ.ಆರ್.ಡಿ., ವೈದ್ಯಕೀಯ ಪದವೀಧರರಿದ್ದು ಡಾಕ್ಟರರಾಗಿರುವರು. ಮುಂಡರಗಿಯ ಡಾ. ನಿಂಗಪ್ಪ ಶೇರೆವಾಡ ಮತ್ತು ಸುಶೀಲಾ ಅವರ ಮಗಳು ಎಂ.ಬಿ.ಬಿ.ಎಸ್. ಪದವೀಧರೆ, ಡಾ. ಉಮಾ ಅವರೊಂದಿಗೆ ಇವರ ಲಗ್ನ ಮಾಡಿರುವರು. ಈ ವೈದ್ಯ ದಂಪತಿಗಳಿಗೆ 'ರಜತ್' ಹೆಸರಿನ ಮೂರು ವರುಷದ ಗಂಡು ಮಗನಿರುವನು. ಈ ವೈದ್ಯ ದಂಪತಿಗಳೀಗ ಆಂಧ್ರಪ್ರದೇಶದ ಕರೀಂ ನಗರದಲ್ಲಿ ಖಾಸಗಿ ಆಸ್ಪತ್ರೆಯೊಂದನ್ನು ನಡೆಸುತ್ತಲಿರುವರು.

ಎರಡನೆಯ ಮಗ ಶ್ರೀ ಅರವಿಂದಕುಮಾರರು ಬಿ.ಇ. ಪದವೀಧರ ರಿದ್ದು ಅಮೇರಿಕಾದ ನ್ಯೂ ಜೆರ್ಸಿ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಇಂಜನೀಯರರಾಗಿ ಸೇವೆ ಸಲ್ಲಿಸುತ್ತಲಿರುವರು. ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಎಲ್.ಎಸ್ ಕಾಖಂಡಕಿ ಮತ್ತು ಪುಷ್ಪಾ ಅವರ ಮಗಳು ಎಂ.ಎಸ್‌ಸಿ. ಪದವೀಧರೆ 'ಅಂಜಲಿ' ಅವರೊಂದಿಗೆ ಸಾಫ್ಟ್‌ವೇರ್' ಇಂಜನಿಯರ್ ಶ್ರೀ ಅರವಿಂದಕುಮಾರರ ಲಗ್ನವಾಗಿದ್ದು ಈ ದಂಪತಿಗಳಿಗೆ ಒಂದು ವರುಷದ ಹೆಣ್ಣು ಮಗು ಇರುವುದು.

ಮೂರನೇ ಮಗ ಡಾ. ಆನಂದಕುಮಾರರು ಬಿ.ಡಿ.ಎಸ್., ಎಂ.ಡಿ.ಎಸ್. ಡೆಂಟಲ್ ಪದವೀಧರರಿದ್ದು, ಬೀದರದ ದಶರಥಪ್ಪ ಮತ್ತು ಸುಮಿತ್ರಾ ಅವರ ಮಗಳು ಬಿ.ಕಾಂ. ಪದವೀಧರೆ ಸ್ನೇಹಾ ಅವರೊಂದಿಗೆ ಲಗ್ನವಾಗಿರುವುದು. ಇವರೀಗ ರಾಜಸ್ಥಾನದ ಉದಯಪುರ ಡೆಂಟಲ್ ಕಾಲೇಜನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಲಿರುವರು.

ಸರಳ ಸಜ್ಜನಿಕೆಗೆ ಹೆಸರಾದ ದಯಾಮಯಿ ಶ್ರೀ ನೀಲಕಂಠಪ್ಪ ರಾಜಾಪೂರ ದಂಪತಿಗಳು ಮಕ್ಕಳು, ಮೊಮ್ಮಕ್ಕಳೊಂದಿಗೆ ಸಂತೃಪ್ತಿಯ ಜೀವನ ನಡೆಸುತ್ತಲಿರುವರು. ಸಮಾಜದ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀ ನೀಲಕಂಠಪ್ಪ ರಾಜಾಪೂರ ಅವರು ತನು-ಮನ-ಧನದಿಂದ ಸೇವೆ ಸಲ್ಲಿಸುತ್ತಿರುವುದಕ್ಕೆ ಈ ಗ್ರಂಥ ಪ್ರಕಟನೆಯೆ ಸಾಕ್ಷಿಯಾಗಿದೆ.

ದಿ. ೨೩-೧-೨೦೦೫ ರಂದು ಕಲಬುರ್ಗಿಯ ಮಕ್ತಂಪುರದಲ್ಲಿ ಗದ್ದುಗೆಯ ಮಠದಲ್ಲಿ ಸದ್ಭಾವಗೋಷ್ಠಿಯ ವಾರ್ಷಿಕೋತ್ಸವ ನಡೆದಿತ್ತು. ಪೀಠಾಧ್ಯಕ್ಷರಾದ ಶ್ರೀ ಮ.ನಿ.ಪ್ರ ರೇವಣಸಿದ್ಧ ಮಹಾಸ್ವಾಮಿಗಳವರ ಅಮೃತಹಸ್ತದಿಂದ ಡಾ. ಎಂ.ಎಸ್. ಲಠ್ಠೆ ವಿರಚಿತ ಜಂಗಮ ಪುಂಗವರು ಭಾಗ-೧ ಗ್ರಂಥ ಬಿಡುಗಡೆಯಾಯಿತು. ಪೂಜ್ಯರು ತಮ್ಮ ಆಶೀರ್ವಚನದಲ್ಲಿ ಜಂಗಮ ಪುಂಗವರು ಭಾಗ-೨ ಗ್ರಂಥವನ್ನು ಡಾ. ಲಠ್ಠೆಯವರು ಬರೆದು ಸಿದ್ಧಪಡಿಸಿದ್ದಾರೆ. ಅದರ ಮುದ್ರಣ ವೆಚ್ಚ ಭರಿಸಲು ಯಾರಾದರೂ ದಾನಿಗಳು ಮುಂದೆ ಬಂದರೆ ಅದನ್ನೂ ಪ್ರಕಟಿಸಲಾಗುವುದೆಂದು ಹೇಳಿದರು. ಆಗ ಸಭೆಯಲ್ಲಿ ಹಾಜರಿದ್ದ ಶ್ರೀ ನೀಲಕಂಠಪ್ಪ ರಾಜಾಪೂರ ಅವರು ಮುಂದೆ ಬಂದು ಪೂಜ್ಯರಿಗೆ ನಮಸ್ಕರಿಸಿ, ಆಶೀರ್ವಾದ ಪಡೆದರು. ಅದರ ಪ್ರತಿಫಲವಾಗಿ ಶ್ರೀ ನೀಲಕಂಠಪ್ಪ ಅವರ ದೇಣಿಗೆಯಿಂದ ಈ ಗ್ರಂಥ ಪ್ರಕಟಗೊಳ್ಳುತ್ತಿರುವುದು ಸಂತೋಷದ ವಿಷಯ. ಕರ್ತೃ ರೇವಣಸಿದ್ಧೇಶ್ವರರು ಶ್ರೀ ನೀಲಕಂಠಪ್ಪ ರಾಜಾಪೂರ ಅವರಿಗೂ, ಅವರ ಬಳಗದವರೆಲ್ಲರಿಗೂ ಇನ್ನೂ ಹೆಚ್ಚಿನ ಆಯುರಾರೋಗ್ಯ ಭಾಗ್ಯಗಳನ್ನು ಕರುಣಿಸಲೆಂದು ಪ್ರಾರ್ಥಿಸುವೆ.

೧೧-೫-೦೫
ಬಸವ ಜಯಂತಿ

ಡಾ. ಸಂಗಮೇಶ ಪಾಟೀಲ
ಬಸವೇಶ್ವರ ಕ್ಲಿನಿಕ್, ಬಸವೇಶ್ವರ ನಗರ,
ಗುಲಬರ್ಗಾ-೫.

ಪ್ರಕಾಶಕರ ನುಡಿ

ಕಲಬುರ್ಗಿಯ ಶ್ರೀಗದ್ದುಗೆಮಠದ ಲಿಂ.ಶಿವಮೂರ್ತಿ ಮಹಾಸ್ವಾಮಿಗಳವರ ಅಪ್ಪಣೆಯ ಮೇರೆಗೆ ದಿ. ೧೭–೯–೧೯೬೭ರಂದು ಸದ್ಭಾವಗೋಷ್ಠಿ ಪ್ರಾರಂಭವಾಯಿತು. ಶ್ರೀ ಸಿದ್ಧವೀರಯ್ಯ ಮಾಸ್ತರರು ಶ್ರೀ ಶರಣಯ್ಯಸ್ವಾಮಿ, ಶ್ರೀ ಎಸ್. ಆರ್. ಬಿರಾದಾರ ಶ್ರೀ ಎಂ. ಬಿ. ಓಣಿ ಮೊದಲಾದವರ ಆಸಕ್ತಿಯಿಂದಾಗಿ ಪ್ರತಿ ರವಿವಾರ ಶ್ರೀ ಗದ್ದುಗೆಮಠದಲ್ಲಿ ಪ್ರಾರಂಭವಾದ ಸದ್ಭಾವಗೋಷ್ಠಿ ಕ್ರಿ. ಶ. ೧೯೯೨ರಲ್ಲಿ ತನ್ನ ಬೆಳ್ಳಿಹಬ್ಬವನ್ನು ಸಡಗರದಿಂದ ಆಚರಿಸಿದ್ದನ್ನು ನೆನೆಯಬಹುದಾಗಿದೆ. ಪ್ರತಿವರುಷವೂ ವಾರ್ಷಿಕೋತ್ಸವವನ್ನು ಆಚರಿಸಲಾಗುತ್ತಿದೆ. ಪ್ರತಿ ರವಿವಾರ ಶ್ರೀಮಠದಲ್ಲಿ ಸಭೆ ಸೇರಿ ವೀರಶೈವ ಧರ್ಮ ಸಾಹಿತ್ಯ ಸಂಸ್ಕೃತಿ ವಿಷಯ ಕುರಿತು ಚಿಂತನ ಮಂಥನ, ಉಪನ್ಯಾಸ ನಡೆಸುತ್ತ ಬರಲಾಗಿದೆ. ಗದ್ದುಗೆಮಠದ ಸದ್ಯದ ಪೀಠಾಧಿಪತಿಗಳಾಗಿರುವ ಪೂಜ್ಯ ಶ್ರೀ ಮ.ನಿ. ಪ್ರ. ರೇವಣಸಿದ್ಧ ಮಹಾಸ್ವಾಮಿಗಳು ಪಟ್ಟಕ್ಕೆ ಬಂದನಂತರ ಸದ್ಭಾವಗೋಷ್ಠಿ ವ್ಯವಸ್ಥಿತ ರೀತಿಯಿಂದ ನಡೆದುಕೊಂಡು ಬರುತ್ತಲಿದೆ. ಶ್ರೀಮಠದ ಪರಮ ಭಕ್ತರಾಗಿದ್ದ ಧಾರವಾಡದ ಲಿಂ. ವಿರೂಪಾಕ್ಷಪ್ಪ ಬಳ್ಳಾರಿ ಮಾರಡಗಿ ಅವರು ಸದ್ಭಾವಗೋಷ್ಠಿ ವಾರ್ಷಿಕೋತ್ಸವವು ವ್ಯವಸ್ಥಿತ ರೀತಿಯಲ್ಲಿ ನಡೆದುಕೊಂಡು ಹೋಗಲು ಅನುಕೂಲವಾಗಲೆಂದು ೨೫೦೦೦/–ರೂ. ಗಳ ದೇಣಿಗೆ ನೀಡಿದರು. ಪೂಜ್ಯ ಶ್ರೀಗಳವರ ಆದೇಶದ ಮೇರೆಗೆ ಈ ಹಣದ ಬ್ಯಾಂಕಿನ ಠೇವಣಿಯಿಂದ ಬರುವ ಬಡ್ಡಿಹಣದಲ್ಲಿ ಪ್ರತಿವರುಷ ಅವರ ಹೆಸರಿನಲ್ಲಿ ದತ್ತಿ ಉಪನ್ಯಾಸವನ್ನು ಏರ್ಪಡಿಸಲಾಗುತ್ತಿದೆ.

ಪ್ರತಿವರುಷ ಸದ್ಭಾವಗೋಷ್ಠಿಪರವಾಗಿ ಗ್ರಂಥಗಳನ್ನು ಪ್ರಕಟಿಸಲಾಗುತ್ತಿದೆ. ಪ್ರಕಟಿತ ಗ್ರಂಥಗಳ ಯಾದಿ ಕೊನೆಯಲ್ಲಿ ಕೊಡಲಾಗಿದೆ. (ಪುಸ್ತಕದ ಕೊನೆಗೆ ನೋಡಿರಿ.) ಈ ವರುಷವೂ ಖ್ಯಾತ ಹಿರಿಯ ಸಾಹಿತಿಗಳಾದ ಡಾ. ಎಂ. ಎಸ್. ಲಠ್ಠೆ ಅವರು ಬರೆದಿರುವ ಜಂಗಮ ಪುಂಗವರು–ಭಾಗ ೨

ಪುಸ್ತಕವನ್ನು ಪ್ರಕಟಿಸಲಾಗುತ್ತಿದೆ. ಈ ಗ್ರಂಥಕ್ಕೆ ಧನಸಹಾಯ ನೀಡಿದವರು ಕಲಬುರ್ಗಿ ಬಸವೇಶ್ವರ ನಗರದ ಶ್ರೀ ನೀಲಕಂಠಪ್ಪ ರಾಜಾಪೂರ ಅವರು. ಅವರಿಗೂ ಲೇಖಕರಿಗೂ ಪೂಜ್ಯ ರೇವಣಸಿದ್ಧಮಹಾಸ್ವಾಮಿಗಳಿಗೂ ಸುಂದರವಾಗಿ ಮುದ್ರಣ ಮಾಡಿಕೊಟ್ಟಿರುವ ಗದುಗಿನ ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ ಅವರಿಗೂ ಸದ್ಭಾವಗೋಷ್ಠಿಯ ಪರವಾಗಿ ನಾವು ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಶಿವಶರಣಪ್ಪ ಗೋಗಿ
ಸಂಚಾಲಕರು,
ಸದ್ಭಾವಗೋಷ್ಠಿ, ಶ್ರೀಗದ್ದುಗೆಮಠ, ಕಲಬುರ್ಗಿ

ಪರಿವಿಡಿ

ಶ್ರೀಮದ್ರಂಭಾಪುರೀ ಪೀಠದ

ಲಿಂ. ವೀರಗಂಗಾಧರ ಜಗದ್ಗುರುಗಳು

ವೀರಶೈವ ಪಂಚಾಚಾರ್ಯ ಪೀಠಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರಿನ ರಂಭಾಪುರೀ ವೀರಸಿಂಹಾಸನ ಪೀಠವೂ ಒಂದಾಗಿರುವುದು. ಜನರ ಕಲ್ಯಾಣವನ್ನೇ ತಮ್ಮ ಬದುಕಿನ ಮುಖ್ಯ ಗುರಿಯನ್ನಾಗಿಸಿಕೊಂಡು ಬಂದ ಜಗದ್ಗುರುಗಳಲ್ಲಿ ಈ ರಂಭಾಪುರೀ ಪೀಠದ ವೀರ ತಪೋನಿಧಿ ಗಂಗಾಧರ ಜಗದ್ಗುರುಗಳೂ ಒಬ್ಬರಾಗಿರುವರು. ಈ ರಂಭಾಪುರೀ ಪೀಠದ ಸಂಸ್ಥಾಪಕರು ಆದಿ ಜಗದ್ಗುರು ಶ್ರೀ ರೇಣುಕಾಚಾರ್ಯರೆಂದು ಹೇಳುವ ವಾಡಿಕೆ. ನಿಸ್ಪೃಹಿಗಳೂ ನಿರ್ಲಿಪ್ತರೂ ಆಗಿದ್ದ ಶ್ರೀ ರೇಣುಕಾಚಾರ್ಯರು ಕ್ರಿಯಾಶೀಲರೆನಿಸಿದ್ದರು. ಅಗಸ್ತ್ಯ ಮುನಿಗಳಿಗೆ ವೀರಶೈವ ಧರ್ಮದ ಏಕೋತ್ತರ ಷಟಸ್ಥಲವನ್ನು ಅನುಗ್ರಹಿಸಿದವರೆಂದೂ ಮಾದಿಗ ಮಾತಂಗರನ್ನು ಅನುಗ್ರಹಿಸಿ ಅಸ್ಪೃಶ್ಯರೋದ್ಧಾರ ಮಾಡಿದವರೆಂದೂ ಶಿವನ ಸದ್ಯೋಜಾತ ಮುಖ ಸಂಜಾತರೆಂದೂ ಹೇಳಲಾಗುತ್ತದೆ. ಆಂಧ್ರಪ್ರದೇಶದ ನಲಗೊಂಡ ಜಿಲ್ಲೆಯ ಕೊನಲುಪಾಕಿ (ಕೊಲ್ಲುಪಾಕಿ) ಶ್ರೀ ಸೋಮೇಶ್ವರ ಲಿಂಗ ಗರ್ಭ ಸಂಜಾತರೆಂದೂ ನಂಬಲಾಗಿದ್ದು ಕೊಲಿಪಾಕಿ ಕ್ಷೇತ್ರದಿಂದ ಬಾಳೆಹೊನ್ನೂರಿಗೆ ಬಂದುದರಿಂದ ಬಾಳೆಹೊನ್ನೂರ ರಂಭಾಪುರಿ ಪೀಠವು ಪುಣ್ಯಕ್ಷೇತ್ರ ಸ್ಥಳವಾಗಿರುವುದು.

ಶ್ರೀ ಜಗದ್ಗುರು ಶ್ರೀ ಮದ್ರಂಭಾಪುರೀ ವೀರಗಂಗಾಧರ ಜಗದ್ಗುರುಗಳು ರಂಭಾಪುರೀ ವೀರಸಿಂಹಾಸನಕ್ಕೆ ಶಿವಾಚಾರ್ಯ ಭಗವತ್ಪಾದರಾಗಿ ಪೀಠಾರೋಹಣ ಮಾಡಿ ಜಗದ್ಗುರುಗಳಾದದ್ದು ಕ್ರಿ.ಶ. ೨–೫–೧೯೪೭ ರಂದು. ಪೂಜ್ಯರು ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕಿನ ಪಾಲಿಕೊಪ್ಪ ಗ್ರಾಮದ ವೇ. ಮೂ. ಹಿರೇಮಠ ಅಡವಯ್ಯ ಮತ್ತು ಸಿದ್ಧಮ್ಮ ದಂಪತಿಗಳ ಸುಪುತ್ರರಾಗಿ ದಿ. ೮–೪–೧೯೦೩ ರಂದು ಜನಿಸಿದವರಾಗಿರುವರು. ತಮ್ಮ ಪ್ರಾಥಮಿಕ ಅಭ್ಯಾಸವನ್ನು ಪಾಲಿಕೊಪ್ಪದಲ್ಲಿ ಮುಂದೆ ಹುಬ್ಬಳ್ಳಿ, ಕಮತಗಿ ಕೋಟೆಕಲ್ಲುಗಳಲ್ಲಿ ಮಾಡಿದರು. ತರುವಾಯ ಸೊಲ್ಲಾಪುರದ ವಾರದ ಮಲ್ಲಪ್ಪನವರ ಸಂಸ್ಕೃತ

ಪಾಠಶಾಲೆಯಲ್ಲಿ ಅಧ್ಯಯನ ನಡೆಸಿದರು. ಅಲ್ಲಿ ನಾಲವಾರದ ಜಗದೀಶ ಶಾಸ್ತ್ರಿಗಳವರ ಮಾರ್ಗದರ್ಶನದಲ್ಲಿ ಸಂಸ್ಕೃತ ಪಂಚ ಕಾವ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿದರು. ಪೂಜ್ಯರು ಕನ್ನಡ ಹಿಂದಿ, ಮರಾಠಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಭುತ್ವ ಗಳಿಸಿಕೊಂಡವರಾಗಿದ್ದರು. ವೀರಶೈವ ಧರ್ಮ ದರ್ಶನ ಗಳನ್ನು ಸಿದ್ಧಾಂತ ಶಿಖಾಮಣಿಯನ್ನೂ ಸಮಗ್ರವಾಗಿ ಓದಿಕೊಂಡವರಾಗಿದ್ದರು.

ತಮ್ಮ ತಪಸ್ಸು ಅನುಷ್ಠಾನ ಹಾಗೂ ಕ್ರಿಯಾಶೀಲ ಬದುಕಿನಿಂದ ಉನ್ನತ ವ್ಯಕ್ತಿತ್ವ ಬೆಳೆಸಿಕೊಂಡು ಧರ್ಮ–ತತ್ವ–ಸಾಹಿತ್ಯ–ಸಂಸ್ಕೃತಿಗಳನ್ನು ಕರಗತ ಮಾಡಿಕೊಂಡರು. ಪರಶಿವನ ಸಾಕಾರ ರೂಪವೇ ಗುರುರೂಪವಾಗಿ ಜನತೆಗೆ ಧರ್ಮಸಂಸ್ಕಾರದ ಬೆಳಕನ್ನು ನೀಡುವ ಮಹಾಶಕ್ತಿಯನ್ನು ಶ್ರೀಗಳವರು ಗಳಿಸಿ ಕೊಂಡರು. ಪಾಲಿಕೊಪ್ಪ ಹಿರೇಮಠವು ಬಾಳೆಹೊನ್ನೂರಿನ ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಪೀಠದ ಶಾಖಾಮಠವಾಗಿರುವುದು. ಈ ಪೀಠದ ಅಧಿಕಾರಿಗಳನ್ನಾಗಿ ಪೂಜ್ಯರನ್ನು ಬಂಕಾಪೂರ ಅರಳೆಲೆ ಹಿರೇಮಠದ ಪೂಜ್ಯ ಷ. ಬ್ರ. ರುದ್ರಮುನಿ ಶಿವಾಚಾರ್ಯರಿಂದ, ಗುರು ಪಟ್ಟಾಭಿಷೇಕ ಮಹೋತ್ಸವವನ್ನು ಕ್ರಿ. ಶ. ೧೯೨೬ ರಲ್ಲಿ ನೆರವೇರಿಸಿದರು.

ಪಾಲಿಮಠದ ಶಿವಾಚಾರ್ಯರು ಗುರುಹಿರಿಯರ ಮಾರ್ಗದರ್ಶನದ ಧರ್ಮಕಾರ್ಯಗಳನ್ನು ಸಾಗಿಸತೊಡಗಿದರು. ಶಿಷ್ಯರ ಕಷ್ಟ ತಾಪತ್ರಯಗಳನ್ನು ಅಜ್ಞಾನ–ವ್ಯಾಮೋಹಗಳನ್ನು ದೂರ ಮಾಡತೊಡಗಿದರು. ಇದರಿಂದಾಗಿ ಶ್ರೀಗಳವರದು ಹೋರಾಟದ ಬದುಕಾಯಿತು. ಶಿಷ್ಯರ ಬೆಳವಣಿಗೆ ಕಂಡ ಗುರುಗಳಾದ ರುದ್ರಮುನಿಗಳು ಸಂತೋಷಪಟ್ಟುಕೊಂಡರು.

ಕ್ರಿ. ಶ. ೧೯೨೫ರಲ್ಲಿ ಶ್ರೀ ರಂಭಾಪುರೀ ವೀರಸಿಂಹಾಸನ ಪೀಠವನ್ನು ಶ್ರೀ ಜಗದ್ಗುರು ಶಿವಾನಂದ ರಾಜೇಂದ್ರ ಶಿವಾಚಾರ್ಯ ಭಗವತ್ಪಾದರು ಆರೋಹಣ ಮಾಡಿ ಕ್ಷೇತ್ರದ ಪ್ರಗತಿಗಾಗಿ ಪರಿಶ್ರಮಿಸುತ್ತಲಿದ್ದರು. ಪೂಜ್ಯರನ್ನು ಈ ಪೀಠದ 'ಸಮರ್ಪಣಾ ಶಿಲ್ಪಿ' ಎಂದೂ ಕೊಂಡಾಡತೊಡಗಿದರು. ಪಾಲಿಕೊಪ್ಪ ಪಟ್ಟಾಧ್ಯಕ್ಷರ ಪೀಠಾಭಿಮಾನವನ್ನು ಅರಿತು ಶ್ರೀ ಜಗದ್ಗುರು ಶಿವಾನಂದ ಶಿವಾಚಾರ್ಯ ಭಗವತ್ಪಾದರು ತಮ್ಮ ಆಧೀನದಲ್ಲಿದ್ದ ಬೆಂಗಳೂರಿನ ಶ್ರೀ ಮಹಾಂತಮಠ ಮತ್ತು ವಿಭೂತಿಪುರ ಮಠಗಳಿಗೆ, ಕ್ರಿ.ಶ. ೧೯೩೧ ರಲ್ಲಿ ಪಾಲಿಮಠದ ಪೂಜ್ಯ ಷ.ಬ್ರ. ಶ್ರೀ

ಗಂಗಾಧರ ಶಿವಾಚಾರ್ಯರನ್ನು ಅಧಿಕಾರಿಗಳನ್ನಾಗಿ ಮಾಡಿದರು. ಅಧಿಕಾರಸ್ಥರಾದ ಪೂಜ್ಯರು ಎರಡೂ ಮಠಗಳ ಅಭಿವೃದ್ಧಿಗಾಗಿ ಕಾರ್ಯನಿರತರಾಗಿ ಪೂಜ್ಯ ಗುರುಗಳ ಹಾಗೂ ಭಕ್ತರ ಪ್ರೀತಿಗೆ ಪಾತ್ರರಾದರು. ದಾನಿಗಳ ಸಹಕಾರದಿಂದ ಹೊಸ ಹೊಸ ಕಟ್ಟಡಗಳನ್ನು ನಿರ್ಮಿಸಿದರು. ಪ್ರಸಾದ ನಿಲಯ ಪ್ರಾರಂಭಿಸಿದರು. ವೀರಭದ್ರ ಸ್ವಾಮಿಯ ಪವಿತ್ರ ತಾಣದಲ್ಲಿ ಶ್ರೀಗಳು ಕಠೋರ ತಪಸ್ಸು ಮಾಡಿದರು.

ಪೂಜ್ಯ ಶ್ರೀ ಗಂಗಾಧರ ಶಿವಾಚಾರ್ಯರು ಭಕ್ತರಿಗೆ ಅನುಕೂಲವಾಗಲೆಂದು ಶಿವಪೂಜಾ ವಿಧಿ, ವಿಭೂತಿ, ಸ್ತ್ರೀ ನೀತಿ, ನಿತ್ಯಸುಖದಾಯಕರು, ಶಿವನಾಮ ಸುಧಾಸಾರ, ನಿಂದಕರು, ನಿತ್ಯ ಸುಖದಾಯಕರು, ಗುರುವಂಶ, ಜಾಗೃತಿ, ಭಕ್ತಿಯೋಗ ವೀರಶೈವ ಧರ್ಮಸುಧಾರಣೆ, ತ್ರಿದಳ, ಗೋರಕ್ಷಗರ್ವ ಹರಣ, ಶ್ರೀ ಪಂಚಾಚಾರ್ಯ ಸ್ತೋತ್ರ ರತ್ನಾವಳಿ, ಶಿವಾಷ್ಟೋತ್ತರ ನಾಮಾವಳಿ, ಗುರುಕೀರ್ತನ ಮೊದಲಾದ ಚಿಕ್ಕ ಚಿಕ್ಕ ಪುಸ್ತಕಗಳನ್ನು ಪ್ರಕಟಿಸಿದರು.

ಕ್ರಿ.ಶ. ೧-೮-೧೯೪೭ ರಲ್ಲಿ ಪೂಜ್ಯ ಶ್ರೀ ಶಿವಾನಂದ ಗುರುಗಳು ಲಿಂಗೈಕ್ಯರಾದರು. ಅವರು ಬರೆದಿಟ್ಟ ಮೃತ್ಯುಪತ್ರದಂತೆ ಉಜ್ಜೈನಿ, ಶ್ರೀಶೈಲ ಗುರುಗಳ ಸಮ್ಮುಖದಲ್ಲಿ ಶ್ರೀ ಜಗದ್ಗುರು ಪ್ರಸನ್ನ ರೇಣುಕ ವೀರ ಗಂಗಾಧರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು ೮-೫-೧೯೪೭ ರಂದು ಪೀಠಾರೋಹಣ ಮಾಡಿದರು. ತರುವಾಯ ಈ ಪೀಠದ ಅಭಿವೃದ್ಧಿಗಾಗಿ ಅಪ್ರತಿಮ ಸೇವೆ ಸಲ್ಲಿಸುತ್ತಿದ್ದುದನ್ನು ಗುರುತಿಸಬಹುದಾಗಿದೆ. ಕುಣಿಗಲ್ ತಾಲೂಕ ಯಡೆಯೂರ ಕ್ಷೇತ್ರದಲ್ಲಿ ಶರನವರಾತ್ರಿ ದಸರಾ ಮಹೋತ್ಸವವನ್ನು ಕ್ರಿ. ಶ. ೧೯೪೭ರಲ್ಲಿ ಪ್ರಪ್ರಥಮ ಪ್ರಾರಂಭಿಸಿದುದು ಚಿರಸ್ಮರಣೀಯವಾದುದಾಗಿದೆ. ಮುಕ್ತಿ ಮಂದಿರದ ಕ್ಷೇತ್ರವನ್ನು ಬಾಳೆ-ಹೊನ್ನೂರು ಶಾಖಾ ಮಠವನ್ನಾಗಿ ಪರಿವರ್ತಿಸಿದರು.

'ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ' ಎಂಬುದು ಜಗದ್ಗುರು ಶ್ರೀ ವೀರಗಂಗಾಧರ ಶಿವಾಚಾರ್ಯರ ಧರ್ಮ ಸಂದೇಶವಾಗಿತ್ತು. ಶ್ರೀ ರಂಭಾಪುರೀ ಜಗದ್ಗುರುಗಳು ಕೇದಾರಪೀಠದ ರಾವಲ್ ಅಧಿಕಾರವನ್ನು ಕ್ರಿ.ಶ. ೧೯೬೬ರಲ್ಲಿ ಮುತನಾಳದ ಶ್ರೀ ಶಾಂತಲಿಂಗ ಶಿವಾಚಾರ್ಯರಿಗೆ ಅನುಗ್ರಹಿಸಿದ್ದರು. ಅದಕ್ಕೂ ಪೂರ್ವದಲ್ಲಿ ಜಗದ್ಗುರುಗಳ

ದರ್ಶನಾಶೀರ್ವಾದ ಭಾಗ್ಯ ನನ್ನೂರಾದ ಮುತನಾಳ ಹಾಗೂ ಸಮೀಪದ ಹುಣಶಿಕಟ್ಟಿ ಗ್ರಾಮುಗಳಲ್ಲಿ ನನಗಾದದ್ದು ನನ್ನ ಭಾಗ್ಯ ವಿಶೇಷವಾಗಿತ್ತು.

ಶ್ರೀ ರಂಭಾಪುರೀ ಜಗದ್ಗುರುಗಳು ಮುಕ್ತಿಮಂದಿರದ ಪವಿತ್ರ ಕ್ಷೇತ್ರ ದೊಳಗೆ ಕ್ರಿ.ಶ. ೧೯೬೭ರಲ್ಲಿ ಶ್ರೀ ಜಗದ್ಗುರು ಪಂಚಪೀಠಾಧೀಶ್ವರರ ಪ್ರಥಮ ಸಮಾವೇಶವನ್ನು ಜರುಗಿಸಿದ್ದರು. ಬೆಂಗಳೂರಿನ ಮಹಾಂತ ಮಠದ ಪಟ್ಟಾಧ್ಯಕ್ಷರಾಗಿದ್ದಾಗ ಜಗದ್ಗುರುಗಳು ಬೆಂಗಳೂರು ನಗರದ ಈ ಮಠದ ಆಧೀನದಲ್ಲಿದ್ದ ಆಸ್ತಿಯನ್ನು ಟ್ರಸ್ಟ ಮಾಡಿದ್ದರು. ಅದರ ಮೂಲಕ ಬೆಂಗಳೂರಿ ನಲ್ಲಿ ಜಗದ್ಗುರು ರೇಣುಕಾಚಾರ್ಯರ ಆರ್ಟ್ಸ, ಸಾಯಿನ್ಸ, ಕಾಮರ್ಸ್ ಮತ್ತು ಲಾ ಕಾಲೇಜ ಪ್ರಾರಂಭಿಸಿದ್ದರು. ಈ ಸಂಸ್ಥೆ ಇಂದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾಗಿ ಕರ್ನಾಟಕದಲ್ಲಿ ಕಂಗೊಳಿಸುತ್ತಲಿರುವುದು.

ಪೂಜ್ಯ ಶ್ರೀ ಜಗದ್ಗುರು ವೀರಗಂಗಾಧರ ಶಿವಾಚಾರ್ಯ ಭಗವತ್ಪಾದರು ಕ್ರಿ. ಶ. ೨-೫-೧೯೪೭ ರಂದು ಶ್ರೀ ರಂಭಾಪುರೀ ಪೀಠಕ್ಕೆ ೧೧೯ನೆಯ ಜಗದ್ಗುರುಗಳಾಗಿ ಸುಮಾರು ಮೂವತ್ತೈದು ವರುಷಗಳ ಕಾಲ ಪೀಠಾಧಿಕಾರಿ ಗಳಾಗಿ ರಾಷ್ಟ್ರದ ವಿವಿಧ ಭಾಗಗಳಲ್ಲಿ ಸಂಚರಿಸುತ್ತ ಧರ್ಮಜಾಗೃತಿ ಮೂಡಿಸಿ ದುದು ಅವರ ಘನ ವ್ಯಕ್ತಿತ್ವಕ್ಕೆ ಹಿಡಿದ ರನ್ನಗನ್ನಡಿಯಾಗಿರುತ್ತದೆ. ಜಗದ್ಗುರುಗಳು ಮೈ ತುಂಬ ರುದ್ರಾಕ್ಷಿ ಧರಿಸುತ್ತಿದ್ದರು. ರುದ್ರಾಕ್ಷಿ,. ಕಿರೀಟ ಧರಿಸುತ್ತಿದ್ದರು. ಇವರದು ಭಸ್ಮೋದ್ಧೂಳಿತ ಪ್ರಸಾದ ಕಾಯವೆನಿಸಿತ್ತು, ಪರಿಪೂರ್ಣ ವೈರಾಗ್ಯದ ಮೂರ್ತಿಗಳಂತಿದ್ದ ಭಗವತ್ಪಾದರು ಶಿವಸ್ವರೂಪಿಗಳಾಗಿದ್ದು ಅವರದು ಕಂಚಿನ ಕಂಠವಾಗಿತ್ತು, ಇವರ 'ಅನುಭಾವಪೂರ್ಣ ಆಶೀರ್ವಚನ ದಿಂದ ಜನಸ್ತೋಮ ಪುನೀತರಾಗುತ್ತಿದ್ದರು. ಜಗದ್ಗುರುಗಳು ಅಷ್ಟೇ ನಿಷ್ಠುರ ವಾದಿಗಳಾಗಿದ್ದರು. ಪೂಜ್ಯರ ಇಷ್ಟಲಿಂಗ ಮಹಾಪೂಜೆ ವೈಭವಪೂರ್ಣವಾಗಿರುತ್ತಿತ್ತು.

ಜಗದ್ಗುರುಗಳು ಜನತೆಯನ್ನು ಧರ್ಮಮಾರ್ಗದಲ್ಲಿ ಮುನ್ನಡೆಸ ಬೇಕೆಂದಿ ದ್ದರು. ನಿಜವಾದ ಶಿಕ್ಷಣ, ಅದುವೆ ಸಮಾಜ ಶಿಕ್ಷಣ ಎಂದು ಬಗೆದಿದ್ದ ಜಗದ್ಗುರು ಗಳು ಸಮಾಜ ಶಾಲೆಯ ಮಹಾಮಹೋಪಾಧ್ಯಾಯರಾಗಿ ಮಾನವ ಸಮೂಹವನ್ನೇ ಮೇಲಕ್ಕೆತ್ತಿ ಆಚಾರ ವಿಚಾರವಂತರನ್ನಾಗಿ ಮಾಡಿದರು. ಪ್ರೊ. ಅಕ್ಕೂರಮಠ ಅವರು ಅಭಿಪ್ರಾಯಪಟ್ಟಂತೆ ಜಗದ್ಗುರುಗಳು "ನಿಜವಾದ ಧರ್ಮಗುರುಗಳಂತೆ

ಬಾಳಿದರು. ಮಣಿಯದಿಹ ಮನವೊಂದು, ಸಾಧಿಸುವ ಹಟವೊಂದು, ನಿಜದ ನೇರಕೆ ನಡೆವ ನಿಶ್ಚಲತೆ, ಅನ್ಯಾಯಕ್ಕೆ ಬಾಗದ ಎಚ್ಚರ ಅವರ ನಡೆ ನುಡಿಯಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದವು. ಅವರ ಬದುಕು ಸದಾ ಕ್ರಿಯಾಶೀಲವಾಗಿತ್ತು''. ''ಧರ್ಮಗುರುಗಳು, ಶಾಸ್ತ್ರಾಧ್ಯಯನ, ತಪಸ್ಸು ಮಾಡಿ ಧರ್ಮಪ್ರಚಾರ ಮಾಡುತ್ತ ಸಮಾಜಕ್ಕೆ ಸೇವೆ ಸಲ್ಲಿಸಬೇಕು. ಲೌಕಿಕ ವ್ಯವಹಾರದಲ್ಲಿ ತೊಡಗಿದರೆ ಭ್ರಷ್ಟರಾಗುತ್ತಾರೆ'' ಎನ್ನುವುದು ಜಗದ್ಗುರುಗಳ ಗಟ್ಟಿ ನಿಲುವಾಗಿತ್ತು.

ಪೂಜ್ಯ ಜಗದ್ಗುರುಗಳ ಆರೋಗ್ಯ ಇದ್ದಕ್ಕಿದ್ದಂತೆ ಹದಗೆಟ್ಟಿತು. ಆಗ ತಮ್ಮ ಉತ್ತರಾಧಿಕಾರಿಗಳನ್ನಾಗಿ ಬಾರ್ಸಿಯ ಹಿರೇಮಠದ ಪಂ.ಷ.ಬ್ರ. ಪಂಚಾಕ್ಷರ ಶಿವಸ್ವಾಮಿಗಳವರನ್ನು ಮಾಡಿಕೊಂಡರು. ದಿ. ೧೫–೫–೧೯೭೭ ರಂದು ನೂತನ ಪೀಠಾಧೀಶ್ವರರಿಗೆ 'ಶ್ರೀ ಜಗದ್ಗುರು ಪ್ರಸನ್ನ ರೇಣುಕವೀರ ರುದ್ರಮುನಿದೇವ ಶಿವಾಚಾರ್ಯ ಭಗವತ್ಪಾದರು' ಎಂಬ ಹೆಸರಿಟ್ಟು ಉಜ್ಜಯಿನಿ ಶ್ರೀಶೈಲ ಮತ್ತು ಕಾಶಿ ಜಗದ್ಗುರುಗಳ ಸಮ್ಮುಖದಲ್ಲಿ ಅಧಿಕಾರ ಕೊಟ್ಟರು. ಆಗ ಪೂಜ್ಯ ವೀರಗಂಗಾಧರ ಜಗದ್ಗುರುಗಳ ಆರೋಗ್ಯ ಸುಧಾರಿಸಿತು. ರಾಷ್ಟ್ರದ ತುಂಬೆಲ್ಲ ಹಲವಾರು ಜನೋಪಯೋಗಿ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸಿದರು. ಕೇದಾರ ಪೀಠದ ತೊಡಕನ್ನು ನಿವಾರಿಸಿದ ಶ್ರೇಯಸ್ಸೂ ಪೂಜ್ಯರದಾಯಿತು. ಮುಂದೆ ಕೊನೆಗೊಂದು ದಿನ ಅಂದರೆ ದಿ. ೫–೧೦–೧೯೮೭ ರಂದು ಜಗದ್ಗುರುಗಳು ರಾತ್ರಿ ೧೨–೩೦ ಗಂಟೆಗೆ ಲಿಂಗೈಕ್ಯರಾದ ಸುದ್ದಿ ಹರಡಿತು.

ಕ್ರಿ. ಶ. ೧೯೦೩ ರಲ್ಲಿ ಜನಿಸಿ ಕ್ರಿ.ಶ. ೧೯೮೭ ರಂದು ಲಿಂಗೈಕ್ಯರಾದ ಜಗದ್ಗುರುಗಳ ಶತಮಾನೋತ್ಸವವನ್ನು ಇತ್ತೀಚೆಗೆ ನಾಡಿನ ತುಂಬೆಲ್ಲ ಅತ್ಯಂತ ಅರ್ಥಪೂರ್ಣವಾಗಿ ಭಕ್ತಿಪೂರ್ವಕ ಆಚರಿಸಿದರು. ಇಂಥ ಶತಮಾನೋತ್ಸವ ಸಮಾರಂಭವೊಂದು ಶ್ರೀ ಕೋಬಾಳರಿಂದ ಶಹಾಬಾದದಲ್ಲಿ ಹಲವಾರು ದಿನಗಳ ಕಾಲ ನಡೆದದ್ದು ಶಹಬಾದ ಇತಿಹಾಸದಲ್ಲಿ ಚಿರಸ್ಮರಣೀಯ ಘಟನೆ ಯಾಗಿರುವುದು. ಈ ಶತಮಾನೋತ್ಸವದ ಮೊದಲ ದಿನದಂದು ನಾನೂ ಅತಿಥಿ ಉಪನ್ಯಾಸಕನಾಗಿ ಆಮಂತ್ರಿತನಾಗಿದ್ದೆ. ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದ ಶ್ರೀ ಭೀಮಣ್ಣ ಖಂಡ್ರೆ ಅವರು ಉದ್ಘಾಟಕರಾಗಿ ಬಂದಿದ್ದರು.

ರಂಭಾಪುರೀ ಪೀಠದ ಸಧ್ಯದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜ ದೇಶಿಕೇಂದ್ರ

ಶಿವಾಚಾರ್ಯ ಭಗವತ್ಪಾದರ ದರ್ಶನಾಶೀರ್ವಾದ ಶ್ರೀ ಭರಮಶೆಟ್ಟಿ ಅವರ ಮೂಲಕ ನನಗೆ ಗುಲಬರ್ಗಾದಲ್ಲಿ ಹಲವಾರು ಸಲ ದೊರಕಿರುವುದು. ಹತ್ತು ವರುಷಗಳಾಗಿರಬೇಕು. ನನ್ನನ್ನು ಬಾಳೆಹೊನ್ನೂರಿಗೆ ಉಪನ್ಯಾಸ ನೀಡಲು ಜಗದ್ಗುರುಗಳು ಆಮಂತ್ರಿಸಿದ್ದರು. ವೀರರುದ್ರಮುನಿ ದೇವರು, ತಮ್ಮ ಅಂತ್ಯಕಾಲದಲ್ಲಿ ಬರೆದಿಟ್ಟ ಮೃತ್ಯುಪತ್ರದ ಪ್ರಕಾರ, ದಿ. ೬-೨-೧೯೮೨ ಶುಭದಿನದಂದು, ಉಜ್ಜಯನಿ, ಕೇದಾರ, ಶ್ರೀಶೈಲ, ಕಾಶೀಜಗದ್ಗುರುಗಳವರ ದಿವ್ಯಸಾನಿಧ್ಯದಲ್ಲಿ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿ ಕೇಂದ್ರ ಶಿವಾಚಾರ್ಯ ಭಗವತ್ಪಾದರೆಂಬ ಹೆಸರಿನೊಂದಿಗೆ, ಸಿಂಹಾಸನಾರೋಹಣ ಮಾಡಿದರು. ಅಧಿಕಾರದ ನಂತರ ವೀರಸೋಮೇಶ್ವರ ಜಗದ್ಗುರುಗಳು 'ಯೋಜನಾಷ್ಟಕ ಯೋಜನೆ ಹಮ್ಮಿ ಕೊಂಡು ಪೀಠದ ಸರ್ವತೋಮುಖ ಅಭಿವೃದ್ಧಿಗಾಗಿ ಉತ್ಕೃಷ್ಟದ ಸೇವೆ ಸಲ್ಲಿಸು ತ್ತಿರುವುದು ಅಭಿಮಾನಾಸ್ಪದ ಸಂಗತಿಯಾಗಿರುವುದು.

ಶ್ರೀ ರಂಭಾಪುರೀ ಜಗುದ್ಗುರು ಪೀಠಾಧ್ಯಕ್ಷರಾಗಿ (೧೨೧ನೆಯ ವರಾಗಿ) ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರ-ಸೋಮೇಶ್ವರ ರಾಜದೇಶಿ ಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಮೂಲತಃ ಧಾರವಾಡ ಜಿಲ್ಲೆಯ ಹಳ್ಯಾಳದಲ್ಲಿ ದಿ. ೭-೧-೧೯೫೬ರಲ್ಲಿ ಜನಿಸಿದವರಾಗಿದ್ದಾರೆ. ಪಂಚಪೀಠಾಧೀಶ್ವರರ ಸಾನಿಧ್ಯದಲ್ಲಿ ಕ್ರಿ.ಶ. ೧೯೭೬ರಲ್ಲಿ ಹಳ್ಯಾಳ ಹಿರೇಮಠದ ಪಟ್ಟಾಧಿಕಾರಿಗಳಾದರು. ಶ್ರೀಗಳವರು ಬೆಂಗಳೂರಿನ ಮಹಂತಿನ ಮಠದಲ್ಲಿದ್ದು ಅಧ್ಯಯನ ಮಾಡಿದವರಾಗಿದ್ದಾರೆ. ಆಗ ಅಂದರೆ ಕ್ರಿ.ಶ. ೧೯೮೫ ರಲ್ಲಿ ಶಿವಗಂಗಾ ಕ್ಷೇತ್ರದ ಮೇಲಣಗವಿ ವೀರಸಿಂಹಾಸನಮಠದ ಪಟ್ಟಾಧಿಕಾರಿಗಳಾದರು. ಶ್ರೀ ಜಗದ್ಗುರು ವೀರರುದ್ರಮುನಿ ಶಿವಾಚಾರ್ಯ ಮಹಾಸನ್ನಿಧಿಯವರ ಜೊತೆ ಪೂಜ್ಯರ ಸಂಪರ್ಕವಿತ್ತು, ಪೀಠ ಪರಂಪರೆಯಲ್ಲಿ ಪೂಜ್ಯರ ಅಚಲ ನಿಷ್ಠೆ, ಸಾಮಾಜಿಕ ಕಳಕಳಿ ಹಾಗೂ ನಿಷ್ಠೆಯನ್ನು ಕಂಡುಕೊಂಡ ೧೨೦ನೇ ಜಗದ್ಗುರುಗಳು ತಮ್ಮ ಪೀಠದ ೧೨೧ನೇ ಜಗದ್ಗುರುಗಳನ್ನಾಗಿ ದಿ. ೬-೨-೧೯೮೨ ರಂದು ಚತುರಾಚಾರ್ಯರ ಮಹಾಸನ್ನಿಧಾನದಲ್ಲಿ ಪಟ್ಟಕ್ಕೆ ಕೂಡ್ರಿಸಿದರು.

ಈ ರಂಭಾಪುರೀ ಜಗದ್ಗುರು ಪೀಠವು ಪಂಚಾಚಾರ್ಯ ಪೀಠದಲ್ಲಿ ಒಂದಾಗಿರುವುದು. ಇದರ ಮೂಲ ಪುರುಷರೆಂದು ಶ್ರೀ ರೇಣುಕಾಚಾರ್ಯ

ರನ್ನು ಹೆಸರಿಸುತ್ತಾರೆ. ದ್ವಾಪರಯುಗದ ಶ್ರೀಜಗದ್ಗುರು ರೇಣುಕಾಚಾರ್ಯರು ಕೊಲ್ಲಿಪಾಕಿ ಕ್ಷೇತ್ರದ ಶ್ರೀ ಸೋಮೇಶ್ವರ ಮಹಾಲಿಂಗದಿಂದ ಸದ್ಯೋಜಾತ ಮುಖದಿಂದ ಉದ್ಭವವಾದರೆಂಬ ನಂಬಿಕೆಯೂ ಇದೆ. ಪೂಜ್ಯರು ಮಲಯ ಪರ್ವತದಲ್ಲಿವಾಸವಾಗಿದ್ದ ಶ್ರೀ ಅಗಸ್ತ್ಯ ಮಹರ್ಷಿಗಳಿಗೆ ವೀರಶೈವ ಸಿದ್ಧಾಂತವನ್ನು ಉಪದೇಶ ಮಾಡಿದ್ದಾರೆ. ಅದನ್ನೇ ಶಿವಯೋಗಿ ಶಿವಾಚಾರ್ಯರು ಸಂಗ್ರಹಿಸಿ ಬರೆದಿಟ್ಟಿರುವ ಗ್ರಂಥವೇ ಶ್ರೀ ಸಿದ್ಧಾಂತ ಶಿಖಾಮಣಿ ಗ್ರಂಥವೆಂದು ಹೇಳುತ್ತ ಬಂದಿರುವರು. ಅಗಸ್ತ್ಯ ಮುನಿಗೆ ಉಪದೇಶ ಮಾಡಿದ್ದ ಮಲಯಾಚಲ ಪ್ರದೇಶವೇ ಈ ಚಿಕ್ಕಮಗಳೂರ ಜಿಲ್ಲೆಯ ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ವೀರಸಿಂಹಾಸನ ಮಹಾಪೀಠವಾಗಿರುತ್ತದೆ.

ಶ್ರೀ ಜಗದ್ಗುರು ಮರುಳಾರಾಧ್ಯರು ಶಿವನ ವಾಮದೇವ ಮುಖದಿಂದ ವೀರಶೈವ ಮತಸ್ಥಾಪನೆಗಾಗಿ ಶ್ರೀ ಸಿದ್ಧೇಶ್ವರಲಿಂಗದಿಂದ ಯುಗಯುಗದಲ್ಲಿ ಹುಟ್ಟಿ ಬಂದವರಾಗಿದ್ದಾರೆ. ಶ್ರೀ ಜಗದ್ಗುರು ಮರುಳಾರಾಧ್ಯರು ಮೂಲತಃ ಮಾಳವ ದೇಶದವರು. (ಮಧ್ಯಪ್ರದೇಶ) ಅಲ್ಲಿಂದ ಈ ಪೀಠವು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲೂಕಿನಲ್ಲಿ ಈ ಸಿಂಹಾಸನವನ್ನು ಸ್ಥಾಪಿಸಿರುವುದು ತಿಳಿದು ಬರುತ್ತದೆ. ಕೇದಾರ ಪೀಠವು ಉತ್ತರ ಪ್ರದೇಶದ ತುದಿಯ ಹಿಮಾಲಯ ಪರ್ವತದಲ್ಲಿರುವುದು. ಶ್ರೀ ಜಗದ್ಗುರು ಏಕೋರಾಮಾರಾಧ್ಯರು ಆದೇಶಿಸಿದಂತೆ ಶ್ರೀ ರಾಮನಾಥ ಶಿವಲಿಂಗದಿಂದ ಅವತರಿಸಿದರೆಂಬ ಪ್ರತೀತಿ ಇದೆ. ನನ್ನ ಪರಮಪೂಜ್ಯ ಗುರುಗಳೂ ನಮ್ಮೂರ ಮುತನಾಳ ಗ್ರಾಮದ ಪಟ್ಟದ್ದೇವರಾಗಿದ್ದ ಶ್ರೀ ಶಾಂತಲಿಂಗ ಶಿವಾಚಾರ್ಯರು ಈ ಕೇದಾರ ಪೀಠದ ಜಗದ್ಗುರು ಗಳಾಗಿದ್ದರೆಂಬುದು ಅಭಿಮಾನದ ವಿಷಯವಾಗಿರುವುದು. ಶಿವನ ತತ್ಪುರುಷ ಮುಖದಿಂದ ಪಂಡಿತಾರಾಧ್ಯರು ಜನಿಸಿ ಶ್ರೀಶೈಲ ಪೀಠ ಬೆಳೆಗಿರುವರು. ಅದೇ ರೀತಿಯಾಗಿ ಕಾಶಿಯ ವಿಶ್ವನಾಥ ಶಿವಲಿಂಗದಿಂದ ಜಗದ್ಗುರು ವಿಶ್ವರಾಧ್ಯರು ಅವತರಿಸಿ ಪ್ರಸಿದ್ಧರಾಗಿರುವುದನ್ನು ನೆನೆಯಬಹುದಾಗಿದೆ. ಪಂಚಪೀಠಗಳು ರಾಷ್ಟ್ರದ ಮೂಲೆ ಮೂಲೆಗೂ ಪ್ರಾಚೀನ ಕಾಲದಿಂದಲೂ ಧರ್ಮ ಪ್ರಚಾರ ಕಾರ್ಯ ಮಾಡುತ್ತ ಬಂದಿರುತ್ತವೆ.

ಶ್ರೀ ರಂಭಾಪುರೀ ಪೀಠದಲ್ಲಿ ಇಂದಿನ ಶ್ರೀ ಜಗದ್ಗುರುಗಳು ೧) ನಿತ್ಯ ದಾಸೋಹ ೨. ಆಡಳಿತ ಚುರುಕುಗೊಳಿಸುವುದು ೩. ಪೀಠದಲ್ಲಿ ಗುರುಕುಲ

ಸ್ಥಾಪನೆ ೪. ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನ ಸ್ಥಾಪನೆ. ೫. ಧಾರ್ಮಿಕ ಗ್ರಂಥ ಪ್ರಕಟನೆ. ೬. ಪ್ರಸಾರ ಮಾಧ್ಯಮಗಳ ಬಳಕೆ. ೭. ಪೀಠಕ್ಕೂ ಜನ ಸಾಮಾನ್ಯರ ಮಧ್ಯೆ ಪೀಠ ನಿಕಟ ಸಂಪರ್ಕ ಹೆಚ್ಚಳ ೮. ಪೀಠದಲ್ಲಿ ಶ್ರಾವಣಮಾಸದಲ್ಲಿದ್ದ ತಪೋನುಷ್ಠಾನ ಹೆಚ್ಚಿಸುವುದು. ಪ್ರತಿ ಹುಣ್ಣಿಮೆಯಂದು ಜಗದ್ಗುರುಗಳು ವಾಸ ಮಾಡಿಕೊಂಡಿರುವುದು. ಇಂಥ ಯೋಜನೆಗಳನ್ನು ಕಾರ್ಯ ರೂಪದಲ್ಲಿ ತಂದ ಇಂದಿನ ಜಗದ್ಗುರುಗಳು ರಂಭಾಪುರೀ ಕ್ಷೇತ್ರದ ಮಹಿಮೆಯನ್ನೂ ಹೆಚ್ಚಿಸಿದ್ದಾರೆ. ಪುಸ್ತಕ, ಪತ್ರಿಕೆ, ಪ್ರಕಟನಾ ಕಾರ್ಯವನ್ನು ಕೈಕೊಂಡಿರುವರು.

ರೇಣುಕಾಚಾರ್ಯ ವಿದ್ಯಾಸಂಸ್ಥೆಗಳು, ಮಂಗಳ ಭವನ, ಮಾಂಗಲ್ಯ ಭವನ, ವಸತಿ ಸಂಕೀರ್ಣಗಳು, ವಿದ್ಯಾರ್ಥಿ ವಸತಿ ನಿವೇಶನಗಳು, ಕಲ್ಯಾಣ ಮಂಟಪ, ಸೋಮೇಶ್ವರ ಪ್ಲಾಜಾ, ಯಾತ್ರಿನಿವಾಸ, ಶಾಂತಿಧಾಮಗಳು ನಿರ್ಮಾಣಗೊಂಡಿರುತ್ತವೆ. ನಿತ್ಯವೂ ದಾಸೋಹ ಸೇವೆ ನಡೆದುಕೊಂಡು ಬರುತ್ತಿದೆ. ಇದು ಶ್ರೀ ಪೀಠದ ಜೀವಂತಿಕೆಗೆ ನಿದರ್ಶನವಾದಂತಿದೆ.

ನನ್ನನ್ನು ಉಪನ್ಯಾಸ ನೀಡಲು ಆಮಂತ್ರಿಸಿ ಆಶೀರ್ವದಿಸಿ, ಸನ್ಮಾನ ಮಾಡಿದ್ದಾರೆ. ಮತ್ತೊಮ್ಮೆ ಕುಟುಂಬ ಸಮೇತ ಮತ್ತೆ ಪೀಠ ದರ್ಶನಕ್ಕೆ ಹೋಗಿ ಜಗದ್ಗುರುಗಳ ದರ್ಶನಾಶೀರ್ವಾದ ಪಡೆದುಕೊಂಡಿರುವೆವು. ಒಮ್ಮೆ ಸಿಂಧನೂರಿನಲ್ಲಿ ನಡೆದ ದಸರಾ ದರ್ಬಾರಕ್ಕೂ ಉಪನ್ಯಾಸ ನೀಡಲು ನನ್ನನ್ನು ಆಮಂತ್ರಿಸಿ ಜಗದ್ಗುರುಗಳು ಆಶೀರ್ವದಿಸಿರುವರು. ಈ ಪೀಠ ಪರಂಪರೆಯ ಮುತನಾಳ ಹಿರೇಮಠದ ಅಂದಿನ ಶ್ರೀ ಷ. ಬ್ರ. ಶಾಂತಲಿಂಗ ಶಿವಾಚಾರ್ಯರು ನನ್ನ ಇಷ್ಟಲಿಂಗ ದೀಕ್ಷಾಗುರುಗಳಾಗಿ, ವೀರಶೈವ ಸಂಸ್ಕಾರ ಮುದ್ರೆ ನೀಡಿದ ಅಂಥ ಗುರುಗಳನ್ನು ಅವರ ಸಂಪ್ರದಾಯ ಪರಿಸರವನ್ನು, ಮಂತ್ರ ಪಿಂಡವನ್ನು ಮಾಂಸಪಿಂಡವನ್ನಾಗಿ ಪರಿವರ್ತಿಸಿರುವ ಆ ತರುವಾಯ ಕೇದಾರ ಪೀಠದ ಜಗದ್ಗುರುಗಳೆನಿಸಿರುವ ಶ್ರೀ ಶ್ರೀ ಶ್ರೀ ೧೦೦೮ ರಾವಲ್ ರನ್ನು ನಾನೆಂದಿಗೂ ಮರೆಯಲಾಗದ ಮಾತು. ಜಗದ್ಗುರು ಪೀಠದ ಮೂಲಸ್ಥಾನ ಕೊಲ್ಲಿಪಾಕಿಗೆ ಹೋಗಿ ಬರಲು ಶ್ರೀ ಅಣ್ಣಾರಾವ ಬಿರಾದಾರ ಸಾಹೇಬರು ಹಲವಾರು ಸಲ ಆಮಂತ್ರಿಸಿದರೂ ನನಗದು ಸಾಧ್ಯವಾಗಿಲ್ಲ.

■■

ಕೇದಾರಪೀಠದ ಜಗದ್ಗುರು

ಲಿಂ. ಶಾಂತಲಿಂಗ ಶಿವಾಚಾರ್ಯರು

ಕೇದಾರಪೀಠದ ರಾವಲ್ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಶಾಂತಲಿಂಗಶಿವಾಚಾರ್ಯರು ಕರ್ನಾಟಕರಾಜ್ಯದ ಬೆಳಗಾವಿಜಿಲ್ಲೆಯ ಬೈಲಹೊಂಗಲ ತಾಲೂಕಿನ ಚಿಕ್ಕಬಾಗೇವಾಡಿ ಗ್ರಾಮದಲ್ಲಿ ದಿ. ೭-೯-೧೯೧೧ ರಲ್ಲಿ ಜನಿಸಿದರು. ಶ್ರೀಗಳ ತಂದೆಯವರು ಚಿಕ್ಕಬಾಗೇವಾಡಿಯ ಹಿರೇಮಠದ ವೇದಮೂರ್ತಿ ಶ್ರೀ ಚನ್ನಬಸಯ್ಯನವರು. ಇವರ ತಾಯಿ ಪಾರ್ವತಮ್ಮ. ಬಾಲ್ಯದಲ್ಲಿ 'ಶಾಂತವೀರ' ಎಂಬ ಹೆಸರಿನೊಂದಿಗೆ ತಂದೆ-ತಾಯಿಗಳು ಇವರನ್ನು ಕರೆಯುತ್ತಲಿದ್ದರು. ಹೆಸರಿಗೆ ತಕ್ಕಂತೆ ಶ್ರೀಗಳು ಚಿಕ್ಕಂದಿನಿಂದಲೂ ಶಾಂತರಾಗಿಯೆ ಬೆಳೆದುಬಂದರು. ಶಾಂತವೀರ ಸ್ವಾಮಿಗಳಿಗೆ ಗುರುಸಿದ್ಧಯ್ಯನವರು ಅಣ್ಣಂದಿರ ರಾಗಿದ್ದರು. ಶಿವಮೂರ್ತಿ ಮತ್ತು ದುಂಡಯ್ಯನವರು ತಮ್ಮಂದಿರರಾಗಿದ್ದರು.

ಶಿಕ್ಷಣ : ಶ್ರೀ ಶಾಂತವೀರರು ಜಗತ್ತಿನ ವ್ಯಾಮೋಹಗಳನ್ನು ಚಿಕ್ಕಂದಿನಿಂದಲೂ ತೊರೆದವರಾಗಿದ್ದರು. ಅಧ್ಯಾತ್ಮದ ಬಲದಿಂದ ಆತ್ಮಬಲವನ್ನು ಬೆಳೆಸಿಕೊಂಡು ಶಿವಯೋಗದ ಸಾಧನೆಯತ್ತ ಒಲವು ತಾಳಿದವರಾಗಿದ್ದರು. ತಂದೆ-ತಾಯಿಗಳಿಗೆ ಯಾವ ರೀತಿಯ ನೋವನ್ನುಂಟುಮಾಡದೆ ಅಣ್ಣ-ತಮ್ಮಂದಿರ ಜೊತೆಗೆ ಸಖ್ಯಭಾವದಿಂದ ನಡೆದುಕೊಳ್ಳುತ್ತಿದ್ದರು. ಚಿಕ್ಕಬಾಗೇವಾಡಿಯ ಪ್ರಾಥಮಿಕ ಶಾಲೆಯಲ್ಲಿ ನಾಲ್ಕನೆಯ ತರಗತಿವರೆಗೆ ಅಭ್ಯಾಸ ಮಾಡಿ, ಕೊಣ್ಣೂರ ಮರಡಿಮಠದ ಅಧಿಪತಿಗಳ ಆಶ್ರಯದಲ್ಲಿ ಎರಡು ವರುಷ ಸಂಸ್ಕೃತ ಅಭ್ಯಾಸ ಮಾಡುತ್ತ ವೈದಿಕ ಮತ್ತು ಅಧ್ಯಾತ್ಮದ ಸಾಧನೆ ಮಾಡಿದರು.

ಪಟ್ಟಾಭಿಷೇಕ : ತಂದೆ-ತಾಯಿಗಳ ಸುಸಂಸ್ಕೃತ ಬದುಕಿನ ಪಡಿಯಚ್ಚಾಗಿ ಕಂಗೊಳಿಸುತ್ತಿದ್ದ ಶ್ರೀ ಶಾಂತವೀರರು ಉನ್ನತ ವಿಚಾರ-ಆಚಾರಗಳಿಂದಾಗಿ ಜನಮನವನ್ನು ಆಕರ್ಷಿಸಿಕೊಂಡರು. ಅಂತೆಯೇ ಅವರ ಶಾಂತ ಸ್ವಭಾವಕ್ಕೆ, ಉದಾತ್ತ ವಿಚಾರಗಳಿಗೆ ಮೆಚ್ಚಿಕೊಂಡ ಚಿಕ್ಕಬಾಗೇವಾಡಿ ಸಮೀಪದ ಬೆಳಗಾವಿ

ಜಿಲ್ಲೆಯ ಬೆಳಗಾವಿ ತಾಲೂಕಿನ ಮುತನಾಳ ಗ್ರಾಮದ ವೀರಶೈವ ಸದ್ಭಕ್ತರು ಶಾಂತವೀರರನ್ನು ತಮ್ಮ ಊರ ಮಠಕ್ಕೆ ಸ್ವಾಮಿಗಳನ್ನಾಗಿ ಆಮಂತ್ರಿಸಿದರು. ಅದಕ್ಕೆ ಒಪ್ಪಿಕೊಂಡು ಶ್ರೀ ಚನ್ನಬಸಯ್ಯನವರು ಮುತನಾಳ ಹಿರೇಮಠಕ್ಕೆ ತಮ್ಮ ಮಗ ಶಾಂತವೀರರನ್ನು ಕೊಡಲು ಸಮ್ಮತಿಸಿದರು. ಕಿತ್ತೂರಿನ ಉಭಯ ಶ್ರೀಗಳ ನೇತೃತ್ವದಲ್ಲಿ ಪಟ್ಟಾಭಿಷೇಕ ನಡೆದುಹೋಯಿತು.

ಅಧ್ಯಾತ್ಮ ಸಾಧನೆ : ಮುತನಾಳ ಮಠದ ಪಟ್ಟಾಭಿಷೇಕವಾದ ಮೇಲೂ ಶ್ರೀ ಶಾಂತವೀರರ ಅಭ್ಯಾಸ, ಶಿವಯೋಗ ಸಾಧನೆ ಮುಂದುವರಿಯಿತು. ಕೊಣ್ಣೂರು ಮರಡಿ ಮಠದ ಅಧಿಪತಿಗಳಾದ ಶ್ರೀ ಗುರುಸಿದ್ಧ ಮಹಾಸ್ವಾಮಿಗಳವರ ದಿವ್ಯ ಆಶ್ರಯದಲ್ಲಿ ಮತ್ತೆ ಎರಡು ವರುಷ ಸಂಸ್ಕೃತ ಅಭ್ಯಾಸ ಮಾಡಿದರು. ಮರಡಿ ಮಠದ ತಪೋನಿಧಿಗಳು ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರು ಗಳಾಗಿ ಅಧಿಕಾರ ಸ್ವೀಕರಿಸಿದ್ದರಿಂದಾಗಿ, ಅವರ ಅಪ್ಪಣೆಯಂತೆ ಶ್ರೀ ಶಾಂತವೀರರೂ ಹುಬ್ಬಳ್ಳಿಯ ಮೂರುಸಾವಿರ ಮಠದಲ್ಲಿದ್ದುಕೊಂಡೇ ತಮ್ಮ ಅಧ್ಯಯನವನ್ನು ಹಾಗೂ ಸಾಧನೆಯನ್ನು ಮತ್ತೂ ಮುಂದುವರಿಸಿದರು. ತರುವಾಯ ಸೊಲ್ಲಾಪುರದ ಸಿದ್ಧರಾಮೇಶ್ವರ ಕ್ಷೇತ್ರದಲ್ಲಿದ್ದುಕೊಂಡು ಎರಡು ವರುಷಗಳವರೆಗೆ ಉಗ್ರ ತಪಸ್ಸನ್ನು ನಡೆಸಿದರು.

ಪಂಡಿತ ಪರೀಕ್ಷೆ : ಪಂಚಮಹಾಪೀಠಗಳಲ್ಲಿ ಒಂದಾದ ಶ್ರೀ ಶೈಲಪೀಠದ ಗುಂತಕಲ್ ಶಾಖಾ ಮಠದಲ್ಲಿದ್ದುಕೊಂಡು ಅಭ್ಯಾಸ ಮಾಡಿದರು. ಹೆಚ್ಚಿನ ಅಭ್ಯಾಸ ಮಾಡಲೋಸುಗ ಕಾಶೀಪೀಠದ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ವೀರಭದ್ರ ಶಿವಾಚಾರ್ಯ ಭಗವತ್ಪಾದರ ದಿವ್ಯ ಸನ್ನಿಧಿಯಲ್ಲಿದ್ದುಕೊಂಡು ಒಂಬತ್ತು ವರುಷಗಳವರೆಗೆ ಸಂಸ್ಕೃತ, ಹಿಂದಿ, ಇಂಗ್ಲೀಷ ಅಭ್ಯಾಸ ಮಾಡಿದರು. ಜೊತೆಗೆ ಆಧ್ಯಾತ್ಮ ವಿದ್ಯೆಯಲ್ಲಿ ಹೆಚ್ಚಿನ ಜ್ಞಾನವನ್ನು ಗಳಿಸಿಕೊಂಡು ಅಧ್ಯಾತ್ಮ ಸಾಧನೆ ಮಾಡಿದರು. ೧೯೩೭ರಲ್ಲಿ ಕಾವ್ಯತೀರ್ಥ ಪರೀಕ್ಷೆಗೆ ಕುಳಿತುಕೊಂಡು ಉಚ್ಚ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಗುರುಸೇವೆ : ಶ್ರೀ ಶಾಂತಲಿಂಗ ಶಿವಾಚಾರ್ಯರು ಕಾಶಿಯಲ್ಲಿ ಅಧ್ಯಯನ ಮಾಡುವ ಸಮಯದಲ್ಲಿ ಅವರಿಗೆ ಕೇದಾರಪೀಠದ ಜಗದ್ಗುರುಗಳ ಸೇವೆ ಮಾಡುವ ಭಾಗ್ಯ ಲಭಿಸಿತು. ತಮ್ಮ ನಿಷ್ಠೆ, ಪ್ರಾಮಾಣಿಕತೆ ಹಾಗೂ ಸರಳ

ಸಜ್ಜನಿಕೆಯಿಂದ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಹಿಮವತ್ ಕೇದಾರಪೀಠದ ರಾವಲ್ ವೈರಾಗ್ಯ ಸಿಂಹಾಸನಾಧೀಶ್ವರ ಶ್ರೀ ನೀಲಕಂಠಲಿಂಗ ಶಿವಾಚಾರ್ಯರ ಸೇವೆ ಮಾಡಿದರು. ಮಧುರಮಾತಿನ, ಪ್ರತಿಭಾಸಂಪನ್ನ ಶ್ರೀ ಶಾಂತಲಿಂಗರ ಸ್ವಭಾವಕ್ಕೆ, ಸೇವಾಭಾವಕ್ಕೆ ಜಗದ್ಗುರುಗಳು ಸಂತುಷ್ಟರಾಗಿ ಮೆಚ್ಚಿಕೆಯ ಮಾತುಗಳನ್ನಾಡಿ ಆಶೀರ್ವದಿಸಿದರು. ಅಧ್ಯಯನ ಮುಗಿದ ಮೇಲೆ ಶ್ರೀ ಶಾಂತವೀರರು ತಮ್ಮ ಗ್ರಾಮಕ್ಕೆ ಬಂದು ಮುತನಾಳ ಬೃಹನ್ಮಠದ ಅಭಿವೃದ್ಧಿಗಾಗಿ ಕಾರ್ಯತತ್ಪರರಾದರು.

ಅನುಷ್ಠಾನ : ಶ್ರೀ ಶಾಂತಲಿಂಗ ಶಿವಾಚಾರ್ಯರು ಕಾಶಿಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿದವರಾಗಿದ್ದರು. ಯೋಗದ ಬಲವನ್ನೂ ಅವರು ಸಾಧಿಸಿಕೊಂಡಿದ್ದರು. ಅದನ್ನು ಈ ಭಾಗದ ಜನತೆಗೆ ಗೊತ್ತುಪಡಿಸಲೆಂದೊ, ತಮಗೆ ತಾವೇ ಪರೀಕ್ಷೆ ಮಾಡಿ ನೋಡಿಕೊಳ್ಳಬೇಕೆಂದೊ – ಪ್ರಶಾಂತ ಸ್ಥಳದಲ್ಲಿ ಅನುಷ್ಠಾನಕ್ಕೆ ಕೂಡ್ರ ಬೇಕೆಂದು ಯೋಚಿಸತೊಡಗಿದರು. ತಾವು ಪಡೆದ ಜ್ಞಾನವನ್ನು ಅನುಭವ ವೇದ್ಯ ಮಾಡಿಕೊಳ್ಳಲೂ ಈ ಅನುಷ್ಠಾನ ನಡೆಸಬೇಕೆಂಬುದು ಅವರ ಮನೀಷೆಯಾಗಿತ್ತು. ಅದಕ್ಕಾಗಿಯೇ ಬಾಗೇವಾಡಿ ಮತ್ತು ಮುತನಾಳದ ಮಧ್ಯದಲ್ಲಿದ್ದ ಶಿವನಗೌಡರ ಮಾವಿನ ತೋಪನ್ನು ಆಯ್ದುಕೊಂಡರು. ಅಲ್ಲಿದ್ದ ಪತ್ರಿಗಿಡದ ಕೆಳಗೆ ಒಂದು ತಿಂಗಳ ಕಾಲ ಮೌನವ್ರತ ನಡೆಸಿದರು. ಶ್ರೀ ಶಾಂತಲಿಂಗ ಶಿವಾಚಾರ್ಯರ ಸೇವೆಯನ್ನು ಮುತನಾಳದ ಕುಂದರಗಿ ಬಸವಂತಪ್ಪನು ಮಾಡುತ್ತಿದ್ದನು.

ಮಹಾಸ್ವಾಮಿಗಳು ತಪದಲ್ಲಿ ಮಗ್ನರಾದ ಸಮಯದಲ್ಲಿ ಇಷ್ಟಲಿಂಗ ಪೂಜೆ ಕೈಕೊಂಡಾಗ, ಸರ್ಪವೊಂದು ಬಂದು ಕರದಲ್ಲಿಟ್ಟುಕೊಂಡು ಪೂಜಿಸುತ್ತಿದ್ದ ಇಷ್ಟಲಿಂಗದ ಮೇಲೆ ಹೆಡೆಯೆತ್ತಿ ಆಡುತ್ತಿರುವುದನ್ನು ಬಸವಂತಪ್ಪನು ಕಂಡು ಶ್ರೀಗಳವರ ತಪಶ್ಯಕ್ತಿಗೆ ಬೆರಗಾಗುತ್ತಾನೆ. ಎಚ್ಚತ್ತ ಶ್ರೀಗಳವರಿಗೆ ಬಸವಂತಪ್ಪನು ಈ ವಿಷಯ ತಿಳಿಸಿದಾಗ ಶ್ರೀಗಳು ಅದೆಲ್ಲವೂ ಶ್ರೀ ಗುರುವಿನ ಕೃಪೆಯೆಂದು ಅನುಷ್ಠಾನ ಮುಂದುವರಿಸುತ್ತಾರೆ. ಬಸವಂತಪ್ಪ ತನ್ನ ಭೂಮಿಯನ್ನು ದಾನವಾಗಿ ಕೊಡುತ್ತಾನೆ.

ಮಠದ ಕಟ್ಟಡ : ಶ್ರೀ ಶಾಂತಲಿಂಗ ಶಿವಾಚಾರ್ಯರು ಮುತನಾಳ ಬೃಹನ್ಮಠದ ಪಟ್ಟಾಧಿಕಾರಿಗಳಾದ ಮೇಲೆ ಬಹುನಿಷ್ಠೆಯಿಂದ, ಧರ್ಮ–ತತ್ವ ತಿಳಿದುಕೊಂಡು,

ಅಧ್ಯಾತ್ಮದ ಸಾಧನೆ ಮಾಡಿ, ಶ್ರೀ ಗುರುವಿನ ಆಶೀರ್ವಾದದಿಂದ, ಪೂಜಾನುಷ್ಠಾನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅದರಿಂದ ಲಿಂಗಾಂಗ ಸಾಮರಸ್ಯ ಸಿದ್ಧಿಯನ್ನು ಪಡೆದುಕೊಂಡರು. ಸಂತುಷ್ಟರಾಗಿ ಜನತೆಯ ಕಲ್ಯಾಣ ಬಯಸುತ್ತ ಮಹಾಸ್ವಾಮಿಗಳಾಗಿ ಆ ಭಾಗದಲ್ಲಿ ಬೆಳೆದುಬಂದರು. ಮುತನಾಳ ಗ್ರಾಮದ ಮತ್ತು ಸುತ್ತಲಿನ ವೀರಾಪುರ, ಹಟ್ಟಿಹೊಳಿ, ಇಟಗಿ, ಕಿತ್ತೂರ ಮೊದಲಾದ ಭಾಗದ ಭಕ್ತರು ಶ್ರೀ ಶಾಂತಲಿಂಗ ಶಿವಾಚಾರ್ಯರು ತಮ್ಮ ಪಾಲಿನ ದೇವರೆಂದು ಗೌರವಿಸತೊಡಗಿದರು. ಮೊದ ಮೊದಲು ಮುತನಾಳದಲ್ಲಿ ಶ್ರೀಗಳವರಿಗೆ ವಾಸಕ್ಕೆ ಮಠ ಇದ್ದಿರಲಿಲ್ಲ. ಕುಂದರಗಿ ಬಸವಂತಪ್ಪನ ಮನೆಯಲ್ಲಿಯೇ ವಾಸ ಮಾಡಿಕೊಂಡಿರುತ್ತಿದ್ದರು. ಭಕ್ತಾಗ್ರಣಿ ಬಸವನಗೌಡ ಪಾಟೀಲ ಅವರ ಮನೆಯಲ್ಲಿ ಪೂಜೆ– ಪ್ರಸಾದ ನಡೆಸುತ್ತಿದ್ದರು. ಚಿಕ್ಕಬಾಗೇವಾಡಿಯಿಂದ ಪ್ರತಿನಿತ್ಯ ಹೋಗಿ ಬಂದೂ ಮಾಡುತ್ತಿದ್ದರು.

ಶ್ರೀಗಳವರ ಅನಾನುಕೂಲತೆಯನ್ನು ಅರಿತ ಮುತನಾಳ ಗ್ರಾಮದ ಭಕ್ತರು ಮಠದ ಕಟ್ಟಡ ಕಟ್ಟಿಸಬೇಕೆಂದು ನಿರ್ಣಯಿಸಿದರು. ಆ ರೀತಿ ಕಾರ್ಯ ಪ್ರವೃತ್ತರಾದರು. ೧೯೪೦ರಲ್ಲಿ ಪ್ರಶಾಂತವೂ, ಭವ್ಯವೂ ಆದ ಮಠದ ಕಟ್ಟಡವನ್ನು ಊರ ಹೊರಗಡೆ ಕಟ್ಟಿಸಿದರು. ಮೊದ ಮೊದಲು ಮಠದಲ್ಲಿ ಯಾರೂ ವಾಸ ಮಾಡಲು ಹೆದರುತ್ತಿದ್ದರು. ಅದು ದೆವ್ವಗಳ ತಾಣವೆಂದೂ ವದಂತಿ ಹಬ್ಬಿಬಿಟ್ಟಿತು. ಕೊನೆಗೆ ಶ್ರೀ ಶಾಂತಲಿಂಗ ಶಿವಾಚಾರ್ಯರು ಮಠದಲ್ಲಿಯೇ ವಾಸ ಮಾಡತೊಡಗಿದರು. ಜನರಲ್ಲಿದ್ದ ಭಯ– ಭೀತಿ ಇಲ್ಲವಾದವು. ಮಠಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚಾಯಿತು. ಗದ್ದುಗೆ ಪೂಜೆ ಮಾಡಲು ಶ್ರೀ ರುದ್ರಯ್ಯ ಅವರನ್ನು ಶ್ರೀಗಳು ನೇಮಿಸಿ ಮಠದ ಹಾಗೂ ಊರಲ್ಲಿ ಧಾರ್ಮಿಕ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ತಿಳಿಸಿದರು. ಶ್ರೀಗಳವರ ಅಪ್ಪಣೆಯಂತೆ ರುದ್ರಮುನಿ ಶರ್ಮ, ಮಠದ ಸ್ವಚ್ಛತೆಯ ಕಡೆಗೆ ವಿಶೇಷ ಗಮನ ಕೊಟ್ಟರು. ಮಂತ್ರ ಪಠಣದಲ್ಲಿಯೂ ರುದ್ರಯ್ಯ ಪಳಗಿದವರಾಗಿದ್ದಾರೆ.

ಈ ಮಠಕ್ಕೆ ಹೇಳಿಕೊಳ್ಳುವ ಯಾವ ಆಸ್ತಿಯೂ ಇಲ್ಲ. ಶ್ರೀಗಳು ಯಾವತ್ತೂ ಹಣ ಹಾಗೂ ಕೀರ್ತಿಗಾಗಿ ಆತುರಪಡಲಿಲ್ಲ. ಊರಿನಲ್ಲಿರುವ ಚಿಕ್ಕ ವಯಸ್ಸಿನ ವಿದ್ಯಾರ್ಥಿಗಳನ್ನು ಮಠಕ್ಕೆ ಬರಮಾಡಿಕೊಂಡು ಮಠದಲ್ಲಿಯೇ ಚೆನ್ನಾಗಿ ಅಭ್ಯಾಸ ಮಾಡಬೇಕೆಂದು ಅಪ್ಪಣೆ ಕೊಡಿಸಿದರು. ಇದರಿಂದಾಗಿ ಯಾವ ಮತ– ಪಂಥದ

ಭೇದವೆಣಿಸದೆ ಎಲ್ಲ ವರ್ಗದ ವಿದ್ಯಾರ್ಥಿಗಳೂ ಮಠದಲ್ಲಿದ್ದು ಅಭ್ಯಾಸ ಮಾಡತೊಡಗಿದರು. ಪ್ರತಿನಿತ್ಯ ಬೆಳಗಿನ ಜಾವದಲ್ಲಿ ಸುಮಾರು ೫ ಗಂಟೆಗೆ ಏಳುವುದು, ಮುಖಮಾರ್ಜನ ಮಾಡಿಕೊಂಡು ಪ್ರಾರ್ಥನೆ ಮಾಡುವುದು, ಅಭ್ಯಾಸ ಮಾಡುವುದು, ನಂತರ ಯೋಗಾಸನ, ವಾಯುವಿಹಾರ, ಸ್ನಾನ ಮುಗಿಸಿಕೊಳ್ಳಬೇಕು. ಸ್ನಾನಕ್ಕೆಂದು ಗ್ರಾಮದ ಪೂರ್ವದಿಕ್ಕಿನ ಮೈಲು ದೂರದ ಹಳ್ಳಕ್ಕೆ ಹೋಗಬೇಕಾಗುತ್ತಿತ್ತು. ಮನೆಗೆ ಊಟಕ್ಕೆ ಮಾತ್ರ ತೆರಳಬೇಕಾಗುತ್ತಿತ್ತು. ಹೀಗೆ ಸುಮಾರು ಇಪ್ಪತ್ತು ಜನ ವಿದ್ಯಾರ್ಥಿಗಳು ಶ್ರೀ ಶಾಂತಲಿಂಗ ಶಿವಾಚಾರ್ಯರ ಸನ್ನಿಧಿಯಲ್ಲಿದ್ದುಕೊಂಡು ಅಭ್ಯಾಸ ನಡೆಸಿದರು. ಬೌದ್ಧಿಕ, ದೈಹಿಕ ಬೆಳವಣಿಗೆಯ ಜೊತೆಗೆ, ನೈತಿಕ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಹೋಗುವಂತೆ ವಿದ್ಯಾರ್ಥಿಗಳಿಗೆ ನೀತಿಯ ಪಾಠಗಳನ್ನು ಶ್ರೀಗಳು ಹೇಳಿಕೊಡುತ್ತಿದ್ದರು. ಶ್ರಾವಣ ಮಾಸದಲ್ಲಿ ತಿಂಗಳುಗಟ್ಟಲೆ ಪುರಾಣ, ಪ್ರವಚನಗಳನ್ನು ಹೇಳಿಸುವ ಏರ್ಪಾಟು ಮಾಡುತ್ತಿದ್ದರು. ಬಸವರಾಜ ಶಾಸ್ತ್ರಿಗಳು ಪುರಾಣ ಹೇಳುವುದರಲ್ಲಿ ಪ್ರವೀಣ ರಿದ್ದರು. ಪುರಾಣ ಕಾರ್ಯಕ್ರಮದ ಜೊತೆಜೊತೆಗೆ ವಿದ್ಯಾರ್ಥಿಗಳಿಗೂ ಅದರಲ್ಲಿ ಮಾತನಾಡುವ ಅವಕಾಶ ಒದಗಿಸಿಕೊಡುತ್ತಿದ್ದರು. ತಪ್ಪಿದಲ್ಲಿ ತಿದ್ದಿ ಬುದ್ಧಿ ಹೇಳುತ್ತಿದ್ದರು. ಇಂಥ ಸಂಸ್ಕಾರದ ಮುದ್ರೆ ಹೊಂದಿದ ವಿದ್ಯಾರ್ಥಿಗಳಲ್ಲಿ ನಾನೂ ಒಬ್ಬನು. ಈ ಶಾಂತಲಿಂಗ ಶಿವಾಚಾರ್ಯರೇ ನನಗೆ ನಡೆ–ನುಡಿ ಕಲಿಸಿದ ಇಷ್ಟಲಿಂಗ ದೀಕ್ಷೆ ನೀಡಿದ ಸದ್ಗುರುಗಳು.

ಏಕೋರಾಮಾರಾಧ್ಯರ ಮೂರ್ತಿ ಪ್ರತಿಷ್ಠಾಪನೆ : ಕೇದಾರ ಮಹಾಸ್ಥಾನ ದಿಂದ ಶ್ರೀ ಶಾಂತಲಿಂಗ ಶಿವಾಚಾರ್ಯರು ಸ್ವದೇಶಕ್ಕೆ ಮರಳಿ ಬರುವಾಗ ಕಾಶೀ ಮಾರ್ಗವಾಗಿ ಬಂದರು. ಕಾಶೀಕ್ಷೇತ್ರ ದಿಂದ ತಮ್ಮ ಮುತನಾಳ ಮಠದಲ್ಲಿ ಪ್ರತಿಷ್ಠಾಪನೆ ಮಾಡಲು ಏಕೋರಾಮಾ ರಾಧ್ಯರ ಅಮೃತ ಶಿಲಾ ಲಿಂಗೋದ್ಭವ ಮೂರ್ತಿಯನ್ನು ತಂದರು. ಮೂರ್ತಿ ಪ್ರತಿಷ್ಠಾಪನೆಯ ಕಾರ್ಯಕ್ರಮಗಳು ಭರದಿಂದ ನಡೆದವು. ತಿಂಗಳ ಕಾಲ ಪ್ರವಚನ, ಶಿವಾನುಭವ ಕಾರ್ಯಕ್ರಮಗಳನ್ನೂ ನಡೆಸತೊಡಗಿದರು. ಸಾಹಿತ್ಯ ಶಿರೋಮಣಿಗಳಾದ ಪಂಡಿತ ಶ್ರೀ ಷ. ಬ್ರ. ಬಾಲಬೃಹಸ್ಪತಿ ಗಂಗಾಧರ ಮಹಾಸ್ವಾಮಿಗಳು ಜಡೆಯ ಬೃಹನ್ಮಠ ಮೊರಬ ಅವರಿಂದ ಶಿವಾನುಭವ ಕಾರ್ಯಕ್ರಮಗಳು ಜರುಗಿದವು. ದಿ. ೨೫–೪–೧೯೫೫ ರ ಶುಭಮುಹೂರ್ತದಲ್ಲಿ ಮುತನಾಳ ಬೃಹನ್ಮಠದಲ್ಲಿ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಅಮೃತ ಶಿಲಾ ಲಿಂಗೋದ್ಭವ ಮೂರ್ತಿಯ

ಪ್ರತಿಷ್ಠಾಪನೆಯ ಕಾರ್ಯವನ್ನು ಶ್ರೀ ಶಾಂತಲಿಂಗ ಶಿವಾಚಾರ್ಯರು ಅತ್ಯಂತ ವೈಭವದಿಂದ ನೆರವೇರಿಸಿದರು. ಹೂಲಿಯ ಬೃಹನ್ಮಠಾಧ್ಯಕ್ಷರಾದ ಶ್ರೀ ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳವರ ಅಮೃತಹಸ್ತದಿಂದ ಈ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮವು ವೈಭವದಿಂದ ನೆರವೇರಿತು. ಈ ಕಾರ್ಯಕ್ರಮಕ್ಕೆ ಮುತನಾಳದ, ಸುತ್ತಮುತ್ತಣದ ಸಮಸ್ತಹಳ್ಳಿ, ಪಟ್ಟಣದ ಜನರೂ ಆಗಮಿಸಿದ್ದರು.

ಶ್ರೀ ಶಾಂತಲಿಂಗರು ತಮ್ಮ ಮಠದಲ್ಲಿಯೇ ವಾಸ್ತವ್ಯ ಮಾಡಿಕೊಂಡಿರು ತ್ತಿದ್ದರಲ್ಲದೆ– ವೈದಿಕ ಹಾಗೂ ಜ್ಯೋತಿಷ್ಯ ಪಾಠಶಾಲೆಗಳನ್ನೂ ನಡೆಸ ತೊಡಗಿ ದರು. ದಿ. ೧೦–೫–೧೯೫೫ರಲ್ಲಿ ಪ್ರಾರಂಭವಾದ ವೈದಿಕ ಪಾಠಶಾಲೆಯು ಅನೇಕ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅನುಕೂಲವಾಯಿತು. ಶ್ರೀಗಳವರು ಬಡ ವಿದ್ಯಾರ್ಥಿಗಳಿಗೆ ಮಠದಲ್ಲಿಯೇ ಊಟ, ವಸತಿ ಏರ್ಪಾಟು ಮಾಡಿ ದ್ದರು. ಕರೆ ಬಂದದ್ದರಿಂದ ಮುತನಾಳದಿಂದ ಮತ್ತೆ ಕೇದಾರ ಪೀಠಕ್ಕೆ ಹೋದರು.

ಮುತನಾಳದ ಭಕ್ತರು ಶ್ರೀಗಳವರ ತಪೋನಿಷ್ಠೆಗೆ ಮಾರುಹೋಗಿ ತಮ್ಮ ಕೈಲಾದ ಮಟ್ಟಿಗೆ ದೇಣಿಗೆ ನೀಡಿದವರಿದ್ದಾರೆ. ಭೂಮಿ–ಸೀಮಿ ನೀಡಿದವ ರಿದ್ದಾರೆ. ಕುಂದರಗಿ ಬಸವಂತಪ್ಪ, ಗೌಡಪ್ಪ ಗದಿಗೆಪ್ಪ ಅಂಕಲಗಿ, ಶೇಷೊ ವಿಠ್ಠಲ ಕುಲಕರ್ಣಿ, ರಂಗರಾವ ಕುಲಕರ್ಣಿ ಮೊದಲಾದವರು ತಮ್ಮ ಒಡೆತನದ ಅಷ್ಟಿಷ್ಟು ಜಮೀನನ್ನು ಶ್ರೀಗಳಿಗೆ ದಾನವಾಗಿ ಸಮರ್ಪಿಸಿದುದು ಭಕ್ತರು ಸ್ವಾಮಿಗಳವರಲ್ಲಿ - ಇಟ್ಟ ಭಕ್ತಿಯ ಕೆಚ್ಚನ್ನು ಎತ್ತಿ ಹೇಳುತ್ತದೆ. ಶ್ರೀಗಳು ಜಾತಿ–ಮತ–ಪಂಥಗಳ ಸೀಮೆ ಮೀರಿದವರು ಎಂಬುದು ಎದ್ದು ಕಾಣುತ್ತದೆ. ಮಠದ ಕೆಲಸ ಕಾರ್ಯಗಳಲ್ಲಿ ನಿಷ್ಠೆಯಿಂದ ಭಾಗವಹಿಸುತ್ತಲಿದ್ದ ಭಕ್ತರಲ್ಲಿ ಗೋವಿಂದಗೌಡರು, ಬಲೋಗಿ ಗದಿಗೆಪ್ಪ, ಶಿವಪ್ಪಗೌಡ್ರು ಮೊದಲಾದವರು ಪ್ರಮುಖರು. ಶ್ರೀ ಶಾಂತಲಿಂಗ ಶಿವಾಚಾರ್ಯರು ತಮ್ಮ ತಪೋ ಮಹಿಮೆಯಿಂದ ಜನತೆಯ ಕಲ್ಯಾಣ ಕಾರ್ಯ ಕೈಕೊಳ್ಳುತ್ತಿರುವಾಗ ಅತ್ತ ಕೇದಾರಪೀಠದ ಹಿಮವತ್ ಜಗದ್ಗುರು ಶ್ರೀ ನೀಲಕಂಠಲಿಂಗ ಶಿವಾಚಾರ್ಯ ಗುರುಗಳಿಂದ ಕೇದಾರಕ್ಕೆ ಬರಬೇಕೆಂದು ಕರೆ ಬಂದುದರಿಂದ ಶಾಂತಲಿಂಗರು ಎರಡು ಮಾತಿಲ್ಲದೆ ಕೇದಾರಕ್ಕೆ ತೆರಳಿದರು. ಗುರುಗಳಾದ ಶ್ರೀ ನೀಲಕಂಠಲಿಂಗ ಶಿವಾಚಾರ್ಯರು ಲಿಂಗೈಕ್ಯರಾದ ತರುವಾಯ ಶ್ರೀ ಶಾಂತಲಿಂಗ ಶಿವಾಚಾರ್ಯರಿಗೇ ನ್ಯಾಯವಾಗಿ ರಾವಲ್ ಪದವಿ ದೊರೆತು, ಇವರೇ ಉತ್ತರಾಧಿಕಾರಿಗಳಾಗಬೇಕಿತ್ತು. ವಿಧಿಯ ಕೈವಾಡ, ಅದು ಮತ್ತೆ ಮತ್ತೆ

ಇಬ್ಬರ ಪಾಲಾಗಿ ಅವರಿಂದ ಕೇದಾರಪೀಠದ ಘನತೆಗೆ ಕುಂದುಬರುವುದರಿಂದಾಗಿ ಅಲ್ಲಿಯ ಕಮೀಟಿಯವರು ಕೊನೆಗೆ ಶ್ರೀ ಶಾಂತಲಿಂಗ ಶಿವಾಚಾರ್ಯರನ್ನೇ ಕೇದಾರ ಪೀಠದ ರಾವಲ್‌ರನ್ನಾಗಿ ಆಯ್ಕೆ ಮಾಡಬೇಕಾಯಿತು. ಅದೇ ಯೋಗಾಯೋಗ.

ಎಲ್ಲ ಪಂಚ ಪೀಠಾಧೀಶ್ವರರ ಅಪ್ಪಣೆಯಂತೆ ದಿ. ೧೦-೬-೧೯೬೬ ರಂದು ಶ್ರೀ ಶಾಂತಲಿಂಗ ಶಿವಾಚಾರ್ಯರಿಗೆ ಕೇದಾರಪೀಠದ ರಾವಲ್ ಪದವಿಯನ್ನು ನೀಡಿ, ಪಟ್ಟಾಧಿಕಾರ ಮಹೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದರು. ದಕ್ಷಿಣ ದೇಶದ ಅಸಂಖ್ಯಾತ ಭಕ್ತರು ಈ ಉತ್ಸವದಲ್ಲಿ ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದರು. ನೆರೆದ ಜನಸ್ತೋಮವನ್ನು ಹರಸುತ್ತ ನೂತನ ಕೇದಾರ ಪೀಠದ ರಾವಲ್‌ರಾದ ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು ಶ್ರೀ ಶಾಂತಲಿಂಗ ಶಿವಾಚಾರ್ಯರು ತಮ್ಮ ಪಟ್ಟಾಧಿಕಾರಕ್ಕಾಗಿ ಹಗಲಿರುಳೂ ಶ್ರಮಿಸಿದ ಎಲ್ಲ ಪೀಠಾಚಾರ್ಯರಿಗೂ, ಹೂಲಿಯ ಅಜ್ಜನವರಿಗೂ ಕೃತಜ್ಞತೆಗಳನ್ನು ಸಲ್ಲಿಸಿ, ಮಾನವಲೋಕಕ್ಕೆ ಸನ್ಮಂಗಲವಾಗಲೆಂದು ಹೃತ್ಪೂರ್ವಕವಾಗಿ ಹರಸಿದರು.

ಗುರುಗಳ ಸೇವೆ ಮಾಡಿದ್ದುದರ ಪ್ರತಿಫಲವಿದು ಎಂದು ಮನದಲ್ಲಿ ಹಿಗ್ಗಿ ಜಗದ್ಗುರು ಲಿಂ. ನೀಲಕಂಠ ಶಿವಾಚಾರ್ಯ ಗುರುಗಳನ್ನು ಸ್ಮರಿಸಿ ಮಠದ ಶ್ರೇಯೋಭಿವೃದ್ಧಿಗಾಗಿ ಅವ್ಯಕ್ತವಾಗಿ ಅವರ ಆಶೀರ್ವಾದ ಪಡೆದುಕೊಂಡರು. ಕೇದಾರಪೀಠದ ರಾವಲ್ ಪದವಿಗೆ ಯಾವುದೇ ರೀತಿಯ ಕುಂದುಬಾರದ ರೀತಿಯಲ್ಲಿ ನಿಸ್ಪೃಹ ಸೇವೆ ಸಲ್ಲಿಸುವೆನೆಂದು ಪಣತೊಟ್ಟು ರಾವಲ್ ಪದವಿಯನ್ನು ಸ್ವೀಕರಿಸಿದರು.

ಕೇದಾರ ಮಠ : ಕೇದಾರಪೀಠದ ಜಗದ್ಗುರುಗಳಿಗೆ 'ರಾವಲ್' ಎಂಬ ಬಿರುದು ಇದೆ. ಈ ಪೀಠಕ್ಕೆ ೧೪೨ ಗ್ರಾಮಗಳ ಜಹಗೀರ ಇದೆ. ಉದಯಪುರ, ಗ್ವಾಲಿಯರ್, ಟೆಹರಿ, ಪಾಟಿಯಾಲ, ನೇಪಾಲ ಮಹಾರಾಜರು ಇಂದಿಗೂ ಪ್ರತಿ ವರುಷ ಈ ಮಠಕ್ಕೆ ಕಾಣಿಕೆ ಅರ್ಪಿಸುವ ವಾಡಿಕೆಯಿದೆ.

ಭಾರತದ ಉತ್ತರಕ್ಕೆ ಹಿಮಾಲಯವಿದೆ. ಗಿರಿಗಳಲ್ಲಿಯೇ ಈ ಹಿಮಾಲಯವು ಅತಿ ಶ್ರೇಷ್ಠವಾಗಿದೆ. ಈ ಹಿಮಾಲಯ ಶ್ರೇಣಿಯಲ್ಲಿ- ನೇಪಾಲ, ಕೂರ್ಮಾಚಲ, ಕೇದಾರ, ಜಲಂಧರ ಮತ್ತು ಕಾಶ್ಮೀರ ಈ ಪ್ರದೇಶ ಗಳಿರುತ್ತವೆ. ಈ ಪ್ರದೇಶವು

ಸುಕ್ಷೇತ್ರಗಳ ಪುಣ್ಯ ಬೀಡೂ ಆಗಿರುತ್ತದೆ. ಪ್ರಾಚೀನ ಕಾಲದಿಂದಲೂ ಈ ಶ್ರೇಣಿಯಲ್ಲಿ ಹಲವಾರು ಋಷಿ ಮುನಿಗಳು, ಸಾಧು, ಸಂತರು ತಪಶ್ಚರ್ಯ ಮಾಡಿ ಸಾಧಕರೆನಿಸಿದ್ದಾರೆ, ಸಿದ್ಧಿಪುರುಷರೆನಿಸಿದ್ದಾರೆ.

ಹಿಮಾಲಯದ ಪೂರ್ವದಿಕ್ಕಿನಲ್ಲಿ ಬೌದ್ಧಗಿರಿಯಿಂದ ತಮಸಾ ನದಿಯ ವರೆಗಿನ ಪ್ರದೇಶವನ್ನು ಕೇದಾರ ಖಂಡವೆಂದು ಕರೆಯುವರು. ಈ ಪ್ರದೇಶ ದಲ್ಲಿ ಬರ್ಫ ಬೀಳುವುದರಿಂದ ಕಾರ್ತಿಕಮಾಸದ ಚಳಿಗಾಲದಲ್ಲಿ ಮುಚ್ಚಿದ ಕೇದಾರ ಲಿಂಗದ ಬಾಗಿಲನ್ನು ಚೈತ್ರ ಮಾಸದಲ್ಲಿ ತೆರೆಯುವರು. ಆಮೇಲೆ ಮಾತ್ರ ಯಾತ್ರಿಕರಿಗೆ ಸಂದರ್ಶನದ ಅವಕಾಶ. ದೇವಸ್ಥಾನದ ಸೇವಕರೂ ಮತ್ತು ಪೀಠಾಧಿಪತಿಗಳೂ ಈ ಆರು ತಿಂಗಳ ಕಾಲ ಓಖಿಮಠ (ಉಷಾಮಠ, ಉಖಿಮಠ) ದಲ್ಲಿ ವಾಸಮಾಡಿಕೊಂಡಿರಬೇಕಾಗುತ್ತದೆ –

ಕೇದಾರನಾಥ ದೇವಾಲಯದ ಸಮೀಪ ಬದರೀನಾಥ ದೇವಾಲಯವೂ ಇರುತ್ತದೆ. ಇವೆರಡರ ಮಧ್ಯದಲ್ಲಿ ಹಲವಾರು ಶಿಖರಗಳು ತಲೆಯೆತ್ತಿರುತ್ತವೆ. ಅವು ಹಿಮಾಚ್ಛಾದಿತವಾಗಿರುತ್ತವೆ. ನೂರಾರು ಕೊಳ್ಳಗಳೂ, ಗಿರಿಕಂದರಗಳೂ ಹಬ್ಬಿದುದರಿಂದ ಅಲ್ಲಿ ಜನ ಸಂಚರಿಸುವುದು ಅತಿ ದುರ್ಗಮವಾದುದು.

ಕೇದಾರ ಕ್ಷೇತ್ರ : ಕೇದಾರ ಕ್ಷೇತ್ರವು ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಒಂದಾಗಿದೆ. ಕೇದಾರನಾಥನ ಪೂಜೆಯು ಸಾಂಪ್ರದಾಯಿಕವಾಗಿ ದಕ್ಷಿಣ ದೇಶದಲ್ಲಿರುವ ವೀರಶೈವ ಜಂಗಮರಿಂದಲೇ ನಡೆಯುತ್ತ ಬಂದದ್ದಾಗಿದೆ. ಕೇದಾರನಾಥ ಮಂದಿರವು ಹಿಮಾಚ್ಛಾದಿತವಾದ ಕಾರಣ ಆರು ತಿಂಗಳ ಅದರ ಬಾಗಿಲು ಮುಚ್ಚಿರುತ್ತದೆ. ಒಳಗೆ ಹಚ್ಚಿದ ದೀಪ ಆರು ತಿಂಗಳವರೆಗೂ ಹಾಗೆಯೇ ಇರುತ್ತದೆಂಬ ತಿಳುವಳಿಕೆ ಇದೆ.

ಶ್ರೀ ಶಿವಾಗಮೋಕ್ತಿಯಂತೆ ಪರಶಿವನ ಅಘೋರ ಮುಖೋದ್ಭವರಾಗಿ ದ್ರಾಕ್ಷಾರಾಮ ಕ್ಷೇತ್ರ ರಾಮನಾಥಲಿಂಗದಿಂದಾವಿರ್ಭವಿಸಿದವರು ಜಗದ್ಗುರು ಶ್ರೀಏಕೋರಾಮ ಶಿವಾಚಾರ್ಯರು ಎಂದಿದೆ. ಶಿವಾದ್ವೈತ ಸಿದ್ಧಾಂತ ಪ್ರತಿಪಾದಿತ ವಾದ ವೀರಶೈವ ಧರ್ಮ ತತ್ವವನ್ನು ದೇಶದಾದ್ಯಂತ ಪ್ರಚಾರ ಮಾಡಲು ಅವರು, ಹಿಮವತ್ ಕೇದಾರದಲ್ಲಿ ವೈರಾಗ್ಯ ಸಿಂಹಾಸನವನ್ನು ಸ್ಥಾಪನೆ ಮಾಡಿರುವರು ಎಂದು– ಕಾವ್ಯ, ಪುರಾಣ, ಇತಿಹಾಸಗಳಿಂದ ತಿಳಿಯುತ್ತದೆ. ಪಾಂಡವರ

ಅಭಿಮನ್ಯುವಿನ ಮೊಮ್ಮಗನಾದ ಜನಮೇಜಯ ಭೂಪಾಲನು ತನ್ನ ಕಾಲದಲ್ಲಿ ಆಗಿನ ವೈರಾಗ್ಯ ಪೀಠಾಧೀಶ್ವರರಾಗಿದ್ದ ಜಗದ್ಗುರು ಆನಂದಲಿಂಗ ಜಂಗಮರೆಂಬ ಶಿವಾಚಾರ್ಯರ ಸನ್ನಿಧಿಯಲ್ಲಿ ಶ್ರೀ ಕೇದಾರ ಕ್ಷೇತ್ರವನ್ನು ದಾನವಾಗಿ ಸಲ್ಲಿಸಿ, ಒಂದು ದಾನ ಶಾಸನವನ್ನೂ ಬರೆದು ಕೊಟ್ಟಿದ್ದಾನೆ. ಮತ್ತು ಬಾಣಾಸುರನ ಮಗಳು ಉಷಾದೇವಿ (ಅನಿರುದ್ಧನ ಪತ್ನಿ) ಈ ಮಠವನ್ನು ಭಕ್ತಿಯಿಂದ ಕಟ್ಟಿಸಿಕೊಟ್ಟದ್ದರಿಂದ ಇದನ್ನು ಉಷಾಮಠ, ಓಖಿಮಠ, ಉಖಾಮಠ ಎಂದೂ ಕರೆಯುವರು.

ಕೇದಾರಪೀಠ ಈಗ ತಿಳಿದ ಮಟ್ಟಿಗೆ ಸದ್ಗುರು ಶ್ರೀ ಏಕೋರಾಮ ಶಿವಾಚಾರ್ಯರಿಂದ ಸ್ಥಾಪನೆಗೊಂಡು ಅವರ ಶಿಷ್ಯ ಆನಂದಲಿಂಗರಿಂದ ಅವರೂ ಶಿಷ್ಯ ಜ್ಞಾನಲಿಂಗ ಹೀಗೆ ಸುಮಾರು ಮುನ್ನೂರಕ್ಕೂ ಮೇಲ್ಪಟ್ಟು ಪೀಠಾಧಿ ಕಾರಿಗಳು ಆಗಿ ಹೋದದ್ದು ತಿಳಿದು ಬರುತ್ತದೆ. ಈ ಜಗದ್ಗುರುಗಳಲ್ಲಿ ಮೂರುನೂರಾ ಇಪ್ಪತ್ತನೆಯವರಾದ ನೀಲಕಂಠ ಶಿವಾಚಾರ್ಯರು ಕಾಶಿ ಪೀಠಕ್ಕೆ ಬಂದಾಗ ಅವರ ಸೇವೆ ಮಾಡಿದವರು ಬೆಳಗಾವಿ ಜಿಲ್ಲೆಯ ಮುತನಾಳ ಗ್ರಾಮದ ಬೃಹನ್ಮಠದ ಶ್ರೀ ಶಾಂತಲಿಂಗ ಶಿವಾಚಾರ್ಯರು. ರಂಭಾಪುರಿ ಜಗದ್ಗುರುಗಳು ಪೂಜ್ಯರಿಗೆ ಕ್ರಿ. ಶ. ೧೯೬೭ರಲ್ಲಿ ಅಧಿಕಾರ ಅನುಗ್ರಹಿಸಿದ್ದರು.

ಕೇದಾರದ ಆಧಾರಿ : ಕಳೆದ ಮೂವತ್ತು ವರ್ಷಗಳಿಂದ ಹೀನಸ್ಥಿತಿಯಲ್ಲಿದ್ದ ಕೇದಾರಪೀಠದ ಅಂತಸ್ಥನ್ನು ಹೆಚ್ಚಿಸುವಲ್ಲಿ ವಿಶೇಷ ಆಸಕ್ತಿತಾಳಿ, ಶ್ರೀ ಶಾಂತಲಿಂಗ ಶಿವಾಚಾರ್ಯರು ಬಹಳ ಬುದ್ಧಿವಂತಿಕೆಯಿಂದ ಕೇದಾರಮಠದ ಜೀರ್ಣೋದ್ಧಾರ ಕಾರ್ಯವನ್ನು ಕೈಕೊಂಡರು. ಹಿಂದಿನಿಂದ ನಡೆದುಕೊಂಡು ಬಂದಿದ್ದ ವಿದ್ಯಾಲಯಗಳನ್ನು, ಮಜಲು–ಉತ್ಸವಗಳನ್ನು ಎಂದಿನಂತೆ ನಡೆಸಿಕೊಂಡು ಬಂದರು. ಭಾರತದಾದ್ಯಂತ–ಭಕ್ತರ ಆಗ್ರಹದ ಮೇರೆಗೆ ಸಂಚರಿಸಿ, ದರ್ಶನಾಶೀರ್ವಾದ ನೀಡುತ್ತ ಪೀಠದ ಮಹತಿಯನ್ನು ಹೆಚ್ಚಿಸಿದ ಶ್ರೇಯಸ್ಸು ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಶಾಂತಲಿಂಗ ಶಿವಾಚಾರ್ಯರಿಗೆ ಸಲ್ಲುವಂತಹದಾಗಿದೆ.

ರಾಮೇಶ್ವರದಲ್ಲಿ ಬೆಳಗಾವಿ ಜಿಲ್ಲೆಯ ಬಸ್ಸಾಪುರದ ವೇದಮೂರ್ತಿ ಶ್ರೀ ಗುರುಸಿದ್ಧಯ್ಯ ಹಿರೇಮಠ ಅವರು ಕಟ್ಟಿಸಿದ ಜಂಗಮವಾಡಿ ಮಠದಲ್ಲಿ ಉಳಿದ ಪಂಚಾಚಾರ್ಯ ಪೀಠಾಧಿಪತಿಗಳೊಂದಿಗೆ ತೆರಳಿ, ಶಿವಲಿಂಗ ಪ್ರತಿಷ್ಠಾಪನೆ ಮಾಡಿದರು. ಹಿಮವತ್ ಪರ್ವತದಲ್ಲಿ ಚಳಿ ಹೆಚ್ಚು ಇರುವುದರಿಂದ ದೀಪಾವಳಿ

ಯಿಂದ ಅಕ್ಷಯ ತೃತೀಯಾದವರೆಗೆ ಕೇದಾರ ಶ್ರೀಗಳವರಿಗೆ ಬಿಡುವು ಇರುತ್ತದೆ. ಆಗ ಓಖೀಮಠದಲ್ಲಿ ಬಂದು ನೆಲೆಸಿರುತ್ತಾರೆ. ಇದೇ ಸಮಯದಲ್ಲಿ ದಕ್ಷಿಣ ದೇಶಕ್ಕೂ ಆಗಮಿಸಿ, ವೀರಶೈವ ಧರ್ಮಪ್ರಚಾರ ಕಾರ್ಯದಲ್ಲಿ ತೊಡಗುವುದುಂಟು. ಮುತನಾಳಕ್ಕೂ ಬರುವ ವಾಡಿಕೆಯಿಟ್ಟುಕೊಂಡಿದ್ದರು. ಹೀಗೆ ೧೯೬೬ ರಿಂದ ೧೯೮೦ರ ವರೆಗೂ ಧರ್ಮದ ತಿಳುವಳಿಕೆ ನೀಡುವ ಪುಣ್ಯ ಕಾರ್ಯದಲ್ಲಿ ಶ್ರೀಗಳು ತೊಡಗಿದ್ದರು.

ಮುತನಾಳ ಮಠದ ಉತ್ತರಾಧಿಕಾರವನ್ನು ದಿ. ೧೦–೬–೧೯೬೬ ರಂದೇ ಶ್ರೀ ದೇವಲಿಂಗ ಸ್ವಾಮಿಗಳವರಿಗೆ ವಹಿಸಿಕೊಟ್ಟು ತಮ್ಮ ಪೂರ್ವದ ಮಠದ ಅಭಿವೃದ್ಧಿ ಕಾರ್ಯದಲ್ಲಿಯೂ ವಿಶೇಷ ಆಸಕ್ತಿ ತಾಳಿದವರಾಗಿದ್ದರು.

ಕೇದಾರ ಪೀಠದ ಜಗದ್ಗುರುಗಳಾದ ಶ್ರೀ ಶಾಂತಲಿಂಗ ಶಿವಾಚಾರ್ಯರು ಅನಾರೋಗ್ಯದಿಂದ ಬಳಲತೊಡಗಿದರು. ಕರ್ನಾಟಕ ಸೇರಬೇಕು, ಅದೂ ತಮ್ಮ ಪೂರ್ವದ ಮಠಕ್ಕೆ ಹೋಗಬೇಕು ಎಂದು ಬಯಸಿ ದರು. ಹಾಗೂ ಹೀಗೂ ಮುತನಾಳ ಮಠಕ್ಕೆ ದಯಮಾಡಿಸಿದರು. ಜಗದ್ಗುರುಗಳ ದರ್ಶನಕ್ಕಾಗಿ ಅಸಂಖ್ಯಾತ ಭಕ್ತ ಜನರು ಬರತೊಡಗಿದರು. ದಿ. ೫–೨–೧೯೮೦ ರಂದು ಶ್ರೀ ಶಾಂತಲಿಂಗ ಶಿವಾಚಾರ್ಯರು ಮುತನಾಳ ಬೃಹನ್ಮಠದಲ್ಲಿ ಲಿಂಗೈಕ್ಯರಾದರು. ಈ ಜಗದ್ಗುರುಗಳ ಅಂತ್ಯಯಾತ್ರೆಯಲ್ಲಿ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ೧೦೦೮ ಜಗದ್ಗುರು ಪ್ರಸನ್ನ ರೇಣುಕ ವೀರಗಂಗಾಧರ ಶಿವಾಚಾರ್ಯ ಮಹಾಸ್ವಾಮಿಗಳು ಮತ್ತು ಶ್ರೀ ಪ್ರಸನ್ನ ರೇಣುಕ ವೀರರುದ್ರಮುನಿದೇವ ರಾಜದೇಶಿಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಹಾಗೂ ಶ್ರೀಮದ್ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ಶ್ರೀ ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಮುಂತಾದ ನಾಡಿನ ಹರಗುರು ಚರಮೂರ್ತಿಗಳೆಲ್ಲರೂ ಶರಣ ಶರಣೆಯರೂ ಭಕ್ತರೂ ಭಾಗವಹಿಸಿ ಶ್ರೀಗಳವರ ಅಂತಿಮ ದರ್ಶನ ಪಡೆದರು. ಶಾಂತಲಿಂಗ ಶಿವಾಚಾರ್ಯರಿಂದ ಮುತನಾಳ ಮಠವು ದಕ್ಷಿಣ ಕೇದಾರವೆನಿಸಿತು. ಪುಣ್ಯಸ್ಥಳವಾಗಿ ಕಂಗೊಳಿಸಿತು. ಅಲ್ಲಿಯೇ ಅವರ ಸಮಾಧಿ ಇದ್ದು, ಪ್ರತಿನಿತ್ಯ ಅಭಿಷೇಕ, ಪೂಜೆ ನಡೆಯುತ್ತದೆ. ಮುತನಾಳ ಮಠಕ್ಕೆ ಭಕ್ತರು ಪೂಜ್ಯ ಶ್ರೀ ಶಿವಾನಂದ ಸ್ವಾಮಿಗಳನ್ನು ಉತ್ತರಾಧಿಕಾರಿಗಳನ್ನಾಗಿ ಆಯ್ಕೆ ಮಾಡಿಕೊಂಡಿರುವರು.

ನಾಲವಾರದ
ಲಿಂ. ಕೋರಿಸಿದ್ಧೇಶ್ವರ ಮಹಾಸ್ವಾಮಿಗಳು

ವೀರಶೈವ ಮಠಗಳು ಇತ್ತೀಚೆಗೆ ತಮ್ಮ ಸ್ಥಾನಮಾನಕ್ಕೆ ತಕ್ಕಂತೆ ಶೈಕ್ಷಣಿಕ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ವಿಶಿಷ್ಟ ರೀತಿಯಲ್ಲಿ ಸೇವೆ ಸಲ್ಲಿಸುತ್ತಲಿವೆ. ಅನ್ನದಾಸೋಹದೊಂದಿಗೆ ಜ್ಞಾನದಾಸೋಹವನ್ನೂ ನಡೆಸುತ್ತಲಿವೆ. ಇಂಥ ನೂರಾರು ಗುರು ವಿರಕ್ತಮಠಗಳಲ್ಲಿ ಗುಲಬರ್ಗಾ ಜಿಲ್ಲೆಯ ಚಿತಾಪುರ ತಾಲೂಕಿನಲ್ಲಿರುವ ನಾಲವಾರದ ಶ್ರೀ ಕೋರಿಸಿದ್ಧೇಶ್ವರ ಸಂಸ್ಥಾನ ಮಠವೂ ಒಂದಾಗಿರುವುದು.

ರಾಷ್ಟ್ರದ ಪಂಚಪೀಠಗಳಲ್ಲೊಂದಾದ ವೀರಶೈವರ ಬಾಳೆಹೊನ್ನೂರು ರಂಭಾಪುರೀ ವೀರಸಿಂಹಾಸನ ಪೀಠ ಪರಂಪರೆಗೆ ಸೇರಿದ ಮಠವಿದಾಗಿರುವುದು. ಹಿಂದೊಮ್ಮೆ ಹಾಳು ಬಿದ್ದ ಮಠವಿದು. ಇಲ್ಲಿ ಪಿಶಾಚಿಗಳಿವೆಯೆಂದು ಜನ ಹೆದರಿಕೊಂಡು ಒಳಗೆ ಹೋಗುತ್ತಿದ್ದಿರಲಿಲ್ಲ. ಕ್ರಿ.ಶ. ೧೭೭೫ರಲ್ಲಿ ಈ ಮಠಕ್ಕೆ ಪೀಠಾಧಿಕಾರಿಗಳಾಗಿ ಶ್ರೀ ಕೋರಿ ಸಿದ್ಧೇಶ್ವರರು ಬಂದರು. ತರುವಾಯ ಜನರಲ್ಲಿದ್ದ ಭಯ– ಭೀತಿ ನಿವಾರಣೆಯಾಗಿ ಇದೊಂದು ಪವಿತ್ರ ಕ್ಷೇತ್ರ ಸ್ಥಳವಾಗಿ ಮಾರ್ಪಾಟಾಗಿರುವುದನ್ನು ಕಾಣಬಹುದಾಗಿದೆ.

ಶ್ರೀ ಕೋರಿಸಿದ್ಧೇಶ್ವರರು ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ ಕಾಖಂಡಕಿಯ ಶ್ರೀ ಗುರು ಮಲ್ಲಾರಾಧ್ಯರ ಪರಮಶಿಷ್ಯರು. ಕಾಖಂಡಕಿ ತೀರ ಚಿಕ್ಕಹಳ್ಳಿ. ಈ ಗ್ರಾಮದ ಬದಿಗೆ ಶ್ರೀ ಗುರು ಮಲ್ಲಾರಾಧ್ಯರು ಸಂಸ್ಕೃತ ಪಾಠಶಾಲೆಯೊಂದನ್ನು ನಡೆಸುತ್ತಿದ್ದರು. ಈ ಪಾಠಶಾಲೆಯಲ್ಲಿ ನೂರಾರು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಲಿದ್ದರು. ಸುತ್ತಮುತ್ತಣ ಹಳ್ಳಿ ಪಟ್ಟಣ ಗಳಿಂದ ದೇಣಿಗೆ ಸಂಗ್ರಹಿಸಿ ಈ ಪಾಠಶಾಲೆಯನ್ನು ಮಲ್ಲಾರಾಧ್ಯರು ನಡೆಸು ತ್ತಿದ್ದರು. ವಿಶಾಲವಾದ ಬಯಲಿನಲ್ಲಿ ನಡೆಸುವ ಈ ಬಯಲು ಶಾಲೆಯಲ್ಲಿ ನಿತ್ಯವೂ ಅನ್ನದಾಸೋಹದೊಂದಿಗೆ ಜ್ಞಾನದಾಸೋಹ ನಡೆಯುತ್ತಲಿತ್ತು. ಸಂಸ್ಕೃತ ಪಠ್ಯ

ವಿಷಯಗಳ ಜೊತೆಗೆ ಇಲ್ಲಿಯ ಶಿಕ್ಷಕರು ವೀರಶೈವ ಧರ್ಮ ಸಿದ್ಧಾಂತಗಳ ವಿಷಯಗಳನ್ನು, ಶರಣರ ಕಾಯಕ ದಾಸೋಹ ತತ್ವಗಳ ಪರಿಕಲ್ಪನೆಯನ್ನು ತಿಳಿಸಿಕೊಡುತ್ತಿದ್ದರಲ್ಲದೆ ವಚನಗಳಲ್ಲಿ ಹಾಗೂ ವೇದೋಪನಿಷತ್ತುಗಳಲ್ಲಿ ಅಡಗಿರುವ ರಹಸ್ಯವನ್ನು ಮನದಟ್ಟಾಗುವಂತೆ ಕಲಿಸುತ್ತಿದ್ದರು. ಶ್ರೀ ಗುರು ಮಲ್ಲಾರಾಧ್ಯರು ಈ ಗುರುಕುಲದ ವಿದ್ಯಾಪೀಠದ ಕುಲಪತಿಗಳಂತೆ ದಕ್ಷ, ಅರ್ಥಪೂರ್ಣ ಮೇಲ್ವಿಚಾರಣೆ ನಡೆಸುತ್ತಲಿದ್ದರು. ಕಾಖಂಡಕಿ ತೀರ ಬಡತನದ ಊರಾಗಿದ್ದರೂ ಅಂದು ಶೈಕ್ಷಣಿಕವಾಗಿ ಮುಂದುವರಿದಿತ್ತು.

ಇಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳಲ್ಲಿ ಶ್ರೀ ಕೋರಿ ಸಿದ್ಧೇಶ್ವರರೂ, ಶ್ರೀ ಸೊಪ್ಪೆ ಬಸವೇಶ್ವರರೂ, ಶ್ರೀ ಶಂಕರಪ್ಪಯ್ಯನವರೂ ಹಿರಿಯ ಶಿಷ್ಯರಾಗಿದ್ದರಲ್ಲದೆ ಮಲ್ಲಾರಾಧ್ಯರ ಪ್ರೀತಿಯ ಶಿಷ್ಯರೂ ಆಗಿದ್ದರು. ಈ ಕಾಖಂಡಕಿಗೆ ನಾಲವಾರದಿಂದ ಸಧ್ಯದ ಪೀಠಾಧಿಕಾರಿಗಳಾಗಿರುವ ಶ್ರೀ ಷ. ಬ್ರ. ತೋಟೇಂದ್ರ ಶಿವಾಚಾರ್ಯರು ತಮ್ಮ ಸಾವಿರಾರು ಭಕ್ತರೊಂದಿಗೆ ಪಾದ ಯಾತ್ರೆಯಲ್ಲಿ ತೆರಳುತ್ತಾರೆ. ಕಾಖಂಡಕಿಯಲ್ಲಿ ಶ್ರೀ ಮಲ್ಲಾರಾಧ್ಯರ ರಥೋತ್ಸವದ ಮುನ್ನಾದಿನ ಶಿವಾನುಭವ ಕಾರ್ಯಕ್ರಮವನ್ನು ನಡೆಸುತ್ತ ಬಂದಿರುವರು. ಈ ಸಲದ ದಿ. ೧೯–೫–೨೦೦೪ರ ಶಿವಾನುಭವ ಕಾರ್ಯಕ್ರಮದ ಸಾನಿಧ್ಯವನ್ನು ಕಾಶಿಪೀಠದ ಡಾ॥ ಚಂದ್ರಶೇಖರ ಶಿವಾಚಾರ್ಯರು ವಹಿಸಿದ್ದರು. ಶಿವಾನುಭವದ ಉಪನ್ಯಾಸ ನೀಡಲು ನನ್ನನ್ನು ಆಮಂತ್ರಿಸಿದ್ದರು. ಮಳೆಯಾದರೂ, ರಾತ್ರಿಯಾದರೂ ಅಲ್ಲಿಗೆ ಆಗಮಿಸಿದ್ದ ಸಾವಿರಾರು ಭಕ್ತರು ಶಿವಾನುಭವ ಕಾರ್ಯಕ್ರಮವನ್ನು ಶ್ರದ್ಧೆಯಿಂದ ಕೇಳಿದರು. ಶ್ರೀಗಳವರ ಆಶೀರ್ವಚನ ಆಗುವವರೆಗೂ ಜನ ಕೂತೇ ಇದ್ದರು.

ಶ್ರೀ ಗುರು ಮಲ್ಲಾರಾಧ್ಯರ ಈ ಪವಿತ್ರ ಸ್ಥಾನದಲ್ಲಿ ಕಟ್ಟಡ ಕಟ್ಟಿಸಿ, ಶ್ರೀಗಳವರು ಪ್ರಸಾದ ಹಾಗೂ ಶಾಲೆ ನಡೆಸುತ್ತಿರುವುದು ಸ್ತುತ್ಯ ಕಾರ್ಯವಾಗಿದೆ. ಇಲ್ಲಿಯ ಶಿವಾನುಭವ ಕಾರ್ಯಕ್ರಮದಲ್ಲಿ ನಾನು ಉಪನ್ಯಾಸ ನೀಡಲು ತೋಟೇಂದ್ರ ಶಿವಾಚಾರ್ಯರು ನನಗೆ ಕರುಣಿಸಿದ ಸೌಭಾಗ್ಯ ವೆಂದೇ ಭಾವಿಸಿರುವೆ.

ಶ್ರೀ ಗುರು ಮಲ್ಲಾರಾಧ್ಯರ ಪಾಠಶಾಲೆಯಲ್ಲಿ ಓದುತ್ತಿದ್ದ ಶ್ರೀ ಕೋರಿ ಸಿದ್ಧೇಶ್ವರ, ಶ್ರೀ ಶಂಕ್ರಪ್ಪಯ್ಯ ಮತ್ತು ಶ್ರೀ ಸೊಪ್ಪೆ ಬಸವೇಶ್ವರರು ಅಧ್ಯಯನದ

ಕೊನೆಯ ಹಂತದಲ್ಲಿದ್ದರು. ಅವರಿಗೆ ಪ್ರ್ಯಾಕ್ಟಿಕಲ್ ತಿಳುವಳಿಕೆ ಬರುವಂತಾಗಲು ಈ ಮೂವರನ್ನು ರಾಷ್ಟ್ರದ ಮೂರು ಬೇರೆ ಬೇರೆ ದಿಕ್ಕುಗಳಿಗೆ, ಲೋಕಾನುಭವ ಪಡೆದುಕೊಂಡು ಬರಲು, ಲೋಕಪರ್ಯಟಕ್ಕೆ ಕಳಿಸಿಕೊಟ್ಟರು.

ಗುರುಗಳ ಅಪ್ಪಣೆಯಂತೆ ಈ ಮೂವರೂ ಒಂದೊಂದು ದಿಕ್ಕಿಗೆ ಹೊರಟರು. ಶ್ರೀ ಕೋರಿಸಿದ್ಧೇಶ್ವರರು ಜೈ ಗುರು ಮಲ್ಲಾರಾಧ್ಯ ಎಂಬ ಸ್ಮರಣೆಯೊಂದಿಗೆ ಶ್ರೀಶೈಲದ ಕಡೆಗೆ ಹೊರಡುವ ಯೋಚನೆಯಿಂದ ಕಾಖಂಡಕಿ ಬಿಟ್ಟು ಸಮೀಪದ ಹೊನ್ನಳ್ಳಿಯ ಕಡೆಗೆ ಬಂದರು. ಹೊನ್ನಳ್ಳಿ ಹತ್ತಿರ ಹರಿಯುತ್ತಿದ್ದ ಭೀಮಾನದಿಗೆ ಮಹಾಪೂರ ಬಂದಿತ್ತು. ಈ ದಡದಿಂದ ನಾವೆ ಮೂಲಕ ಅಂಬಿಗನು ಆ ದಡಕ್ಕೆ ಕೂಡ್ರಿಸಿಕೊಂಡು ಹೋಗುತ್ತಲಿದ್ದನು. ಆದರೆ ಶ್ರೀ ಕೋರಿಸಿದ್ಧೇಶ್ವರರಲ್ಲಿ ಅಂಬಿಗನಿಗೆ ಕೊಡಬೇಕಾದ ಹಣವಿದ್ದಿರಲಿಲ್ಲ. ಹೆಗಲ ಮೇಲೆ ಹಾಕಿಕೊಂಡಿದ್ದ ಒಂದು 'ಕೋರಿ'ಯ (ಕರಿಯ ಕಂಬಳಿಯ ತುಂಡು) ಹೊರತು ಮತ್ತೇನೂ ಇದ್ದಿರಲಿಲ್ಲ. ಯೋಚಿಸುತ್ತ ಗುರು ಕರುಣಿಸಿದಂತೆ ಆಗಲಿ ಎಂದುಕೊಂಡು ಮನದಲ್ಲಿ ಗುರು ಮಲ್ಲಾರಾಧ್ಯರನ್ನು ಧ್ಯಾನಿಸುತ್ತ ಹರಿಯುವ ನದಿಯಲ್ಲಿ ತಾವು ಹೊತ್ತುಕೊಂಡಿದ್ದ ಕೋರಿಯನ್ನೇ ಹಾಸಿ, ದೋಣಿಯೆಂದು ಬಗೆದು, ಅದರಲ್ಲಿ ಕುಳಿತುಕೊಂಡು ಹರಿವ ನದಿಯನ್ನು ಸಲಿಸಾಗಿ ದಾಟಿ ಬಂದರು. ಈ ಕಡೆ ಆ ಕಡೆಗೆ ನೋಡುತ್ತ ನಿಂತಿದ್ದ ಅಸಂಖ್ಯಾತ ಭಕ್ತರು ಆಶ್ಚರ್ಯ– ಆಶ್ಚರ್ಯ ಎಂದು ಉದ್ಗಾರ ತೆಗೆದರು. ನದಿ ದಾಟಿದ ಮಹಾತ್ಮರನ್ನು ಕಂಡು ಎಲ್ಲರೂ ಧನ್ಯತಾಭಾವದಿಂದ ದರ್ಶನ ಪಡೆಯತೊಡಗಿದರು. ಇವರು ಸಾಮಾನ್ಯರಲ್ಲ; ಅಸಾಮಾನ್ಯ ಪುರುಷರೆಂದು ಗೌರವದಿಂದ ಕಂಡರು. ತಮ್ಮ ತಮ್ಮ ಊರು, ಮನೆಗೆ ಬರಬೇಕೆಂದು ಪ್ರತಿಯೊಬ್ಬರೂ ಅವರನ್ನು ಕೇಳುವವರೆ, ಎಲ್ಲಿಗೂ ಹೋಗಲು ಬಯಸದ ಶ್ರೀ ಕೋರಿಸಿದ್ಧೇಶ್ವರರು ಮುಂದಕ್ಕೆ ಹೋಗಲು ಬಯಸುತ್ತಾರೆ.

ಭೀಮಾನದಿಯಿಂದ ಮುಂದೆ ಸಮೀಪದ ನಾಲವಾರಕ್ಕೆ ಹೋಗುತ್ತಾರೆ. ಅಲ್ಲಿ ಊರ ಹೊರಗಿದ್ದ ಮಠವೊಂದನ್ನು ನೋಡಿ, ಮನದಲ್ಲಿಯೇ ಅಯ್ಯೋ ಎಂದು ನೊಂದುಕೊಳ್ಳುತ್ತಾರೆ. ಕುತೂಹಲದಿಂದ ಆ ಮಠದ ಒಳಗೆ ಕಾಲಿಟ್ಟು ಒಂದು ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಾರೆ. ಸ್ವಲ್ಪ ಹೊತ್ತಿನಲ್ಲಿ ಧ್ಯಾನಾಸಕ್ತರಾಗುತ್ತಾರೆ. ಅಷ್ಟರಲ್ಲಿ ಆ ಗ್ರಾಮದ ನೀಲಮ್ಮ ತಾಯಿ ಎಂಬವರು ಮಠದಲ್ಲಿದ್ದ

ಸಮಾಧಿಗೆ ನೈವೇದ್ಯ ಅರ್ಪಿಸಲು ಬರುತ್ತಾರೆ. ಕಟ್ಟೆಯ ಮೇಲೆ ಧ್ಯಾನಾಸಕ್ತರಾಗಿದ್ದ ಮಹಾತ್ಮರನ್ನು ಕಂಡು ನಮಸ್ಕರಿಸಿ, ಅವರು ಎಚ್ಚರಗೊಂಡಾಗ, ತಾವು ತಂದ ನೈವೇದ್ಯವನ್ನು ಈ ಜೀವಂತ ದೇವರಿಗೆ ಅರ್ಪಿಸುತ್ತಾರೆ. ನೈವೇದ್ಯ ಸ್ವೀಕರಿಸ ಬೇಕೆಂದೂ ಪ್ರಾರ್ಥಿಸಿಕೊಳ್ಳುತ್ತಾರೆ. ಆಗಲಿ ತಾಯಿ ಎಂದು ನೈವೇದ್ಯ ಸ್ವೀಕರಿಸಿದರು.

ನೀಲಮ್ಮ ತಾಯಿಯವರು ಗುರುಗಳೇ, ಈ ಮಠವು ಕಣ್ಣಿಗೆ ಕಾಣಿಸು ವಂತೆಯೇ ಹಾಳು ಬಿದ್ದಿದೆ. ಇಲ್ಲಿ ಪಿಶಾಚಿಗಳು ವಾಸ ಮಾಡಿಕೊಂಡಿರುತ್ತವೆ. ಇಲ್ಲೊಂದು ಬ್ರಹ್ಮರಾಕ್ಷಸವೂ ಇದೆಯೆಂದೂ ಕೇಳಿದ್ದೇವೆ. ಇದು ಜನರಿಗೆ ಬಹಳ ತೊಂದರೆಯನ್ನು ಕೊಡುತ್ತಲಿದೆ. ಆದ್ದರಿಂದ ತಾವು ಈ ಮಠದಲ್ಲಿ ಇರುವುದು ಬೇಡ, ಊರೊಳಗೆ ನಮ್ಮದೇ ಆದ ಇನ್ನೊಂದು ಮಠವಿದೆ. ಅಲ್ಲಿಗೆ ತಾವು ಬಂದು ವಸತಿ ಮಾಡುವುದಾಗಬೇಕು. ಎಂದು ಹೇಳುತ್ತಾರೆ. ಇವರ ಮಾತುಗಳನ್ನು ಕೇಳಿದ ಕೋರಿಸಿದ್ಧೇಶ್ವರರು ಗುರುಗಳನ್ನು ಸ್ಮರಿಸುತ್ತ ತಾಯಿ ನಾನಿಲ್ಲಿಯೇ ಇರುವೆ. ನನ್ನ ಬಗೆಗೆ ಚಿಂತಿಸದಿರಿ. ನನಗೆ ಗುರುಗಳ ಆಶೀರ್ವಾದವಿದೆ ಎಂದು ಹೇಳಿದರು.

ಮುಂದೆ ಶ್ರೀ ಕೋರಿಸಿದ್ಧೇಶ್ವರರು ಎಲ್ಲವೂ ಗುರುವಿನ ಮಹಿಮೆ ಎಂದು ಅದೇ ಮಠದಲ್ಲಿ ಉಗ್ರ ತಪಸ್ಸು ನಡೆಸತೊಡಗಿದರು. ಗುರು ಹೇಳಿಕೊಟ್ಟಂತೆ ಚಾಚೂ ತಪ್ಪದೆ ಅನುಸರಿಸಿದರು. ಕೆಲವೇ ಕ್ಷಣಗಳಲ್ಲಿ ಆ ದುಷ್ಟ, ಕ್ರೂರ, ಬ್ರಹ್ಮರಾಕ್ಷಸನನ್ನು ಶ್ರೀ ಕೋರಿಸಿದ್ಧೇಶ್ವರರು ತಮ್ಮ ಆಧೀನಕ್ಕೆ ತಂದುಕೊಂಡರು. ಅಲ್ಲಿಯೇ ಇದ್ದ ಒಂದು ಉದ್ದವಾಗಿರುವ ಕಲ್ಲು ತೋರಿಸಿ ಈ ಕಲ್ಲಿನಲ್ಲಿಯೇ ನೀನು ವಾಸಮಾಡಿಕೊಂಡಿರಬೇಕು. ಜನರಿಗೆ, ಭಕ್ತರಿಗೆ ಯಾವುದೇ ರೀತಿಯ ತೊಂದರೆ ಕೊಡಬಾರದು ಎಂದು ಶ್ರೀ ಕೋರಿಸಿದ್ಧೇಶ್ವರರು ಅಲ್ಲಾಡಿಸಿದರು. ಇಂದಿಗೂ ಆ ಬ್ರಹ್ಮರಾಕ್ಷಸ ಮಠದ ಒಂದು ಕಲ್ಲಿನಲ್ಲಿ ಇರುವುದೆಂದೇ ಜನರ ನಂಬುಗೆಯಾಗಿದೆ. ಬಂದ ಭಕ್ತರು ತಾವು ಹೊತ್ತ ಹರಕೆಗಳನ್ನು ತೀರಿಸಿಕೊಳ್ಳಲೂ ಇಲ್ಲಿ ಬರುತ್ತಿರುವರು. ಈ ಬ್ರಹ್ಮರಾಕ್ಷಸ ಇರುವ ಕಲ್ಲನ್ನು ಸುತ್ತು ಹಾಕಿದರೆ ಬಯಸಿದ ಇಷ್ಟಾರ್ಥಗಳು ಸಿದ್ಧಿಸುವವು ಎಂದೂ ನಂಬುಗೆಯಿದೆ. ಶ್ರೀ ಕೋರಿಸಿದ್ಧೇಶ್ವರ ಗುರುಗಳು ಹೇಳಿದಂತೆ ಕೇಳುತ್ತ ತನ್ನ ದುಷ್ಟ ಶಕ್ತಿಗಳನ್ನು ನಾಶಪಡಿಸಿಕೊಂಡು, ಭಕ್ತರ ಉದ್ಧಾರ ಕಾರ್ಯದಲ್ಲಿ ತೊಡಗಿ ಕೊಂಡಿದ್ದುದು ಈ ರಾಕ್ಷಸನ ನಡೆವಳಿಕೆಯಾಗಿರುವುದು.

ಶ್ರೀ ಕೋರಿಸಿದ್ಧೇಶ್ವರರಿಂದ ಜನರಲ್ಲಿದ್ದ ಭೀತಿ ಹೊರಟು ಹೋಯಿತು. ಶ್ರೀ ಕೋರಿಸಿದ್ಧೇಶ್ವರರ ದರ್ಶನಾಶೀರ್ವಾದಕ್ಕಾಗಿ ಈ ಊರವರಷ್ಟೇ ಅಲ್ಲ, ದೂರದೂರದ ಹಳ್ಳಿಗಳ, ರಾಜ್ಯಗಳ ಜನರೂ ಬರತೊಡಗಿದರು. ಭಕ್ತರೆಲ್ಲರ ಕೋರಿಕೆಯ ಮೇರೆಗೆ ಮುಂದೆ ಪಯಣ ಬೆಳೆಸಲಿದ್ದ ಶ್ರೀ ಕೋರಿಸಿದ್ಧೇಶ್ವರರು ಅಲ್ಲಿಯೇ ಉಳಿದುಕೊಂಡರು, ಭಕ್ತರೆಲ್ಲರೂ ಸೇರಿ– ಮಠವನ್ನು ಸ್ವಚ್ಛಗೊಳಿಸಿದರು. ಸುಂದರ ತಾಣವನ್ನಾಗಿ ಮಾಡಿದರು. ಸ್ವಾಮಿಗಳಿಗೆ ವಾಸ ಮಾಡಿಕೊಂಡಿರಲು ಅಲ್ಲಿಯೆ ಒಂದು ಆಶ್ರಮವನ್ನು ನಿರ್ಮಿಸಿದರು. ಕೆಲವು ವರ್ಷಗಳಾದ ತರುವಾಯ ಅಂದರೆ ಕ್ರಿ.ಶ. ೧೭೪೫ರಲ್ಲಿ ಈ ಮಠದ ಪೀಠಾಧಿಪತಿಗಳನ್ನಾಗಿ ಶ್ರೀ ಕೋರಿಸಿದ್ಧೇಶ್ವರರನ್ನು ಆಯ್ಕೆ ಮಾಡಿ ಪಟ್ಟಗಟ್ಟಿದರು. ಶ್ರೀಶೈಲಕ್ಕೆ ಹೊರಟಿದ್ದ ಶ್ರೀ ಕೋರಿಸಿದ್ಧೇಶ್ವರರು ತಮ್ಮ ಮಹಿಮೆಯಿಂದ ಈ ನಾಲವಾರ ಮಠವನ್ನೇ ಶ್ರೀಶೈಲ ಕ್ಷೇತ್ರವನ್ನಾಗಿ ಮಾರ್ಪಡಿಸಿದರು. ಅದು ಇಂದಿನ ಪೀಠಾಧ್ಯಕ್ಷರ ಪರಿಶ್ರಮದಿಂದ ಇನ್ನೂ ದೊಡ್ಡಕ್ಷೇತ್ರವಾಗಿ ಮಾರ್ಪಟ್ಟಿರುವುದು ವೀರಶೈವರ ಪುಣ್ಯ ವಿಶೇಷವೆಂದೇ ಹೇಳಬೇಕು.

ಕ್ರಿ.ಶ. ೧೭೪೫ ರಿಂದ ಕ್ರಿ.ಶ. ೧೮೭೫ ರ ಅವಧಿಯಲ್ಲಿ ಶ್ರೀ ಕೋರಿಸಿದ್ಧೇಶ್ವರರು ಪೀಠಾಧಿಕಾರಿಗಳಾಗಿ ವೀರಶೈವ ಧರ್ಮ ಸಾಹಿತ್ಯ, ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಅಹೋ ರಾತ್ರಿ ಸೇವೆ ಸಲ್ಲಿಸಿರುವರು. ಅಂತೆಯೇ ಈ ಮಠವನ್ನು ಭಕ್ತರು ಶ್ರೀ ಕೋರಿಸಿದ್ಧೇಶ್ವರ ಸಂಸ್ಥಾನ ಮಠ ಎಂದು ಪ್ರೀತಿಯಿಂದ ಕರೆಯುತ್ತ ಬಂದಿರುವರು. ಕ್ರಿ.ಶ. ೧೮೭೫ ರಿಂದ ೧೯೧೫ ರ ವರೆಗೆ ಒಂದನೇ ತೋಟೇಂದ್ರ ಶಿವಾಚಾರ್ಯರೂ ಕ್ರಿ.ಶ. ೧೯೧೫ ರಿಂದ ೧೯೬೩ರ ವರೆಗೆ ಎರಡನೇ ಶಿವಾಚಾರ್ಯರು ತರುವಾಯ ಕ್ರಿ.ಶ. ೧೯೬೩ ರಿಂದ ನಾಲವಾರದ ಸಧ್ಯದ ಪೂಜ್ಯ ಉಪಾಚಾರ್ಯ ರತ್ನ ಷ. ಬ್ರ. ಶ್ರೀ ತೋಟೇಂದ್ರ ಶಿವಾಚಾರ್ಯರು ಪೀಠಾಧಿಕಾರಿಗಳಾಗಿ ಅಪ್ರತಿಮ ಸೇವೆ ಸಲ್ಲಿಸುತ್ತಲಿರುವರು.

ಸದುವಿನಯದ ತೇಜೋಮೂರ್ತಿ ಶ್ರೀ ತೋಟೇಂದ್ರ ಶಿವಾಚಾರ್ಯರು ಕ್ರಿ.ಶ. ೧೯೬೪ರಲ್ಲಿ ಜನಿಸಿದವರಾಗಿರುವರು. ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿಯೇ ಕೋರಿಸಿದ್ಧೇಶ್ವರರ ಅವತಾರ ಪುರುಷರಾಗಿ ಕ್ರಿ.ಶ. ೧೯೭೫ ರಲ್ಲಿ ಶ್ರೀ ಕೋರಿಸಿದ್ಧೇಶ್ವರ ಮಠದ ಮೂರನೇ ತೋಟೇಂದ್ರ ಶಿವಾಚಾರ್ಯರಾಗಿ, ೧೧ ನೇ ಪೀಠಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿರುವರು.

ಶ್ರೀ ತೋಟೇಂದ್ರ ಶಿವಾಚಾರ್ಯರು ಹುಟ್ಟು ಪ್ರತಿಭಾವಂತರು, ಸ್ವಾಧ್ಯಾಯದಿಂದ ಹಲವಾರು ಉತ್ತಮೋತ್ತಮ ಗ್ರಂಥಗಳನ್ನು ಓದಿ ತಮ್ಮ ಜ್ಞಾನಭಂಡಾರ ಹೆಚ್ಚಿಸಿಕೊಂಡವರಾಗಿರುವರು. ಶಿವಾನುಭವಿಗಳೂ ತಪಸ್ವಿಗಳೂ ತತ್ವನಿಷ್ಠರೂ ಆಗಿರುವ ಈ ತೋಟೇಂದ್ರ ಶಿವಾಚಾರ್ಯರು ಉತ್ತಮ ವಾಗ್ಮಿಗಳೂ ಆಗಿದ್ದಾರೆ. ಅಷ್ಟೇ ಅಲ್ಲ ಸ್ಮೃತಿಯಾತ್ರೆ ಹೆಸರಿನ ಪ್ರವಾಸ ಕಥನವೊಂದನ್ನೂ ಹನಿಗವನಗಳ ಸಂಕಲನವನ್ನೂ ರಚಿಸಿ ಶ್ರೇಷ್ಠ ಸಾಹಿತಿ ಕೂಡ ಆಗಿರುವರು. ಇವರ ಮಠಕ್ಕೆ ಯಾವ ಸ್ಥಿರಾಸ್ತಿ ಇಲ್ಲದಿದ್ದರೂ ಕೂಡ ರಾಷ್ಟ್ರದ ಎಲ್ಲ ಬಗೆಯ, ಜನಾಂಗದ, ಕಸುಬಿನ ಜನರೂ ಇವರ ಭಕ್ತರಾಗಿರುವರಲ್ಲದೆ ಬೇಡದೆ ಕೊಡುವ ವಿಶಾಲ ಜನದಂಡು ಈ ಮಠದ ಭಕ್ತರದಾಗಿರುವುದು. ಅಂತೆಯೆ ಶ್ರೀಗಳವರು ಭಕ್ತರ ದೇಣಿಗೆ ಹಣದಿಂದ ಮಠವನ್ನು ವಿಸ್ತೀರ್ಣಗೊಳಿಸಿರುವರು. ಇಲ್ಲಿ ಸುಂದರವಾದ ಕೈಲಾಸಭವನ ನಿರ್ಮಾಣಗೊಂಡಿದೆ. ಬೃಹತ್ತಾದ ಕಲ್ಯಾಣ ಮಂಟಪ, ಅನುಭವ ಮಂಟಪ, ಬಯಲು ರಂಗಮಂದಿರ ಹಾಗೂ ಶಾಲಾ ಕಟ್ಟಡಗಳೂ ನಿರ್ಮಾಣದ ಹಂತದಲ್ಲಿವೆ. ಕರ್ತೃ ಗದ್ದುಗೆಯ ಶಿಖರದ ಕಟ್ಟಡವೂ ಕೊನೆಯ ಹಂತದಲ್ಲಿ ನಡೆಯುತ್ತಲಿದೆ. ಪ್ರತಿ ಹುಣ್ಣಿಮೆ ಮತ್ತು ಅಮವಾಸ್ಯೆಯಂದು ಅನುಕ್ರಮವಾಗಿ ಗುಲಬರ್ಗಾ ಮತ್ತು ನಾಲವಾರಗಳಲ್ಲಿ ಶಿವಾನುಭವ ಕಾರ್ಯಕ್ರಮಗಳು ನಡೆಯುತ್ತಾ ಬಂದಿರುತ್ತವೆ.

ಇತ್ತೀಚೆಗೆ ನಡೆದ ಜಾತ್ರಾ ಮಹೋತ್ಸವದಲ್ಲಿ(೨೨–೧–೨೦೦೪ ರಂದು) ೨೦೦ನೇ ಶಿವಾನುಭವದ ಉಪನ್ಯಾಸ ನೀಡಲು, ಪರಮ ಪೂಜ್ಯ ಶ್ರೀ ತೋಟೇಂದ್ರ ಶಿವಾಚಾರ್ಯರು, ನನ್ನನ್ನು ಆಮಂತ್ರಿಸಿದ್ದು ನನ್ನ ಸೌಭಾಗ್ಯ. 'ಅನುಭಾವ ಎಂಬುದು ಅಂತರಂಗದ ರತ್ನ. ಅದು ಆತ್ಮವಿದ್ಯೆ, ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ವಿಶ್ವ ವಿಶಾಲ ಮನೋಬಲ. ಅಂಥ ದಿವ್ಯ ರತ್ನವನ್ನು ಜಾಗತಿಕ ಮಹಾಪುರುಷರು ಶಿವಶರಣರ ಜೀವನ ತತ್ವ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಮುಟ್ಟಿಸಲು ಶಿವಾನುಭವ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಜ್ಞಾನ ಪ್ರಸಾರಕ್ಕೆ ಹಿಡಿದ ಕನ್ನಡಿಯಾಗಿದೆಯೆಂದೂ ಹೇಳುತ್ತ ಶಿವಾನುಭವ ರಾಷ್ಟ್ರದ ಅಭಿವೃದ್ಧಿಗೆ ದಾರಿದೀಪವಾಗಲಿ'ಯೆಂದು ನಿರರ್ಗಳವಾದ ತಮ್ಮದೇ ಆದ ಶೈಲಿಯಲ್ಲಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಗದುಗಿನ ಜಗದ್ಗುರು ತೋಂಟದಾರ್ಯ ಮಠದ ಡಾ॥ ಸಿದ್ಧಲಿಂಗ ಮಹಾಸ್ವಾಮಿಗಳವರಿಗೆ ಕೋಮು

ಸೌಹಾರ್ದ ರಾಷ್ಟ್ರೀಯ ಪ್ರಶಸ್ತಿ ಪಡೆದುದಕ್ಕೆ ಶ್ರೀ ಷ. ಬ್ರ. ತೋಟೇಂದ್ರ ಶಿವಾಚಾರ್ಯರು ಸನ್ಮಾನ ಮಾಡಿದರು. ಅದೇ ರೀತಿ ಭಾಷಣ ಮಾಡಿದ ಶ್ರೀ ಮ. ಘ. ಚ. ಬಸವಲಿಂಗ ಪಟ್ಟದೇವರಿಗೂ ಮುಖ್ಯ ಅತಿಥಿಗಳಾಗಿದ್ದ ಮಾಜಿ ಮಂತ್ರಿ ಶ್ರೀ ಬಸವರಾಜ ಪಾಟೀಲ–ಅನ್ವರಿ, ಮಾಜಿ ಮಂತ್ರಿ, ಶ್ರೀ ಬಾಬೂರಾವ ಚಹ್ವಾಣ, ಶ್ರೀ ಶಾಮರಾವ ಪ್ಯಾಟಿ ಮೊದಲಾದವರಿಗೆ ಸನ್ಮಾನ ಮಾಡಿದರು. ಪ್ರತಿ ವರ್ಷದ ಅಕ್ಷಯ ತದಿಗೆ ಅಮವಾಸ್ಯೆ, ಮಣ್ಣೆತ್ತಿನ ಅಮವಾಸ್ಯೆಗೆ ತನಾರತಿ ಕಾರ್ಯಕ್ರಮವನ್ನು ಪೂಜ್ಯರು ನೆರವೇರಿಸುತ್ತ ಬಂದಿರುವರು. ಭಕ್ತಿ ಶ್ರದ್ಧೆಗೆ ಸಂಕೇತವಾಗಿ ನಡೆಯುತ್ತಿರುವ ಈ ತನಾರತಿ ಹರಕೆ ಹೊತ್ತ ಭಕ್ತರು ತಮ್ಮ ತಮ್ಮ ತಲೆಗಳ ಮೇಲೆ ದೊಡ್ಡ ದೊಡ್ಡ ಬತ್ತಿಗಳುಳ್ಳ ಆರತಿ ಇಟ್ಟುಕೊಂಡು ಶ್ರೀ ಕೋರಿಸಿದ್ಧೇಶ್ವರರ ಗದ್ದುಗೆಗೆ ಐದು ಸುತ್ತು ಪ್ರದಕ್ಷಿಣೆ ಹಾಕುವ ದೃಶ್ಯ ಮನೋಮೋಹಕವಾಗಿರುತ್ತದೆ. ಇದು ಜ್ಞಾನದೀವಿಗೆಯ ಸಂಕೇತವಾಗಿರುವುದು.

ಜ್ಞಾನ ಪ್ರಸಾರಕ್ಕಾಗಿ ಸಾಹಿತಿ ಶ್ರೀ ಬಿ. ಮಹಾದೇವಪ್ಪ ಅವರ ಸಂಪಾದಕತ್ವದಲ್ಲಿ 'ತನಾರತಿ' ಎಂಬ ಪತ್ರಿಕೆಯೊಂದನ್ನು ಶ್ರೀಗಳು ಮಠದಿಂದ ಪ್ರಕಟಿಸುತ್ತಿರುವುದು, ಪ್ರತಿ ಅಮವಾಸ್ಯೆಯಂದು ಬೆಳತನಕ ನಡೆಯುವ ಶಿವಾನುಭವ ಕಾರ್ಯಕ್ರಮಗಳು ಅದ್ಭುತವಾಗಿವೆ. ಈ ಮಠದ ಪರವಾಗಿ ಹಲವಾರು ಗ್ರಂಥಗಳನ್ನು ಪ್ರಕಟಿಸುತ್ತಲಿರುವರು.

■■

ಹಾರಕೂಡದ

ಲಿಂ. ಸದ್ಗುರು ಚನ್ನಬಸವ ಶಿವಯೋಗಿಗಳು

ಶ್ರೀ ಚನ್ನಬಸವ ಶಿವಯೋಗಿಗಳು ಮೂಲತಃ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಮಗ್ಗಿ ಗ್ರಾಮದವರು. ಯಾತ್ರಿಕರ ಪುಣ್ಯಸ್ಥಳವಾದ ಈ ಮಗ್ಗಿ ಗ್ರಾಮದಲ್ಲಿ 'ರಾಮಲಿಂಗೇಶ್ವರ' ದೇವಸ್ಥಾನ ಒಂದಿದೆ. ಈ ಗ್ರಾಮದ ಚನ್ನವೀರಯ್ಯ ರೇವಮ್ಮ ದಂಪತಿಗಳಿಗೆ ೧೮೫೮ರಲ್ಲಿ ಜನಿಸಿರುವ ಮಗುವೇ ಹಾರಕೂಡದ ಸದ್ಗುರು ಶ್ರೀ ಚನ್ನಬಸವರು.

ಶ್ರೀ ಶಿವಯೋಗಿಗಳು ಹಾರಕೂಡ ಮಠಕ್ಕೆ ಮರಿಯಾಗಿ ಬಂದಾಗ ಅವರಿಗೆ ಕೇವಲ ಎಂಟು ವರುಷ ಮಾತ್ರ. ಶಿವಪೂಜಾ ದುರಂಧರರಾದ ಶ್ರೀಸಂಗನ ಬಸವ ಸ್ವಾಮಿಗಳವರ ಸನ್ನಿಧಿಯಲ್ಲಿ ಅತ್ಯಾನಂದದಿಂದ ಕಾಲ ಕಳೆಯ ತೊಡಗಿದರು. ಭಕ್ತರ ಅಪೇಕ್ಷೆಯ ಮೇರೆಗೆ ಶ್ರೀ ಶಿವಯೋಗಿಗಳಿಗೆ ಜಂಗಮದೀಕ್ಷೆ ಕೊಡಿಸಿದರು. ಇಷ್ಟಲಿಂಗ ಪೂಜೆಯ ಮೂಲಕವಾಗಿ ಪ್ರಾಣ ಲಿಂಗಾನುಸಂಧಾನದಿಂದ ಭಾವಲಿಂಗದಲ್ಲಿ ಬೆರೆಯುವ ಮಾರ್ಗವನ್ನು ತೋರಿಸಿ ದರು. ಪಂಚಾಕ್ಷರ ಮಂತ್ರವನ್ನು ಬೋಧಿಸಿ ಗಣಾರಾಧನೆ ಮಾಡಿಸಿದರು. ಶಿವಯೋಗ ದೀಕ್ಷೆ ಕೊಟ್ಟು ಮಹಾಸಿದ್ಧೀ ಪುರುಷರಾಗಿ, ಜಗದ್ವಂದ್ಯರಾಗುವಂತೆ ಆಶೀರ್ವದಿಸಿದರು. ಶಿವಯೋಗಿಗಳು ಕೂಡ ತಮ್ಮ ಪರಿಶುದ್ಧ ಆಚಾರ ವಿಚಾರಗಳಿಂದಾಗಿ ಶ್ರೀ ಸಂಗನಬಸವ ಸ್ವಾಮಿಗಳ ಹೃದಯವನ್ನು ಗೆದ್ದರು.

ವೇದ–ವೇದಾಂತಾಗಮ ನಿಪುಣರೂ ಶಿವಾನುಭ ಶಾಸ್ತ್ರ ಕೋವಿದರೂ ಆಗಿದ್ದ ಮುಗುಳಿಯ ಬಸವಣ್ಣೆಪ್ಪ ಅವರಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆಂದು ಶಿವಯೋಗಿಗಳನ್ನು ಶ್ರೀ ಸಂಗನಬಸವ ಸ್ವಾಮಿಗಳು ಕಳಿಸಿಕೊಟ್ಟರು. ಅಲ್ಲಿದ್ದು ಕೊಂಡು ಯೋಗ, ಸಾಂಖ್ಯ, ನ್ಯಾಯ ಮುಂತಾದ ದರ್ಶನಗಳನ್ನೂ, ಶಿವಾನುಭವ ಸಿದ್ಧಾಂತವನ್ನೂ ಚೆನ್ನಾಗಿ ಅಭ್ಯಾಸ ಮಾಡಿದರು. ಶಿವಯೋಗಿಗಳು ಆಗಲೇ ಪ್ರತಿಭಾ ಸಂಪನ್ನರಾಗಿದ್ದರು. ಕಲಾಕೌಶಲ್ಯವನ್ನೂ, ವಾಗ್ವೈಖರೀ ವಿಶೇಷವನ್ನೂ

ತಿಳಿದು ಬೆರಗಾದ ಗುರು ಬಸವಣ್ಣೆಪ್ಪನವರು ಶಿವಯೋಗಿಗಳಿಗೆ ಶಿವಾನುಭವ ಸಾರ, ಲಿಂಗಾಂಗ ಸಾಮರಸ್ಯ, ಸರ್ವಾಂಗಲಿಂಗ ಸಾಹಿತ್ಯವನ್ನು ತಿಳಿಸಿಕೊಟ್ಟರು. ಹಲವಾರು ವರುಷ ಗುರುಗಳ ಸನ್ನಿಧಾನದಲ್ಲಿದ್ದುಕೊಂಡು ಶಿವಯೋಗ ಸಾಧನೆ ಮಾಡಿದರು. ಶಿವಯೋಗ ಶಿರೋಮಣಿಯಾಗು, ಲೋಕವನ್ನು ಉದ್ಧರಿಸು ಎಂದು ಗುರುಗಳು ಶಿವಯೋಗಿಯನ್ನು ಮಗ್ಗಿ ಗ್ರಾಮಕ್ಕೆ ಹರಸಿ ಕಳಿಸಿಕೊಟ್ಟರು.

ಶ್ರೀ ಚನ್ನಬಸವ ಶಿವಯೋಗಿಗಳು ಮುಗುಳಿಯಲ್ಲಿ ವಿದ್ಯಾರ್ಥಿಯಾಗಿದ್ದು ಕೊಂಡೇ ಅಧ್ಯಾಪಕರಾಗಿಯೂ ವಿಶಿಷ್ಟ ಸೇವೆ ಸಲ್ಲಿಸಿದರು. ಶಿವಯೋಗಿಗಳ ವಾಕ್ ಚಾತುರ್ಯಕ್ಕೆ ಹಾಗೂ ಶಿವಯೋಗ ಸಾಧನೆಗೆ ಎಲ್ಲರಂತೆ ಶ್ರೀ ಸಂಗನಬಸವ ಸ್ವಾಮಿಗಳೂ ಹೆಮ್ಮೆಪಟ್ಟುಕೊಂಡರು. ತಂದೆ ಚನ್ನವೀರಯ್ಯನೊಂದಿಗೆ ಮಗ್ಗಿ ಗ್ರಾಮಕ್ಕೆ ಬಂದ ಶಿವಯೋಗಿಗಳು ರಾಮೇಶ್ವರಲಿಂಗ ದೇವಾಲಯಕ್ಕೆ ಹೋಗಿ ಧ್ಯಾನಾಸಕ್ತರಾಗುತ್ತಿದ್ದರು. ಪ್ರಕೃತಿಯ ಸುಂದರ ಮಡಿಲಲ್ಲಿ ಗುರುಗಳು ಹೇಳಿಕೊಟ್ಟಿದ್ದ ವಿದ್ಯೆಯನ್ನು ಮೆಲುಕು ಹಾಕುತ್ತ ಕರತಲಾಮಲಕ ಮಾಡಿಕೊಂಡರು. ಹೀಗೆಯೇ ಹಳ್ಳಿಯ ಸುಂದರ, ಸುಸಂಸ್ಕೃತ ಪರಿಸರದಲ್ಲಿ ಹಲವಾರು ತಿಂಗಳ ಕಳೆದರು.

ಶ್ರೀ ಚನ್ನಬಸವ ಶಿವಯೋಗಿಗಳ ಪಟ್ಟಾಭಿಷೇಕ :

ಹಾರಕೂಡ ಮಠದ ಪಟ್ಟಾಧ್ಯಕ್ಷರಾಗಿದ್ದ ಶ್ರೀ ಷ. ಬ್ರ. ಸಂಗನಬಸವ ಸ್ವಾಮಿಗಳು ವೃದ್ಧಾಪ್ಯದಿಂದಾಗಿ ಅಸ್ವಸ್ಥರಾದರು. ಮಠಕ್ಕೆ ಬಿಟ್ಟಿದ್ದ ಮರಿದೇವ ರನ್ನು ಮಗ್ಗಿ ಗ್ರಾಮದಿಂದ ಕರೆದುಕೊಂಡು ಬಂದರು. ಶ್ರೀಸಂಗನಬಸವ ಸ್ವಾಮಿಗಳವರ ಇಚ್ಛಾನುಸಾರ ಶಿವಯೋಗಿಶ್ವರರಿಗೆ ಪಟ್ಟಾಭಿಷೇಕ ಸಮಾರಂಭ ವೊಂದನ್ನು ಏರ್ಪಡಿಸಿದರು. ಬೇಲೂರ ಮಠದ ಪೀಠಾಧಿಕಾರಿಗಳಾದ ಶ್ರೀ ನೀಲಕಂಠ ಶಿವಾಚಾರ್ಯರಿಂದ ಶ್ರೀ ಶಿವಯೋಗೀಶ್ವರ ಮರಿದೇವರಿಗೆ 'ಚನ್ನಬಸವೇಶ್ವರ' ನಾಮದೊಂದಿಗೆ ಪಟ್ಟಾಭಿಷೇಕ ಸಮಾರಂಭ ನಡೆಯಿತು. ಶಾಲಿವಾಹನ ಶಕೆ ೧೭೭೯ ಪ್ರಭು ಸಂವತ್ಸರ ಶುದ್ಧ ಏಕಾದಶಿಯಂದು ಅಂದರೆ ಕ್ರಿ. ಶ. ೧೮೬೭ರಲ್ಲಿ ಶ್ರೀ ಸಂಗನಬಸವ ಸ್ವಾಮಿಗಳು ಶ್ರೀ ಚನ್ನಬಸವೇಶ್ವರ ಸ್ವಾಮಿಗಳಿಗೆ ಮಠದ ಆಸ್ತಿ ವಿವರಗಳನ್ನು ತಿಳಿಸಿ, ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಶಿಷ್ಯರ ಸಮ್ಮುಖದಲ್ಲಿ ಒಪ್ಪಿಸಿಬಿಟ್ಟರು. 'ಭಕ್ತರನ್ನೂ ಮಠವನ್ನೂ ರಕ್ಷಿಸುವ ಭಾರ ನಿಮ್ಮದು. ಸತ್ಕಾರ್ಯಗಳನ್ನು ಮಾಡಿ ಲೋಕದಲ್ಲಿ ಕೀರ್ತಿವಂತ

ರಾಗಿರಿ' ಎಂದು ಸಂಗನಬಸವ ಸ್ವಾಮಿಗಳು ಆಶೀರ್ವದಿಸಿದರು. ತಪ್ಪದೆ ತ್ರಿಕಾಲ ಪೂಜಾ ನಿಷ್ಠರಾಗಿ ಭಕ್ತರಿಗೆ ಮಾರ್ಗದರ್ಶನ ಮಾಡಲು ಉಪದೇಶ ನೀಡಿದರು. ಅಜ್ಞಾನದಲ್ಲಿರುವ ಜನರನ್ನು ಸುಜ್ಞಾನದೆಡೆಗೆ, ಸತ್ಯದ ಕಡೆಗೆ ನಡೆಸಬೇಕೆಂದೂ, ಮಾತಿಗಿಂತ ಕೃತಿಗೆ ಹೆಚ್ಚಿನ ಬೆಲೆ ಕೊಡಬೇಕೆಂದೂ ಉಪದೇಶ ಮಾಡಿದರು.

ಕೆಲವು ದಿವಸಗಳು ಗತಿಸಿದ ನಂತರ ಶ್ರೀ ಸಂಗನಬಸವ ಸ್ವಾಮಿಗಳು ಲಿಂಗೈಕ್ಯರಾದರು. ಗುರುಗಳು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಶ್ರೀ ಚನ್ನಬಸವೇಶ್ವರ ಶಿವಾಚಾರ್ಯರು ತ್ರಿಕಾಲಲಿಂಗ ಪೂಜಾನಿಷ್ಠರಾದರು. ಸಚ್ಚಾರಿತ್ರದಿಂದ ಭಕ್ತರ ಹೃದಯವನ್ನು ಗೆದ್ದುಕೊಂಡರು. ತಮ್ಮ ತಮ್ಮ ದುಃಖ–ದುಮ್ಮಾನ, ಕಷ್ಟ–ತಾಪತ್ರಯಗಳನ್ನು ಪರಿಹರಿಸಿಕೊಳ್ಳಲೆಂದು ದರ್ಶನಕ್ಕೆ ಬರತೊಡಗಿದ ಸಾವಿರಾರು ಭಕ್ತರಿಗೆ ಧರ್ಮದ ನಿಜ ತತ್ವ–ಸಿದ್ಧಾಂತಗಳನ್ನು ತಿಳಿಸಿಕೊಡತೊಡಗಿದರು. ಇದರಿಂದ ಜನರಿಗೆ ತಮ್ಮ ಧರ್ಮದ ಅರಿವು, ಆಗಿ ಅದರಂತೆ ನಡೆಯತೊಡಗಿದುದರಿಂದ ತಮಗೂ ಸಮಾಜ ಬಾಂಧವರಿಗೂ ನೆಮ್ಮದಿ ದೊರಕತೊಡಗಿತು. ಮಠಕ್ಕೆ ಬರಹೋಗುವವರ ಸಂಖ್ಯೆ ಹೆಚ್ಚಾಯಿತು. ಭಕ್ತರಿದ್ದಲ್ಲಿಯೇ ಶ್ರೀ ಚನ್ನಬಸವೇಶ್ವರ ಸ್ವಾಮಿಗಳವರು ಹೋಗಿ ದರ್ಶನಾಶೀರ್ವಾದ ಕೊಟ್ಟು ಬರುತ್ತಿದ್ದರು. ಹೀಗೆ ಪೂಜ್ಯ ಚನ್ನಬಸವರು ಈ ಪ್ರದೇಶದ ಭಕ್ತರ ಪಾಲಿನ ದೇವರೆನಿಸಿದರು.

ವಿದ್ಯೆ ಸಂಪಾದನೆ :

ಶ್ರೀ ಚನ್ನಬಸವ ಶಿವಯೋಗಿಗಳು ಸುಸಂಸ್ಕೃತ ತಂದೆ–ತಾಯಿಗಳ ಉದರದಲ್ಲಿ ಹುಟ್ಟಿ ಬಂದರು. ಮುಗುಳಿ ಮಠದ ಘನ ಪಂಡಿತರೆನಿಸಿದ್ದ ಶ್ರೀ ಬಸವಣ್ಣಪ್ಪ ಗುರುಗಳ ಶಿಷ್ಯರಾಗಿ ಹಲವಾರು ವರುಷ ವಿದ್ಯೆ ಸಂಪಾದಿಸಿದರು. ಅವರ ಸಾನಿಧ್ಯದಲ್ಲಿದ್ದುಕೊಂಡು ಹಲವಾರು ವರುಷಗಳ ಪರ್ಯಂತ ಶಾಸ್ತ್ರ ಗ್ರಂಥಗಳನ್ನು ಓದಿದರು. ಮಠದ ಪಟ್ಟಾಧಿಕಾರಿಗಳಾಗಿ ಶ್ರೀ ಸಾಮಾನ್ಯರ ಮಧ್ಯದಲ್ಲಿದ್ದುಕೊಂಡು ಸಮಾಜದ ಏರುಪೇರುಗಳನ್ನರಿತರು. ಬಸವಾದಿ ಶರಣರ ವಚನಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಬಸವಾದಿ ಶರಣರು ಬಿತ್ತಿ ಬೆಳೆದ ಶರಣ ಸಂಸ್ಕೃತಿಯ ಸೌರಭವನ್ನು ಎಲ್ಲ ಕಡೆಗೂ ಪ್ರಚಾರಗೊಳಿಸಿದರು. ಪ್ರಪಂಚದಲ್ಲಿದ್ದು ಪಾರಮಾರ್ಥ ಗೆದೆಯುವ ವೈಚಾರಿಕ ಮನೋಭೂಮಿಯ ಲಿಂಗಾಯತ

ಧರ್ಮ, ವೀರಶೈವ ಧರ್ಮ, ವಿಶ್ವಧರ್ಮದ ಲಕ್ಷಣಗಳನ್ನು ಒಳಗೊಂಡಿರುವಂತಹದು ಎಂಬುದನ್ನು ಸಾರಿ ಸಾರಿ ಹೇಳಿದರು. ಜನತೆ ಕಣ್ಣು ತೆರೆಯಿತು. ಜನರು ವಚನ ಸಾಹಿತ್ಯವನ್ನು ತಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿಸಿಕೊಂಡರು. ಶ್ರೀಗಳವರಂತೂ ಬಸವಣ್ಣವರ ವಚನಗಳನ್ನು ಜನತೆಗೆ ಮನಮೆಚ್ಚುವಂತೆ ತಿಳಿಸಿ ಹೇಳುತ್ತಿದ್ದರು. ಅವುಗಳಲ್ಲಿ ಅಡಕವಾಗಿರುವ ತತ್ವಗಳನ್ನು ಸ್ವತಃ ಜೀವನದಲ್ಲಿ ಅಳವಡಿಸಿಕೊಂಡು ಹೇಳುತ್ತಿದ್ದುದರಿಂದ ಅವರ ಮಾತಿಗೆ, ವಾಣಿಗೆ ಬೆಲೆಯಿರುತ್ತಿತ್ತು.

''ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ,
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ,
ನೆರೆರಮನೆಯವರ ದುಃಖಕ್ಕೆ ಅಳುವವರ
ಮೆಚ್ಚ ಕೂಡಲಸಂಗಮದೇವಾ.''

ಎಂಬ ಬಸವಣ್ಣನವರ ವಚನವನ್ನಂತೂ ಯಾವಾಗಲೂ ಮೆಲಕು ಹಾಕುತ್ತಿದ್ದರು.

''ಕಳಬೇಡ ಕೊಲಬೇಡ, ಹುಸಿಯನುಡಿಯಲು ಬೇಡ.
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,
ಇದೇ ನಮ್ಮ ಕೂಡಲ ಸಂಗಮದೇವರನೊಲಿಸುವ ಪರಿ.''

ಎಂದು ಬಸವಣ್ಣನವರ ಸುಂದರವೂ ಅಷ್ಟೇ ಸರಳವೂ ಆದ ವಚನವನ್ನು ಹಾಡುತ್ತ ತಾವೂ ಅಂತರಂಗ, ಬಹಿರಂಗ ಶುದ್ಧೀ ಪಡೆದುಕೊಂಡವರಾಗಿದ್ದು ಆತ್ಮಬಲ ಬೆಳೆಸಿಕೊಂಡವರಾಗಿದ್ದರು. ಪ್ರತಿಯೊಬ್ಬರೂ ಬಸವಣ್ಣನವರು ಸಾರಿರುವ ಈ ಸಪ್ತಸೂತ್ರಗಳನ್ನು ಜೀವನದಲ್ಲಿ ಚಾಚೂತಪ್ಪದೆ ಅಳವಡಿಸಿಕೊಂಡಿದ್ದಾದರೆ ಅಂಥ ಶ್ರೀಮಂತಿಕೆ ಇನ್ನೊಂದಿಲ್ಲವೆಂದೂ ಉಪದೇಶಿಸುತ್ತಿದ್ದರು.

ಶ್ರೀ ಚನ್ನಬಸವ ಶಿವಯೋಗಿಗಳವರು 'ಅಹಿಂಸಾ ಪರಮೋಧರ್ಮ'' ಎಂದಂದು ಯಾರಿಗೂ ಹಿಂಸಿಸಬಾರದು ಎನ್ನುತ್ತಿದ್ದರು. ಸಕಲ ಜೀವಾತ್ಮರಿಗೆ ಲೇಸನೆ ಬಯಸಬೇಕೆನ್ನುತ್ತಿದ್ದರು. ಸರ್ಪವನ್ನು ಕೊಲ್ಲಬಾರದೆಂದು ಹೇಳುತ್ತಿದ್ದರು. ದಯವೇ ಧರ್ಮದ ಮೂಲ ಎನ್ನುತ್ತಿದ್ದರು. ಶ್ರೀಗಳವರು ಎಂದೂ ಇರುವೆಗಳು

ಹೋಗುತ್ತಿದ್ದ ಸಾಲಿನಲ್ಲಿ ನಡೆದು ಹೋಗುತ್ತಿದ್ದಿರಲಿಲ್ಲ. ಯಾವಾಗಲೂ ತಮ್ಮ ಅಂಗಿಯ ಕಿಸೆಯಲ್ಲಿ ಕಲ್ಲುಸಕ್ಕರೆ ಹಾಕಿಕೊಂಡಿರುತ್ತಿದ್ದರು. ಇರುವೆಗಳನ್ನು ಕಂಡರೆ ಆ ಕಲ್ಲುಸಕ್ಕರೆ ಹರಳುಗಳನ್ನು ಅಲ್ಲಿ ಆ ಇರುವೆಗಳಿಗೆ ತಿನ್ನಲೆಂದು ಹಾಕುವ ಪರಿಪಾಠ ಇಟ್ಟುಕೊಂಡಿದ್ದರು.

ಶ್ರೀ ಚನ್ನಬಸವ ಶಿವಯೋಗಿಗಳು ಬಸವಣ್ಣನವರ ಹಾಗೂ ಇತರ ಶಿವಶರಣ ಶರಣೆಯರ ವಚನಗಳನ್ನು ಶ್ರೀಸಾಮಾನ್ಯರಿಗೂ ತಿಳಿಯುವಂತೆ ಹೇಳುತ್ತಿದ್ದರು. ಜನತೆಯ ಹಸಿವನ್ನು ಹಿಂಗಿಸಲು ತಲೆಯಲ್ಲಿ ಮಹಾಶಿವಶರಣ ಶರಣೆಯರ ತತ್ವಗಳನ್ನು, ಹೊಟ್ಟೆಗೆ ಮಠದಲ್ಲಿ ದಾಸೋಹವನ್ನು ನಡೆಸುತ್ತಿದ್ದರು. ಹೀಗೆ ವೀರಶೈವ ಧರ್ಮ–ಸಾಹಿತ್ಯ–ಸಂಸ್ಕೃತಿಯ ತವನಿಧಿಯೆನ್ನುವ ಶ್ರೀ ಮಠದ ಕೀರ್ತಿಯನ್ನು ಎಲ್ಲೆಡೆಗೆ ಪಸರಿಸಿದರು. ಚರಜಂಗಮರಾಗಿ ದೇಶ ಸಂಚಾರಕ್ಕೂ ಆಗಾಗ ತೆರಳುತ್ತಲಿದ್ದರು.

ಶ್ರೀ ಚನ್ನಬಸವ ಶಿವಯೋಗಿಶ್ವರರು ಸದೃಢ ಕಾಯ ಹೊಂದಿದವರಾಗಿದ್ದರು. ತಮ್ಮ ಯೋಗ ಸಾಧನೆಯಿಂದ ಚಿಕ್ಕಂದಿನಿಂದಲೇ ಏನೆಲ್ಲವನ್ನೂ ಸಾಧಿಸಿಕೊಂಡಿದ್ದರು. ಆಣವ, ಮಾಯಾ, ಕಾರ್ಮಿಕ ಮಲತ್ರಯಗಳ ಬಂಧನದಿಂದ ಬಿಡುಗಡೆ ಹೊಂದಿ ಇಷ್ಟಲಿಂಗ ಸಾಧನೆಯಿಂದ ಲಿಂಗಾಂಗ ಸಾಮರಸ್ಯದ ಸವಿಯನ್ನು ಅನುಭವಿಸಿದವರಾಗಿದ್ದರು. ಅಂತೆಯೇ ಶ್ರೀಗಳವರು ನುಡಿದ ನುಡಿ ಹುಸಿ ಹೋಗುತ್ತಿದ್ದಿರಲಿಲ್ಲ. ಅವರ ವಾಣಿ ಅದು ಅಮೃತವಾಣಿಯಾಗಿತ್ತು.

ಶ್ರೀ ಚನ್ನಬಸವ ಶಿವಯೋಗಿಗಳು ಬಂಗಾರ ಬಣ್ಣದ ಜಡೆಗಳನ್ನು ಹೊಂದಿದವರಾಗಿದ್ದರು. ಹನ್ನೆರಡು ಕಿಸೆಗಳಿಂದ ಕೂಡಿದ (ಬಾರಾಬಂದಿ) ಉದ್ದವಾಗಿರುವ ಮೂರು ಅಂಗಿಗಳನ್ನು ಒಂದರ ಮೇಲೊಂದು ಧರಿಸುತ್ತಿದ್ದರು. ಅಂಗಿಯ ಕಿಸೆಗಳಲ್ಲಿ ಹಲವಾರು ವಸ್ತುಗಳನ್ನು ಇಡುತ್ತಿದ್ದರು. ಬೇಡಿದ ಭಕ್ತರಿಗೆ, ಮಕ್ಕಳಿಗೆ ಧಾರಾಳವಾಗಿ ಕೊಟ್ಟು ಬಿಡುತ್ತಿದ್ದರು. ರೇಶಿಮೆಯ ಜರಕಾಟಿ ರುಮಾಲನ್ನು ಸುತ್ತುತ್ತಿದ್ದರು. ಅಲ್ಲಿ ಚಂದ್ರನನ್ನು ಧರಿಸುತ್ತಿದ್ದರು. ರತ್ನ ಖಚಿತ ಆಭರಣಗಳನ್ನು ಧರಿಸುತ್ತಿದ್ದರು. ಕೈಬೆರಳುಗಳಲ್ಲಿ ಬಣ್ಣ ಬಣ್ಣದ, ಚಿತ್ರ ವಿಚಿತ್ರ ಹರಳುಗಳಿಂದ ಮಿನುಗುವ ಸುವರ್ಣದ ಉಂಗುರಗಳನ್ನು ಧರಿಸುತ್ತಿದ್ದರು. ಬಸವ ಮುದ್ರೆಯನ್ನೂ ಧರಿಸುತ್ತಿದ್ದರು. ಹೆಗಲ ಮೇಲೆ ಕಾಶ್ಮೀರದ ರೇಶ್ಮೆಶಾಲನ್ನೂ ಹೊದೆದುಕೊಳ್ಳುತ್ತಿದ್ದರು. ಕೈಯಲ್ಲಿ ಶಂಖ, ತ್ರಿಶೂಲಗಳನ್ನು ಹಿಡಿಯುತ್ತಿದ್ದರು. ಗಡ್ಡ ಮೀಸೆಗಳೂ ಇದ್ದವು.

ಶ್ರೀ ಚನ್ನವೀರ ಶಿವಯೋಗಿಗಳು ಶಂಖ, ಮೃದಂಗ, ತಾಳ, ಜಾಗಟೆ, ನಗಾರಿ ಮೊದಲಾದ ವಾದ್ಯಗಳ ವಾದನದೊಂದಿಗೆ ಶಿವನಾಮಸ್ಮರಣೆ ಮಾಡುತ್ತಿದ್ದರು. ವಾಯುವಿಹಾರಕ್ಕೆ ಹೋಗಿ ಬರುತ್ತಿದ್ದರು. ಹೋಗುವಾಗ ಮತ್ತು ಬರುವಾಗ ದಾರಿಯಲ್ಲಿ ಬಿದ್ದಿದ್ದ ಕಲ್ಲು–ಮುಳ್ಳು ಎತ್ತಿ ದಾರಿ ಸ್ವಚ್ಛಗೊಳಿಸುತ್ತಲಿದ್ದರು. ಕಟ್ಟಿಗೆ, ಕುಳ್ಳು ಬಿದ್ದಿದ್ದರೆ, ಅಂಥವುಗಳನ್ನು ಎತ್ತಿಕೊಂಡು ಉರಿಹಚ್ಚಲು, ನೀರು ಕಾಯಿಸಲು ಉಪಯೋಗವಾಗುತ್ತದೆಂದು, ಆಯ್ದುಕೊಂಡು ಮಠಕ್ಕೆ ತರುತ್ತಿದ್ದರು. ಭಕ್ತರ ಮನೆಗೆ ಹೋದಾಗಲೂ ಈ ಕಾಯಕ ನಡೆದೇ ಇರುತ್ತಿತ್ತು. ಭಕ್ತರ ಮನೆಯಲ್ಲಿ ಸ್ನಾನಪೂಜೆಪ್ರಸಾದ ಆದ ಮೇಲೆ ಭಕ್ತರ ಇಚ್ಛೆಯ ಮೇರೆಗೆ ಅಲ್ಲಿ ಶಿವಾನುಭವ ಗೋಷ್ಠಿ ನಡೆಸುತ್ತಲಿದ್ದರು. ಪ್ರತಿನಿತ್ಯ ಶ್ರೀ ಸಾಮಾನ್ಯರಿಗೂ ಅರ್ಥವಾಗುವಂತೆ ಧರ್ಮದ ವಿಷಯ ಕುರಿತು ಪ್ರವಚನ ನಡೆಸುತ್ತಲಿದ್ದರು. ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರು ಅಂದು ಅನುಭವ ಮಂಟಪದಲ್ಲಿ ಚರ್ಚೆ ನಡೆಯುತ್ತಿದ್ದಂತೆ, ಶ್ರೀ ಚನ್ನಬಸವ ಶಿವಯೋಗಿಗಳು ಇಲ್ಲಿ ತಮ್ಮ ಹಾರಕೂಡ ಮಠದಲ್ಲಿ ಇಲ್ಲವೆ ಈ ಮಠದ ಭಕ್ತರ ಮನೆಯಲ್ಲಿ ಅನುಭವ ಗೋಷ್ಠಿಗಳನ್ನು ನಡೆಸುತ್ತಲಿದ್ದರು. ಹಲವಾರು ಗ್ರಂಥಗಳಲ್ಲಿ ಪ್ರತಿಪಾದಿಸಿರುವ ವಿಷಯಗಳ ಕುರಿತು ಬಿಚ್ಚು ಮನಸ್ಸಿನ ಚರ್ಚೆ ನಡೆಸುತ್ತಲಿದ್ದರು.

ವೀರಶೈವ–ಲಿಂಗಾಯತ ಧರ್ಮ ಅದು ವಿಶ್ವಧರ್ಮವಾಗಿರುತ್ತದೆ. ಅದು ಅಷ್ಟೇ ವಿಶಾಲವೂ ಆಗಿರುವಂತಹದಾಗಿದೆ. ಇಲ್ಲಿ ವರ್ಗ, ವರ್ಣ, ಬಡವ–ಶ್ರೀಮಂತ ಎನ್ನುವ ಯಾವ ಭೇದಭಾವಗಳೂ ಇಲ್ಲ. ಕಾಯಕದಲ್ಲಿ ಮೇಲುಕೀಳು ಎಂದೆನಿಸಲಾಗದು. ಸ್ತ್ರೀ ಪುರುಷರೆಲ್ಲರೂ ಸಮಾನರು. ವೀರಶೈವ ಧರ್ಮದ ಅಂಗವು ಅಷ್ಟಾವರಣವಾದರೆ ಪ್ರಾಣವು ಪಂಚಾಚಾರವೆನಿಸಿ, ಆತ್ಮವು ಷಟ್‌ಸ್ಥಲವಾಗಿದೆ. ಇಂಥ ಸಿದ್ಧಾಂತದ ವಿಷಯಗಳನ್ನು ಶ್ರೀಗಳವರು ಭಕ್ತರಿಗೆ ಮನಮೆಚ್ಚುವಂತೆ ಬೋಧಿಸುತ್ತಿದ್ದರು.

ಶ್ರೀ ಚನ್ನಬಸವ ಶಿವಯೋಗಿಗಳು ಎಲ್ಲ ಜಾತಿ–ಜನಾಂಗದ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ಶಿಷ್ಯರನ್ನು ಪಡೆದಿದ್ದರು. ಬಸವಣ್ಣನವರು ತಮ್ಮ ವಚನವೊಂದರಲ್ಲಿ ಸಾರಿದಂತೆ ಎಲ್ಲರನ್ನು ತಮ್ಮವರೆಂದೇ ಪ್ರೀತಿಸುತ್ತಿದ್ದರು. ಆಶೀರ್ವದಿಸುತ್ತಿದ್ದರು. ವೈರಿಗಳನ್ನು ಪ್ರೀತಿಸುವ ಮನೋಭಾವನೆ ಇವರದಾಗಿತ್ತು. ಯಾರಿಗೂ ಅನ್ಯಾಯ ಮಾಡಬೇಡಿರಿ ಎಂದೂ ಉಪದೇಶ ಮಾಡುತ್ತಿದ್ದರು.

ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಂಡಾಗ ಅಂಥವರು ಉದಾತ್ತ ವ್ಯಕ್ತಿತ್ವ ಪಡೆದುಕೊಳ್ಳುತ್ತಾರೆ. ಅಂಥ ಉದಾತ್ತ ವ್ಯಕ್ತಿಗಳನ್ನು ಸಮಾಜ ಹೊಂದಬೇಕೆಂಬುದು ಶ್ರೀ ಷ. ಬ್ರ. ಚನ್ನಬಸವ ಶಿವಯೋಗಿಗಳ ಧ್ಯೇಯವಾಗಿತ್ತು.

ಶ್ರೀ ಚನ್ನಬಸವ ಶಿವಯೋಗಿಗಳು ಹೆಚ್ಚು ಮಾತನಾಡುವವರಾಗಿದ್ದಿರಲಿಲ್ಲ. ಮಾತಿಗಿಂತ ಕೃತಿಗೆ ಹೆಚ್ಚಿನ ಬೆಲೆ ಕೊಟ್ಟಿದ್ದರು. ಅವರು ಮಿತಭಾಷಿಗಳೂ, ಮಿತಾಹಾರಿಗಳೂ ಆಗಿದ್ದರು. ಕಾಯಕದ ಜೊತೆಗೆ ದಾಸೋಹಕ್ಕೂ ಶರಣರಂತೆ ವಿಶೇಷ ಮಹತ್ವ ನೀಡಿದ್ದರು. ತಮ್ಮ ಬಾಳನ್ನು ಹಸನಾಗಿರಿಸಿಕೊಂಡಿದ್ದರು. ಅಂತೆಯೇ ಭಕ್ತ ಕುಲಕೋಟಿ ಬೆಲ್ಲಕ್ಕೆ ಇರುವೆ ಮುತ್ತುವಂತೆ ಈ ಪುಣ್ಯಾತ್ಮರನ್ನು ಮುತ್ತುತ್ತಿದ್ದರು. ಶ್ರೀಗಳವರು ಹೋದ ಹೋದಲೆಲ್ಲಾ ಜನಜಾತ್ರೆ. ಅವರು ಪಾದವಿಟ್ಟ ಮನೆ ಉದ್ಧಾರವಾಗುತ್ತಿತ್ತು. ಅವರ ಬರುವಿಕೆಯನ್ನೇ ಭಕ್ತರು ಹಾರೈಸುತ್ತಿದ್ದರು. ಸಂಚಾರ ಹೊರಟರೆಂದರಂತೂ ದೂರ ದೂರದ ಭಕ್ತರು ಅವರನ್ನು ಹಿಂಬಾಲಿಸುತ್ತಿದ್ದರು. ದಾರಿಗುಂಟ ಶ್ರೀಗಳವರಂತೆ ಎಲ್ಲರೂ ಕಸ–ಕಡ್ಡಿ, ಕಟ್ಟಿಗೆ ಆರಿಸುತ್ತ ಒಂದು ಕಡೆ ಕೂಡಿಸಿ, ಇಡುತ್ತ ಹೋಗುತ್ತಲಿದ್ದರು. ಒಂದಿಬ್ಬರು ಅದನ್ನು ಕಟ್ಟಿಕೊಂಡು ನೀರು ಕಾಯಿಸಲು ಬರುತ್ತದೆಂದು ಒಯ್ದು ಭಕ್ತರ ಮನೆಗೆ ಮುಟ್ಟಿಸುತ್ತಲಿದ್ದರು. ದಾರಿಯಲ್ಲಿ ದನಕರುಗಳು ಹಾಕುತ್ತಿದ್ದ ಹೆಂಡಿಯನ್ನು ಎತ್ತಿ ಬದಿಗಿರುವ ಹೊಲಗಳಿಗೆ ಚೆಲ್ಲುತ್ತ ಹೋಗುತ್ತಲಿದ್ದರು. ಶ್ರೀ ಚನ್ನಬಸವರ ಸತ್ಸಂಗದಲ್ಲಿ ಸಂಚರಿಸುತ್ತಿದ್ದ ಭಕ್ತರು ತಮ್ಮ ಜ್ಞಾನದ ಹಸಿವನ್ನು ಹಿಂಗಿಸಿಕೊಂಡು ಮಹಾನುಭಾವಿಗಳಾಗುತ್ತಿದ್ದರು. ಅಂಗ ಲಿಂಗ ಸಂಬಂಧದ ಲಿಂಗಾಂಗ ಸಾಮರಸ್ಯದ ರಹಸ್ಯವನ್ನು ಸಾಮಾನ್ಯರಿಗೆ ತಿಳಿಯುವಂತೆ ಶ್ರೀ ಚನ್ನಬಸವರು ಬೋಧಿಸುತ್ತಿದ್ದರು. ಇದನ್ನುಂಡ ಭಕ್ತರು ಸಂತುಷ್ಟರಾಗುತ್ತಿದ್ದರು. ಊರವರ, ನಾಡಭಕ್ತರ ಜಗಳಗಳನ್ನು ಬಗೆಹರಿಸುತ್ತಿದ್ದರು.

ಮಠಕ್ಕೆ ಹೆಚ್ಚಿನ ಆಸ್ತಿ ಇಲ್ಲದಿದ್ದರೂ ದಾಸೋಹ ನಡೆಯಬೇಕು ಎಂದು ಶ್ರೀಗಳ ಧ್ಯೇಯವಾಗಿತ್ತು, ದಾಸೋಹದ ಮೂಲಕ ಜನಕಲ್ಯಾಣವಾಗಬೇಕು ಎನ್ನುತ್ತಿದ್ದರು. ಶ್ರೀಗಳು ಪ್ರತಿದಿನವೂ ಕುರಿಯ ಹಾಲಿನಲ್ಲಿ ಬೇವಿನರಸ ಬೆರೆಸಿ ಕುಡಿಯುತ್ತಿದ್ದರು. ಅವರ ಸದೃಢ ಶರೀರಕ್ಕೆ ಇದುವೆ ದಿವ್ಯ ಔಷಧವಾಗಿತ್ತು. ಇವರಂತೆ ಇವರ ಶಿಷ್ಯ ಬಳಗದವರೂ ಕಲಿತುಕೊಂಡಿದ್ದರು.

ಶ್ರೀ ಚನ್ನಬಸವರ ಸತ್ಸಂಗದಲ್ಲಿದ್ದ ಭಕ್ತರು, ಅವರ ಮಾರ್ಗದರ್ಶನದಲ್ಲಿ ತಮ್ಮ ಮನಸ್ಸನ್ನು ಶುದ್ಧಗೊಳಿಸಿಕೊಳ್ಳುತ್ತಿದ್ದರು. ಗಳಿಸಿದ ಸಂಪತ್ತಿನಲ್ಲಿ ಒಂದು ಹತ್ತಾಂಶ ಭಾಗವನ್ನು ಗುರುಗಳ ಮಠಕ್ಕೆ ಸಮರ್ಪಿಸಿ ಧನ ಶುದ್ಧೀಕರಣ ಗೊಳಿಸಿಕೊಳ್ಳುತ್ತಿದ್ದರು ಹೀಗೆ ತನು–ಮನ–ಧನಕ್ಕಂಟಿಗೊಂಡಿದ್ದ ಮೈಲಿಗೆಯನ್ನು ಹಸನಗೊಳಿಸಿಕೊಂಡು ಸಂತೋಷಪಡುತ್ತಿದ್ದರು. ಇದರಿಂದ ಗುರುಚನ್ನಬಸವರೂ ಅಭಿಮಾನಪಟ್ಟುಕೊಳ್ಳುತ್ತಿದ್ದರು. ಅವರು ನನ್ನ ನಿಜವಾದ ಸಂಪತ್ತೆಂದರೆ ನನ್ನ ಶಿಷ್ಯ ಬಳಗವೇ ಹೊರತು ನನ್ನ ಮಠವಲ್ಲ ಎಂದು ಹೇಳುತ್ತಿದ್ದರು. ಹೀಗೆ ನಾಡಿನ ಅದರಲ್ಲೂ ಕಲ್ಯಾಣ ನಾಡಿನ ಉದ್ದಗಲಕ್ಕೂ ಶಿಷ್ಯರನ್ನು ಹೊಂದಿದ್ದ ಶ್ರೀ ಷ. ಬ್ರ. ಚನ್ನಬಸವ ಶಿವಯೋಗಿಗಳು ಶಿಷ್ಯರ ಆಮಂತ್ರಣ ಮಾನ್ಯ ಮಾಡಿ ಅವರವರ ಮನೆಗೆ ತೆರಳಿ ಬೋಧೆ ಮಾಡುತ್ತಲಿದ್ದುದು ವಿಶಿಷ್ಟವಾದುದಾಗಿತ್ತು. ಇವರು ಪಾದವಿಟ್ಟ ಮನೆತನದ ಉದ್ಧಾರವಾಗುತ್ತಿತ್ತು. ಭಕ್ತರು ಶ್ರೀ ಚನ್ನಬಸವ ಶಿವಯೋಗಿಗಳವರನ್ನು ಪವಾಡ ಪುರುಷರೆಂದು ಬಗೆದಿದ್ದರು. ಅಘಟಿತ ಘಟನೆಗಳನ್ನು ನೆನೆದು ಸಂತೋಷಪಡುತ್ತಿದ್ದರು. ಈಗಲೂ ಹಳ್ಳಿ ಹಳ್ಳಿಗಳಲ್ಲಿ ಅವರ ಲೀಲೆಗಳನ್ನು ಹೇಳುವವರು ಇದ್ದಾರೆ. ಪೂಜ್ಯ ಚನ್ನಬಸವ ಶಿವಯೋಗಿಗಳು ಕ್ರಿ.ಶ. ೧೯೫೧ ರಂದು ಲಿಂಗೈಕ್ಯರಾದರು, ಶಕೆ ೧೮೭೩ ಖರ ಸಂವತ್ಸರ ಪುಷ್ಯ ಶುದ್ಧ ದ್ವಿತೀಯ ರವಿವಾರ ರಾತ್ರಿ ೧೦ ಘಂಟೆಗೆ ಶ್ರೀಗುರು ಲಿಂಗ ಶಿವಾಚಾರ್ಯರು ಪಟ್ಟಕ್ಕೆ ಬಂದರು. ಕ್ರಿ. ಶ. ೧೯೫೨ರಿಂದ ಲಿಂ. ಚನ್ನಬಸವ ಶಿವಯೋಗಿಗಳ ಜಾತ್ರೆ ಮಾಡುತ್ತ ಬಂದಿರುವರು.

ಶ್ರೀ ಗುರುಲಿಂಗ ಶಿವಾಚಾರ್ಯರ ತರುವಾಯ ಶ್ರೀ ಚನ್ನವೀರ ಶಿವಾಚಾರ್ಯರು ಕ್ರಿ.ಶ. ೧೯೬೯ನೇ ಇಸ್ವಿ ಅಶ್ವಿಜ ಶುದ್ಧ ಮಹಾನವಮಿಯಂದು ಹಾರಕೂಡ ಮಠದ ಉತ್ತರಾಧಿಕಾರಿಗಳಾಗಿ ಆಯ್ಕೆಯಾದರು. ಆಗ ಇವರಿಗೆ ಕೇವಲ ಆರು ವರುಷಗಳಾಗಿದ್ದವು. ಅಧಿಕಾರ ಚಿಹ್ನ ಇವರಿಗಿರುವುದನ್ನು ಅರಿತ ಹಿರಿಯರು ಈ ಹಾರಕೂಡ ಮಠದ ಪೀಠಾಧಿಕಾರಿಗಳನ್ನಾಗಿ ಮಾಡಿದರು. ಇವರ ಮೂಲ ಹೆಸರು ರೇವಣಸಿದ್ಧರೆಂಬುದು. ಇವರ ತಂದೆಯವರು ಸಂಗೀತ ಕಲಾಕಾರರಾಗಿರುವ ಶ್ರೀ ಕರಿಬಸವಯ್ಯನವರು. ಇವರ ತಾಯಿ ಸುಭದ್ರಾ ಈ ದಂಪತಿಗಳಿಗೆ ಜನಿಸಿದ ಎಂಟನೆಯ ಮಗು ಶ್ರೀ ರೇವಣಸಿದ್ಧಯ್ಯರಾಗಿದ್ದು ಇವರು ಜನಿಸಿದುದು ಕ್ರಿ.ಶ. ೧೯೬೩ ಕಾರ್ತಿಕ ಶುದ್ಧ ದ್ವಾದಶಿಯಂದು.

ತಾಯಿಯ ತವರು ಮನೆಯವರೂ, ತಂದೆಯ ಕಡೆಯವರೂ ವಿದ್ಯಾವಂತರು, ಕಲಾಕಾರರು, ಪೂಜ್ಯ ಶ್ರೀ ಷ. ಬ್ರ. ಚನ್ನಬಸವ ಶಿವಯೋಗಿಗಳವರ ಕೃಪಾಶೀರ್ವಾದ. ಹೀಗಾಗಿ ಶ್ರೀ ರೇವಣಸಿದ್ಧರು ಹಾರಕೂಡ ಮಠಕ್ಕೆ ಆರು ವರುಷದವರಿದ್ದಾಗ ಶ್ರೀ ಚನ್ನವೀರ ಹೆಸರಿ ನೊಂದಿಗೆ ಮರಿದೇವರಾದರು.

ವಿದ್ಯಾಭ್ಯಾಸ :

ಶ್ರೀ ಚನ್ನವೀರ ಶಿವಾಚಾರ್ಯರ ಪ್ರಾಥಮಿಕ ಅಭ್ಯಾಸವು ಹಾರಕೂಡ ಗ್ರಾಮದ ಸರಕಾರಿ ಶಾಲೆಯಲ್ಲಿಯೂ ಪ್ರೌಢ ಶಾಲಾ ಅಭ್ಯಾಸವು ಕಲಬುರ್ಗಿಯ ಶ್ರೀ ಶರಣಬಸವೇಶ್ವರ ಹೈಸ್ಕೂಲದಲ್ಲಿಯೂ ಆಗಿರುವುದು. ಕಲಬುರ್ಗಿಯಲ್ಲಿ ಹೈಸ್ಕೂಲು ಅಭ್ಯಾಸ ಮಾಡುತ್ತಿದ್ದಾಗ ಹಾಬಾಳದ ಶ್ರೀ ಬಸವರಾಜ ದೇಶಮುಖ ಅವರ ಮನೆಯಲ್ಲಿದ್ದುಕೊಂಡು ಅಧ್ಯಯನ ಮಾಡಿದ್ದರು. ತರುವಾಯ ಉನ್ನತ ವ್ಯಾಸಂಗಕ್ಕೆಂದು ಹುಬ್ಬಳ್ಳಿಗೆ ತೆರಳಿದರು. ಅಲ್ಲಿ ಮೂರುಸಾವಿರ ಮಠದ ಜಗದ್ಗುರು ಡಾ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರ ದರ್ಶನ ಪಡೆದು ಶ್ರೀ ಕುಮಾರೇಶ್ವರ ಶಿವಯೋಗಿ ಸಂಘದಲ್ಲಿ ಪ್ರವೇಶ ಪಡೆದರು.

ಶ್ರೀ ಚನ್ನವೀರ ದೇವರು ಮಠದಲ್ಲಿ ಸಾಧಕರಾಗಿದ್ದುಕೊಂಡು ಸತತ ಅಭ್ಯಾಸ ಮಾಡತೊಡಗಿದರು. ತಮ್ಮ ಉತ್ತಮ ನಡವಳಿಕೆಯಿಂದ ಗುರುಗಳ ಹಾಗೂ ಜಗದ್ಗುರುಗಳ ಪ್ರೀತಿಗೆ ಪಾತ್ರರಾದರು. ಹುಬ್ಬಳ್ಳಿಯಲ್ಲಿರುವ ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಕಾಲೇಜು ಅಭ್ಯಾಸ ಮಾಡತೊಡಗಿದರು. ಕ್ರಿ.ಶ. ೧೯೭೪ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ. ಎ. ಪದವಿಯನ್ನು ಪಡೆದರು. ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ ಎರಡು ವರ್ಷ ಅಧ್ಯಯನ ಕೈಕೊಂಡರು. ಕ್ರಿ.ಶ. ೧೯೭೬ ರಲ್ಲಿ ಎಂ.ಎ. ಪದವಿಯನ್ನು ಉಚ್ಚ ಶ್ರೇಣಿಯಲ್ಲಿ ಪಡೆದರು. ಹೀಗೆ ಶ್ರೀ ಚನ್ನವೀರ ದೇವರು ತಾವು ಕಲಿತ ಸಂಸ್ಥೆಗಳಿಗೂ ಹಾರಕೂಡ ಮಠದ ಭಕ್ತರಿಗೂ ಸಂತೋಷವನ್ನುಂಟು ಮಾಡಿದರು.

ಸೌಜನ್ಯದ ಸಾಕಾರಮೂರ್ತಿಯಾಗಿರುವ ಶ್ರೀ ಚನ್ನವೀರ ದೇವರು ಹಾರಕೂಡ ಮಠಕ್ಕೆ ಬಂದರು. ಅವರು ಗಳಿಸಿದ ವಿದ್ಯೆ ಅವರ ವಿನಯ ಗುಣ ದಿಂದಾಗಿ ಇನ್ನೂ ಶೋಭಿಸತೊಡಗಿತು. ಸಚ್ಚಾರಿತ್ರಶೀಲರೂ ಆದ ಶ್ರೀ

ಚನ್ನವೀರ ದೇವರು ತಮ್ಮ ಮಠದ ಭಕ್ತರ ಇಚ್ಛೆಯಂತೆ ಒಂದೊಂದಾಗಿ ಜವಾಬ್ದಾರಿಯನ್ನು ವಹಿಸಿಕೊಂಡರು. ಗ್ರಾಮದ ಹಾಗೂ ಸುತ್ತಮುತ್ತಣದ ಭಕ್ತರು ಹಾಗೂ ತಮ್ಮ ಪೂಜ್ಯ ತಂದೆ ಕರಿಬಸವಯ್ಯನವರ ಮಾರ್ಗದರ್ಶನದಲ್ಲಿ ಮಠದ ಅಭಿವೃದ್ಧಿಗಾಗಿ ಸೇವೆಗೈಯತೊಡಗಿದರು. ವೀರಶೈವ ಧರ್ಮದ ತತ್ವ ಸಿದ್ಧಾಂತ–ಸಾಹಿತ್ಯ–ಸಂಸ್ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿರುವ ಶ್ರೀ ಚನ್ನವೀರ ದೇವರು ಭಕ್ತರ ಮನ ಮುಟ್ಟುವಂತೆ ತಿಳಿಯ ಹೇಳತೊಡಗಿದರು. ಇತರ ಭಾಷೆಗಳನ್ನು ಬಲ್ಲವರಾದ ಶ್ರೀಗಳವರು ಅನೇಕ ಸಾಧು ಸಂತರ ತತ್ವಗಳನ್ನೂ ಭಕ್ತರಿಗೆ ತಿಳಿಸಿಕೊಡತೊಡಗಿದರು. ಹೀಗಾಗಿ ಭಕ್ತರ ಮೇಲೆ ಹೆಚ್ಚಿನ ಪ್ರಭಾವ ಬೀಳತೊಡಗಿತು. ಬೇರೆ ಬೇರೆ ರಾಜ್ಯಗಳಿಂದಲೂ ಭಕ್ತರು ಹಾರಕೂಡ ಮಠಕ್ಕೆ ಬರತೊಡಗಿದರು. ಶ್ರೀ ಚನ್ನವೀರದೇವರನ್ನು ಹೆಚ್ಚಿನ ಗೌರವಾದರಗಳಿಂದ ಕಾಣತೊಡಗಿದರು. ಹೀಗೆ ಹಾರಕೂಡ ಮಠದ ಕೀರ್ತಿ ಮತ್ತೆ, ಚನ್ನಬಸವ ಶಿವಯೋಗಿಗಳು ಇದ್ದ ಕಾಲದಲ್ಲಿಯಂತೆಯೇ, ನಾನಾ ದಿಕ್ಕುಗಳಲ್ಲಿ ಪಸರಿಸತೊಡಗಿತು. ಹೀಗೆ ಶ್ರೀ ಚನ್ನವೀರ ದೇವರು ತಾವೂ ಬೆಳೆಯುತ್ತ ಮಠದ ಅಂತಸ್ತನ್ನೂ ಹೆಚ್ಚಿಸತೊಡಗಿದರು. ಜೊತೆಗೆ ಶ್ರೀ ಚನ್ನವೀರ ದೇವರು ವಕ್ತೃತ್ವ ಕಲೆಯನ್ನು ಕರಗತ ಮಾಡಿಕೊಂಡರು. ಇದು ಶ್ರೀಗಳವರ ಘನವ್ಯಕ್ತಿತ್ವಕ್ಕೆ ಮತ್ತಷ್ಟೂ ಕಳೆತಂದು ಕೊಟ್ಟಿತು.

ಮಠದ ಜವಾಬ್ದಾರಿ :

ಪೂಜ್ಯಶ್ರೀ ಚನ್ನವೀರದೇವರು ಕಲಬುರ್ಗಿ ಮತ್ತು ಹುಬ್ಬಳ್ಳಿಗಳಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಇತ್ತ ಹಾರಕೂಡ ಮಠದ ಕೆಲಸ ಕಾರ್ಯಗಳನ್ನು ತಂದೆ ಶ್ರೀ ಕರಿಬಸವಯ್ಯನವರು ಮಠದ ನಿಷ್ಠಾವಂತ ಹಿರಿಯ ಭಕ್ತರಾದ ಶ್ರೀ ಬಸವತೀರ್ಥಪ್ಪ ಸಜ್ಜನ, ಶ್ರೀ ಶಂಕರಪ್ಪ ಬಿರಾದಾರ, ಶ್ರೀ ಶಿವಶರಣಪ್ಪ ಗೌಡರು, ಹಾಬಾಳದ ಶ್ರೀ ದೇಶಮುಖರು ಮೊದಲಾದ ಹಲವಾರು ಭಕ್ತರ ಸಹಕಾರದೊಂದಿಗೆ ನಡೆಸಿಕೊಂಡು ಬಂದಿದ್ದರು. ವಿದ್ಯಾಭ್ಯಾಸ ಮುಗಿಸಿಕೊಂಡು ಬಂದ ಮೇಲೆ ಶ್ರೀಗಳವರಿಗೆ ಭಕ್ತರು ಎಲ್ಲ ಜವಾಬ್ದಾರಿಯನ್ನು ವಹಿಸಿಕೊಟ್ಟು ಅವರ ಬೆನ್ನಹಿಂದೆ ಸಹಾಯಕರಾಗಿ ನಿಂತರು. ವೈಚಾರಿಕ ಹಾಗೂ ವೈಜ್ಞಾನಿಕ ಮನೋಭಾವದ ಹಿನ್ನೆಲೆಯಲ್ಲಿ ಶ್ರೀಗಳವರು ಸಾಹಿತಿ–ಕಲಾಕಾರರು, ಸಮಾಜದ

ಮುಖಂಡರೊಂದಿಗೂ ಹಾಗೂ ರಾಜಕೀಯ ಧುರೀಣರೊಂದಿಗೂ ವಿಚಾರ ವಿನಿಮಯ ಮಾಡಿ, ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡು ಅವುಗಳನ್ನು ಕಾರ್ಯರೂಪದಲ್ಲಿ ತರುತ್ತಲಿರುವರು.

ಶ್ರೀ ಚನ್ನವೀರ ಶಿವಯೋಗಿಗಳು ಶ್ರೀ ಸಾಮಾನ್ಯರ ಬದುಕಿನ ವಿವಿಧ ಮಜಲುಗಳನ್ನು ತಿಳಿದುಕೊಂಡವರಾಗಿರುವರು. ಅವರ ಕಷ್ಟ-ಸುಖಗಳನ್ನೂ ಅರಿತವರಾಗಿರುವರು. ಲೌಕಿಕದೊಂದಿಗೆ ಪಾರಮಾರ್ಥವನ್ನು ಬೆರೆಸಿಕೊಂಡು ಹೋಗುವಂತೆ ಉಪದೇಶ ಮಾಡುತ್ತಲಿರುವರು. 'ಲೋಕ ಕಲ್ಯಾಣವೇ ನನ್ನ ಜೀವನದ ಗುರಿ' ಎಂದುಕೊಂಡ ಶ್ರೀ ಚನ್ನವೀರ ಶಿವಯೋಗಿಗಳು ಶರಣರು ಸಾರಿದಂತೆ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತಸಾಗಿರುವರು. ಮಾನವ ಧರ್ಮಕ್ಕೆ, ಬಸವ ಧರ್ಮಕ್ಕೆ, ಶರಣ ಸಂಸ್ಕೃತಿಗೆ ಜಯವಾಗಲಿ ಎಂದು ಸಾರುತ್ತ ಮಾನವೀಯ ಮೌಲ್ಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಜನತೆಗೆ ಕರೆಕೊಡುತ್ತಿರುವರು. ಕಲ್ಯಾಣ ನಾಡಿನ ಜನಮನದ ಮೈಲಿಗೆಯ ತೊಳೆಯುತ್ತ ಸಮಾಜದ ಅಭ್ಯುದಯಕ್ಕಾಗಿ ತಮ್ಮನ್ನು ಸಂಪೂರ್ಣ ತೊಡಗಿಸಿ ಕೊಂಡಿರುವರು. ನಾಡಿನ, ರಾಷ್ಟ್ರದ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಡೆಬಿಡದೆ ಭಾಗವಹಿಸುತ್ತಲಿರುವರು. ಭಕ್ತರು ನೀಡುವ ಬಿನ್ನ ಸ್ವೀಕರಿಸಿ ದೇಶ ಸಂಚಾರವನ್ನೂ ಕೈಕೊಳ್ಳುತ್ತ, ಭಕ್ತರ ಇಷ್ಟಾರ್ಥಗಳನ್ನೂ ಪೂರೈಸಿಕೊಡುತ್ತಲಿರುವರು.

ಪಟ್ಟಾಧಿಕಾರ ಮಹೋತ್ಸವ :

ಹಾರಕೂಡ ಮಠದ ಭಕ್ತಾದಿಗಳು ಸೇರಿಕೊಂಡು ಶ್ರೀ ಚನ್ನವೀರ ದೇವರ ಪಟ್ಟಾಧಿಕಾರ ಮಹೋತ್ಸವವನ್ನು ಏಪ್ರೀಲ್ ೨೫, ೧೯೯೬ ರಂದು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಿದುದು ಹಾರಕೂಡ ಮಠದ ಚರಿತ್ರೆಯಲ್ಲಿ ಚಿರಸ್ಮರಣೀಯವಾದ ಘಟನೆಯಾಗಿರುವುದು. ಮಳಖೇಡದ ಮೂಲಾಧಾರ ಕಟ್ಟಿಮನಿ ಸಂಸ್ಥಾನದ ಶ್ರೀ ಷ. ಬ್ರ. ಕಾರ್ತಿಕೇಶ್ವರ ಶಿವಾಚಾರ್ಯರು ಶ್ರೀ ಚನ್ನವೀರ ದೇವರಿಗೆ ಅನುಗ್ರಹ ನೀಡಿದರು. ಅಂದಿನಿಂದ ಶ್ರೀ ಚನ್ನವೀರ ದೇವರು ಶ್ರೀ ಚನ್ನವೀರ ಶಿವಾಚಾರ್ಯರಾದರು. ಉತ್ಸವ ಸಮಿತಿಯವರು ಈ ಸಂದರ್ಭದಲ್ಲಿ ಡಾ. ಸಂಗಮೇಶ ಸವದತ್ತಿಮಠ ಅವರ ಸಂಪಾದಕತ್ವದಲ್ಲಿ

ರಚಿತವಾದ 'ಚನ್ನವೀರ' ಸ್ಮರಣ ಗ್ರಂಥವೊಂದನ್ನು ಪ್ರಕಟಿಸಿರುವುದು ಅಭಿಮಾನದ ಸಂಗತಿಯಾಗಿರುವುದು.

ಮಠದ ಅಭಿವೃದ್ಧಿಗಾಗಿ ಸೇವೆ :

ಪಟ್ಟಾಭಿಷೇಕ ಸಮಾರಂಭ ಜರುಗಿದ ನಂತರ ಶ್ರೀ ಷ.ಬ್ರ. ಚನ್ನವೀರ ಶಿವಾಚಾರ್ಯರು ಹೆಚ್ಚಿನ ಉತ್ಸಾಹದಿಂದ ಮಠದ ಅಭಿವೃದ್ಧಿಗಾಗಿ ಸೇವೆ ಸಲ್ಲಿಸ ತೊಡಗಿದರು. ಮಠದ ಅನುಭವ ಮಂಟಪ, ದಾಸೋಹ ಮಂದಿರ ಮೊದಲಾದ ಕಟ್ಟಡಗಳನ್ನು ಕಟ್ಟಿಸುವಲ್ಲಿ ಹೆಚ್ಚಿನ ಕಾಳಜಿ ವಹಿಸತೊಡಗಿದರು. ತಮ್ಮ ಗುರು ಲಿಂ. ಶ್ರೀ ಗುರುಲಿಂಗ ಶಿವಾಚಾರ್ಯರ ಪುಣ್ಯತಿಥಿಯನ್ನು ಹೆಚ್ಚು ಅರ್ಥವತ್ತಾಗಿ ನಡೆಸುತ್ತಲಿರುವರು. ನಾಡಿನ ಖ್ಯಾತ ವಿದ್ವಾಂಸರನ್ನೂ ಕಲಾಕಾರರನ್ನೂ ಮಠಕ್ಕೆ ಆಮಂತ್ರಿಸಿ, ಸತ್ಕರಿಸಿ, ಅವರ ವಿಶೇಷಾನುಭವದ ನುಡಿಗಳನ್ನು ಭಕ್ತರಿಗೆ ತಿಳಿಯಪಡಿಸಿ ಸಂಸ್ಕೃತಿಯ ಪುನರುಜ್ಜೀವನಕ್ಕೆ ದಾರಿ ಮಾಡಿಕೊಡುತ್ತಲಿರುವರು. ಅವರು ನೀಡಿದ ಉಪನ್ಯಾಸಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ ಸಾರಸ್ವತಲೋಕಕ್ಕೆ ವಿಶೇಷ ಕೊಡುಗೆಯನ್ನು ಸಲ್ಲಿಸುತ್ತಲಿರುವರು. ಇದಕ್ಕಾಗಿ ಶ್ರೀ ಚನ್ನಬಸವೇಶ್ವರ ಸಂಸ್ಥಾನ– ಹಿರೇಮಠ, ಹಾರಕೂಡ ಈ ಅಂಗಸಂಸ್ಥೆಯಿಂದ ಹಲವಾರು ಪುಸ್ತಕಗಳನ್ನು ಪ್ರಕಟಿಸಿರುವರು.

(೧) ಶ್ರೀ ಜಗದ್ಗುರು ಚನ್ನಬಸವಸ್ವಾಮಿಗಳ ಅಷ್ಟೋತ್ತರ ಶತನಾಮಾ ವಳಿ. (ಲೇ.) ಪುರಾಣಿಕ ಶರಣಯ್ಯ. ೧೯೯೨. (೨) ಜನಪದ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು (ಲೇ.) ಪ್ರೊ. ಸೂಗಯ್ಯ ಹಿರೇಮಠ. ೧೯೯೧. (೩) ಅನುಭಾವ ಮಂಟಪದಲ್ಲಿ ವೀರಶೈವ ಸಂಸ್ಕೃತಿ (ಲೇ.) ಶ್ರೀ ವ್ಹಿ. ಎಸ್. ಚರಂತಿಮಠ. (೪) ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು (ಲೇ.) ಡಾ. ಎಂ. ಎಸ್. ಲಠ್ಠೆ. ೧೯೯೨. (೫) 'ಅಂತರ' – ಸಣ್ಣ ಕಥೆಗಳ ಸಂಕಲನ (ಲೇ.) ಪ್ರೊ. ಸೂಗಯ್ಯ ಹಿರೇಮಠ. ೧೯೯೩. (೬) ಅನುಭಾವಿಯ ಆತ್ಮಕಥನ (ಲೇ.) ಡಾ. ಎಸ್. ಆರ್. ಗುಂಜಾಳ ೧೯೯೩. (೭) ಶರಣರ ಕಾಯಕ ಮತ್ತು ದಾಸೋಹ (ಲೇ.) ಶ್ರೀ ಶಿವರಾಜ ಪಾಟೀಲ. ೧೯೯೪. (೮) ಶರಣರ ವಚನಗಳಲ್ಲಿ ಸಮಾಜ ಕಾರ್ಯದರ್ಶನ (ಲೇ.) ಪ್ರೊ. ಎಸ್. ಆರ್. ಶಾಸ್ತ್ರಿ. ೧೯೯೪. (೯) ಸನ್ನಿಧಿ (ಲೇ.) ಡಾ. ಸಂಗಮೇಶ ಸವದತ್ತಿಮಠ. ೧೯೯೪. (೧೦) ಪುಣ್ಯಚಿತ್ತರು (ಲೇ.) ಡಾ.

ಪಂಚಾಕ್ಷರಿ ಹಿರೇಮಠ ೧೯೯೫. (೧೧) ಶೂನ್ಯ ಸಂಪಾದನೆಯ ಮುಖಗಳು (ಲೇ.) ಡಾ. ಸಂಗಮೇಶ ಸವದತ್ತಿಮಠ. (೧೨) ಚನ್ನವೀರ (ಸಂ.) ಡಾ. ಸಂಗಮೇಶ ಸವದತ್ತಿಮಠ. ೧೯೯೬. (೧೩) ವೀರಶೈವ ಸಾಹಿತ್ಯ (ಲೇ.) ಡಾ. ಎಸ್. ಎಂ. ಹಿರೇಮಠ. ೧೯೯೬. (೧೪) ಕಡಕೋಳ ಮಡಿವಾಳೇಶ್ವರ ಶಿಷ್ಯರ ಪದಗಳು (ಸಂ.) ಡಾ. ಮೀನಾಕ್ಷಿ ಬಾಳಿ. ೧೯೯೭ (೧೫) ವೀರಶೈವ ಸಂಪದ (ಲೇ.) ಡಾ. ಬಿ. ಆರ್. ಹಿರೇಮಠ. ೧೯೯೮. (೧೬) ಶಿವಶರಣರು ಹಾಗೂ ವೈಚಾರಿಕತೆ (ಲೇ.) ಡಾ. ಎಸ್. ವಿದ್ಯಾಶಂಕರ. ೧೯೯೮. (೧೭) ಸಿದ್ಧರಾಮ – ಒಂದು ಸಮೀಕ್ಷೆ(ಲೇ.) ಡಾ. ಬಿ. ವ್ಹಿ ಮಲ್ಲಾಪುರ. (೧೮) ಶ್ರೀ ಚನ್ನಬಸವೇಶ್ವರ ಚರಿತ್ರೆ (ಲೇ.) ಶ್ರಿಮತಿ ಗೋಪಿಕಾದೇವಿ ದೇಶಮುಖ. ಪರಿಷ್ಕೃತ ಮುದ್ರಣ ೨೦೦೧. (೧೯) ರುದ್ರಲಿಂಗ ಸಂಸ್ಕೃತಿ– ಆಚಾರ್ಯ ನಂದೀಶ. (೨೦) ಬಸವೋತ್ತರ ಯುಗದ ವಚನಕಾರರು ಡಾ. ವೀರಣ್ಣ ರಾಜೂರ – ೨೦೦೧. (೨೧) ಕಲ್ಯಾಣ ನಾಡಿನ ಪರಂಜ್ಯೋತಿ (ಸಂ.) ಡಾ. ಎಂ. ಎಸ್. ಲಠ್ಠೆ ೨೦೦೨. (೨೨) ಕರಿಯನಿತ್ತಡೆ ಒಲ್ಲೆ– ರಮೇಶ ಬಾಬು, ಯಾಳಗಿ. (೨೩) ವೀರಶೈವ ಪರಿಜ್ಞಾನ– ಷಣ್ಮುಖಯ್ಯ ಅಕ್ಕೂರಮಠ (೨೪) ಶಿವಶರಣರ ಲೋಕ ನೀತಿ– ಡಾ. ಸಂಗಮೇಶ ಸವದತ್ತಿಮಠ. (೨೫) ಕರ್ನಾಟಕದ ಶಿಲ್ಪಗಳಲ್ಲಿ ಶಿವಶರಣರು– ಡಾ. ಜೆ. ಎಮ್. ನಾಗಯ್ಯ. (೨೬) ಅಲಂದೆಯ ಏಕಾಂತರಾಮಯ್ಯ– ಡಾ. ಸಿ. ನಾಗಭೂಷಣ.

ಶ್ರೀ ಚನ್ನವೀರ ಶಿವಾಚಾರ್ಯರು ಸ್ವತಃ ಕವಿಗಳೂ ತತ್ವಪದಕಾರರೂ ಆಗಿರುವರು. ಇವರು ರಚಿಸಿರುವ ಕೆಲವೊಂದು ಪದಗಳನ್ನು ಭಕ್ತರು ಕ್ಯಾಸೆಟ್ ಮಾಡಿಸಿರುವರು. ಶ್ರೀಗಳು ಸ್ವತಃ ಭಜನೆಯ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವುದುಂಟು.

''ಹಾರಕೂಡ ಶಿವನು, ಗುರುಕುಲ ಭಾನು' 'ಹೋಗೋಣು ನ್ನಿರಣ್ಣ ಹಾರಕೂಡಕೆ' 'ಹಾರಕೂಡದ ಚನ್ನಬಸವ, ಬೇಗ ಕೊಡು ನೀ ಮಂಗಳವ' ಇಂಥ ಪದಗಳನ್ನೂ ಕ್ಯಾಸೆಟ್ಟಿನಲ್ಲಿ ಕೇಳಬಹುದಾಗಿದೆ.

ಪೂಜ್ಯಶ್ರೀ ಚನ್ನವೀರ ಶಿವಯೋಗಿಗಳು ಮಠದ ಇತಿಹಾಸ, ಚರಿತ್ರೆ ಬರೆಯಿಸಿ ಪ್ರಕಟಿಸುವತ್ತ ವಿಶೇಷ ಗಮನ ಹರಿಸಿರುವರು. ಶ್ರೀ ಚನ್ನಬಸವ

ಶಿವಯೋಗಿಗಳ ಕುರಿತು ಶ್ರೀಸಾಮಾನ್ಯರು ಬರೆದಿರುವ ತತ್ವ ಪದಗಳನ್ನು ಮೂರು ನೂರರ ಮೇಲ್ಪಟ್ಟು (೩೪೫) ಪ್ರಕಟಿಸುವಲ್ಲಿ ವಿಶೇಷ ಪರಿಶ್ರಮ ವಹಿಸಿರುವರು. ಶಿರಗಾಪುರದ ನಬಿಲಾಲ ಎಂಬ ಮುಸಲ್ಮಾನ ಕವಿಯು ಒಬ್ಬನೇ ಶ್ರೀ ಚನ್ನಬಸವರ ಜೀವನ ಚರಿತ್ರೆ ಮಹಿಮೆಗಳ ಕುರಿತು, ನೂರರ ಮೇಲ್ಪಟ್ಟು ಭಜನೆಯ ಹಾಡುಗಳನ್ನು ರಚಿಸಿ ಕೀರ್ತಿ ಶೇಷನಾಗಿರುವನು.

ಶ್ರೀ ಚನ್ನವೀರ ಶಿವಾಚಾರ್ಯರು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಅದ್ಭುತ ಸಾಧನೆ ಮಾಡಿ ತೋರಿಸುತ್ತ ಭಕ್ತರ ಮನ ಗೆದ್ದುಕೊಂಡವರಾಗಿದ್ದಾರೆ. ಅನುಭಾವ ಪ್ರಚಾರೋಪನ್ಯಾಸ ಮಾಲೆ, ಸೃಜನಶೀಲ ಸಾಹಿತ್ಯ ಮಾಲೆ ಪ್ರಕಟನಾ ಸಂಸ್ಥೆಗಳ ಮೂಲಕ ಗ್ರಂಥಗಳನ್ನು ಪ್ರಕಟಿಸುತ್ತಲಿರುವರು. ಚನ್ನಬಸವೇಶ್ವರರ ಹೆಸರಿನಲ್ಲಿ ಕಲ್ಯಾಣ ಮಂಟಪ, ಗುರುಲಿಂಗ ಶಿವಾಚಾರ್ಯರ ಅನುಭಾವ ಮಂಟಪ, ಚಿಂಚೋಳಿ ಹೊಸಳ್ಳಿಗಳಲ್ಲಿ ಚನ್ನಬಸವೇಶ್ವರ ಅನುಭವ ಮಂಟಪಗಳನ್ನು ತೆರೆದು ಅವುಗಳ ಮೂಲಕ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಲಿರುವರು. ಹಾರಕೂಡದಲ್ಲಿ ಕುಸ್ತಿ ಕ್ರೀಡಾಂಗಣವೊಂದನ್ನು ರಚಿಸಿರುವುದು ಶ್ರೀಗಳವರು ಕುಸ್ತಿ ಕಲೆಗೆ ವಿಶೇಷ ಪ್ರೋತ್ಸಾಹ ನೀಡುತ್ತಿರುವುದಕ್ಕೆ ನಿದರ್ಶನವಾಗಿರುತ್ತದೆ.

ಶ್ರೀ ಚನ್ನವೀರ ಶಿವಾಚಾರ್ಯರು ತ್ರಿಕಾಲ ಪೂಜಾನಿಷ್ಠರೂ ಚೇತನ ಸ್ವರೂಪಿಗಳೂ ಗುರುಲಿಂಗ ಜಂಗಮ ಸ್ವರೂಪಿಗಳೂ ಆಗಿದ್ದು ಭಕ್ತರ ಇಚ್ಛೆಗಳನ್ನು ಪೂರೈಸುತ್ತಲಿರುವರು. ಇವರು ಸಂಪ್ರದಾಯವಾದಿಗಳಾದರೂ ಮೂಢ ನಂಬಿಕೆಗಳಿಗೆ ಅಂಟಿಕೊಂಡವರಲ್ಲ. ವೈಚಾರಿಕ ದೃಷ್ಟಿಕೋನದಿಂದ ಶ್ರೀ ಚನ್ನವೀರ ಶಿವಾಚಾರ್ಯರು ಬುದ್ಧಿ ಜೀವಿಗಳ, ಸಮಾಜದ ಮುಖಂಡರ, ಸಾಹಿತಿ ಕಲಾಕಾರರ ಹೃದಯವನ್ನು ಗೆದ್ದುಕೊಂಡರವರಾಗಿರುವರು. ಇಷ್ಟಲಿಂಗ ಪೂಜೆ, ಧ್ಯಾನ, ತಪಸ್ಸಿನ ಮನೋಬಲದಿಂದ ಆತ್ಮಬಲ ಬೆಳೆಯಿಸಿಕೊಂಡವರಾಗಿರುವರು. ಎಲ್ಲ ಜಾತಿ ಮತ ಪಂಥದವರ ಮಠ ಇದಾಗಿದ್ದು ಲಿಂಗವಂತರನ್ನು ವಿಶೇಷವಾಗಿ ಆಕರ್ಷಿಸಿರುವುದು.

ಪ್ರತಿವರುಷ ಪುಷ್ಯ ಶುದ್ಧ ಪಂಚಮಿಯಿಂದ ಸಪ್ತಮಿಯವರೆಗೆ ಶ್ರೀ ಚನ್ನಬಸವ ಶಿವಯೋಗಿಗಳ ಜಾತ್ರೋತ್ಸವವನ್ನು ಅರ್ಥಪೂರ್ಣವಾಗಿ ಅಷ್ಟೇ ವಿಜೃಂಭಣೆಯಿಂದಲೂ ನಡೆಸುತ್ತ ಬಂದಿರುವರು. ಕರ್ನಾಟಕದ ಎಲ್ಲ

ಭಾಗಗಳಿಂದ ಮಹಾರಾಷ್ಟ್ರ, ಆಂಧ್ರ ರಾಜ್ಯಗಳಿಂದಲೂ ಈ ಜಾತ್ರೆಗೆ ಭಕ್ತರು ಬಂದು ದರ್ಶನ ಪಡೆದು ಜಾತ್ರೋತ್ಸವದಲ್ಲಿ ಭಾಗವಹಿಸಿ ಹೋಗುತ್ತಲಿರುವರು. ಜಾತ್ರೋತ್ಸವದ ಅಂಗವಾಗಿ ಹಲವಾರು ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಲಿರುವುದು ಮಠದ ಜೀವಂತಿಕೆಗೆ ಸಾಕ್ಷಿಯಾಗಿರುತ್ತದೆ. ರಥೋತ್ಸವ, ಪುರಾಣ ಪ್ರವಚನ, ಶಿವಾನುಭವಗೋಷ್ಠಿ, ಸಂಗೀತ ಸಮ್ಮೇಳನ, ಕನ್ನಡ ಸಾಹಿತ್ಯ ಸಮ್ಮೇಳನ, ಜನಪದ ಕಲಾಮೇಳ, ಭಜನಾ ಮೇಳ, ಕುಸ್ತಿ ಪಂದ್ಯಾಟ, ಕೃಷಿಮೇಳ, ವಸ್ತು ಪ್ರದರ್ಶನ, ದನಗಳ ಜಾತ್ರೆ. ಈ ಮೊದಲಾದವು ಶ್ರೀ ಸಾಮಾನ್ಯರ ಕೊಡು ಕೊಳ್ಳಿಕೆ ಹಾಗೂ ಜ್ಞಾನಾಭಿವೃದ್ಧಿಗೆ, ಮನಃಶುದ್ಧೀಕರಣಕ್ಕೆ ಸಹಾಯಕಾರಿ ಯಾಗಿದ್ದುದನ್ನು ನೆನೆಯಬಹುದು.

ಪೂಜ್ಯ ಶ್ರೀ ಚನ್ನವೀರ ಶಿವಾಚಾರ್ಯರು ಬಡ ಮಕ್ಕಳ ಕಲ್ಯಾಣಕ್ಕಾಗಿ ಜೀವನ ಮೌಲ್ಯಗಳ ಅಳವಡಿಕೆಗಾಗಿ ರೆಸಿಡೆನ್ಸಿಯಲ್ ಸ್ಕೂಲ ಒಂದನ್ನು ಕ್ರಿ.ಶ. ೨೦೦೨ನೇ ಇಸ್ವಿಯಲ್ಲಿ ಪ್ರಾರಂಭಿಸಿರುವರು. ಕ್ರಿ. ಶ. ೨೦೦೫ರಲ್ಲಿ ಮುಖ್ಯಮಂತ್ರಿ ಧರ್ಮಸಿಂಗ ಅವರಿಂದ ಗುರುಲಿಂಗ ಧಾಮ ಕಟ್ಟಡ ಉದ್ಘಾಟನೆ ಮಾಡಿಸಿರು ವರು.

ಪೂಜ್ಯಶ್ರೀ ಚನ್ನವೀರ ಶಿವಾಚಾರ್ಯರದು ತಾಳತಪ್ಪದ, ತೂಕಬದ್ಧ ವಿವೇಚನಾಯುಕ್ತಮಾತುಗಾರಿಕೆ, ಇವರು ನುಡಿಯುವ ನುಡಿ, ಬಸವಣ್ಣನವರು ಹಾಡಿದಂತೆ, ಹಾಲಿನ ತೊರೆ, ಬೆಲ್ಲದ ಕೆಸರು, ಸಕ್ಕರೆಯ ಮಳಲಿನಂತಿದ್ದು, ತವರಾಜದ ನೊರೆ ತೊರೆಯಂತಿದೆ. ಮನದೆರೆದು ಮಾತನಾಡಿದ ಶ್ರೀಗಳವರ ನುಡಿಯನ್ನು ಕೇಳಿದವರಿಗೆ ಲಿಂಗದರ್ಶನ. ಅವರ ಅನುಭಾವದಾಳದಿಂದ ಹೊರಹೊಮ್ಮಿದ ಮಾತು ಜ್ಯೋತಿರ್ಲಿಂಗ.

ಹಾರಕೂಡ ಸಂಸ್ಥಾನ ಹಿರೇಮಠದ ಶಾಖಾ ಮಠಗಳು ಕರ್ನಾಟಕ, ಆಂಧ್ರ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ಸ್ಥಾಪನೆಗೊಂಡಿರುತ್ತವೆ. ಈ ಶಾಖಾ ಮಠಗಳ ಮೂಲಕ ಶ್ರೀ ಚನ್ನವೀರ ಶಿವಾಚಾರ್ಯರೂ ಕೂಡ ಮನುಕುಲದ ವಿಶ್ವಧರ್ಮ ದಂತಿರುವ ವೀರಶೈವ ಧರ್ಮದ ತತ್ವ ಸಿದ್ಧಾಂತಗಳನ್ನು ಸಕಲ ಜೀವಾತ್ಮರಿಗೆ ಲೇಸನೆ ಬಯಸಿದ ಬಸವಾದಿ ಶಿವಶರಣರ ಕಾಯಕ–ದಾಸೋಹ ಸಿದ್ಧಾಂತಗಳನ್ನು ಜನತೆಗೆ ತಿಳಿಯಪಡಿಸುತ್ತ ಜನರ ಬದುಕನ್ನು ಹಸನಗೊಳಿಸುತ್ತಲಿರುವರು.

ಹಾರಕೂಡ ಹಿರೇಮಠ ಸಂಸ್ಥಾನದ ಶಾಖೆಗಳಿಂತಿವೆ :

೧. ಹಾರಕೂಡ ಬೀದರ ಜಿಲ್ಲೆ ಬಸವ ಕಲ್ಯಾಣ ತಾಲೂಕ ಮೂಲಮಠ.
೨. ಗದಲೆಗಾಂವ ಬೀದರ ಜಿಲ್ಲೆ ಬಸವ ಕಲ್ಯಾಣ ತಾಲೂಕ ಶಾಖಾಮಠ
೩. ಸರಜೋಳಗಾ ಬೀದರ ಜಿಲ್ಲೆ ಬಸವ ಕಲ್ಯಾಣ ತಾಲೂಕ ಶಾಖಾಮಠ
೪. ಶೇಡೋಳ ಬೀದರ ಜಿಲ್ಲೆ ಹುಮ್ನಾಬಾದ ತಾಲೂಕ ಶಾಖಾಮಠ.
೫. ದುಬಲಗುಂಡಿ ಬೀದರ ಜಿಲ್ಲೆ ಹುಮ್ನಾಬಾದ ತಾಲೂಕ ಶಾಖಾಮಠ.
೬. ಕರ್ನಾಟಕದ ಚಿಂಚೋಳಿ ಗುಲಬರ್ಗಾ ಜಿಲ್ಲಾ ಚಿಂಚೋಳಿ ತಾಲೂಕ.
೭. ಮಹಾರಾಷ್ಟ್ರ ತುರೂರಿ ಉಸ್ಮಾನಾಬಾದ ಜಿಲ್ಲೆ ಉಮರಗಾ ತಾಲೂಕ.
೮. ಆಂಧ್ರ ಜೀವಣಗಿ ರಂಗಾರೆಡ್ಡಿ ತಾಂಡೂರ ತಾಲೂಕ.

ಶ್ರೀ ಚನ್ನಬಸವ ಶಿವಯೋಗಿಗಳವರ ಮಹಿಮೆಗೆ ಮಾರುಹೋದ ಭಕ್ತರು ಹಾಬಾಳ, ಮೀನಹಾಬಾಳ, ನೀಲಳ್ಳಿ, ಬಮ್ಮನಳ್ಳಿ, ಹೊಸಳ್ಳಿ, ಕುಡಹಳ್ಳಿ, ಪೆಂಚಿನ್‌ಪಳ್ಳಿ ಮೊದಲಾದ ಕಡೆಗಳಲ್ಲಿ ಶ್ರೀ ಚನ್ನಬಸವ ಶಿವಯೋಗಿಗಳ ಸ್ಮಾರಕವಾಗಿ ದೇವಾಲಯಗಳನ್ನು ಕಟ್ಟಿಸಿ ಪೂಜಿಸುತ್ತಿರುವುದನ್ನು ಕಾಣುತ್ತೇವೆ. ಇತ್ತೀಚೆಗೆ ನರೋಣಾದಲ್ಲಿ ಷ. ಬ್ರ. ಚನ್ನಬಸವ ಶಿವಯೋಗಿಗಳ ಹೆಸರಿನ ವರ್ತುಳ ಒಂದು ಚನ್ನವೀರ ಪೂಜ್ಯಶ್ರೀಗಳವರಿಂದ ಉದ್ಘಾಟನೆಯಾಗಿರುವದು.

ಇಂದು ಹಾರಕೂಡದ ಮಠವು ಭವ್ಯವಾಗಿದೆ. ಭಕ್ತರ ನೆಚ್ಚಿನ ಮಠವೆನಿಸಿದೆ, ನಿತ್ಯ ದಾಸೋಹ ನಡೆಯುತ್ತದೆ. ಸಾರ್ವಜನಿಕರ, ಶ್ರೀ ಸಾಮಾನ್ಯರ ಮಠವೂ ಎನಿಸಿದೆ. ಸಾಮಾಜಿಕ ಮುಖಂಡರು, ಸರಕಾರಿ ಅಧಿಕಾರಿಗಳು, ಸಮಾಜ ಸೇವಕರು, ರಾಜಕೀಯ ಧುರೀಣರು, ಸಾಹಿತಿ ಕಲಾಕಾರರು, ವಿದ್ವಾಂಸರು–ಶಾಸಕರು, ಸಂಸದರು, ಮಂತ್ರಿಮಾನ್ಯರು, ಸಾಧು–ಸಂತ, ಸ್ವಾಮಿ ಶಿವಯೋಗಿಗಳು ಇಲ್ಲಿ ಆಗಾಗ ಆಗಮಿಸಿ ಶ್ರೀ ಚನ್ನವೀರ ಶಿವಾಚಾರ್ಯರ ದರ್ಶನಾಶೀರ್ವಾದ ಪಡೆದು ಪುನೀತರಾಗುತ್ತಿರುವರು. ಮಠ ತಮ್ಮದೆಂದಂದು ಭಾವಿಸಿ ಅದರ ಪ್ರಗತಿಗಾಗಿ ಏನೆಲ್ಲ ಬಗೆಯ ಸಹಾಯ ಸಹಕಾರ ನೀಡುತ್ತಿರುವರು. ನಾಡಿನ ಹಲವಾರು ಮಠ–ಪೀಠಗಳ ಮಹಾಸ್ವಾಮಿಗಳೂ, ಜಗದ್ಗುರುಗಳೂ ಯಾವ ಭೇದ ಭಾವವಿಲ್ಲದೇ ಆಗಾಗ ಇಲ್ಲಿಗೆ ಆಗಮಿಸಿ ಭಕ್ತರಿಗೆ ದರ್ಶನಾಶೀರ್ವಾದ ನೀಡುತ್ತಲಿರುವರು. ಹುಬ್ಬಳ್ಳಿಯ ಮೂರುಸಾವಿರ ಮಠದ

ಜಗದ್ಗುರು ಡಾ. ಗಂಗಾಧರ ರಾಜಯೋಗಿಂದ್ರ ಮಹಾಸ್ವಾಮಿಗಳು. ಬಾಳೆಹೊನ್ನೂರು ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರಸೋಮೇಶ್ವರ ಶಿವಾಚಾರ್ಯರು ಡಂಬಳ ಗದುಗಿನ ಜಗದ್ಗುರು ತೋಂಟದಾರ್ಯ ಮಠದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳು ಪೂಜ್ಯ ಸಿದ್ಧೇಶ್ವರ ಸ್ವಾಮಿಗಳು ಮೊದಲಾದವರು ಈ ಮಠದ ಸದ್ಭಕ್ತರ ಆಮಂತ್ರಣದ ಮೇರೆಗೆ ದಯಮಾಡಿಸಿ ದರ್ಶನ ಆಶೀರ್ವಾದ ನೀಡುತ್ತಿರುವುದು ಈ ಮಠದ ಭಾಗ್ಯವೇ ಸರಿ.

ಪೂಜ್ಯ ಚನ್ನಬಸವ ಶಿವಯೋಗಿಗಳು ಚಿಂಚೋಳಿಯ ಕೋರೆಪ್ಪ ಏದಲ ಅವರ ಮನೆಯಲ್ಲಿ ಪ್ರಾಣ ಬಿಟ್ಟಾದ ಬಳಿಕ ಭಕ್ತರ ಆಗ್ರಹದ ಮೇರೆಗೆ ತಮ್ಮ ಮನೆಯನ್ನು ಶ್ರೀಗಳವರ ಸ್ಮಾರಕ ಸಮಾಧಿ ಕಟ್ಟಿಸಲು ಬಿಟ್ಟುಕೊಟ್ಟರು. ಈ ಪುಣ್ಯಸ್ಥಳದಲ್ಲಿ ದರ್ಶನಕ್ಕೆಂದು ಬರುವ ಯಾತ್ರಿಕರಿಗಾಗಿ ಅನುಕೂಲ ಮಾಡಿ ಕೊಡುವ ಸದುದ್ದೇಶ ಹಾಗೂ ಶ್ರೀಗಳು ನೀಡಿರುವ ಆದೇಶಗಳನ್ನು ಕಾರ್ಯರೂಪ ದಲ್ಲಿತರಲು ಭವ್ಯಮಂದಿರ ಒಂದನ್ನು ಕಟ್ಟಿಸಲು ಕಾರ್ಯೋನ್ಮುಖರಾಗಲು ಹಾಗೂ ಪ್ರತಿವರುಷ ಶಿವರಾತ್ರಿಯಾದ ಹನ್ನೊಂದನೆಯ ದಿವಸಕ್ಕೆ ಶ್ರೀ ಚನ್ನಬಸವ ಶಿವಯೋಗಿಗಳ ಜಾತ್ರೋತ್ಸವ ನೆರವೇರಿಸಲು 'ಕಾರ್ಯಕಾರಿ ಮಂಡಳಿ' ಒಂದನ್ನು ರಚಿಸಿಕೊಂಡಿದ್ದರು. ಅದಕ್ಕೆ ಶ್ರೀ ಕಾರ್ತಿಕೇಯ ಸ್ವಾಮಿಗಳು ಅಧ್ಯಕ್ಷರಾಗಿಯೂ, ರೇಶ್ಮಿ ಕಲ್ಲಪ್ಪ, ಚನ್ನಬಸಪ್ಪ ನಿರ್ಣೆ ಅವರು ಉಪಾಧ್ಯಕ್ಷರಾಗಿಯೂ, ಶ್ರೀ ಸಿದ್ಧರಾಮಪ್ಪ ಭಂಡಾರಿ, ಶ್ರೀ ಚಂದ್ರಪ್ಪ ಬಬಲಾದಿ ಕಾರ್ಯದರ್ಶಿಗಳಾಗಿಯೂ, ಶ್ರೀ ಕೋರೆಪ್ಪ ಏದಲ ಅವರು ಕೋಶಾಧ್ಯಕ್ಷರಾಗಿಯೂ ಹಾಗೂ ಶ್ರೀ ವೀರೇಂದ್ರ ಪಾಟೀಲರು ಕಾಯ್ದೆ ಸಲಹೆಗಾರರಾಗಿಯೂ ಇದ್ದುದನ್ನು ಉಲ್ಲೇಖಿಸಬಹುದಾಗಿದೆ.

ಇಂದು ಹಾರಕೂಡದ ಶ್ರೀ ಚನ್ನವೀರ ಶಿವಾಚಾರ್ಯರು ಅಧ್ಯಕ್ಷರಾಗಿದ್ದು ಶ್ರೀ ಬಸವರಾಜ ಗುರುಪಾದಪ್ಪ ಸುಂಕದ ಅವರು ಕಾರ್ಯದರ್ಶಿಗಳಾಗಿ ವಿಶಿಷ್ಟ ಸೇವೆ ಸಲ್ಲಿಸುತ್ತಲಿರುವರು. ಅಂದು ಚಿಂಚೋಳಿಯ ಹಾಗೂ ಸುತ್ತಮುತ್ತಲಿನ ನೂರಾರು ಭಕ್ತರ, ಗುರು–ಹಿರಿಯರ, ಸ್ವಾಮಿಗಳ ಸಮ್ಮುಖದಲ್ಲಿ ಕಾಶಿಯಿಂದ ತರಿಸಿದ ಲಿಂಗವನ್ನು ಗದ್ದುಗೆಯ ಮೇಲೆ ಇರಿಸಿ ಪ್ರಾಣಬಿಟ್ಟ ಸ್ಥಳದಲ್ಲಿ ಸಾಂಕೇತಿಕವಾಗಿ ಸಮಾಧಿ ಕಟ್ಟಿಸಿರುವರು. ಈ ಭಕ್ತರ ಇಚ್ಛೆ ಕೈಗೂಡುವುದಕ್ಕೆ ಹತ್ತಾರು ವರುಷಗಳೇ ಗತಿಸಿ ಹೋದವು. ಇಂದಿನ ಕಾರ್ಯಕಾರಿ ಮಂಡಳಿಯ

ಸದಸ್ಯರು ಛಲ ತೊಟ್ಟರು. ಶ್ರೀ ಕಲ್ಲಪ್ಪ ಹೊಗ್ಗಾಪುರೆ ಸಾಹೇಬರಂತೂ ತನು ಮನ ಧನದಿಂದ ನಿಸ್ಪೃಹ ಸೇವೆ ಸಲ್ಲಿಸುತ್ತಲಿರುವ ಪ್ರತಿಫಲವಾಗಿ 'ಶ್ರೀ ಚನ್ನವೀರ ಶಿವಾಚಾರ್ಯರ ಕೃಪಾಶೀರ್ವಾದದಿಂದ ಅಗಸ್ಟ ೧೯೬೭ರಲ್ಲಿ ಇಲ್ಲಿ ಭವ್ಯ ಮಂದಿರವೊಂದರ ಕಟ್ಟಡ ಜನೋಪಯೋಗಿ ಕಾರ್ಯಕ್ಕಾಗಿ ಉದ್ಘಾಟಿಸಲ್ಪಟ್ಟಿದೆ.

ಪ್ರತಿ ಹುಣ್ಣಿಮೆಯಂದು ಭಕ್ತರ ಇಷ್ಟಾರ್ಥಗಳನ್ನು ಪೂರೈಸಿಕೊಡಲೆಂದು ಶ್ರೀ ಚನ್ನವೀರ ಶಿವಾಚಾರ್ಯರು ಇಲ್ಲಿಗೆ ಆಗಮಿಸಿ ದರ್ಶನಾಶೀರ್ವಾದ ನೀಡುತ್ತಿರುವರು. ಉಪನ್ಯಾಸ ನಡೆಸುತ್ತಲಿರುವರು ದರ್ಶನಕ್ಕೆ ಬರುವ ಭಕ್ತರಿಗೆ ಉಚಿತ ಪ್ರಸಾದದ ವ್ಯವಸ್ಥೆಯನ್ನೂ ಮಾಡುತ್ತಿರುವುದನ್ನು ದಿ. ೬-೬-೨೦೦೧ ರಂದು ಪ್ರತ್ಯಕ್ಷ ಕಂಡ ನಾವು (ಸ್ನೇಹಿತರೊಂದಿಗೆ ಹೋದಾಗ) ಅಭಿಮಾನ ಪಟ್ಟುಕೊಂಡಿದ್ದೇವೆ. ಮದುವೆ ಮೊದಲಾದ ಮಂಗಳ ಕಾರ್ಯಗಳಿಗೆ ಈ ಕಟ್ಟಡವನ್ನು ಸಾರ್ವಜನಿಕರು ಉಪಯೋಗಿಸುತ್ತಲಿರುವರು. ಭಕ್ತಾದಿಗಳು ಕೊಡುತ್ತಲಿರುವ ಕಾಣಿಕೆಯನ್ನು ಸ್ವಾಮಿಗಳು ತೆಗೆದುಕೊಳ್ಳದೆ ಇಲ್ಲಿಯ ಮಠದ ಅಭಿವೃದ್ಧಿಗಾಗಿ ಬಳಸಿಕೊಳ್ಳಲು ಸಮಿತಿಯವರಿಗೆ ಬಿಟ್ಟು ಕೊಡುತ್ತ ಬಂದಿರುವರು. ಸಮಿತಿಯವರು ಹಾರಕೂಡ ಚನ್ನಬಸವೇಶ್ವರ ಶಿಕ್ಷಣ ಸಂಸ್ಥೆಯೊಂದನ್ನು ಇಲ್ಲಿ ತೆರೆದು ಚಂದಾಪುರದಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವ ಏರ್ಪಾಟು ಮಾಡಿರುವರು. ಯಾತ್ರಾರ್ಥಿಗಳಿಗಾಗಿ ನಿತ್ಯವೂ ದಾಸೋಹ ನಡೆಸುತ್ತ ಬಂದಿರುವರು. ಈ ರೀತಿಯ ಉಚಿತ ಪ್ರಸಾದದ ವ್ಯವಸ್ಥೆ ಮಾಡುವ ಕೆಲಸವನ್ನು ಸಂಗಯ್ಯ ಹಿರೇಮಠ ಅವರು ನೋಡಿಕೊಳ್ಳುತ್ತಲಿದ್ದಾರೆ.

ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳವರ ಮಠಕ್ಕೆ ಸಧ್ಯದ ಪೀಠಾಧಿಕಾರಿಗಳಾಗಿರುವ ಷ. ಬ್ರ. ಶ್ರೀ ಚನ್ನವೀರ ಶಿವಾಚಾರ್ಯರ ಆಮಂತ್ರಣದ ಮೇರೆಗೆ ಆಗಮಿಸಿ ದರ್ಶನಾಶೀರ್ವಾದ ಪಡೆದಿರುವ ರಾಜಕೀಯ ಮುಖಂಡರು, ಸಾಹಿತಿ-ಸಂಗೀತ ಕಲಾಕಾರರು, ಕುಸ್ತಿಪಟುಗಳು, ಗುರುವಿರಕ್ತಪೀಠಗಳ ಮಠಾಧೀಶರಿಗೆ ಲೆಕ್ಕವಿಲ್ಲ. ನಾನೂ ಇಂಥವರಲ್ಲಿ ಒಬ್ಬ. ರಾಜ್ಯೋತ್ಸವ ಪ್ರಶಸ್ತಿ ದೊರೆತಾಗ ನನ್ನನ್ನು ನರೋಣಾಕ್ಕೆ ಆಮಂತ್ರಿಸಿ ಶ್ರೀ ಸೂರ್ಯಕಾಂತ ಸಂಗೊಳಗಿ ಅವರ ಮೂಲಕ ಬಂಗಾರದ ಉಂಗುರ ಇಟ್ಟು ಸನ್ಮಾನಿಸಿದುದನ್ನು ನನ್ನ ಜೀವಮಾನದಲ್ಲಿ ಮರೆಯಲಾಗದ ಮಾತು. ಅವರ ಕೃಪಾಶೀರ್ವಾದ ಎಂದೆಂದಿಗೂ ನನಗಿರಲೆಂದು ಅನನ್ಯ ಭಾವದಿಂದ ಪ್ರಾರ್ಥಿಸುವೆ.

ಶ್ರೀ ಚನ್ನಬಸವ ಶಿವಯೋಗಿಗಳ ಕೆಲ ಪವಾಡಗಳಿವು

೧. ನೆಲಕ್ಕೆ ಬಿದ್ದ ಕುದುರೆಗೆ ಮಂತ್ರೋಪದೇಶ ನೀಡಿದುದು :

'ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಕೂಡಲ ಸಂಗನ ಶರಣರೆ ಕುಲಜರು' ಎಂದು ನುಡಿದ ಬಸವಣ್ಣನವರ ವಾಣಿಯಂತೆ ಶ್ರೀ ಚನ್ನಬಸವ ಶಿವಯೋಗಿಗಳು ಹೊಟ್ಟೆನೋವು ತಾಳಲಾರದೆ ನೆಲಕ್ಕೆ ಬಿದ್ದಕುದುರೆಯ ನೋವನ್ನು ಮಂತ್ರೋಪದೇಶದಿಂದ ಗುಣಪಡಿಸಿರುವುದನ್ನು ಜನ ಈಗಲೂ ಕಥೆ ಮಾಡಿ ಹೇಳುತ್ತಿರುತ್ತಾರೆ.

ಒಮ್ಮೆ ಜಂಬಗಿ ಗ್ರಾಮದ ಶ್ರೀ ಗುರುಸಿದ್ಧಯ್ಯ ಮಠಪತಿ ಎಂಬುವರು ಪುರಾಣ ಹಚ್ಚಿದ್ದರು. ಆಗ ಸಮಯಾಚಾರ ಮೂರ್ತಿಗಳನ್ನಾಗಿ ಹಾರಕೂಡ ಮಠದ ಶ್ರೀ ಷ. ಬ್ರ. ಚನ್ನಬಸವ ಮಹಾಸ್ವಾಮಿಗಳನ್ನು ತಮ್ಮ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದರು. ಶ್ರೀಗಳವರ ನೇತೃತ್ವದಲ್ಲಿನಡೆಯಲಿರುವ ಪುರಾಣ ಸಮಾಪ್ತಿಕಾರ್ಯಕ್ರಮಕ್ಕೆ ಸುಲೇಪೇಟದ ಶ್ರೀ ಖಟ್ವಾಂಗೇಶ್ವರ ಮಠದ ಶ್ರೀ ಚನ್ನಬಸವ ಸ್ವಾಮಿಗಳು ಮತ್ತುಸುತ್ತಮುತ್ತಲಿನ ಜನರು ಆಗಮಿಸಿದ್ದರು. ಕುದುರೆಯ ಮೇಲೆ ಬಂದಿಳಿದ ಸುಲೇಪೇಟ ಸ್ವಾಮಿಗಳ ಕುದುರೆಯು ಬಳಲುತ್ತ ಒಮ್ಮೆಲೆ ನೆಲಕ್ಕೆ ಬಿದ್ದುಬಿಟ್ಟಿತು. ಎಲ್ಲರೂ ಚಿಂತಾಕ್ರಾಂತರಾದರು.

ಕುದುರೆಯ ಅವಸ್ಥೆ ನೋಡಲೆಂದು ಶ್ರೀ ಚನ್ನಬಸವ ಶಿವಯೋಗಿಗಳು ಅಲ್ಲಿಯೇ ಬಂದರು. 'ಬುದ್ಧಿ! ಇದಕ್ಕೆ ತಾವು ಏನಾದರೂ ಉಪದೇಶ ಮಾಡಿರಿ' ಎಂದು ಹೇಳಿದ ಸುಲೇಪೇಟ ಸ್ವಾಮಿಗಳವರ ಮಾತು ಕೇಳಿದ ಹಾರಕೂಡದ ಶ್ರೀ ಚನ್ನಬಸವ ಮಹಾಸ್ವಾಮಿಗಳು ಯೋಚಿಸುತ್ತ ಕುದುರೆಯ ಕಿವಿಯಲ್ಲಿ ಏನೇನೋ ಊದಿದರು. ತತ್‌ಕ್ಷಣ ಬಿದ್ದ ಆ ಕುದುರೆಯು ಎಚ್ಚತ್ತಿತು. ಮುಂದೆ ಇಟ್ಟಿದ್ದ ಕಡಲೆ ಮತ್ತು ಹುಲ್ಲು ತಿನ್ನತೊಡಗಿತು. ಅಲ್ಲಿ ಸೇರಿದ ಜನರಿಗೆಲ್ಲ ಸಂತೋಷವೇ ಸಂತೋಷ. ಶ್ರೀಗಳವರ ಮಹಿಮಾ ಶಕ್ತಿಯನ್ನು ಕಣ್ಣಾರೆ ಕಂಡ ಭಕ್ತಜನ ಕುಲಕೋಟಿ ಸ್ವಾಮಿಗಳವರ ಹೆಸರಿನಲ್ಲಿ ಜಯಘೋಷ ಹೊಡೆಯತೊಡಗಿದರು.

೨. ಸತ್ತುಹೋದ ಜಿತಾಪೀರನೊಂದಿಗೆ ಮಾತನಾಡಿದುದು :

ಶ್ರೀ ಚನ್ನಬಸವ ಶಿವಯೋಗಿಗಳು ಜಂಬಗಿಯಲ್ಲಿ ಪುರಾಣ ಸಮಾಪ್ತಿ ಕಾರ್ಯಕ್ರಮವನ್ನು ಮುಗಿಸಿಕೊಂಡು ಶಿಷ್ಯರೊಂದಿಗೆ ಏಕಾಂಬ್ರೇಶ್ವರ ಕ್ಷೇತ್ರ ನೋಡಿಕೊಂಡು ಬರಲು ಹೋದರು. ಈ ಕ್ಷೇತ್ರದಲ್ಲಿ ಕೆಲವು ಕಾಲ ಇದ್ದರು. ಅಲ್ಲಿ ಕಾಯಿಲೆಯಿಂದ ಬಳಲತೊಡಗಿದರು. ಈ ವಿಷಯ ತಿಳಿದ ಅವರ ನೆಚ್ಚಿನ ಶಿಷ್ಯರಾದ ಶ್ರೀ ಕಲ್ಲಪ್ಪ ರೇಶ್ಮಿ ಅವರು ಈ ಕ್ಷೇತ್ರಕ್ಕೆ ಹೋಗಿ ಶ್ರೀಗಳವರನ್ನು ತಮ್ಮ ಮನೆಗೆ ಕರೆದುಕೊಂಡು ಬಂದರು. ವೈದ್ಯರಿಗೆ ತೋರಿಸಿದರು. ವೈದ್ಯರು ಶುದ್ಧ ಹವೆಯಲ್ಲಿ ಇರಬೇಕು ಎಂದು ಸಲಹೆ

ಮಾಡಿದರು. ಆ ಪ್ರಕಾರ ಶ್ರೀಗಳವರನ್ನು ನಾಲ್ಕಾರು ಫರ್ಲಾಂಗ ದೂರದಲ್ಲಿದ್ದ ಶ್ರೀ ಶರಣ ಬಸವೇಶ್ವರ ದೇವಾಲಯದಲ್ಲಿ ಇರುವ ವ್ಯವಸ್ಥೆ ಮಾಡಿದರು. ಹಲವಾರು ಜನಸೇವಕರ ಜೊತೆಗೆ ಶ್ರೀ ಕಲ್ಲಪ್ಪ ರೇಶ್ಮಿಯವರೂ ಕೂಡ ಅಲ್ಲಿಯೇ ಇರತೊಡಗಿದರು. ಒಂದು ರಾತ್ರಿ ಶ್ರೀ ಚನ್ನಬಸವ ಶಿವಯೋಗಿಗಳವರು ರಾತ್ರಿ ಎರಡು ಗಂಟೆಯ ಸುಮಾರಿಗೆ ತಾವು ಮಲಗಿದ್ದ ಕೋಣೆಯಿಂದ ಸ್ವಲ್ಪ ದೂರ ಹೋಗಿ ಯಾರದೊ ಜೊತೆಗೆ ಮಾತನಾಡುತ್ತಿದ್ದುದನ್ನು ಶ್ರೀ ಕಲ್ಲಪ್ಪ ರೇಶ್ಮಿ ಮೊದಲಾದವರು ಕೇಳಿದರು. ಮರುದಿನ ರಾತ್ರಿ ಅಷ್ಟು ಹೊತ್ತಿನಲ್ಲಿ ಯಾರ ಜೊತೆ ಮಾತನಾಡುತ್ತಿದ್ದಿರಿ ? ಎಂದು ಶ್ರೀಗಳನ್ನು ವಿಚಾರಿಸಿದರು. ಆಗ ಅವರು ಈ ಗ್ರಾಮದ ಪೈಗಂಬರವಾಸಿ ಜಿತಾಪೀರ (ಚೇತಾವಲಿ) ಸಂತರ ಜೊತೆಗೆ ಮಾತನಾಡುತ್ತಿದ್ದೆ ಎಂದು ಹೇಳಿದರು. ಎಲ್ಲರಿಗೂ ಆಶ್ಚರ್ಯವಾಯಿತು. ಕೆಲ ದಿನಗಳು ಗತಿಸಿದ ತರುವಾಯ ಶ್ರೀ ಚನ್ನಬಸವರ ಕಾಯಿಲೆ ಗಣಮುಖವಾಗುತ್ತ ಬಂದಿತು. ಪೂರ್ಣ ಗುಣವಾದ ಮೇಲೆ ಶ್ರೀ ಚನ್ನಬಸವ ಶಿವಯೋಗಿಗಳು ತಮ್ಮ ಹಾರಕೂಡ ಮಠಕ್ಕೆ ಪ್ರಯಾಣ ಬೆಳೆಸಿದರು.

೩. ಬತ್ತಿದ ಬಾವಿಗೆ ನೀರು ಬರಿಸಿದುದು :

ಅದು ಬೇಸಿಗೆಯ ಕಾಲ. ನೀರಿನ ಹಾಹಾಕಾರ. ಕುಡಿಯಲೂ ಕೂಡ ನೀರಿಲ್ಲದಾಗಿತ್ತು. ಬಿಸಿಲಿನ ತಾಪ ದಿನೇ ದಿನೇ ಹೆಚ್ಚಾಗತೊಡಗಿತ್ತು. ಹೀಗೆ ಹಾರಕೂಡ ಗ್ರಾಮದ ಜನತೆ ನೀರು ನೀರು ಎಂದು ಹಲುಬತೊಡಗಿದರು. ಶ್ರೀ ಚನ್ನಬಸವ ಶಿವಯೋಗಿಗಳವರ ಪೂಜೆಗೂ ನೀರನ್ನು ದೊರಕದಂತಾಯಿತು. ಆಗ ಊರ ಭಕ್ತ ಜನರೆಲ್ಲರೂ ಕೂಡಿಕೊಂಡು ಶ್ರೀಗಳವರನ್ನು ಒಂದು ತಿಂಗಳ ಮಟ್ಟಿಗಾದರೂ ಬೇರೆ ಗ್ರಾಮದಲ್ಲಿ ಇರಿಸಬೇಕೆಂದು ಯೋಚಿಸತೊಡಗಿದರು. ಇದನ್ನು ತಿಳಿದ ಶ್ರೀಗಳವರು ಒಂದು ದಿನ ಮಠದ ಹೊರಭಾಗದಲ್ಲಿರುವ ಭಾವಿಯನ್ನು ಹೋಗಿ ನೋಡಿದರು. ಅಲ್ಲಿ ನೀರು ಇದ್ದಿರಲಿಲ್ಲ. ಕಲ್ಲು-ಮುಳ್ಳುಗಳಿಂದ ಬಾವಿ ಮುಚ್ಚಿಹೋಗಿತ್ತು. ಅದನ್ನು ಪ್ರತ್ಯಕ್ಷ ಕಣ್ಣಾರೆ ಕಂಡ ಶ್ರೀಗಳವರು ಸ್ವತಃ ಭಾವಿಗೆ ಇಳಿದರು. ಹಸ್ತಸ್ಪರ್ಶ ಮಾಡಿದರು. ಅಲ್ಲಿದ್ದ ಜನರಿಗೆ ಈ ಭಾವಿಯನ್ನು ಸ್ವಚ್ಛಗೊಳಿಸಲು ಹೇಳಿದರು. ಮೂಲೆಯಲ್ಲಿ ಕೆದರಿರಿ ಎಂದೂ ಹೇಳಿದರು. ಆಗ ಅವರು ಸ್ಪರ್ಶ ಮಾಡಿ ಬಂದಿದ್ದ ಆ ಮೂಲೆಯಿಂದ ನೀರಿನ ಸೆಲೆ ಚಿಮ್ಮಿ ಬಂದಿತು. ಕ್ಷಣಾರ್ಧದಲ್ಲಿ ಬಾವಿಯಲ್ಲಿ ನೀರೇ ನೀರಾಯ್ತು. ಊರ ಜನರೆಲ್ಲರೂ ಬದುಕಿದೆವು. ಶ್ರೀಗಳವರ ಕೃಪೆಯಿಂದ ಎಂದು ಅವರನ್ನು ಹಾಡಿ ಹೊಗಳತೊಡಗಿದರು. ಊರ ಜನರೆಲ್ಲರೂ ಬಳಕೆಗೆ ಈ ಬಾವಿಯ ನೀರು ಉಪಯೋಗಿಸತೊಡಗಿದರು. ಶ್ರೀಗಳವರ ಪೂಜೆಗೂ ಮಠಕ್ಕೂ ನೀರಿನ ಆಶ್ರಯವಾಯಿತು. ಜನರಿಗೆ ಶ್ರೀಗಳವರಲ್ಲಿ ಅಧಿಕ ನಿಷ್ಠೆ ತಾಳುವಂತಾಯಿತು.

೪. ಸಾಕ್ಷಾತ್ ಮುಕ್ಕಣ್ಣನ ಪೂಜೆಯಂತೆ :

ಶ್ರೀ ಚನ್ನಬಸವ ಶಿವಯೋಗಿಗಳವರ ಮಹಿಮೆ ಎಲ್ಲ ಕಡೆಗೂ ಪಸರಿಸತೊಡಗಿತು. ಜನತೆ, ಒಕ್ಕಲಿಗರೇ ಇರಲಿ, ಉದ್ಯೋಗಿಗಳೇ ಇರಲಿ, ತಾವು ದುಡಿದು ತಂದ ಗಳಿಕೆಯಲ್ಲಿ ಕೆಲವೊಂದನ್ನು ಮಠಕ್ಕೆ ಬಂದು ಶ್ರೀಗಳವರಿಗೆ ಸಮರ್ಪಿಸತೊಡಗಿದರು. ಇದರಿಂದ ಮಠದಲ್ಲಿ ನಿತ್ಯವೂ ದಾಸೋಹ ನಡೆಸಲು ಅನುಕೂಲವಾಯಿತು. ಶಿವಯೋಗಿಗಳ ಸ್ಮರಣೆ, ಧ್ಯಾನ, ದರ್ಶನಾಶೀರ್ವಾದಗಳಿಂದ ಭಕ್ತಜನರು ಸಂತುಷ್ಟರಾಗತೊಡಗಿದರು. ಇಟ್ಟ ಗುರಿ ಮುಟ್ಟತೊಡಗಿದರು. ಶ್ರೀ ಚನ್ನಬಸವ ಶಿವಯೋಗಿಗಳು ತಮ್ಮ ಪಾಲಿನ ದೇವರೆಂದು ಬಗೆಯತೊಡಗಿದರು. ಭಕ್ತರಿಗೆ ಗುರು ಕರುಣಿಸಿ ಅವರಿಗೆ ಇಷ್ಟಲಿಂಗಧಾರಣೆ ಮಾಡತೊಡಗಿದರು. ಇಷ್ಟಲಿಂಗ ಪೂಜೆಯ ವಿಧಿ–ವಿಧಾನಗಳನ್ನು ಅವರಿಗೆ ತಿಳಿಯುವಂತೆ ಹೇಳತೊಡಗಿದರು. ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡುತ್ತಿದ್ದರು. ಒಮ್ಮೆ 'ದೀಕ್ಷೆ' ಎಂದರೆ ಏನೆಂದು ಕೇಳಿದ ಪ್ರಶ್ನೆಗೆ ಶ್ರೀಗಳು 'ದೀಕ್ಷೆ' ಎಂದರೆ ವ್ರತ, ಹಿಡಿದ ವ್ರತವನ್ನು ಬಿಡದೆ ನಡೆಸುವ ಒಂದು ಸಂಕಲ್ಪ, ಸಂಸ್ಕಾರ ಎಂಬ ಸಾಮಾನ್ಯ ಅರ್ಥ ಹೇಳಿ ಮಣ್ಣಿಗೆ ಸಂಸ್ಕಾರ ಕೊಟ್ಟಾಗ ಮಡಿಕೆಯಾಗುವಂತೆ ಮನುಷ್ಯ ಶರೀರಕ್ಕೆ ಇಷ್ಟಲಿಂಗ ದೀಕ್ಷೆ ಕೊಟ್ಟಾಗ ಅದು ಸಂಸ್ಕಾರಗೊಂಡು ಸುಸಂಸ್ಕೃತವೆನಿಸುತ್ತದೆಯೆಂದು ಹೇಳಿದರು. ಮುಂದುವರಿದು ದೀಕ್ಷೆ ಎಂದರೆ ಅನುಗ್ರಹ, ದೀಕ್ಷೆಯಿಂದ ಭವಿ ಭಕ್ತನಾಗುತ್ತಾನೆ. ಆತನ ಮಾಂಸಪಿಂಡ ಮಂತ್ರಪಿಂಡವಾಗುತ್ತದೆ. ಹೀಗೆ ಅಂಗ ಲಿಂಗವಾಗುವ ಕ್ರಿಯೆಯೇ ಇಷ್ಟಲಿಂಗ ದೀಕ್ಷೆಯ ಗುಟ್ಟಾಗಿರುವುದೆಂದೂ ತಿಳಿಸಿಕೊಟ್ಟರು. ಗುರುವಾದವನು ಇಷ್ಟಲಿಂಗ ದೀಕ್ಷೆಯಿಂದ ಶಿಷ್ಯನ ಮಲತ್ರಯಗಳನ್ನು ಕಳೆದು ಶಿವಜ್ಞಾನವನ್ನುಂಟು ಮಾಡುವುದೇ ಇದರ ಉದ್ದೇಶ ವೆಂದೂ ಮಲತ್ರಯಗಳನ್ನು ಹೀಗೆ ಇಷ್ಟಲಿಂಗ ಧಾರಣೆಯಿಂದ ದೂರ ಮಾಡುವ ಸಂಸ್ಕಾರವೇ ದೀಕ್ಷೆಯೆನಿಸುತ್ತದೆ ಎಂದು ಎಳೆ ಎಳೆಯಾಗಿ ಬಿಡಿಸಿ ಹೇಳಿದುದನ್ನು ನನಗೆ ಚಿತಾಪುರಿಯಲ್ಲಿ ಶ್ರೀ ಕಲ್ಲಪ್ಪ ರೇಶ್ಮಿಯವರು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಇಷ್ಟಲಿಂಗ ದೀಕ್ಷೆ ನಾನು ಪುನರ್ಜನ್ಮ ತಾಳಿದೆನೆಂದು ಹೇಳಿದ ಅವರ ಮಾತನ್ನೂ ಇಲ್ಲಿ ಉಲ್ಲೇಖಿಸಬಹುದಾಗಿದೆ.

೫. ಬಾಲಗಂಗಾಧರರ ಅವತಾರ :

ಗುರುಸೇವೆಯಲ್ಲಿ ತನುವನ್ನು ಸವೆಸುವ ತ್ರಿಕರಣ ಪೂರ್ವಕವಾಗಿ ಗುರುವಿನಲ್ಲಿ ಕೈಂಕರ್ಯ ನಿರತರಾದವರು ಪರವಸ್ತುವಿನಲ್ಲಿ ಭಾವಪರವಶರಾಗು ವರು. ತೋಂಟದ ಸಿದ್ಧಲಿಂಗೇಶ್ವರರು, ಬೀಳೂರ ಗುರುಬಸವ ಸ್ವಾಮಿಗಳು, ಅಥಣಿಯ ಮುರುಘೇಂದ್ರ ಶಿವಯೋಗಿಗಳು, ಮುರಗೋಡದ ಮಹಾಂತ ಶಿವಯೋಗಿಗಳು ಮಹಾಮಹಿಮಾ ಪುರುಷರಲ್ಲಿ ಅಗ್ರಗಣ್ಯರೆನಿಸಿರುವರು. ಇಂಥವರ ಸಾಲಿನಲ್ಲಿ ಹಾರಕೂಡ ಬೃಹನ್ಮಠದ ಶ್ರೀ

ಚನ್ನಬಸವ ಮಹಾಸ್ವಾಮಿಗಳೂ ಒಬ್ಬರೆಂದು ಹೇಳಬಹುದು. ಶ್ರೀ ಚನ್ನಬಸವರು ಒಮ್ಮೆ ಮಗ್ಗಿಗ್ರಾಮಕ್ಕೆ ಹೋಗಿದ್ದರು. ಅಲ್ಲಿದ್ದಾಗ ಹೊಸಳ್ಳಿಯ ಭಕ್ತರೊಬ್ಬರು ಶ್ರಾವಣ ಮಾಸದ ಕಾರ್ಯಕ್ರಮಗಳಿಗಾಗಿ ಆಮಂತ್ರಣ ನೀಡಿ ತಮ್ಮ ಜೊತೆಗೆ ಶ್ರೀಗಳವರನ್ನು ಕರೆದುಕೊಂಡು ಹೋದರು. ಅಲ್ಲಿ ಹೋದಾಗ ಒಂದು ದಿನ ಎಂದಿನಂತೆ ಪ್ರಾತಃಕಾಲ ಬಹಿರ್ದೆಸೆಗೆ ಹೋಗಿ, ಕ್ರಿಯಾದಿಗಳನ್ನು ಮುಗಿಸಿದರು. ಹುತ್ತದ ಬಳಿಯಲ್ಲಿ ಹೋಗಿ ಕುಳಿತುಕೊಂಡರು. ಆಗ ಆ ಹುತ್ತಿನಲ್ಲಿದ್ದ ಸರ್ಪವೊಂದು ಹೊರಗೆ ಬಂದಿತು. ಶ್ರೀಗಳವರ ತೊಡೆಯ ಮೇಲೆ ಕುಳಿತಿತು. ಶ್ರೀಗಳು ಅದರ ಜೊತೆಗೆ ಆಟವಾಡುತ್ತ ಕುಳಿತುಕೊಂಡರು. ಶಿವಪೂಜೆಗೆ ಸಮಯವಾಯ್ತೆಂದು ಶಿಷ್ಯ ಬಂದು ತಾತಾ ಎಂದು ಕೂಗಿಕೊಂಡಾಗಲೇ ಸರ್ಪಕ್ಕೆ ಹುತ್ತದಲ್ಲಿ ಹೋಗಲು ಸಂಜ್ಞೆ ಮಾಡಿ, ಭಕ್ತರ ಮನೆಗೆ ಬಂದರಂತೆ. ಅಲ್ಲಿ ಆಟವಾಡುತ್ತಿದ್ದ ದೃಶ್ಯವನ್ನು ಕಣ್ಣಾರೆ ಕಂಡ ಶಿಷ್ಯ ಕಾರ್ತಿಕೇಯರು ಎಲ್ಲರಿಗೂ ಹೇಳಿದಾಗ ಆಶ್ಚರ್ಯವೇ ಆಶ್ಚರ್ಯ. ಈಗಲೂ ಭಕ್ತರು ಆ ಹುತ್ತಿನ ಸ್ಥಳದಲ್ಲಿ ಗದ್ದುಗೆ ಕಟ್ಟಿಸಿ ಪೂಜಿಸುತ್ತಲಿರುವರು. ಇದಾದ ಕೆಲವು ದಿನಗಳ ನಂತರ ಕಾರ್ತಿಕೇಶ್ವರನೊಂದಿಗೆ ಅಡ್ಡಾಡುತ್ತ ನಿರ್ಜನ ಪ್ರದೇಶಕ್ಕೆ ಹೋದರು. ಅಲ್ಲಿ ಆಟವಾಡುತ್ತಿದ್ದಾಗ ಶ್ರೀಗಳು ಬಾಲಗಂಗಾಧರರ ಅವತಾರವನ್ನೇ ತಾಳಿದರು. ಇದನ್ನು ನೋಡಿದ ಕಾರ್ತಿಕೇಶ್ವರರು ಊರಿಗೆ ಬಂದು ಎಲ್ಲರಿಗೂ ಹೇಳಿದರು. ಶ್ರೀಗಳಿಗೂ ಹೇಳಿದರು. ಈಗ ಅಲ್ಲಿ ಶಿವನ ಗುಡಿ ಒಂದನ್ನು ಕಟ್ಟಿಸಿರುವರು.

೬. ಸರ್ಪ ತೋರಿ ಮಾಯವಾದದ್ದು :

ಶ್ರೀ ಚನ್ನಬಸವ ಶಿವಯೋಗಿಗಳು ಪ್ರಾತಃಕಾಲ ಗ್ರಾಮದ ಶ್ರೀ ಶರಣಪ್ಪ ಗೌಡರ ಮನೆಗೆ ಬಿನ್ನಕ್ಕೆ ಹೋಗಿದ್ದರು. ಅಲ್ಲಿಯ ಕಾರ್ಯಕ್ರಮಗಳು ಮುಗಿದ ಮೇಲೆ ಸಹಜ ಮಾತನಾಡುತ್ತ ಕುಳಿತಿದ್ದರು. ಆಗ ಮನೆಯ ಯಜಮಾನಿ 'ತಾತಾ, ತಾವು ಎಲ್ಲಾ ಕಡೆಗೆ ಅನೇಕ ಮಹತ್ವಗಳನ್ನು (ಪವಾಡ) ಮಾಡಿರುವಿರಿ. ನಮ್ಮಲ್ಲಿಯೂ ಅಂಥ ಮಹಿಮೆ ಏಕೆ ತೋರಿಸಬಾರದು?' ಎಂದು ಕೇಳಿದರು. 'ತಾಯಿ ಅವುಗಳನ್ನು ಮಾಡಿ ತೋರಿಸಲುಬಾರದು. ಅಘಟಿತ ಘಟನೆಗಳು' ಎಂದು ಹೇಳುವಷ್ಟರಲ್ಲಿ ಅಲ್ಲಿಯೆ ಮೂಲೆಯಲ್ಲಿ ಒಂದು ಸರ್ಪ ಹೊರಟಿರುವುದನ್ನು ಅಲ್ಲಿ ಕುಳಿತವರೆಲ್ಲರೂ ಕಣ್ಣಾರೆ ಕಂಡು ಅದನ್ನು ಹೊಡೆಯಬೇಕೆಂದು ಸಿದ್ಧರಾದರು. ಆಗ ಶ್ರೀ ಚನ್ನಬಸವ ಶಿವಯೋಗಿಗಳು 'ತಮ್ಮಗಳಿರಾ! ಅದನ್ನು ಹೊಡೆಯಬೇಡಿರಿ. ಅದರ ಮೇಲೆ ಒಂದು ಕಂಬಳಿ ಹೊದಿಸಿರಿ, ಮುದ್ದಿ ಮಾಡಿ ಹೊರಗೆ ಎಸೆಯಿರಿ' ಎಂದರು. ಆಗ ಒಬ್ಬನು ಧೈರ್ಯದಿಂದ ಕಂಬಳಿ ಹೊದಿಸಿ, ಮುದ್ದಿ ಮಾಡಿ ಹೊರಗೆ ಎಸೆಯಲೆಂದು ಹೋದಾಗ ಅಲ್ಲಿ ಏನೂ ಇದ್ದಿರಲಿಲ್ಲ, ಇದು ಶ್ರೀ ಚನ್ನಬಸವ ಶಿವಯೋಗಿಗಳ ಪವಾಡ ಮಹಿಮೆ ಎಂದು ಕೊಂಡಾಡಿದರು.

೭. ಸಿದ್ಧಪ್ಪಗೌಡರನ್ನು ಬದುಕಿಸಿದುದು :

ಶ್ರೀ ಚನ್ನಬಸವ ಶಿವಯೋಗಿಗಳು ಯಾವಾಗ ಗ್ರಾಮಕ್ಕೆ ಬಂದಿದ್ದರೊ ಇದನ್ನು ತಿಳಿದ ಹಲಕವಡಿಯ ಸಿದ್ಧಪ್ಪಗೌಡರು ತಮ್ಮ ಮನೆಗೆ ಕರೆದುಕೊಂಡು ಹೋಗಬೇಕೆಂದರು. ಕುದುರೆ ಹತ್ತಿ ಕರೆತರಲು ಹೋದರು. ತಿರುಗಿ ಅವರನ್ನು ಕರೆದುಕೊಂಡು ರಾತ್ರಿ ಹೊತ್ತಿನಲ್ಲಿಯೇ ಅಶ್ವಾರೂಢರಾಗಿ ಹೊರಟರು. ಮಧ್ಯರಾತ್ರಿಯಾಗಿತ್ತು ಸಿದ್ಧಪ್ಪಗೌಡರು ಕುದುರೆ ಮೇಲಿಂದ ಇಳಿಯುವಾಗ ಅವರ ಕಾಲಿಗೆ ಸರ್ಪವೊಂದು ಕಚ್ಚಿ ನೋವು ಅನುಭವಿಸತೊಡಗಿದರು. ಮುಂದೆ ಅಶ್ವಾರೂಢರಾಗಿ ಹೊರಟಿದ್ದ ಶ್ರೀ ಚನ್ನಬಸವ ಶಿವಯೋಗಿಗಳನ್ನು ಚಿಟ್ಟನೆ ಚೀರಿ ಕರೆದರು. ಆಗ ಶ್ರೀ ಚನ್ನಬಸವರು ಹಿಂದಕ್ಕೆ ಬಂದು ಸರ್ಪ ಕಚ್ಚಿದ ವಿಷಯ ತಿಳಿದರು. ಅಲ್ಲಿ ಹಸ್ತಸ್ಪರ್ಶ ಮಾಡಿದರು. ಕುದುರೆ ಹತ್ತು ಎಂದರು, ಗುಣಮುಖರಾದರು. ಈಶ ಕೃಪೆಯಿದ್ದರೆ ಏನೂ ಆಗುವುದಿಲ್ಲ ಎಂದಂದು ಸಿದ್ಧಪ್ಪ ಗೌಡರನ್ನು ಬದುಕಿಸಿದರು.

೮. ಸರ್ಪವು ನಮಸ್ಕರಿಸಿ ಹೋದದ್ದು :

ಒಮ್ಮೆ ಶ್ರೀ ಚನ್ನಬಸವ ಶಿವಯೋಗಿಗಳು ತಮ್ಮ ಹಾರಕೂಡ ಮಠಕ್ಕೆ ಹೊರಟಿದ್ದರು. ಮಾರ್ಗ ಮಧ್ಯದಲ್ಲಿ ಡೋಣ್ಣೂರ ಗ್ರಾಮದ ಶಿಷ್ಯರು ಬಂದು ಶಿವಯೋಗಿಗಳ ದರ್ಶನ ಪಡೆದರು. ಆಗ್ರಹಪೂರ್ವಕವಾಗಿ ತಮ್ಮ ಗ್ರಾಮಕ್ಕೆ ಕರೆದುಕೊಂಡು ಹೋದರು. ಅವರ ಊರಿಗೆ ಹೋಗುವಾಗ ಎದುರಿಗೆ ಸರ್ಪವೊಂದು ಬರುತ್ತಿರುವುದನ್ನು ಕಂಡರು. ಹೊಡೆಯಿರಿ, ಹೊಡೆಯಿರಿ ಎಂದು ಚೀರಾಡತೊಡಗಿದರು. ಆಗ ಶ್ರೀಗಳವರು ಅದನ್ನು ಹೊಡೆಯಬೇಡಿರಿ ನಮ್ಮನ್ನು ಸ್ವಾಗತಿಸಲು ಬಂದಿರುವುದು– ಎಂದು ಹೇಳಿ ಭಯಪಡಬೇಡಿರೆಂದರು. ಆಗ ಆ ಸರ್ಪವು ಗುರುಗಳ ಕಣಸನ್ನೆಯನ್ನರಿತು ಗುರುಗಳ ಕಡೆಗೆ ಹೋಗಿ ಅವರ ಪಾದಕಮಲಗಳಿಗೆ ಹೆಡೆಯೆತ್ತಿ ನಮಸ್ಕರಿಸಿ ಅಲ್ಲಿಂದ ಮಾಯವಾಯಿತೆಂದು ಜನ ಈಗಲೂ ಹೇಳುತ್ತಿರುವರು.

೯. ಬಾನಾಮತಿ ಉಪದ್ರವ ಹೋಗಲಾಡಿಸಿದುದು :

ಶ್ರೀ ಚನ್ನಬಸವ ಶಿವಯೋಗಿಗಳ ನಾಮಸ್ಮರಣೆ, ದರ್ಶನಾಶೀರ್ವಾದ, ಪಾದಪೂಜೆ ಹಾಗೂ ಹಸ್ತಸ್ಪರ್ಶದಿಂದ ಎಂಥ ಕಷ್ಟ ತಾಪತ್ರಯಗಳಿದ್ದರೂ ದೂರವಾಗುತ್ತವೆಯೆಂಬ ನಂಬಿಕೆ ಜನರಲ್ಲಿ ಮನೆ ಮಾಡಿತ್ತು, ಹಾಗೆಯೇ ವದಂತಿಯೂ ಹರಡಿತ್ತು, ಸದಾಶಿವಪೇಟೆಯ ಶ್ರೀ ಶಾಂತವೀರಪ್ಪ ದೇಶೆಟ್ಟಿ ಎಂಬುವರು ಶ್ರೀಗಳವರನ್ನು ಕರೆದುಕೊಂಡು ಹೋಗಲು ಹಾರಕೂಡ ಮಠಕ್ಕೆ ಬಂದರು. ತಮ್ಮ ಮನೆಯಲ್ಲಿಯ ಬಾನಾಮತಿಯ ಕಿರುಕುಳವನ್ನು ತೋಡಿಕೊಂಡರು. ಶ್ರೀಗಳವರು ಅವರ ಮನೆಗೆ ಹೋದರು. ಸ್ನಾನ ಪೂಜೆ ತೀರಿಸಿಕೊಂಡರು. ಎಲ್ಲರಿಗೂ ತೀರ್ಥಕೊಟ್ಟರು. ತಾವೂ

ಪ್ರಸಾದ ಸೇವಿಸಿ ದರು. ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲು ಹೇಳಿದರು. ಕೂಡಲೇ ಅವರ ಮನೆಗೆ ಅಂಟಿಕೊಂಡಿದ್ದ ಬಾನಾಮತಿಯ ಕಾಟ ತಪ್ಪಿಹೋಯಿತು. ಎಲ್ಲರಿಗೂ ಸಂತೋಷವಾಯಿತು.

೧೦. ಮಳೆಯನ್ನು ನಿಲ್ಲಿಸಿದ ಮಹಿಮೆ :

ಮಹಿಮಾತಿಶಯದಿಂದೊಡಗೂಡಿದ ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳನ್ನು ಹೊಸಳ್ಳಿಯ ಭಕ್ತಜನ ಕರೆದುಕೊಂಡು ತಮ್ಮ ಗ್ರಾಮದಲ್ಲಿ ಶ್ರೀ ಶರಣ ಬಸವೇಶ್ವರರ ಪುರಾಣವನ್ನು ಪ್ರಾರಂಭಿಸಿದರು. ವೈಭವದಿಂದ ಪುರಾಣ ಪ್ರಾರಂಭ ವಾಯಿತು. ಪುರಾಣ ಮುಕ್ತಾಯ ಹಂತಕ್ಕೆ ಬಂದಾಗ, ಪರಿಸಮಾಪ್ತಿಗೊಳಿಸಲು ಶ್ರೀಗಳವರನ್ನು ಕೇಳಿಕೊಂಡರು. ಶ್ರೀಗಳು ಒಪ್ಪಿಗೆ ನೀಡಿದರು. ಪುರಾಣ ಪರಿಸಮಾಪ್ತಿ ಕಾಲಕ್ಕೆ ಏಕಾದಶ ಮಂಟಪ ಪೂಜೆಯನ್ನು ಮಾಡಲು ನಿರ್ಧರಿಸಿದರು.

ಪುರಾಣ ಸಮಾಪ್ತಿ ಕಾರ್ಯ ಅದ್ದೂರಿಯಿಂದ ನಡೆಯಿತು. ಹಲವಾರು ಕಡೆಯಿಂದ ಭಕ್ತರು, ಕಲಾಕಾರರು ಬಂದು ಸೇರಿದರು. ಮಂಟಪ ಪೂಜೆಯೂ ಜೊತೆಗೆ ನಡೆಯಿತು. ಪ್ರಸಾದದ ವ್ಯವಸ್ಥೆ ನಡೆದಿರುವಾಗ ಆಕಾಶದಲ್ಲಿ ಕಪ್ಪು ಮೋಡಗಳು ಸೇರಿ ಗುಡುಗು, ಮಿಂಚು ಪ್ರಾರಂಭವಾದವು. ಜನತೆ ಹೌಹಾರಿ ದರು. ಮಳೆ ಇಷ್ಟರಲ್ಲಿ ಬಂದೇ ಬರುತ್ತದೆಂದರು. ಎಲ್ಲರೂ ಚಿಂತಾಕ್ರಾಂತ ರಾದರು. ಶ್ರೀ ಚನ್ನಬಸವ ಶಿವಯೋಗಿಗಳನ್ನು ಮೊರೆಹೊಕ್ಕರು. ಆಗ ಶ್ರೀಗಳವರು ಆಕಾಶದ ಕಡೆಗೆ ನೆಟ್ಟ ದೃಷ್ಟಿಯಿಂದ ನೋಡ ನೋಡುತ್ತಿದ್ದಂತೆ ಮೋಡ ಹಿಂದಕ್ಕೆ ಸರಿಯತೊಡಗಿತು. ಗುಡುಗು, ಮಿಂಚಿನ ಸಪ್ಪಳ ನಿಂತು ಬಿಟ್ಟಿತು. ಆಗ ಶ್ರೀಗಳವರು ಯಾವ ತರದ ವಿಘ್ನಗಳು ಬರುವುದಿಲ್ಲ, ನಿಮ್ಮ ಕಾರ್ಯವನ್ನು ಮುಂದುವರಿಸಿರಿ ಎಂದು ಹೇಳಿದರು.

ಪ್ರಸಾದದ ವ್ಯವಸ್ಥೆ ಮಾಡಿ ಜನರನ್ನು ಪಂಕ್ತಿಯಲ್ಲಿ ಕೂಡ್ರಿಸಿದರು. ಜನರು ಊಟ ಮಾಡತೊಡಗಿದರು. ಅವರ ಗಡಿಬಿಡಿ ಕಂಡು ಶ್ರೀಗಳು ಮಳೆ ಬರುವುದಿಲ್ಲ, ನಿಧಾನವಾಗಿ ಊಟ ಮಾಡಿರಿ ಎಂದು ಹೇಳಿದರು. ಪುರಾಣ, ಮೆರವಣಿಗೆ ಇತ್ಯಾದಿ ಕಾರ್ಯಗಳೂ ಸುಗಮವಾಗಿ ನಡೆದವು. ಶ್ರೀ ಚನ್ನಬಸವ ಶಿವಯೋಗಿಗಳ ವಾಕ್ಯ ಸುಳ್ಳಾಗಲಾರದು ಎಂಬ ಮಾತನ್ನು ಎಲ್ಲ ಭಕ್ತರೂ ಕೊಂಡಾಡತೊಡಗಿದರು. ಹೀಗೆ ಮಳೆಯನ್ನು ನಿಲ್ಲಿಸಿದ ಮಹಿಮಾ ಪುರುಷರ ಶಕ್ತಿಯನ್ನು ಹಾಡಿಹೊಗಳುತ್ತ ತಮ್ಮ ತಮ್ಮ ಊರುಗಳಿಗೆ ತೆರಳಿದರು.

೧೧. ಶಿಷ್ಯ ಸಿದ್ಧಲಿಂಗಪ್ಪನನ್ನು ಬದುಕಿಸಿದುದು :

ಶ್ರೀ ಚನ್ನಬಸವ ಶಿವಯೋಗಿಗಳು ಹೊಸಳ್ಳಿಯಿಂದ ಜಂಬಗಿ ಗ್ರಾಮಕ್ಕೆ ಭಕ್ತರ ಇಚ್ಛೆಯ ಮೇರೆಗೆ ಹೊರಟುಹೋದರು. ಈ ಗ್ರಾಮದ ಶ್ರೀ ಸಿದ್ಧಲಿಂಗಪ್ಪನು ಶಿವಯೋಗಿಗಳ ವ್ಯವಸ್ಥೆಗಾಗಿ ಅವರ ಜೊತೆಗೆ ಇರುತ್ತಿದ್ದನು. ಅವರು ಹೋದ ಹೋದಲ್ಲೆಲ್ಲ

ಶಿಷ್ಯ ಸಿದ್ಧಲಿಂಗನೂ ಹೋಗುತ್ತಿದ್ದನು. ಒಂದು ದಿನ ಶ್ರೀಗಳವರು ಊರ ಹೊರಗಿರುವ ವೀರಭದ್ರ ದೇವಾಲಯದ ಬಾವಿಯಲ್ಲಿ ಮುಖಮಾಡಿಕೊಂಡು ಅಲ್ಲಿದ್ದ ಬೇವಿನಮರದ ಕಟ್ಟೆಯ ಮೇಲೆ ಕುಳಿತುಕೊಂಡರು. ಅವರ ಜೊತೆಗೆ ಸಿದ್ಧಲಿಂಗಪ್ಪನೂ ಇದ್ದನು. ಶ್ರೀಗಳವರಿಗೆ ಬೇವಿನಮರದಲ್ಲಿ ಒಣಗಿದ ಕಟ್ಟಿಗೆಯೊಂದು ಕಾಣಿಸಿತು. ಅದನ್ನು ಮುರಿಯಲು ಶ್ರೀಗಳವರು ಸಿದ್ಧಲಿಂಗಪ್ಪನಿಗೆ ಸೂಚಿಸಿದರು. ಆ ಪ್ರಕಾರ ಆ ಕಟ್ಟಿಗೆಯನ್ನು ಮುರಿಯಲು ಶ್ರೀ ಸಿದ್ಧಲಿಂಗಪ್ಪನು ದೇವಾಲಯದ ಶಿಖರವನ್ನು ಏರಿದನು. ಒಣಗಿದ ಟೊಂಗೆಯನ್ನು ಹಿಡಿದು ಜಗ್ಗಲು ಆ ಮರದ ಬೊಡ್ಡೆಯೇ ಮುರಿದು ಬೀಳುವುದರಲ್ಲಿತ್ತು. ಅದು ಸಿದ್ಧಲಿಂಗಪ್ಪನ ಮೇಲೆಯೇ ಬೀಳುವುದೆಂದು ಅಲ್ಲಿ ಕುಳಿತಿದ್ದ ಜನರೆಲ್ಲರೂ ಭಯಭೀತರಾಗಲು ಶ್ರೀಗಳವರು ತಾವು ಕುಳಿತಲ್ಲಿಂದ ಸ್ವಲ್ಪ ಮುಂದಕ್ಕೆ ಬಂದು ಮೇಲಕ್ಕೆ ಕೈಚಾಚಿದರು. ಆಗ ಸಿದ್ದಲಿಂಗಪ್ಪನಿಗೆ ಯಾವುದೇ ತರದ ಅಪಾಯವಾಗಲಿಲ್ಲ. ಅವನು ಹಾಗೆಯೆ ನಿಂತಿರುವುದನ್ನು ಕಂಡರು. ಇದು ನಿಜಕ್ಕೂ ಶ್ರೀ ಚನ್ನಬಸವ ಶಿವಯೋಗಿಗಳ ವರ ಕೃಪಾಶೀರ್ವಾದವೆಂದೇ ಜನ ಕೊಂಡಾಡತೊಡಗಿದರು.

೧೨. ಮೈಸಲಗಿ ಭಕ್ತನ ಸತಿಗೆ ಉರುಪು ಎದ್ದದ್ದು :

ಶ್ರೀ ಚನ್ನಬಸವ ಶಿವಯೋಗಿಗಳು ಒಮ್ಮೆ ಮೈಸಲಗಿಯ ಭಕ್ತರ ಮನೆಗೆ ತೆರಳಿದ್ದರು. ಅವರ ಮನೆಯಲ್ಲಿ ಏಕಾದಶ ರುದ್ರ ಪೂಜೆ ನೆರವೇರಿಸಿದ್ದರು. ವಿಜೃಂಭಣೆಯಿಂದ ನಡೆದ ಈ ಸಮಾರಂಭಕ್ಕೆ ದಯಮಾಡಿಸಿದ್ದ ಶ್ರೀ ಚನ್ನಬಸವ ಶಿವಯೋಗಿಗಳನ್ನು ಬರಮಾಡಿಕೊಂಡು ಬಿನ್ನಮಾಡಬೇಕೆಂದು ಅದೇ ಗ್ರಾಮದ ಬಡ ಭಕ್ತನೊಬ್ಬನು ವಿಚಾರ ಮಾಡತೊಡಗಿದನು. ಅದಕ್ಕೆ ಆತನ ಹೆಂಡತಿ ಕಂಟ್ರೋಲ್ ಕಾಲದಲ್ಲಿ ಹತ್ತಿಪ್ಪತ್ತು ಜನರಿಗೆ ಪ್ರಸಾದ ವ್ಯವಸ್ಥೆ ಮಾಡಿಸುವುದು ನಮ್ಮಿಂದ ಹೇಗೆ ಸಾಧ್ಯ ಎಂದು ಆತಂಕವುಂಟು ಮಾಡಿದಳು. ಆಗ ಅವಳಿಗೆ ಒಂದೆರಡು ತಾಸುಗಳು ಶರೀರದಲ್ಲಿ ಉರುಪು ಏಳಲು ಪ್ರಾರಂಭವಾಯಿತು. ಡಾಕ್ಟರರ ಔಷಧೋಪಚಾರದಿಂದ ಗುಣವಾಗಲಿಲ್ಲ. ಆಗ ಅವಳಿಗೆ ಶ್ರೀಗಳವರ ನೆನಪಾಯಿತು. ಗಂಡನನ್ನು ಕರೆದು, ಶ್ರೀ ಚನ್ನಬಸವ ಶಿವಯೋಗಿಗಳವರನ್ನು ಬಿನ್ನಕ್ಕೆ ಆಮಂತ್ರಣ ನೀಡಿ ಬರಲು ಕಳಿಸಿಕೊಟ್ಟಳು. ಅವನು ಆಮಂತ್ರಣ ನೀಡಿ ಹೇಳಿ ಬರುವಷ್ಟರಲ್ಲಿ ಅವಳ ಶರೀರದಲ್ಲಿ ಕಾಣಿಸಿಕೊಂಡಿದ್ದ ಉರುಪು ತನ್ನಷ್ಟಕ್ಕೆ ತಾನೇ ಕಡಿಮೆಯಾದ ಘಟನೆ ನಡೆದು ಹೋಗಿದೆ. ಆ ಪ್ರಕಾರ ಶ್ರೀಗಳವರನ್ನು ಕರೆತಂದು ತಮ್ಮ ಯೋಗ್ಯತಾನುಸಾರ ವ್ಯವಸ್ಥೆ ಮಾಡಿ, ಕಾಣಿಕೆ ನೀಡಿ ಮುಂದೆ ಹಾರಕೂಡಕ್ಕೆ ಬೀಳ್ಕೊಟ್ಟರು.

೧೩. ಮಳಖೇಡ ದೇಶಮುಖರ ಪೇಪರಿ ಬೇನೆ ಮಾಯವಾದದ್ದು :

ಮಳಖೇಡ ಮೂಲಮಠದ ಶ್ರೀ ಚನ್ನಬಸವ ಶಿವಯೋಗಿಗಳವರ ಮರಿಗಳಾಗಿದ್ದ ಕಾರ್ತಿಕೇಶ್ವರರು, ಅಧಿಪತಿಗಳಾಗಿದ್ದರು. ಈ ಕಾರ್ತೀಕೇಶ್ವರರು ಮಳಖೇಡ ದೇಶಮುಖ

ಗುರುಗಳಾಗಿರುವರು. ದೇಶಮುಖರ ಶರೀರದಲ್ಲಿ ಘೇವರಿ ಬೇನೆ ಸೇರಿಕೊಂಡಿತ್ತು. ಬಹಳಷ್ಟು ಡಾಕ್ಟರರಿಗೆ ತೋರಿಸಿದರೂ ಗುಣವಾಗಲಿಲ್ಲ. ತಮ್ಮ ಗುರುವರ್ಯರನ್ನು ಮನೆಗೆ ಆಮಂತ್ರಿಸಿ ತಮ್ಮ ಬೇನೆಯ ಪರಿಹಾರಕ್ಕೆ ಸಲಹೆ ಕೇಳಿದರು. ಆಗ ಕಾರ್ತಿಕೇಯ ಸ್ವಾಮಿಗಳು ವರ್ಷಾರು ತಿಂಗಳು ನಮ್ಮ ತಾತ ಶ್ರೀ ಚನ್ನಬಸವ ಗುರುಗಳ ನಾಮಾವಳಿ ಯನ್ನು ಪಾರಾಯಣ ಮಾಡಿ, ಪರಿಸಮಾಪ್ತಿಗೆ ಅವರನ್ನು ಆಮಂತ್ರಿಸಿ ಎಂದು ಆಶೀರ್ವದಿಸಿದರು. ಮನೆಯ ಗುರುಗಳ ಆಶೀರ್ವಚನದಂತೆ ದೇಶಮುಖರು ನಿತ್ಯ ಶ್ರೀ ಚನ್ನಬಸವ ಗುರುಗಳ ನಾಮಾಳಿಯ ಪಾರಾಯಣ ಮಾಡತೊಡಗಿದರು. ಬೇನೆ ಕಡಿಮೆಯಾಯಿತು. ಸತತ ಆರುತಿಂಗಳ ಕಾಲ ನಾಮಾವಳಿಯನ್ನು ಪಾರಾಯಣ ಮಾಡಿ ಪರಿಸಮಾಪ್ತಿಗೆಂದು ಶ್ರೀ ಚನ್ನಬಸವ ಗುರುಗಳಿಗೆ ಬಿನ್ನಹೇಳಲು ಹಾರಕೂಡಕ್ಕೆ ತೆರಳಿದರು. ಅವರ ಆಮಂತ್ರಣ ಮಾನ್ಯ ಮಾಡಿ ಮಳಖೇಡಕ್ಕೆ ಈರ್ವರು ಸ್ವಾಮಿಗಳು ದಯಮಾಡಿಸಿದರು. ಪರಿಸಮಾಪ್ತಿ ಕಾರ್ಯದಲ್ಲಿ ಭಾಗಿಗಳಾಗಿ ಸಂತೋಷದಿಂದ ದೇಶಮುಖರಿಗೂ ಬಳಗದವರಿಗೂ ಬಂದ ಭಕ್ತರಿಗೂ ಆಶೀರ್ವದಿಸಿದರು. ಶ್ರೀಗಳವರನ್ನು ಬೀಳ್ಕೊಟ್ಟರು. ಶ್ರೀ ದೇಶಮುಖರ ಬೇನೆ ಹೇಳಹೆಸರಿಲ್ಲದಂತೆ ಹೋಗಿಯೇ ಬಿಟ್ಟಿತು. ಅಂದಿನಿಂದ ಮಳಖೇಡ ದೇಶಮುಖರ ಭಕ್ತಿ ಶ್ರೀ ಚನ್ನಬಸವ ಶಿವಯೋಗಿಗಳವರಲ್ಲಿ ಹೆಚ್ಚೆಚ್ಚಾಗುತ್ತ ಬಂದಿರುವುದು. ಅವರ ಸೊಸೆ ಶ್ರೀಮತಿ ಗೋಪಿಕಾ ದೇವಿಯವರಂತೂ ಶ್ರೀಗಳವರ ಕುರಿತು ಹಾರಕೂಡ ಶ್ರೀ ಚನ್ನಬಸವೇಶ್ವರ ಚರಿತ್ರೆಯನ್ನೇ ಬರೆದಿರುವುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

೧೪. ಹಲಕವಡಿ ಗ್ರಾಮದ ಲಕ್ಷ್ಮಣರಡ್ಡಿ

ಹಲಕವಡಿ ಗ್ರಾಮದ ಲಕ್ಷ್ಮಣರಡ್ಡಿ (ಲಚಮರಡ್ಡಿ) ಎಂಬ ಭಕ್ತರೊಬ್ಬರು ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳನ್ನು ತಮ್ಮ ಮನೆಗೆ ಕರೆದುಕೊಂಡು ಹೋದರು. ಗುರುಗಳ ಸೇವೆಯನ್ನು ಸ್ವತಃ ಅವರೇ ಮಾಡುತ್ತಿದ್ದರು. ತಾವೇ ಸ್ನಾನ ಮಾಡಿಸುತ್ತಿದ್ದರು. ತಲೆ ಬಾಚುತ್ತಿದ್ದರು. ಹಣಿಗೆಗೆ ಸಿಕ್ಕ ಕೂದಲುಗಳನ್ನು ಚೆಲ್ಲದೆ ಕಾಗದದಲ್ಲಿ ಕಟ್ಟಿ ಇಡುತ್ತಿದ್ದರು. ಕೆಲ ದಿನಗಳ ನಂತರ ಭಕ್ತರ ಪ್ರಾರ್ಥನೆಯ ಮೇರೆಗೆ ಶ್ರೀ ಚನ್ನಬಸವ ಗುರುಗಳು ಸಂಚಾರಕ್ಕೆ ಹೋದರು. ಲಕ್ಷ್ಮಣರಡ್ಡಿ ಅವರು ದುಃಖಿತರಾದರು. ಶ್ರೀಗಳವ ರನ್ನು ನೆನೆದುಕೊಂಡು ಅವರ ಕೂದಲಿನ ಚೀಟನ್ನು ತೆಗೆದು ನೋಡಿದರು. ಕಣ್ಣಿಗೆ ಒತ್ತಿಕೊಂಡರು ಅವು ಬಂಗಾರದ ಕೂದಲು ಆಗಿರುವದನ್ನು ಕಂಡು ವಿಸ್ಮಿತರಾದರು. ಆಗ ಮನೆಯ ಮಂದಿಯನ್ನೆಲ್ಲ ಕರೆದು ನಡೆದ ಪವಾಡಗಳನ್ನು ಹೇಳುತ್ತ ಶ್ರೀಗಳವರನ್ನು ಬಾಯ್ತುಂಬ ಹೊಗಳುತ್ತ ಮಹಾತ್ಮರ ಮಹಿಮೆಯನ್ನು ಕೊಂಡಾಡತೊಡಗಿದರು.

೧೫. ಒಂದೇ ದಿವಸ, ಒಂದೇ ವೇಳೆಗೆ ಎರಡು ಊರುಗಳಲ್ಲಿ ದರ್ಶನವಿತ್ತದ್ದು :

ಚಿತಾಪುರದ ರೇಶ್ಮಿ ಕಲ್ಲಪ್ಪ ಅವರು ಶ್ರೀ ಚನ್ನಬಸವ ಶಿವಯೋಗಿಗಳ ಪರಮಭಕ್ತರಾಗಿದ್ದರು. ಇವರು ತಮ್ಮ ಮಕ್ಕಳ ಮದುವೆಯ ಕಾಲಕ್ಕೆ ಶ್ರೀ ಶರಣ ಬಸವೇಶ್ವರರ ಪುರಾಣ ನಡೆಸಿ, ಮಕ್ಕಳ ಮದುವೆ ಮಾಡಲು ನಿಶ್ಚಯಿಸಿ, ಶ್ರೀಗಳವರಿಗೆ ಹಾರಕೂಡಕ್ಕೆ ಹೋಗಿ ಬಿನ್ನ ಹೇಳಿ ಬಂದರು. ಶ್ರೀಗಳು ಮದುವೆಗೆ ಬರಲು ಒಪ್ಪಿಕೊಂಡರು. ಅದೇ ದಿವಸ ಹೊಸಳ್ಳಿ ಗ್ರಾಮದ ಭಕ್ತರು ಶ್ರೀಗುರುಗಳನ್ನು ಮಂಗಲಕಾರ್ಯ ನಡೆಸಿಕೊಡಬೇಕೆಂದು ತಮ್ಮಲ್ಲಿಯೇ ಇರಿಸಿಕೊಂಡು ಬಿಟ್ಟರು. ಆಗ ಶ್ರೀ ಗುರುಗಳಿಗೆ ಧರ್ಮಸಂಕಟ ಒದಗಿಬಂದಿತು. ತಮ್ಮ ಯೌಗಿಕ ಶಕ್ತಿಯಿಂದ ಎರಡೂ ಕಡೆಯ ಮಂಗಲ ಕಾರ್ಯಗಳಲ್ಲಿ ಹಾಜರಿದ್ದುದು ಅದ್ಭುತ ಘಟನೆಯೇ ಆದಂತಾಯಿತು.

೧೬. ಬಂಜೆತನ ಹೋಗಲಾಡಿಸಿದ್ದು :

ಒಮ್ಮೆ ನಿಡಗುಂದಿ ಗ್ರಾಮದ ಭಕ್ತರು ಶ್ರೀ ಚನ್ನಬಸವರನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ವೈಭವದಿಂದ ಮೆರವಣಿಗೆ ಹೊರಡಿಸಿದ್ದರು. ಈ ಊರಿನ ಕುಂಬಾರನೊಬ್ಬನು ಮಕ್ಕಳಾಗಿಲ್ಲವೆಂದು ಎರಡನೆಯ ಮದುವೆ ಮಾಡಿಕೊಂಡಿದ್ದನು. ಮೊದಲನೆಯ ಹೆಂಡತಿಗೆ ಮನೆಯವರೆಲ್ಲ ಕಿರುಕುಳ ಕೊಡುತ್ತಿದ್ದರು. ಬಂಜೆಯೆಂದು ಹಂಗಿಸುತ್ತಿದ್ದರು. ಆಕೆಯು ಈ ಕಷ್ಟದಾಯಕ ಜೀವನದಿಂದ ಬೇಗ ಮುಕ್ತಮಾಡು ಎಂದು ಶಿವನನ್ನು ಬೇಡಿಕೊಳ್ಳುತ್ತಿದ್ದಳು. ಎದುರಿಗೆ ಶ್ರೀ ಚನ್ನಬಸವರ ಮೆರವಣಿಗೆ ಬರುತ್ತಿತ್ತು. ದೂರದಲ್ಲಿ ನಿಂತು ನೋಡುತ್ತಿದ್ದಳು. 'ನನ್ನ ಕಷ್ಟ ಪರಿಹರಿಸು' ಎಂದು ಮನದಲ್ಲಿ ಈಕೆ ಪ್ರಾರ್ಥಿಸಿ ಕೈಮುಗಿದಳು. ಈ ಮುಗ್ಧೆಯ ಭಕ್ತಿಭಾವಕ್ಕೆ ಮೆಚ್ಚಿಕೊಂಡ ಗುರು ಚನ್ನಬಸವರು ಅವಳನ್ನು ಸಮೀಪ ಕರೆಸಿದರು. ಅವಳ ತಲೆ ಸವರುತ್ತ 'ಮಗಳೆ ಈ ಹಣ್ಣು ಸ್ವೀಕರಿಸು' ಎಂದು ಅವಳ ಉಡಿಯಲ್ಲಿ ಹಾಕಿದರು. ಶ್ರೀ ಗುರುವಿನನ್ನು ಧ್ಯಾನಿಸುತ್ತ ಮನೆಗೆ ಹೋಗಿ ಅವರು ಕೊಟ್ಟ ಆ ಹಣ್ಣುಗಳನ್ನು ತಿಂದಳು. ಮುಂದೆ ಕೆಲ ದಿನಗಳಲ್ಲಿ ಗರ್ಭವತಿಯಾದಳು. ಗಂಡು ಮಗುವಿಗೆ ಜನ್ಮ ನೀಡಿದಳು. ಮನೆಯವರೆಲ್ಲ ಆದರ ಭಾವದಿಂದ ಕಾಣತೊಡಗಿದರು. ಅಂದಿನಿಂದ ಈ ತಾಯಿ ಪ್ರತಿವರುಷ ತಪ್ಪದೆ ಜಾತ್ರೆಗೆ ಬರುವ ಪದ್ಧತಿ ಇಟ್ಟು ಕೊಂಡಿರುವಳು.

೧೭. ಶೇಡೋಳ ಗ್ರಾಮದ ಶಂಕ್ರಮ್ಮ :

ಹಾರಕೂಡ ಮಠದ ಶಾಖೆಯೊಂದು ಶೇಡೋಳ ಗ್ರಾಮದಲ್ಲಿದೆ. ಶ್ರೀ ಚನ್ನಬಸವರ ಭಕ್ತರಾದ ರೇವಣಸಿದ್ಧಯ್ಯ ಶಂಕ್ರಮ್ಮ ದಂಪತಿಗಳು ಈ ಮಠದಲ್ಲಿದ್ದು ಸಕಲ ಕಾರ್ಯಗಳನ್ನು ನೆರವೇರಿಸುತ್ತಿದ್ದರು. ಸ್ನಾನ, ಲಿಂಗಪೂಜೆ ಮಾಡಿ ಪ್ರಸಾದ ಸ್ವೀಕರಿಸಿ ವಿಶ್ರಾಂತಿ ಪಡೆಯುತ್ತಿದ್ದರು. ಅಲ್ಲಿಯೇ ಆಟವಾಡುತ್ತಿದ್ದ ಈ ದಂಪತಿಗಳ ಗುರುಲಿಂಗ ಹೆಸರಿನ

ಮಗನನ್ನು ನೋಡಿದರು. ಈ ಮಗು ಶಿವಯೋಗ ಸಾಧಕನ ಸಕಲ ಲಕ್ಷಣಗಳನ್ನು ಹೊಂದಿರುವನು ಎಂದು ಯೋಚಿಸಿದ ಗುರುಗಳು 'ಈ ಬಾಲಕ ಮುಂದೆ ನಮ್ಮ ಮಠದ ಅಧಿಕಾರ ವಹಿಸಿಕೊಳ್ಳಲು ಯೋಗ್ಯನಾಗುವನು. ಈತನನ್ನು ನಮಗೆ ಒಪ್ಪಿಸಿರಿ' ಎಂದು ಆ ದಂಪತಿಗಳಿಗೆ ಕೇಳಿಕೊಂಡರು. ಆಗ ಶಂಕ್ರಮ್ಮ 'ಈ ಮಗು ನಮಗಿರಲಿ, ಮುಂದೆ ಹುಟ್ಟುವ ಮಕ್ಕಳನ್ನೆಲ್ಲ ನಿಮ್ಮ ಪಾದಕ್ಕೆ ಒಪ್ಪಿಸುವೆ' ಎಂದು ಬೇಡಿಕೊಂಡಳು. ಒಪ್ಪಿಕೊಂಡ ಗುರುಗಳು ಹಾರಕೂಡಕ್ಕೆ ಬಂದುಬಿಟ್ಟರು.

ಕೆಲವು ದಿನಗಳ ನಂತರ ಬಾಲಕ 'ಗುರುಲಿಂಗ'ರ ಆರೋಗ್ಯ ಕೆಟ್ಟಿತು. ಕಳವಳಗೊಂಡ ತಾಯಿ ಶಂಕ್ರಮ್ಮನಿಗೆ ಆಗ ಗುರುಗಳ ಸ್ಮರಣೆಯಾಯಿತು. ಪಶ್ಚಾತ್ತಾಪಪಟ್ಟುಕೊಂಡರು. ಮಗುವನ್ನು ಗುರುಗಳಿಗೆ ಅರ್ಪಿಸುವೆವು ಎಂದು ಸಂಕಲ್ಪ ಮಾಡಿಕೊಂಡರು. ಗುರುವಿನ ನಾಮಸ್ಮರಣೆ ಮಾಡುತ್ತ ಮಗುವಿನ ಹಣೆಗೆ ವಿಭೂತಿ ಧರಿಸಿದರು. ಮಗುವಿಗೆ ಗುಣವಾಗತೊಡಗಿತು. ತಾವು ಸಂಕಲ್ಪ ಮಾಡಿದಂತೆ ರೇವಣಸಿದ್ಧಯ್ಯ ಮತ್ತು ಶಂಕ್ರಮ್ಮ ದಂಪತಿಗಳು ಹಾರಕೂಡಕ್ಕೆ ಹೋದರು. ಸ್ವಸಂತೋಷದಿಂದ ಗುಣಮುಖರಾದ ಬಾಲಕ 'ಗುರುಲಿಂಗ'ರನ್ನು ಶ್ರೀ ಚನ್ನಬಸವ ಶಿವಯೋಗಿಗಳಿಗೆ ಅರ್ಪಿಸಿ ಧನ್ಯರಾದರು. ಮುಂದೆ ಶಂಕ್ರಮ್ಮ ತಾಯಿಗೆ ನಾಲ್ವರು ಗಂಡು ಮಕ್ಕಳಾದರು. ಅವರನ್ನೂ ಈ ದಂಪತಿಗಳು ಗುರುಗಳಿಗೆ ಕಾಣಿಕೆಯಾಗಿ ನೀಡಿದರು. ಮುಂದೆ ಗುರುಲಿಂಗ ದೇವರಿಗೆ ಪಟ್ಟಾಭಿಷೇಕ ಸಮಾರಂಭವೂ ನಡೆಯಿತು. ಶ್ರೀ ಚನ್ನಬಸವ ಶಿವಯೋಗಿಗಳ ತರುವಾಯ ಶ್ರೀ ಗುರುಲಿಂಗ ಸ್ವಾಮಿಗಳು ಮಠದ ಆಗು–ಹೋಗುಗಳನ್ನೆಲ್ಲ ನಡೆಸಿಕೊಂಡು ನಡೆದರು.

೧೮. ನಾಮಸ್ಮರಣೆಯಿಂದ ಇಷ್ಟಾರ್ಥ ಸಿದ್ಧಿ :

ಗುರುಸಣಗಿ ಮಠದ ಶರಣಯ್ಯನವರು ಒಮ್ಮೆ ಶ್ರೀ ಚನ್ನಬಸವ ಶಿವಯೋಗಿಗಳ ದರ್ಶನಕ್ಕೆಂದು, ಅಬ್ಬೆತುಮಕೂರಿಗೆ ಬಂದಿರುವರೆಂಬ ಸಮಾಚಾರ ಕೇಳಿ, ಕುದುರೆ ಮೇಲೆ ಕುಳಿತುಕೊಂಡು ಹೋದರು. ಮಧ್ಯಾಹ್ನದ ವೇಳೆಯಾದುದರಿಂದ ಕುದುರೆಯಿಂದ ಮಧ್ಯದಲ್ಲಿಯೇ ಇಳಿದು, ವಿಶ್ರಾಂತಿಗೆಂದು ಮರದ ನೆರಳಲ್ಲಿ ಮಲಗಿಕೊಂಡರು. ಕುದುರೆಯನ್ನು ಅಲ್ಲಿಯೆ ಒಂದು ಗಿಡಕ್ಕೆ ಕಟ್ಟಿ ಹಾಕಿದ್ದರು. ಅವರಿಗೆ ನಿದ್ರೆ ಹತ್ತಿತ್ತು ಕೆಲಹೊತ್ತಿನ ಬಳಿಕ ಎಚ್ಚರಾಯಿತು. ಕುದುರೆ ಹತ್ತಲು ಹೋಗುತ್ತಾರೆ. ಆದರೆ ಅಲ್ಲಿ ಕುದುರೆ ಇದ್ದಿರಲಿಲ್ಲ, ನಿರಾಶರಾಗಿ ಕಾಲು ನಡುಗೆಯಿಂದ ಶ್ರೀ ಚನ್ನಬಸವ ಶಿವಯೋಗಿಗಳ ನಾಮಸ್ಮರಣೆ ಮಾಡುತ್ತ ಅಬ್ಬೆತುಮಕೂರಿಗೆ ಹೋಗಿ ಮುಟ್ಟಿದರು. ನಡೆದು ಸುಸ್ತಾಗಿ ಗುರುಗಳ ದರ್ಶನಕ್ಕೆ ಬಂದರು. ಅಲ್ಲಿ ಯಾರೋ ತಂದು ಕಟ್ಟಿದ್ದ ತಮ್ಮ ಕುದುರೆಯನ್ನು ಕಂಡು ಸಂತೋಷಭರಿತರಾದರು. ಗುರುಗಳ ಸ್ಮರಣೆ ಮಾತ್ರದಿಂದಲೇ ಕಳೆದುಕೊಂಡ ತಮ್ಮ ಕುದುರೆ ದೊರಕಿತೆಂದು ಸಂತೋಷಭರಿತರಾಗಿ ಶ್ರೀ ಚನ್ನಬಸವ ಶಿವಯೋಗಿಗಳ

ದರ್ಶನಾಶೀರ್ವಾದ ಪಡೆದು ಧನ್ಯರಾದರು. ಪ್ರತಿನಿತ್ಯವೂ ತಪ್ಪದೆ ಶ್ರೀ ಗುರುವಿನ ನಾಮಸ್ಮರಣೆ ಮಾಡತೊಡಗಿದರು. ಇತರರಿಗೂ ನಾಮಸ್ಮರಣೆಗೆ ಅನುಕೂಲವಾಗಲೆಂದು ಶ್ರೀ ಗುರಸಣಗಿ ಶರಣಯ್ಯನವರು 'ಶ್ರೀ ಚನ್ನಬಸವೇಶ್ವರರ ನೂರೆಂಟು ನಾಮಾವಳಿ' ಬರೆದು ಶ್ರೀ ಗುರುವಿನ ಪಾದಕ್ಕೆ ಅರ್ಪಿಸಿದರು. ಹೀಗೆ ಮಾಡುವುದರಿಂದ ಭಕ್ತರ ಇಷ್ಟಾರ್ಥ ಸಿದ್ಧಿಯಾಗುವುದೆಂದೂ ತಮ್ಮ ಅನುಭವವನ್ನು ಹೇಳತೊಡಗಿದರು.

೧೯. ಗೊಡ್ಡೆಮ್ಮೆ ಹಾಲು ಕೊಟ್ಟದ್ದು :

ಒಮ್ಮೆ 'ಚಿಮ್ಮಾ–ಇದಲಾಯಿ' ಗ್ರಾಮದ ಭಕ್ತರು ಸಪ್ತಾಹ ನಡೆಸಿದರು. ಶ್ರೀ ಚನ್ನಬಸವ ಶಿವಯೋಗಿಗಳನ್ನು ಭಕ್ತರು ಆಮಂತ್ರಿಸಿದ್ದರು. ಶ್ರೀ ಗುರು ಗಳು ವಾಯುವಿಹಾರಕ್ಕೆ ಹೊರಟಾಗ ಒಂದು ಎಮ್ಮೆಯನ್ನು ಕಂಡರು. ಅದರ ಪಾಲಕನಿಗೆ– ಈ ಎಮ್ಮೆಯ ಹಾಲನ್ನು ಸಪ್ತಾಹಕ್ಕೆ ಕೊಡಬೇಕೆಂದು ಕೇಳಿದರು. ಪಾಲಕನು ಆಗ ವಿನಯದಿಂದ ಗುರುಗಳಿಗೆ ಕೈಮುಗಿದನು. 'ಗುರುವೆ, ಇದು ಗೊಡ್ಡೆಮ್ಮೆ ಹಾಲನ್ನು ಹೇಗೆ ಕೊಡಲಿ' ಎಂದನು. ಆಗ ಗುರುಗಳು 'ಇದು ಹಾಲು ಕೊಟ್ಟರೆ ಕೊಡುವಿಯಾ?' ಎಂದಾಗ 'ತಪ್ಪದೇ ಕೊಡುವೆ' ಎಂದನು. ಗುರುಗಳು ತಮ್ಮ ಕೈಯಲ್ಲಿಯ ತಂಬಿಗೆ ಕೊಟ್ಟು 'ಹಿಂಡು' ಎಂದರು. ಆಗ ಆ ಗೊಡ್ಡೆಮ್ಮೆ ಹಾಲು ಕರೆಯಿತು. ತಪ್ಪದೆ ಅದರ ಪಾಲಕ ಹಾಲು ಕೊಡಹತ್ತಿದನು.

೨೦. ಮಹಾರೋಗ ದೂರವಾದದ್ದು :

ಅಣವರದ ಗಂಗಮ್ಮ ಎಂಬ ಸಾಧ್ವಿಮಣಿ ಹೆಣ್ಣುಮಗಳು ತನ್ನ ಪತಿ ರೇವಣಸಿದ್ಧಪ್ಪನಿಗೆ ಪೂರ್ವಾರ್ಜಿತ ಕರ್ಮದಿಂದ ತಟ್ಟಿದ ಮಹಾರೋಗದಿಂದ ಬೆಂದು ಬಳಲಿದ್ದರು. ಪತಿ ಮೇಲಿಂದ ಮೇಲೆ ಸಾವು ಬೇಡುತ್ತಿದ್ದನು. ಆದರೆ 'ಗಂಗಮ್ಮ' ಎಳ್ಳಷ್ಟೂ ಸೇವೆ ಮಾಡುವುದನ್ನು ನಿಲ್ಲಿಸಿದ್ದಿರಲಿಲ್ಲ. ಒಮ್ಮೆ ಶ್ರೀ ಚನ್ನಬಸವರ ಮಹಿಮೆ ಕೇಳಿ ಅವರ ದರ್ಶನಕ್ಕೆ ಬಂದಳು. ತನ್ನ ಪರಿಸ್ಥಿತಿಯನ್ನು ಸಾದ್ಯಂತವಾಗಿ ತೋಡಿಕೊಂಡಳು. ಮಕ್ಕಳ ಫಲ ಕೇಳಿದಳು. ಗುರುಗಳು ಶಾಂತಚಿತ್ತದಿಂದ ಕೇಳಿಕೊಂಡು ವಿಭೂತಿ ಮಂತ್ರಿಸಿಕೊಟ್ಟರು. ಅದನ್ನು ಅವರ ಪತಿಯ ಮೈತುಂಬ ಲೇಪಿಸಲು ಹೇಳಿದರು. ಗುರುಗಳಲ್ಲಿ ನಂಬಿಕೆಯಿಟ್ಟ ಗಂಗಮ್ಮ ತನ್ನ ಗ್ರಾಮಕ್ಕೆ ತೆರಳಿ ಗುರುಗಳು ಕೊಟ್ಟ ಆ ವಿಭೂತಿಯನ್ನು ತನ್ನ ಪತಿಯ ಮೈತುಂಬ ಲೇಪಿಸಿದಳು. ಕೆಲ ದಿವಸಗಳಲ್ಲಿಯೇ ಆತನ ರೋಗ ದೂರವಾಯಿತು. ಮಕ್ಕಳಾದವು. ಸತಿಪತಿಗಳಿಬ್ಬರಿಗೂ ಸಂತೋಷವಾಯಿತು. ಗುರುಗಳ ದರ್ಶನ ಪಡೆದು ಮನದುಂಬಿ ಸ್ಮರಣೆ ಮಾಡುತ್ತ ಕೈತುಂಬ ಕಾಣಿಕೆ ಸಮರ್ಪಿಸಿ ಬಂದರು.

೨೧. ಸತ್ತವರನ್ನು ಬದುಕಿಸಿದುದು :

ಒಮ್ಮೆ ಶ್ರೀ ಚನ್ನಬಸವ ಗುರುಗಳು ಭಕ್ತರೊಂದಿಗೆ ಕೊತ್ತಲಪಲ್ಲಿಯ ಎಲ್ಲಮ್ಮನ ಜಾತ್ರೆಗೆ ಹೋಗಿದ್ದರು. ಆ ಜಾತ್ರೆಗೆ ನೂರಾರು ಹಳ್ಳಿಗಳಿಂದ ಜನರು ಬಂದಿದ್ದರು.

ಉತ್ಸಾಹದಿಂದ ಈ ಜಾತ್ರೋತ್ಸವದಲ್ಲಿ ಭಾಗವಹಿಸಿ ದ್ದರು. ಆದರೆ ಒಮ್ಮಿಂದೊಮ್ಮೆಲೇ ಮಾರಿಕಾ ಬೇನೆ ಕಾಣಿಸಿಕೊಡಿತು. ಅದರಿಂದಾಗಿ ಬಹಳಷ್ಟು ಜನರಿಗೆ ಈ ಬೇನೆ ತಗುಲಿತು. ಕೂಡಲೇ ಶ್ರೀ ಚನ್ನಬಸವರು ಉಳ್ಳಿಗಡ್ಡಿ ಮಂತ್ರಿಸಿ ತಿನ್ನಿಸಿದರು. ಬಹಳಷ್ಟು ಜನ ಪ್ರಾಣಾಪಾಯದಿಂದ ಪಾರಾದರು. ಬದುಕಿ ಉಳಿದರು. ಅಲ್ಲಿ ಸೇರಿದ ಜನರೆಲ್ಲರೂ ಹಾರಕೂಡ ಶ್ರೀಗಳವರ ಜಯ ಜಯಕಾರ ಮಾಡುತ್ತ ತಮ್ಮ ತಮ್ಮ ಊರಿಗೆ ತೆರಳಿದರು.

೨೨. ಸಾಕ್ಷಾತ್ ಸರ್ಪಭೂಷಣನೇ ಶ್ರೀಗುರುವಿನ ರೂಪದಲ್ಲಿ :

ಚಂದ್ರಯ್ಯ ಹೆಸರಿನ ಸೂಗೂರು ಗ್ರಾಮದ ಭಕ್ತ ಶ್ರೀ ಚನ್ನಬಸವ ಗುರುಗಳಿಗೆ ಬಿನ್ನ ಹೇಳಿ ತಮ್ಮ ಮನೆಗೆ ಕರೆದುಕಂಡು ಹೋಗಿದ್ದರು. ಚಂದ್ರಯ್ಯನವರ ಸಹೋದರಿ ಚಂದ್ರಮ್ಮನವರು ತಾವೇ ಸ್ವತಃ ಗುರುಗಳ ಸೇವೆಗೆ ನಿಂತರು. ಗುರುಗಳು ಸ್ನಾನಕ್ಕೆಂದು ಬಚ್ಚಲಲ್ಲಿ ಹೋಗಿ ಕುಳಿತು ಕೊಂಡರು. ಬಚ್ಚಲು ಮೋರಿಯಿಂದ ಸರ್ಪವೊಂದು ಬಂದು ಹೆಡೆಬಿಚ್ಚಿ ಆಡತೊಡಗಿತು. ದೂರದಿಂದ ಇದನ್ನು ಕಂಡ ಮನೆಯವರೆಲ್ಲ ಹೌಹಾರಿ ದರು. ಗುರುಗಳು ಒಂದು ಬಟ್ಟಲಲ್ಲಿ ಹಾಲು ತರಲು ಹೇಳಿದರು. ಗುರುಗಳು ಹಾಲು ಕುಡಿಸಿದರು. ಹೋಗು ಎಂದರು. ಆಗ ಎಲ್ಲರೂ ಸಾಕ್ಷಾತ್ ಸರ್ಪಭೂಷಣನೇ ಶ್ರೀ ಗುರುವಿನ ರೂಪದಲ್ಲಿ ಕಾಣಿಸಿಕೊಂಡಿದ್ದನ್ನು ಹೇಳಿ ಗುರುವಿನ ಮಹಿಮೆಯನ್ನು ಕೊಂಡಾಡತೊಡಗಿದರು.

೨೩. ಮಕ್ಕಳಿಲ್ಲದವರಿಗೆ ಮಕ್ಕಳ ಭಾಗ್ಯ :

ಗದಲೆಗಾವಿ ಗ್ರಾಮದ ನಾಗರಡ್ಡಿ ಹೆಸರಿನ ಭಕ್ತರಿದ್ದರು. ಇವರಿಗೆ ಏನೆಲ್ಲ ಸಂಪತ್ತಿದ್ದರೂ ಮಕ್ಕಳ ಭಾಗ್ಯ ಮಾತ್ರ ಇದ್ದಿರಲಿಲ್ಲ. ಇದರಿಂದ ಚಿಂತಾಕ್ರಾಂತರಾಗಿದ್ದರು. ಮಕ್ಕಳು ಹುಟ್ಟುತ್ತಲೇ ಸತ್ತು ಹೋಗುತ್ತಿದ್ದವು. ನಾಗರಡ್ಡಿ ಅವರು ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳವರ ಮಹಿಮಾತಿಶಯವನ್ನೂ ಕೇಳಿ ಅವರ ದರ್ಶನ ಭಾಗ್ಯಕ್ಕಾಗಿ ಹಾತೊರೆಯುತ್ತಿದ್ದರು. ಒಮ್ಮೆ ಗುರುಗಳ ಕಡೆಗೆ ಹೋಗಿ ಅವರಿಗೆ ತಮ್ಮ ಮನೆಗೆ ಬಿನ್ನಕ್ಕೆ ಹೇಳಿದರು. ಅವರ ಮುಂದೆ ತಮ್ಮ ಅಳಲನ್ನು ತೋಡಿಕೊಂಡರು. ನಾಗರಡ್ಡಿಯವರಿಗೆ ಶ್ರೀಗಳು ಧೈರ್ಯ ಹೇಳಿ ರುದ್ರಪೂಜೆ ಮಾಡಿಸಲು ಹೇಳಿದರು. ಗುರುಗಳ ಅಪ್ಪಣೆಯಂತೆ ನಾಗರಡ್ಡಿ ಅವರು ಏಕಾದಶ (ಹನ್ನೊಂದು) ರುದ್ರಪೂಜೆ ಮಾಡಿಸಿದರು. ಗುರುಗಳ ವಾಕ್ಯ ಹುಸಿಹೋಗಲಿಲ್ಲ. ಅವರಿಗೆ ಮಗುವಾಯಿತು. ಹುಟ್ಟಿದ ಆ ಮಗನಿಗೆ 'ಗುರುನಾಥ' ಎಂದು ನಾಮಕರಣ ಮಾಡಿದರು. ತಂದೆ-ತಾಯಿಗಳಿಗೆ ಅತೀವ ಸಂತೋಷವಾಯಿತು. ಮತ್ತೆ ಅತ್ಯಂತ ಭಯ-ಭಕ್ತಿಯಿಂದ ಹಾರಕೂಡ ಮಠಕ್ಕೆ ಮಗನೊಂದಿಗೆ ಹೋಗಿ ಶ್ರೀ ಚನ್ನಬಸವ ಶಿವಯೋಗಿಗಳ ಚರಣಗಳಿಗೆ ನಮಸ್ಕರಿಸಿ ಕಾಣಿಕೆಯನ್ನು ಅರ್ಪಿಸಿದರು. ತಮ್ಮ ಮನೆಗೆ ಬಿನ್ನಕ್ಕೆ ಆಮಂತ್ರಿಸಿ ಪೂಜೆಗೆ ಏರ್ಪಾಟು ಮಾಡಿ ಆಶೀರ್ವಾದ ಪಡೆದು ಧನ್ಯರಾದರು.

೨೪. ಮೂಕ ಬಾಲಕನಿಗೆ ಬಾಯಿ ಬಂದದ್ದು :

ಕಲಬುರ್ಗಿ ನಗರದ ಜಗತ್‌ದಲ್ಲಿ ಉಪ್ಪಿನ ಬಸವಣ್ಣೆಪ್ಪ ಹೆಸರಿನ ಭಕ್ತರಿದ್ದರು. ಹಾರಕೂಡ ಶ್ರೀ ಚನ್ನಬಸವರು ಛತ್ರ ಕಟ್ಟಿಸುತ್ತಿರುವ ವಿಷಯ ತಿಳಿದುಕೊಂಡ ಬಸವಣ್ಣೆಪ್ಪನವರು ಗುರುಗಳನ್ನು ಬಿನ್ನಕ್ಕೆ ತಮ್ಮ ಮನೆಗೆ ಆಮಂತ್ರಿಸಿದರು. ಶಿವಸ್ವರೂಪಿಗಳಾದ ಶ್ರೀ ಚನ್ನಬಸವೇಶ್ವರರ ಪೂಜಾ ವೈಭವವನ್ನು ಪ್ರತ್ಯಕ್ಷ ನೋಡಲು ನಗರದ ಜನರು ತಂಡೋಪತಂಡವಾಗಿ ಬರತೊಡಗಿದರು. ಜಗತ್‌ದಲ್ಲಿರುವ ಒಬ್ಬ ಮೂಕ ಬಾಲಕನೂ ತನ್ನ ತಂದೆ–ತಾಯಿಗಳೊಡನೆ ಶ್ರೀಗಳವರ ದರ್ಶನಕ್ಕೆ ಬಂದನು. ಶ್ರೀ ಗುರುಗಳ ಪೂಜಾ ವೈಭವವನ್ನು ಕಂಡು ಬೆರಗಾದ ಆ ಬಾಲಕನು ಕೈ ಜೋಡಿಸಿ ನಿಂತನು. ಭಕ್ತರೆಲ್ಲರೂ 'ಓಂ ನಮಃ ಶಿವಾಯ' ಮಂತ್ರವನ್ನು ಹೇಳುವುದನ್ನು ಕೇಳಿ ಗುರುಗಳ ಪಾದೋದಕ ಸ್ವೀಕರಿಸಿದನು. ಗುರುಗಳ ಪಾದಕ್ಕೆ ಎರಗಿದನು. ಬಾಲಕನ ಅವಸ್ಥೆಯನ್ನು ಅಂತರ್‌ಜ್ಞಾನದಿಂದ ಅರಿತು ಶ್ರೀ ಚನ್ನಬಸವರು ಮುಗುಳ್ನಗುತ್ತ ಆಶೀರ್ವದಿಸಿದರು. ಶ್ರೀ ಗುರುಗಳ ಭವ್ಯ ರೂಪ ಅವನ ಮನದಲ್ಲಿ ಅಚ್ಚೊತ್ತಿತ್ತು. ಆ ಪರಿಸರದಲ್ಲಿ ಮಾಲಕನ ನರನಾಡಿಗಳಲ್ಲಿ 'ಓಂ ನಮಃ ಶಿವಾಯ' ಮಂತ್ರ ನಿನಾದಿಸತೊಡಗಿತು. ಅಲ್ಲಿ ಭಕ್ತರ ಜೊತೆಗೆ ಈ ಬಾಲಕನೂ ಧ್ವನಿಗೂಡಿಸಿ ಜಯ ಜಯಕಾರ ಮಾಡಿದನು. ಆತನಿಗೆ ಧ್ವನಿ ಮಾತು ಬಂದದ್ದನ್ನು ಕೇಳಿದ ತಂದೆ–ತಾಯಿಗಳಿಗಂತೂ ಸಂತೋಷವೇ ಸಂತೋಷವಾಯಿತು. ಶ್ರೀ ಗುರುಗಳ ಪಾದೋದಕ ಸೇವನೆಯಿಂದ ತನಗೆ ಮಾತು ಬಂದದ್ದೆಂದು ತಿಳಿದ ಬಾಲಕನು ಶ್ರೀ ಚನ್ನಬಸವರು ಸಾಕ್ಷಾತ್ ಶಿವನೆಂದೇ ಸ್ತುತಿಸುತ್ತ ಅವರ ಪಾದಗಳಿಗೆ ಎರಗಿ ಆಶೀರ್ವಾದ ಪಡೆದನು. ತಂದೆ–ತಾಯಿಗಳೂ ಗುರುಗಳಿಗೆ ನಮಸ್ಕರಿಸಿ ಭಕ್ತಿ ಕಾಣಿಕೆ ಸಮರ್ಪಿಸಿ ಧನ್ಯರಾದರು.

೨೫. ಹರ ಮುನಿದರೆ ಗುರು ಕಾಯುವನು :

ಮಂಠಾಳ ಗ್ರಾಮದ ಅಂಬಾಣಿ ಸಿದ್ರಾಮಪ್ಪ ಎಂಬುವರು ಶ್ರೀಗುರುಗಳಿಗೆ ಬಿನ್ನವಿತ್ತು ತಮ್ಮ ಮನೆಗೆ ಕರೆದುಕೊಂಡು ಹೋಗಿದ್ದರು. ಸಾಯಂಕಾಲ ಸಮಯದಲ್ಲಿ ಊರಿನ ಬಾಲಕರು ಆಟವಾಡುತ್ತಿದ್ದರು. ಮೇಯಲು ಹೋಗಿದ್ದ ದನಕರುಗಳು ಮನೆಗೆ ಬರುತ್ತಿದ್ದವು. ಬಾಲಕರೆಲ್ಲರೂ ದೂರ ಸರಿದು ನಿಂತರು. ಆದರೂ ನುಗ್ಗಿ ಬಂದ ದನಗಳ ಕಾಲಡಿಯಲ್ಲಿ ಒಬ್ಬ ಬಾಲಕನು ತುಳಿತಕ್ಕೆ ಸಿಕ್ಕು ಅರೆಜೀವವಾಗಿ ಬಿದ್ದನು. ಈ ದೃಶ್ಯವನ್ನು ನೋಡಿದ ಒಬ್ಬನು ಆತನ ತಂದೆ–ತಾಯಿಗಳಿಗೆ ತಿಳಿಸಿದನು. ಗಾಬರಿಗೊಂಡ ತಂದೆ–ತಾಯಿಗಳು ತಮ್ಮ ಮಗನ ಸ್ಥಿತಿಯನ್ನು ಕಂಡು ಹೌಹಾರಿದರು. ಮಗುವನ್ನು ಎತ್ತಿ ತೊಡೆಯ ಮೇಲೆ ಹಾಕಿಕೊಂಡು ಎದೆ ಬಡಿದುಕೊಂಡು ಅಳತೊಡಗಿದರು. ಶ್ರೀ ಚನ್ನಬಸವ ಗುರುಗಳ ಮಹಿಮೆಯನ್ನು ಅರಿತವರೊಬ್ಬರು ಬಾಲಕನನ್ನು ಒಯ್ದು ಶ್ರೀ

ಗುರುಗಳ ಚರಣದಲ್ಲಿ ಹಾಕಿರಿ ಎಂದು ಹೇಳಿದರು. ಆ ಪ್ರಕಾರ ಆ ಮಗುವನ್ನು ಶ್ರೀ ಚನ್ನಬಸವ ಶಿವಯೋಗಿಗಳ ಪಾದದಡಿಯಲ್ಲಿ ಇಟ್ಟರು. ಶ್ರೀಗಳು ಶಿವನಾಮ ಸ್ಮರಿಸುತ್ತಿದ್ದರು. ಕೆಲ ಗಳಿಗೆಯಲ್ಲಿ ಮಗುವಿಗೆ ಜೀವ ಬಂದಿತು. ಶ್ರೀಗುರುವಿನ ಮಹಿಮೆಯಿಂದ ಪುಳಕಿತರಾದ ದಂಪತಿಗಳು 'ಹರ ಮುನಿದರೆ ಗುರು ಕಾಯುವ' ಎಂಬ ವಾಣಿಯು ಸತ್ಯವೆಂದು ಕೊಂಡಾಡಿದರು. 'ಹರ ಮುನಿದರೆ ಗುರು ಕಾಯುವನು' ಎಂದೆಲ್ಲ ಹಾಡಿ ಹರಸಿದರು.

೨೯. ಮೂರು ವರುಷಕ್ಕೇ ಮುಕ್ತಿ ಕೇಳಿಕೊಂಡ :

ಶ್ರೀ ಚನ್ನಬಸವ ಶಿವಯೋಗಿಗಳು ಭಕ್ತರ ಬಿನ್ನದ ಮೇರೆಗೆ ಜೀವಣಗಿ ಗ್ರಾಮಕ್ಕೆ ಹೋದರು. ಶ್ರೀಗಳವರ ದರ್ಶನಾಶೀರ್ವಾದ ಪಡೆಯಲೆಂದು ಸುತ್ತಮುತ್ತಣ ಊರ ಜನರೆಲ್ಲರೂ ಆಗಮಿಸಿದ್ದರು. ಹಾಬಾಳ ಗ್ರಾಮದ ಬಸವರಾಜಪ್ಪನವರೂ ಆಗಮಿಸಿದ್ದರು. ಶ್ರೀಗಳವರಿಗೆ ತಮ್ಮ ಊರಿಗೂ ಬಂದು ನಮ್ಮ ಮನೆಯಲ್ಲಿ ಸ್ನಾನ ಪೂಜೆ ತೀರಿಸಿಕೊಳ್ಳಬೇಕೆಂದು ಬಿನ್ನ ನೀಡಿದರು. ಆ ಪ್ರಕಾರ ಶ್ರೀ ಚನ್ನಬಸವರು ಹಾಬಾಳದ ಬಸವರಾಜಪ್ಪನವರ ಮನೆಗೆ ಹೋಗಿ ಸ್ನಾನ, ಪೂಜೆ ಪ್ರಸಾದ ತೀರಿಸಿದರು. ಮನೆಯ ಮಂದಿಯೆಲ್ಲಬಂದು ಶ್ರೀಗಳವರನ್ನು ಸತ್ಕರಿಸಿ ದರ್ಶನಾಶೀರ್ವಾದ ಪಡೆದುಕೊಂಡರು. ಆಗ ಬಸವರಾಜಪ್ಪನವರು ತಮ್ಮ ಮಗನ ನಾಮಕರಣ ಮಾಡಬೇಕೆಂದು ಪ್ರಾರ್ಥಿಸಿಕೊಂಡರು. ಆ ಪ್ರಕಾರ ಶ್ರೀಗಳು ಅವರ ಮಗನನ್ನು ತೊಟ್ಟಿಲಲ್ಲಿ ಮಲಗಿಸಿ 'ಅಮರೇಂದ್ರ' ಎಂದು ನಾಮಕರಣ ಕ್ರಿಯೆ ಮುಗಿಸಿದರು. ಅಲ್ಲಿಂದ ಗುರುಗಳು ಹಾರಕೂಡಕ್ಕೆ ಬಂದುಬಿಟ್ಟರು. ಅಮರೇಂದ್ರ ಬೆಳೆದು ಮೂರು ವರುಷದವನಾದನು. ಆಗ ಶ್ರೀ ಚನ್ನಬಸವ ಶಿವಯೋಗಿಗಳು ಬಸವಕಲ್ಯಾಣದ ಭಕ್ತರ ಮನೆಯಲ್ಲಿರುವರೆಂಬ ಸಮಾಚಾರ ತಿಳಿದ ಬಸವರಾಜಪ್ಪ ಅವರು ಪರಿವಾರದೊಂದಿಗೆ ಅವರ ದರ್ಶನಕ್ಕೆ ಹೋದರು. ಎರಡು ದಿನ ತಾತನವರ ಸನ್ನಿಧಿಯಲ್ಲಿ ಉಳಿದುಕೊಂಡರು. ತಮ್ಮ ಗ್ರಾಮಕ್ಕೆ ಹೋಗಲು ಶ್ರೀಗಳವರಿಗೆ ಅಪ್ಪಣೆ ಕೇಳಿದಾಗ ಇನ್ನೂ ಕೆಲ ದಿನ ಇಲ್ಲಿಯೇ ಇರಬೇಕೆಂದರು. ಅದನ್ನು ಮನ್ನಿಸದ ಅವರು ಅಲ್ಲಿಂದ ಹೊರಟೇಬಿಟ್ಟರು. ತಾತನವರ ಚರಣಕ್ಕೆರಗಿ ಅಪ್ಪಣೆ ಕೇಳದ ಅಮರೇಂದ್ರ ತನ್ನ ತಲೆಯ ಮೇಲಿದ್ದ ಹ್ಯಾಟನ್ನು ತೆಗೆದು ಗುರುಗಳ ಮುಂದೆ ಹಿಡಿದನು. ಶ್ರೀಗಳು ಪ್ರಸಾದವೆಂದು ಕಲ್ಲಸಕ್ಕರೆ ಹರಳನ್ನು ಅದರಲ್ಲಿಟ್ಟರು. ಅಷ್ಟರಿಂದ ತೃಪ್ತನಾಗದ ಅಮರೇಂದ್ರನು ಇನ್ನಿಷ್ಟು ಬೇಕೆಂದನು. ಉತ್ತತ್ತಿ, ಟೆಂಗು ಏನೆಲ್ಲ ಹಾಕಿದರೂ ಆತನು ತೃಪ್ತನಾಗಲಿಲ್ಲ. ಆಗ ಶ್ರೀಗಳವರು ನಿನಗೆ ಏನು ಬೇಕು? ಮಗು ಎಂದು ಕೇಳಿದರು. 'ನನಗೆ ಟೊಪ್ಪಿಗೆ ತುಂಬ ನಿಮ್ಮ ಆಶೀರ್ವಾದ ಬೇಕು ತಾತ' ಎಂದು ಕೇಳಿದನು. 'ನೀ ಬಯಸಿದ್ದನ್ನು ನೀಡಿದ್ದೇನೆ ಮಗು. ಹೋಗಿ ಬಾ' ಎಂದು ಆಶೀರ್ವದಿಸಿದರು. ಹಾಬಾಳಕ್ಕೆ ಬಂದ ಮರುದಿನವೇ ಮಗುವಿನ ಆರೋಗ್ಯ ಕೆಟ್ಟಿತು. ಗುರುಗಳ ಬಳಿಗೆ ಒಬ್ಬರನ್ನು

ಕಳಿಸಿದಾಗ ಪೂಜೆಗೆ ಕುಳಿತಿದ್ದ ಶ್ರೀಗಳವರ ಇಷ್ಟಲಿಂಗ ಕೆಳಕ್ಕೆ ಬಿತ್ತು. ಆವಾಗಲೇ ಇತ್ತ ಅಮರೇಂದ್ರನ ಪ್ರಾಣವೂ ಹಾರಿ ಹೋಗಿತ್ತು. 'ಗುರುವಿನಲ್ಲಿ ನಮ್ಮ ಮಗ ಮೂರು ವರುಷಕ್ಕೆ ಮುಕ್ತಿ ಕೇಳಿಕೊಂಡ ಎಂದುಕೊಂಡ ತಂದೆ–ತಾಯಿಗಳು ಗುರುವಿನ ಮಾತಿಗೆ ಬೆಲೆ ಕೊಡದೆ ಬಂದದ್ದಕ್ಕೇ ಹೀಗಾಯಿತೆಂದು ಪರಿತಪಿಸಿದರು.

೨೭. ಚೇಳು ತಾಟಿನಲ್ಲಿ ಬಿದ್ದಾಗ ನೀರಾದುದು :

ಒಮ್ಮೆ ಶ್ರೀ ಚನ್ನಬಸವ ಶಿವಯೋಗಿಗಳು ಕಲಬುರ್ಗಿಯ ಶಹಾಬಜಾರ ದಲ್ಲಿರುವ ವಿರೂಪಾಕ್ಷಪ್ಪ ಸೊಪ್ಪನ ಅವರ ಮನೆಗೆ ಬಿನ್ನಕ್ಕೆ ಬಂದಿದ್ದರು. ಸ್ನಾನ, ಪೂಜೆ ಮುಗಿಸಿಕೊಂಡು ಪ್ರಸಾದ ಸ್ವೀಕರಿಸುತ್ತಿರುವಾಗ ಶ್ರೀಗಳವರ ಪ್ರಸಾದ ಬಟ್ಟಲಿನಲ್ಲಿ ಜಂತಿಯಿಂದ ಒಂದು ಚೇಳು ಬಿದ್ದುಬಿಟ್ಟಿತು. ಅದು ಗುರುಗಳ ಮಹಿಮೆಯಿಂದಾಗಿ ನೀರಾಗಿ ಬಿಟ್ಟಿತು. ಶ್ರೀಗಳವರು ಪ್ರಸಾದ ಬಟ್ಟಲಿನಲ್ಲಿ ಏನೂ ಬಿಡದವರಾದ್ದರಿಂದ ಆ ನೀರನ್ನು ಕುಡಿದುಬಿಟ್ಟರು. ವಿಷದ ಚೇಳು ತನ್ನ ಗುಣವನ್ನು ಶ್ರೀಗಳವರ ಮಹಾತ್ಮೆಯಿಂದಾಗಿ ಕಳೆದುಕೊಂಡಿತ್ತು ಅವರಿಗೆ ಯಾವ ಬಾಧೆಯೂ ಆಗಲಿಲ್ಲ. ಇದನ್ನು ವಿರೂಪಾಕ್ಷಪ್ಪನವರ ಮಗ ಚನ್ನಬಸಪ್ಪ ಅವರು ಹೇಳಿದಂತೆ ದಾಖಲಿಸಲಾಗಿದೆ.

೨೮. ಕಳ್ಳತನವಾದದ್ದನ್ನು ಅರಿತದ್ದು :

ಒಮ್ಮೆ ಶ್ರೀ ಚನ್ನಬಸವ ಶಿವಯೋಗಿಗಳು ಸುಲೆಪೇಟದ ಭಕ್ತರಾದ ಶ್ರೀ ಚನ್ನಬಸಪ್ಪ ನಿರ್ಣೆ ಅವರ ಮನೆಗೆ ಹೋಗಿದ್ದರು. ಇವರ ಸೌಭಾಗ್ಯವತಿ ಚಂದ್ರಮ್ಮ ಸ್ನಾನ ಮಾಡುವಾಗ ಕೊರಳಲ್ಲಿದ್ದ ೧೨ ತೊಲಿಯ ದಾಗೀನ (ಬಂಗಾರದ ಆಭರಣ ಅಡಕಲ ಗಡಗಿಯಲ್ಲಿ ತೆಗೆದಿಟ್ಟಳು. ಸ್ನಾನಮಾಡಿ ಆಭರಣ ಹಾಕಿಕೊಳ್ಳದೇ ಗುರುಗಳ ದರ್ಶನಾಶೀರ್ವಾದ ಪಡೆದುಕೊಳ್ಳಲು ಬಂದರು. ಆಗ ಸ್ವಾಮಿಗಳ ವೇಷ ಹಾಕಿಕೊಂಡಿದ್ದ ಡಾಂಭಿಕ ಸ್ವಾಮಿ ಯೊಬ್ಬನು ಪೂಜೆ ಮಾಡಿಕೊಳ್ಳುವ ನೆವವೊಡ್ಡಿ ಅಡಕಲ ಗಡಿಗಿಯಲ್ಲಿ ಇಟ್ಟಿದ್ದ ಬಂಗಾರದ ಆಭರಣ ಮೊದಲೇ ನೋಡಿದ್ದರಿಂದ ತುಡುಗು ಮಾಡಿದನು. ಶ್ರೀ ಗುರುಗಳು ಬರಿಗೊಳ್ಳಿನಿಂದ ಬಂದೆಯೇಕಮ್ಮ? ಆಭರಣ ಹಾಕಿಕೊಂಡು ದರ್ಶನ ತೆಗೆದುಕೊಳ್ಳು ಎಂದರು. ಆಗ ಆ ಚಂದ್ರಮ್ಮ ತಾಯಿ ತೆಗೆದಿಟ್ಟಿದ್ದ ಆಭರಣ ಹೋಗಿ ನೋಡುತ್ತಾಳೆ, ಅದು ಅಲ್ಲಿ ಇದ್ದಿರಲಿಲ್ಲ, ಗುರುಗಳಿಗೆ ಹಾಗೇ ಬಂದು ಹೇಳಿದಳು. ಆಗ ಗುರುಗಳು ಅದನ್ನು ತೆಗೆದುಕೊಂಡ ಭಂಡ ಸ್ವಾಮಿ ನಾರಾಯಣ ಪೇಟದಲ್ಲಿ ನಿಮಗೆ ಸಿಗುತ್ತಾನೆ. ಕೂಡಲೇ ಅಲ್ಲಿಗೆ ಯಾರನ್ನಾದರೂ ಕಳಿಸಿಕೊಡಿರಿ ಎಂದು ಹೇಳಿದರು. ಹಾಗೇ ಮಾಡಲಾಗಿ ಆ ತುಡುಗ ಸ್ವಾಮಿ ಅಲ್ಲಿ ಸಿಕ್ಕನು. ತೆಗೆದುಕೊಂಡ ಬಂಗಾರವನ್ನು ಒಪ್ಪಿಸಿಬಿಟ್ಟನು. ಶ್ರೀ ಚನ್ನಬಸವ ಶಿವಯೋಗಿಗಳು ತಮ್ಮ ಅಂತರ ದೃಷ್ಟಿಯಿಂದ ಈ ಕಳ್ಳತನವನ್ನು ನೋಡಿದ್ದರಿಂದ ಅದು ದೊರಕಿತು. ಇದನ್ನು ಸ್ವತಃ ದಿ. ಚಂದ್ರಮ್ಮ ತಾಯಿ ಹೇಳಿದ್ದನ್ನು ಇಲ್ಲಿ ದಾಖಲಿಸಲಾಗಿದೆ.

೨೯. ಕಮಲಾಪುರದ ಶ್ರೀ ಶಂಕರಲಿಂಗ ದೇವಸ್ಥಾನದಲ್ಲಿ :

ಶ್ರೀ ಷ. ಬ್ರ. ಚನ್ನಬಸವ ಶಿವಯೋಗಿಗಳು ಕಮಲಾಪುರದ ಭಕ್ತರ ಆಮಂತ್ರಣದ ಮೇರೆಗೆ ಬಿನ್ನಕ್ಕೆ ಹೋಗಿದ್ದರು. ಊರ ಜನರೆಲ್ಲರೂ ಶ್ರೀ ಶಂಕರಶೆಟ್ಟಿ ಪಾಟೀಲರ ನೇತೃತ್ವದಲ್ಲಿ ಶಿವಯೋಗಿಗಳನ್ನು ಪ್ರತ್ಯೇಕವಾಗಿ ಮನೆ ಮನೆಗಳಿಗೆ ಆಮಂತ್ರಿಸದೆ ಸಾರ್ವಜನಿಕವಾಗಿ ಶ್ರೀ ಶಂಕರಲಿಂಗ ದೇವಸ್ಥಾನದಲ್ಲಿ ಸಾಮೂಹಿಕವಾಗಿ ಪೂಜೆ ಪ್ರಸಾದದ ವ್ಯವಸ್ಥೆ ಮಾಡಿದ್ದರು.

ಕಮಲಾಪುರದಲ್ಲಿ ಮುಸಲ್ಮಾನರು ಹೈದ್ರಾಬಾದ ನಿಜಾಮ ರಾಜನ ಅಧಿಕಾರ ಬಲದಿಂದ ಮಸೀದಿಯೊಂದನ್ನು ಕಟ್ಟಿಸಿದ್ದರು. ಆಗ ಹಿಂದೂ ಜನರೆಲ್ಲ ಒಂದಾಗಿ ಮಸೀದಿ ಒಳಗೆ ಹೋಗಿ ಅಗೆಯಲು ಪ್ರಾರಂಭಿಸಿದರು. ಆಗ ಅಲ್ಲಿ ಲಿಂಗ ಮತ್ತು ಬಸವಣ್ಣನ ವಿಗ್ರಹಗಳು ದೊರೆತವು. ಅದಕ್ಕಾಗಿ ಅಲ್ಲಿ ಶಂಕರಲಿಂಗ ದೇವರ ಪ್ರತಿಷ್ಠಾಪನಾ ಕಾರ್ಯಕ್ರಮ ಏರ್ಪಡಿಸಿ ಶ್ರೀ ಚನ್ನಬಸವ ಶಿವಯೋಗಿಗಳನ್ನು ಆಮಂತ್ರಿಸಿದ್ದರು. ಶ್ರೀಗಳವರು ಬರುತ್ತಲೇ ಪಲ್ಲಕ್ಕಿಯಲ್ಲಿ ಕೂಡ್ರಿಸಿ ಊರ ತುಂಬೆಲ್ಲ ಮೆರವಣಿಗೆ ತೆಗೆದರು. ಪಾದಪೂಜೆ ಪ್ರಸಾದದ ವ್ಯವಸ್ಥೆ ಮಾಡಿದರು. ಶ್ರೀ ಚನ್ನಬಸವ ಶಿವಾಚಾರ್ಯರ ಆಗಮನದಿಂದ ಮುಸಲ್ಮಾನರು ತಮ್ಮ ದ್ವೇಷ ಬಿಟ್ಟುಬಿಟ್ಟರು. ಎಲ್ಲರ ಜೊತೆಗೂಡಿ ಪ್ರಸಾದ ಸೇವಿಸಿದರು. ರಾಷ್ಟ್ರೀಯ ಐಕ್ಯತಾ ಮನೋಭಾವವನ್ನು ಮೆರೆದರು. (ಈ ಘಟನೆ ಹೇಳಿದವರು ಶ್ರೀ ಪುಂಡಲೀಕಪ್ಪ ಮಾಸ್ತರರು)

೩೦. ಮಕ್ಕಳ ಭಾಗ್ಯ :

ಸುಲೇಪೇಟದ ಶ್ರೀ ಸೋಮನಾಥ ನಿರ್ಣೆ ಮತ್ತು ವಿಮಲಾಬಾಯಿ ದಂಪತಿಗಳಿಗೆ ಮದುವೆಯಾಗಿ ಬಹಳ ವರುಷಗಳಾದರೂ ಮಕ್ಕಳಾಗಿರಲಿಲ್ಲ. ಇವರು ಹಾರಕೂಡ ಶ್ರೀ ಚನ್ನಬಸವ ಶಿವಯೋಗಿಗಳವರ ದರ್ಶನ ಪಡೆದರು. ತಮ್ಮ ಅಳಲು ತೋಡಿಕೊಂಡರು. ಶ್ರೀಗಳವರು ಆಶೀರ್ವದಿಸುತ್ತ ಚಿಂತಿಸಬೇಡಿರಿ. ನಿಮಗೆಲ್ಲಾ ಒಳ್ಳೆಯದಾಗುತ್ತದೆಯೆಂದರು. ಶ್ರೀಗಳವರು ನುಡಿದ ನುಡಿ ಹುಸಿ ಹೋಗಲಿಲ್ಲ. ನಿರ್ಣೆ ದಂಪತಿಗಳಿಗೆ ಮಕ್ಕಳ ಭಾಗ್ಯ ಲಭಿಸಿತು. ಸುಜಾತಾ ಹೆಸರಿನ ಹೆಣ್ಣುಮಗಳು ಮತ್ತು ಶರಣಬಸಪ್ಪ ಒಬ್ಬ ಗಂಡುಮಗ ಜನಿಸಿದರು. ಶರಣಬಸಪ್ಪ ಅವರು ವೈದ್ಯಕೀಯ ಎಂ. ಡಿ. ಮತ್ತು ಡಿ. ಎಂ. ಪದವೀಧರ ರಿದ್ದು ಕ್ಯಾನ್ಸರ್ ರೋಗದ ಸುಪರ ಸ್ಪೆಶಾಲಿಸ್ಟ ಆಗಿದ್ದಾರೆ. (ಈ ವಿಷಯ ಹೇಳಿದವರು ಶ್ರೀಮತಿ ಮಹಾದೇವಿ ಉಪ್ಪಿನ.

೩೧. ಮುತ್ಯಾ ಅವರ ಕೇಶ ಬಯಸಿದುದು :

ಸುಲೇಪೇಟದ ಅರುಣಾಬಾಯಿ ಎಂಬ ಹೆಣ್ಣು ಮಗಳು ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳ ಕೂದಲ ಮಹಿಮೆಯನ್ನು ಹಲವರ ಬಾಯಿಂದ ಕೇಳಿದ್ದಳು.

ಒಮ್ಮೆ ಅವರ ಕೇವಲ ಶಿಷ್ಯರಾದ ಹೊಸಳ್ಳಿಯ ಶಂಕರಪ್ಪನವರಿಗೆ ತನ್ನ ಮನದಾಸೆಯನ್ನು ಹೇಳಿದಳು. ಅದೇನೆಂದರೆ ಶ್ರೀಗಳವರ ಗಡ್ಡದಲ್ಲಿಯ ಒಂದು ಕೂದಲನ್ನು ತರಬೇಕು. ಅದನ್ನು ನಾನು ತಾಯಿತದಂತೆ ಕೊರಳಲ್ಲಿ ಕಟ್ಟಿಕೊಳ್ಳುವೆ ಎಂದು ಹೇಳಿದಳು. ಆ ಪ್ರಕಾರ ಶ್ರೀ ಶಂಕರಪ್ಪ ಶ್ರೀ ಚನ್ನಬಸವ ಶಿವಯೋಗಿಗಳವರ ದರ್ಶನಕ್ಕೆ ಹೋದಾಗ ಶ್ರೀಗಳವರೇ ಶಂಕರಪ್ಪ ಈ ಕೂದಲನ್ನು ತೆಗೆದುಕೋ ಎಂದು ಗಡ್ಡ ಮೇಲೆ ಕೈಯಾಡಿಸುತ್ತ ತೆಗೆದುಕೊಟ್ಟರು. ಶ್ರೀಗಳವರ ಭಕ್ತರ ಮನದಾಸೆಯನ್ನು ಅಂತರದೃಷ್ಟಿಯಿಂದ ತಿಳಿದುಕೊಂಡು ಅದನ್ನು ಪೂರೈಸಿಕೊಡುತ್ತಿದ್ದರು. ಶ್ರೀ ಶಂಕರಪ್ಪ ಶ್ರೀಮತಿ ಅರುಣಾಬಾಯಿ ಅವರಿಗೆ ತಂದುಕೊಟ್ಟಾಗ ಸಂತೋಷದಿಂದ ಕೊರಳಲ್ಲಿ ಕಟ್ಟಿಕೊಂಡರಂತೆ (ಸುಲೇಪೇಟದ ಶ್ರೀಗಳವರ ಭಕ್ತ ಶ್ರೀ ತುಕಾರಾಮ ಅವರು ಹೇಳಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.)

೩೨. ಹಳ್ಳ ದಾಟಿಸಿದ ಪ್ರಸಂಗ :

ಒಮ್ಮೆ ತಾಂಡೂರದ ಥೇಟರ ಮಾಲಕರಾಗಿದ್ದ ಪಸಾರ ಬಸಪ್ಪ ಎಂಬುವರ ಮನೆಗೆ ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳು ಬಿನ್ನಕ್ಕೆ ಹೋಗಿದ್ದರು. ಅಲ್ಲಿ ಬೀರನಳ್ಳಿಯ ಶಂಕರಪ್ಪ ಗಾರಂಪಳ್ಳಿ ಎಂಬ ಭಕ್ತರೂ ಬಂದಿದ್ದರು. ಅವರು ಹಾರಕೂಡ ಮುತ್ಯಾ ಅವರನ್ನು ತಮ್ಮ ಬೀರನಳ್ಳಿ ಗ್ರಾಮಕ್ಕೆ, ತಮ್ಮ ಮನೆಗೆ ಆಮಂತ್ರಿಸಿದರು. ಅದಕ್ಕೆ ಶ್ರೀಗಳು ಒಪ್ಪಿಕೊಂಡು ಅಲ್ಲಿಯೇ ತಮ್ಮ ಪ್ರೀತಿಯ ಶಿಷ್ಯ ಸುಲೇಪೇಟದ ಶ್ರೀ ಶಂಕರರಾವ ಅವರಿಗೂ ಬರಲು ಹೇಳಿದರು. ಆ ಪ್ರಕಾರ ಸುಲೇಪೇಟದ ಶಂಕರರಾವ ಅವರು ಬೀರನಳ್ಳಿಗೆ ಹೊರಟರು. ಮಳೆಯಾದುದರಿಂದ ದಾರಿ ಗೊತ್ತಾಗದೆ ಬೇರೆ ದಾರಿ ಹಿಡಿದು ತುರ್ಕರ ಹೊಸಳ್ಳಿ ಕಡೆಗೆ ಹೋದರು. ಆಗಲೇ ಸಾಯಂಕಾಲ ಬೇರೆಯಾಗಿತ್ತು, ಅದೇ ದಾರಿಯಲ್ಲಿ ಭೆಟ್ಟಿಯಾದ ಲಂಬಾಣಿಯೊಬ್ಬನನ್ನು ಬೀರನಳ್ಳಿಯ ದಾರಿ ಕೇಳಿದರು. ಆಗ ಆ ಲಂಬಾಣಿಯು ಚಕಿತಗೊಂಡು, ಯಜಮಾನರೆ, ತಾವು ದಾರಿ ತಪ್ಪಿಸಿಕೊಂಡಿರುವಿರಿ. ಈಗಲೇ ರಾತ್ರಿ ಬೇರೆ. ಈಗೆಲ್ಲಿ ಹೋಗುವಿರಿ? ಬರ್ರಿ, ಈ ರಾತ್ರಿ ನಮ್ಮ ತಾಂಡಾದಲ್ಲೇ ಇದ್ದು ಬೆಳಗಿನ ಜಾವ ಹೋಗಿರಿ ಎಂದು ಹೇಳಿದನು. ಆಗ ಶ್ರೀ ಶಂಕರರಾವ ಅವರು ಇಲ್ಲಾ ನಾನು ಹೋಗಲೇಬೇಕು. ಆದರೆ ದಾರಿಯಲ್ಲಿ ಚಿಂಚೋಳಿಯ ಕೋರೆಪ್ಪ ಭಕ್ತರು ಹಾರಕೂಡ ಮುತ್ಯಾ ಅವರನ್ನು ತಮ್ಮ ಮನೆಗೆ ಬಿನ್ನಕ್ಕೆ ಕರೆದುಕೊಂಡು ಹೋದರು. ಅಂದು ಮುತ್ಯಾ ಚಿಂಚೋಳ್ಯಾಗ ಉಳದ್ರು. ಮುತ್ಯಾ ಅವರು ಮರುದಿನ ಬೀರನಳ್ಳಿಗೆ ಹೋದ್ರು. ಸ್ನಾನ ಪೂಜೆ ಮುಗಿಸಿ ಪ್ರಸಾದಕ್ಕೆ ಕುಳಿತಿದ್ರು, ಪಂಕ್ತಿನೂ ಕುಳಿತಿತ್ತು, ಆದರೆ ಮುತ್ಯಾ ಅವರು ಕೆಳಗೆ ಮುಖಮಾಡಿ ಕುಳಿತವರು ಪ್ರಸಾದ ಸೇವಿಸಲೇ ಇಲ್ಲ. ಅವರು ಭಕ್ತಶಂಕರರಾವರ ದಾರಿ ಕಾಯುತ್ತಿದ್ದರು. ರಾತ್ರಿ ಮಳೆ ಆಗಿತ್ತು, ಶಂಕರರಾವ ಹಳ್ಳ ಬಂದ್ದದರಿಂದ ಪೇಚಿನಲ್ಲಿ ಸಿಲುಕಿಕೊಂಡಿದ್ದರು. ಅಂತರದೃಷ್ಟಿಯಿಂದ ಅರಿತ ಮುತ್ಯಾ ಅವರ ಆಶೀರ್ವಾದದಿಂದ

ಶಂಕರರಾವ ಹಳ್ಳಾ ಹೇಗೊ ದಾಟಿ ಬಂದ್ರು. ಸೇವಕರಾದ ಅಣೆಮ್ಮಾ ಮತ್ತು ಮಲ್ಲಣ್ಣ ದೂರದಲ್ಲಿ ಬರುತ್ತಿದ್ದ ಶಂಕರರಾವರನ್ನು ನೋಡಿ ಬಂದರು, ಬಂದರು ಎಂದಾಗ ಮುತ್ಯಾ ಮೇಲೆ ಮುಖ ಮಾಡಿ ನೋಡಿದರು. ಎದುರಿಗೆ ಬಂದ ಶಂಕರರಾವರು ಸಾಷ್ಟಾಂಗ ನಮಸ್ಕಾರ ಮಾಡಿದ್ರು. ಆಗ ಮುತ್ಯಾ ಅವರು ಹೆಣ್ಣಿನ ನೆಲಿ, ಕುದರಿ ನೆಲಿ, ನೀರಿನ ನೆಲಿ ತಿಳಿಯೋದಿಲ್ಲ 'ಯಾಕ ನೀ ಬಂದಿ? ಯಾರನ್ನ ಬದ್ನಾಮ ಮಾಡಬೇಕಂತಿದ್ದಿ?' ಎಂದೆಲ್ಲ ಹೇಳಿದರು. ಆಗ ಎಲ್ಲರೂ ಪ್ರಸಾದ ಸೇವಿಸಿದರು. (ಈ ಘಟನೆಯನ್ನು ಸುಲೇಪೇಟದ ಶ್ರೀ ಘನಾತೆ ತುಕಾರಾಮರು ಹೇಳಿದ್ದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ).

೩೩. ಖೇಣಿಯವರಿಗೆ ಮಕ್ಕಳ ಭಾಗ್ಯ :

ಬೀದರ ಜಿಲ್ಲೆಯ ಖೇಣಿ ರಂಜೋಳಿಯವರ ಮನೆಯಲ್ಲಿ ಮಕ್ಕಳಾಗಿರಲಿಲ್ಲ. ನಾಲ್ವರು ಹೆಂಡಂದಿರನ್ನು ಮಾಡಿಕೊಂಡಿದ್ದರೂ ಮಕ್ಕಳಾಗಿರಲಿಲ್ಲ. ಆಗ ಅವರು ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳವರಲ್ಲಿ ಹೋಗಿ ಬಿನ್ನಕ್ಕೆ ಬರಬೇಕೆಂದು ಪ್ರಾರ್ಥಿಸಿಕೊಂಡರು. ಆ ಪ್ರಕಾರ ಮುತ್ಯಾ ಅವರು ತೊನ್ನಿನಳ್ಳಿ ಶಂಕ್ರಪ್ಪ ಮುತ್ಯಾ ಅವರೊಂದಿಗೆ ಖೇಣಿ ರಂಜೋಳಿಗೆ ಬಿನ್ನಕ್ಕೆ ಹೋದರು. ಆಗ ಮಕ್ಕಳಾಗಬೇಕು. ಆಶೀರ್ವದಿಸಿರಿ ಎಂದು ತಮ್ಮ ಬಯಕೆಯನ್ನು ತೋಡಿಕೊಂಡರು. ಆಶೀರ್ವದಿಸಿದ ಮುತ್ಯಾ ಅವರು ಸುತ್ತಮುತ್ತಣ ಗ್ರಾಮಗಳಿಗೆ ಸಂಚರಿಸಿ ಮಕ್ಕಳಾಗುವ ಭಾಗ್ಯವಿದ್ದ ಒಬ್ಬ ಹೆಣ್ಣುಮಗಳನ್ನು ಗುರುತಿಸಿ, ಅವಳೊಂದಿಗೆ ಶ್ರೀ ಖೇಣಿಯವರಿಗೆ ಲಗ್ನ ಮಾಡಿದರು. ಮುಂದೆ ಮನೆ ತುಂಬ ಮಕ್ಕಳಾದವು (ಇದನ್ನು ಚಿಮ್ಮಾಇದಲಾಯಿಯ ಜ್ಯೋತಿಷಿ ಶ್ರೀ ಅರ್ಜುನರಾವ ಕ್ಷೀರಸಾಗರ ಅವರು ಹೇಳಿದ್ದನ್ನು ಉಲ್ಲೇಖಿಸಬಹುದಾಗಿದೆ).

೩೪. ಸ್ಕಂದ ಪುರಾಣ ಹಚ್ಚಲು ಹೇಳಿದ್ರು :

ಒಮ್ಮೆ ಚಿಮ್ಮಾ ಇದಲಾಯಿ ಗ್ರಾಮದಲ್ಲಿ ಹಾರಕೂಡ ಮುತ್ಯಾ ಅವರು ಭಕ್ತರ ಇಚ್ಛೆಯ ಮೇರೆಗೆ ತಿಂಗಳು ಪರ್ಯಂತ ವಸತಿ ಮಾಡಿದ್ದರು. ಆಗ ಅವರಿಗೆ ವಯಸ್ಸು ನೂರರ ಸಮೀಪವೇ ಬಂದಿತ್ತು, ಹಣ್ಣು ಹಣ್ಣಾಗಿದ್ದರು. ಆದರೂ ಅವರ ಉತ್ಸಾಹಕ್ಕೆ ಕೊರತೆಯಿರಲಿಲ್ಲ. ಮುತ್ಯಾ ಅವರ ಇಚ್ಛೆಯ ಮೇರೆಗೆ ಖಾಂಡ ಮಾಡಿದ್ದರು. ಮುತ್ಯಾ ಇನ್ನು ಉಳಿಯೋದಿಲ್ಲಾ, ಅಂತ ಭಕ್ತರು ಅಳತಾ ಇದ್ರು. ಆಗ ಇದನ್ನು ಗಮನಿಸಿದ ಶ್ರೀ ಚನ್ನಬಸವ ಶಿವಯೋಗಿಗಳು ಭಕ್ತರನ್ನುದ್ದೇಶಿಸಿ ನೀವು ಸ್ಕಂದ ಪುರಾಣ' ತರಿಸಿ, ಪುರಾಣ ಹಚ್ಚಿರಿ. ದಿನಾ ದಾಸೋಹ ನಡಿಸಿರಿ. ನನಗೀಗ ಎಷ್ಟು ವರುಷ ಆಗಿದಾವು ಮತ್ತ ಅಷ್ಟ ವರುಷ ನಾ ಬದಕತೇನಿ' ಎಂದರಂತೆ. ಆದರೆ ಸ್ಕಂದ ಪುರಾಣ ತರುವುದಾಗಲಿ, ಪುರಾಣ ಹಚ್ಚುವುದಾಗಲಿ ಆಗಲಿಲ್ಲ ಎಂದಂದು ಭಕ್ತರು ಮರುಗಿದರು. ಆಗ ಮುತ್ಯಾ ಅವರು 'ಭೂಮಿ ರಿಣಾ ಮುಗೀತು, ಅಂತ ಅಂದಕೊಂಡು ಅಂದಿನಿಂದ ಊಟ ಬಿಟ್ಟು ಬಿಟ್ಟರು.

ಏಳು ದಿನ ಅಲ್ಲೆ ಉಳಿದ್ರು. ಆಗ ಕೇವಲ ಆಡಿನ ಹಾಲ ಮಾತ್ರ ಸೇವಿಸುತ್ತಿದ್ದರು. ತರುವಾಯ ಚಿಂಚೋಳಿಗೆ ಹೋಗಿ ಅಲ್ಲಿ ಲಿಂಗೈಕ್ಯರಾದರೆಂದೂ ಹೇಳುವರು (ಈ ಘಟನೆಯನ್ನು ಚಿಮ್ಮಾಇದಲಾಯಿಯ ಶ್ರೀ ಭೀಮರಾವ ಮಾಲಿಪಾಟೀಲರು ಹೇಳಿದ್ದನ್ನು ಸ್ಮರಿಸಬಹುದಾಗಿದೆ). ತರುವಾಯ ಶ್ರೀ ಅರ್ಜುನರಾವ ಅವರು ಸ್ಕಂದ ಪುರಾಣದ ಹಸ್ತಪ್ರತಿಯೊಂದನ್ನು ತಂದಿಟ್ಟುಕೊಂಡಿರುವೆ ಎಂದು ಜತನದಿಂದ ಇಟ್ಟುಕೊಂಡಿದ್ದ ಆ ಹಸ್ತಪ್ರತಿಯನ್ನು ನಮಗೆಲ್ಲ ತೋರಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

೩೫. ಭರತನೂರ ಸ್ವಾಮಿಗಳಿಗೆ ನಮಸ್ಕರಿಸಿದುದು :

ಒಮ್ಮೆ ಭರತನೂರದ ಶ್ರೀ ಗುರುನಂಜೇಶ್ವರ ಸ್ವಾಮಿಗಳು ಕುದುರೆ ಮೇಲೆ ಸಂಚಾರಕ್ಕೆ ಹೊರಟಿದ್ರು. ಆಗ ಅವರ ಎದುರಿಗೆ ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳು ಕುದುರೆಯ ಮೇಲಿಂದ ಎದುರಿಗೆ ಬಂದರು. ಇವರಿಗಿಂತ ಶ್ರೀ ಗುರುನಂಜೇಶ್ವರ ಸ್ವಾಮಿಗಳು ಕಿರಿಯವರಾದರೂ ತಾವೇ ಅವರಿಗೆ ನಮಸ್ಕರಿಸಿದರು. ಭಕ್ತರು ಆಗ ತಾವು ದೊಡ್ಡವರು. ಅವರೇ ಮೊದಲು ತಮಗೆ ನಮಸ್ಕರಿಸುವುದು ಸಂಪ್ರದಾಯ ಎಂದಾಗ, ಹಾಗಲ್ಲ ಅವರು ನಿರಂಜನ ಮೂರ್ತಿಗಳು ನಮಗಿಂತ ದೊಡ್ಡವರು. ಅದಕ್ಕೇ ನಮಸ್ಕರಿಸಿದೆ ಎಂದು ಶಿಷ್ಯರನ್ನು ಸಮಾಧಾನಪಡಿಸಿದ್ದನ್ನು ಚಿಮ್ಮಾಇದಲಾಯಿಯ ಶ್ರೀ ಶಾಮರಾವ ಮಹೇಂದ್ರಕರ ಅವರು ಹೇಳಿದ್ದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

೩೬. ರಜಾಕಾರರ ಹಾವಳಿ ಸೂಚನೆ :

ಒಮ್ಮೆ ಮುತ್ಯಾ ಅವರು ಭರತನೂರಕ್ಕೆ ಹೋಗಿದ್ದರು. ಅಲ್ಲಿ ಕಾಳವ್ವನ ಗುಡಿಯ ಹತ್ತಿರ ಕುಳತಾಗ ಆ ಕಡೆ ನೋಡಿ 'ಹೊಗಿ' ಎದ್ಯಾದ ಅಂದ್ರು, ಆಗ ರಜಾಕಾರರ ಹಾವಳಿ ಪ್ರಾರಂಭವಾಗಿತ್ತು ಅವರ ಗುಂಡಿಗೆ ಇಬ್ಬರು ಹಿಂದೂ ಜನರು ಬಲಿಯಾಗಿದ್ದರು. ಅದನ್ನು ಮುತ್ಯಾ ಅವರು ತಮ್ಮ ಅಂತರದೃಷ್ಟಿ ಯಿಂದ ಕಂಡುಕೊಂಡರಂತೆ (ಇದನ್ನು ಸುಲೇಪೇಟದ ತುಕಾರಾಮ ಘನಾತೆ ಅವರು ಹೇಳಿದ್ದನ್ನು ಇಲ್ಲಿ ಉಲ್ಲೇಖಿಸಲಾಗಿದೆ.)

೩೭. ತೊನ್ಸ್ಯಾಳ ಶಂಕರೆಪ್ಪ :

ಚಿಮ್ಮಾಇದಲಾಯಿ ಗ್ರಾಮಕ್ಕೆ ಒಮ್ಮೆ ತೊನ್ಸ್ಯಾಳ ಶಂಕರೆಪ್ಪ ಬಂದಿದ್ದರು. ಅವರೂ ಹಾರಕೂಡ ಮುತ್ಯಾ ಅವರಂತೆಯೇ ದಿವ್ಯಜ್ಞಾನಿಗಳಾಗಿದ್ದರು. ಈ ಊರಿಗೆ ಮಾರಿಬ್ಯಾನಿ ಬರ್ತದ, ಎಲ್ಲಾ ಜನಾ ಊರ ಖಾಲಿ ಮಾಡಬೇಕು ಅಂತ ಹೇಳಿದ್ರು. ಆಗ ತಿಂಗಳ ಪರ್ಯಂತ ಇದೇ ಗ್ರಾಮದಲ್ಲಿ ಬೀಡು ಬಿಟ್ಟಿದ್ದ ಶ್ರೀ ಚನ್ನಬಸವ ಶಿವಯೋಗಿಗಳು ಭಕ್ತರಿಂದ ಈ ವಿಷಯ ತಿಳಿದುಕೊಂಡು ಯಾರೂ ಊರು ಬಿಡಬಾರದು ಎಂದು ಅಪ್ಪಣೆ ಕೊಡಿಸಿದರು.

ಆಗ ಶಂಕರೆಪ್ಪನವರು ಹಾಗಾದರೆ ನೀವು ಸಾಯಬೇಕಂದ್ರ ಇರ್ರಿ. ಅದರಂತೆ, ಆಗ ಮತ್ತೆ ಶ್ರೀ ಚನ್ನಬಸವ ಶಿವಯೋಗಿಗಳು 'ನಾನು ಈ ಊರ ಉಪ್ಪ ಉಂಡೇನಿ ನಾ ಅದೇನಿ ಯಾಕ ಚಿಂತಿ ಮಾಡತೇರಿ ಅಂದರು. ಯಾರೂ ಊರ ಬಿಡಬೇಡಿರಿ ಅಂದರು. ತರುವಾಯ ದುಷ್ಟಶಕ್ತಿಗಳು, ಊರ ಹೊರಗಿನಿಂದ ದಾಟಿ ಹೋದದ್ದನ್ನು ಶ್ರೀ ಶಂಕರೆಪ್ಪ ತೊನ್ಸ್ಯಾಳರು ನೋಡಿದರಂತೆ. ಆ ಊರಿಗೆ ಮಾರಿ ಬೇನೆ ಬರಲಿಲ್ಲ. ಇದು ಹಾರಕೂಡ ಮುತ್ಯಾ ಅವರ ಆಶೀರ್ವಾದ ಎಂದು ಜನ ಈಗಲೂ ಕೊಂಡಾಡುತ್ತಾರೆ (ಇದನ್ನು ಸುಲೇಪೇಟದ ಶ್ರೀ ಶಾಮರಾಯ ಮಹೇಂದ್ರಕರ ಅವರು ಹೇಳಿದ್ದು).

೩೮. ಸುಲೇಪೇಟ ಮೇಲ್ಭಾಗ ಬೆಳೀತದ :

ಒಮ್ಮೆ ಹಾರಕೂಡ ಮುತ್ಯಾ ಅವರು ಸುಲೇಪೇಟೆಗೆ ಬಂದಿದ್ದರು. ಇಲ್ಲಿಯ ಶ್ರೀ ಶಂಕರರಾವ ಮಹೇಂದ್ರಕರ ಅವರು ಮೊದಲನೇ ಶಿಷ್ಯರಿದ್ದರು. ಮಕ್ಕಳಾದ ಮೇಲೆ ಇವರು ಮನೆಯಲ್ಲಿಯೇ ಸನ್ಯಾಸಿಗಳಂತಿದ್ದರು. ಗುರು ಶ್ರೀ ಚನ್ನಬಸವ ಶಿವಯೋಗಿಗಳು ಒಂದು ದಿನ ಸುಲೇಪೇಟದ ಊರು ಸುತ್ತು ಹಾಕಿ– ಈ ಗ್ರಾಮದ ಕೆಳಗಿನ ಭಾಗ ಹಾಳ ಬೀಳ್ತದ; ಊರ ಮೇಲ್ಗಡೆ ಬೆಳೀತದ ಎಂದು ಹೇಳಿದಂತೆಯೇ ಇಂದು ಕೆಳಗಿನ ಭಾಗ ಹಾಳ ಆಗಿದ್ದು, ಮೇಲ್ಭಾಗ ಬೆಳೆಯುತ್ತಲೇ ಹೊರಟಿದೆ. (ಶ್ರೀ ತುಕಾರಾಮ ಘನಾತೆ ಸುಲೇಪೇಟ.)

೩೯. ಸಿದ್ಧಾಚಲ ಪರ್ವತ :

ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳು ತಮ್ಮ ಜನ್ಮಭೂಮಿ ಮುಗ್ಗಿ ಗ್ರಾಮಕ್ಕೆ ಆಗಾಗ ಬರುತ್ತಲಿದ್ದರು. ಈ ಕಡೆಗೆ ಬಂದಾಗ ಸುಲೇಪೇಟ, ಚಿಮ್ಮಾಇದಲಾಯಿ, ಚಿಂಚೋಳಿಗಳಲ್ಲಿ ಇವರು ಹಲವಾರು ದಿವಸಗಳವರೆಗೆ ಭಕ್ತರ ಇಚ್ಛೆಯ ಮೇರೆಗೆ ಬಿನ್ನ ಸ್ವೀಕರಿಸುತ್ತಲಿದ್ದರು. ಈ ಕಡೆಗೆ ಬಂದಾಗ ಸಮೀಪದ 'ಪಂಚನ್‌ಪಳ್ಳಿ' ಗುಡ್ಡದ ಮೇಲೆ ಹೋಗಿ ಏಕಾಂತದಲ್ಲಿ ಧ್ಯಾನಾಸಕ್ತರಾಗುತ್ತಿದ್ದರು. ಈ ಗುಡ್ಡ ಸಾಮಾನ್ಯವಲ್ಲ ಸಿದ್ಧಪುರುಷರ ಬೆಟ್ಟ, ಸಿದ್ಧರು, ದೇವಿಭಕ್ತರು ಇಲ್ಲಿ ವಾಸ ಮಾಡಿಕೊಂಡಿರುವ ಬೆಟ್ಟ ಎಂದು ಗುರುತಿಸಿದವರು ಶ್ರೀ ಚನ್ನವೀರ ಶಿವಯೋಗಿಗಳು. ಅಂತೆಯೇ ಶ್ರೀ ಚನ್ನಬಸವ ಶಿವಯೋಗಿಗಳವರಿಗೆ ಇಲ್ಲಿ ಸಿದ್ಧರ ದರ್ಶನವಾಗಿರುವುದೆಂದೂ ಅವರ ಭಕ್ತರ ನಂಬಿಕೆ ಯಾಗಿದೆ. ಅಂತೆಯೇ ಅವರ ಪ್ರೀತಿಯ ಮೊದಲನೇ ಶಿಷ್ಯ ಈ ಬೆಟ್ಟದಲ್ಲಿ ಶ್ರೀ ಚನ್ನಬಸವೇಶ್ವರರ ಹೆಸರಿನ ದೇವಾಲಯವೊಂದನ್ನು ಶ್ರೀ ಶಂಕರರಾವ ಮಹೇಂದ್ರಕರ ಅವರು ಅತ್ಯಂತ ಶ್ರದ್ಧೆಯಿಂದ ಕಟ್ಟಿಸಿರುವುದನ್ನು ಇಲ್ಲಿಯ ಜನ ಈಗಲೂ ಹೇಳುತ್ತಿರುತ್ತಾರೆ. (ಶ್ರೀ ಶಾಮರಾವ ಮಹೇಂದ್ರಕರ) ಹಾರಕೂಡ ಮುತ್ಯಾ ಅವರು ಇದನ್ನು 'ಸಿದ್ಧಾಚಲ ಪರ್ವತ' ಎಂದು ಹೆಸರಿಸಿದಂತೆ ಶ್ರೀ ಶಂಕರರಾವರು ಇದೇ ಹೆಸರಿನಿಂದ ಕರೆಯುತ್ತಿರುವರು.

೪೦. ತೆಂಗ ಒಡಸದೆ ಹಾಗೆ ಹಿಂತಿರುಗಿದ ಸಿದ್ಧಪ್ಪ :

ಚಿಮ್ಮಾ ಇದಲಾಯಿ ಗ್ರಾಮದಲ್ಲಿ ಜಮಾದಾರ ಸಿದ್ಧಪ್ಪ ಎಂಬವರಿದ್ದರು. ಅವರು ಒಂದು ಕಡೆ ತೆಗೆದಿರಿಸಿದ್ದ ಎರಡ ತೊಲಿಯ ಬಂಗಾರದ ಆಭರಣವು ಅವರಿಟ್ಟ ಜಾಗದಲ್ಲಿ ಇದ್ದಿರಲಿಲ್ಲ. ಯಾರೋ ಕಳ್ಳತನ ಮಾಡಿದಾರು ಅಂದುಕೊಂಡು ಹಾರಕೂಡ ಮುತ್ಯಾನ ಬಲ್ಲಿ ಹೋಗಿ ಎರಡು ಟೆಂಗ ಒಡಸ್ತೇನಿ ಅಂತ ಬೇಡಿಕೊಂಡ ಮುತ್ಯಾನ ಹತ್ತರ ಹೋದ. ತಮ್ಮ ಮನೆಯವರೂ ಅಲ್ಲಿಗೇ ದರ್ಶನಕ್ಕೆ ಹೋಗಿದ್ದರು. ತಾನಿಟ್ಟ ಆಭರಣವನ್ನು ಮುತ್ಯಾಗ ನಮಸ್ಕಾರ ಮಾಡುವಾಗ ಮಗಳ ಹಾಕಿಕೊಂಡದ್ದನ್ನು ಕಂಡು ಸಂತೋಷ ಪಟ್ಟನು. ಆದರೆ ಮುತ್ಯಾಗ, ತೆಂಗ ಒಡಸದ್ಲೆ ಹಾಗೇ ಹಿಂತಿರುಗಿದುದನ್ನು ನೋಡಿದ ಮುತ್ಯಾ ಅವರು ಯಾಕ ಸಿದ್ಧಪ್ಪ? ಟೆಂಗ ಒಡಸದ್ಲೆ ಹಾಗೇ ಹೊರಟೇದಿ ಅಂದರು. ಅದ ಕೇಳಿ–ಕೇಳಸ್ತವರಂಗ ಸಿದ್ಧಪ್ಪ ಹಾಗೇ ಹೊರಟುಹೋದ. (ಇದನ್ನು ಭೀಮರಾವ ಮಾಲಿಪಾಟೀಲರು ಚಿಮ್ಮಾ ಇದಲಾಯಿಯ ಅರ್ಜುನರಾವ ಕ್ಷೀರಸಾಗರ ಅವರು ಹೇಳಿದ್ದು.)

೪೧. ಖಾನಾವಳಿ ಹನುಮಂತಪ್ಪ :

ಚಿಂಚೋಳಿಯ ಖಾನಾವಳಿ ಹನುಮಂತಪ್ಪ ಎಂಬುವರು ಸೆರೆಬಾಟ್ಲಿ ಕುಡಕೋತ ಹೋಗ್ತಾ ಇದ್ರು. ಕುಡ್ಯಾಕ ತಗೊಂಡದ್ದು ಸೆರಿ ಬಾಟ್ಲಿ ಆದರೂ ಅವರು ಕುಡಿವಾಗ ಅದು ಹಾಲಿನ ಬಾಟ್ಲಿ ಆಗ್ತಿತ್ತು. ಇದು ಮುತ್ಯಾ ಅವರ ಆಶೀರ್ವಾದದ ಫಲ ಎಂದು ಜನ ಅನ್ನುತ್ತಿದ್ದರು. (ಇದನ್ನು ಭೀಮರಾವ ಮಾಲಿಪಾಟೀಲರು– ಚಿಮ್ಮಾ ಇದಲಾಯಿ ಅವರು ಹೇಳಿದ್ದು.

೪೨. ಕಂಟ್ಲಿ ಎತ್ತು :

ಶ್ರೀ ಚನ್ನಬಸವ ಶಿವಯೋಗಿಗಳು ಸಂಚಾರಕ್ಕೆ ಹೊರಟಾಗ ಕುದುರೆಯನ್ನು ಹತ್ತುತ್ತಿದ್ದರು. ಒಮ್ಮೊಮ್ಮೆ ಕಂಟ್ಲಿ ಎತ್ತಿನ ಮೇಲೆ ಕುಳಿತೂ ಹೋಗುತ್ತಲಿದ್ದರು. ಹೀಗೆಯೇ ಒಮ್ಮೆ ಹೊಸಳ್ಳಿಯಿಂದ ರಾಜಾಪುರಕ್ಕೆ ಕಂಟ್ಲಿ ಎತ್ತಿನ ಮೇಲೆ ಕುಳಿತು ಹೊರಟ್ಟಿದ್ದರು. ಅದೇ ದಾರಿಗುಂಟ ಒಬ್ಬ ಮುಪ್ಪಾನ ಮುದುಕಿ ನಡೀತಾ ಹೊರಟಿದ್ದಳು. ಇದನ್ನು ಕಂಡ ಮುತ್ಯಾ ಅವರು, ಪಾಪ ಮುದುಕಿ, ಅವಳು ಒಲ್ಲೆ, ಒಲ್ಲೆಂದ್ರು ಬಲಾತ್ಕಾರ ಮಾಡಿ ತಮ್ಮ ಕಂಟ್ಲಿ ಎತ್ತಿನ ಮೇಲೆ ಕೂಡ್ರಿಸಿಕೊಂಡು ಜೊತೆಗಿದ್ದ ಮರಿ ಕಾರ್ತಿಕೇಯನೊಂದಿಗೆ ಮಾತಾಡುತ್ತ ಹೊರಟರು. ಊರ ಸಮೀಪ ಬಂದಾಗ ಹಿಂದೆ ಕುಳಿತಿದ್ದ ಆ ಮುದುಕಿ ಎತ್ತಿನ ಮ್ಯಾಲ ಇದ್ದಿರಲಿಲ್ಲ. ಸಮೀಪನೂ ಎಲ್ಲಿಯೂ ಕಾಣಿಸಲಿಲ್ಲ. ಚಿಂತಾಕ್ರಾಂತರಾಗಿ ಯಾವ ಸ್ಥಳದಲ್ಲಿಂದ ಆ ಮುದುಕಿಯನ್ನು ಕೂಡ್ರಿಸಿಕೊಂಡು ಹೊರಟ್ಟಿದ್ದರೊ ಅಲ್ಲಿತನಾ ಹೋಗಿ ಎಲ್ಲಿಯೂ ಕಾಣದೆ ಇದ್ದ ಆ ಮುದುಕಿ ದೇವಿಯೆಂದುಕೊಂಡು ಅಲ್ಲಿಯೇ ಒಂದು ಕಾಯಿ

ಒಡೆದು ರಾಜಾಪುರಕ್ಕೆ ಹೋದರಂತೆ (ಇದನ್ನು ಹೇಳಿವರು ದಿ. ಷ. ಬ್ರ. ಕಾರ್ತಿಕೇಯ ಸ್ವಾಮಿಗಳು ವ. ೮೬).

೪೩. ಎಣ್ಣೆ ಬದಲಿ ಗೋಮೂತ್ರ ಸಮೆಗೆ :

ಚಿತಾಪೂರ ತಾಲೂಕ ರಾಜಾಪುರದಲ್ಲಿ ಒಮ್ಮೆ ಪುರಾಣ ನಡೆದಿತ್ತು. ಹಾರಕೂಡದ ಶ್ರೀ ಚನ್ನಬಸವ ಮುತ್ಯಾ ಮತ್ತು ಮಳಖೇಡದ ಕಾರ್ತಿಕೇಯ ಸ್ವಾಮಿಗಳು ಭಕ್ತರ ಇಚ್ಛಾಮೇರೆಗೆ ಬಿನ್ನಕ್ಕೆ ಬಂದಿದ್ದರು. ಆಗ ಅಲ್ಲಿದ್ದ ಎರಡು ಸಮೆಗಳಲ್ಲಿ ಎಣ್ಣೆ ತೀರಿತ್ತು. ಹಾಕಲೆಂದು ಅಲ್ಲಿಯೆ ಒಂದು ಬಟ್ಟಲದಲ್ಲಿ ಎಣ್ಣೆಯನ್ನು ಇನ್ನೊಂದು ಬಟ್ಟಲಲ್ಲಿ ಗೋಮೂತ್ರ ಇಟ್ಟಿದ್ದರು. ರುದ್ರ ಓದುತ್ತಿದ್ದ ಶ್ರೀ ನೀಲಕಂಠಯ್ಯ ಎಣ್ಣೆ ಬದಲಿ ಗೋಮೂತ್ರ ಸಮೆಗೆ ಹಾಕಿದರು. ಒಂದು ತಾಸಿನವರೆಗೂ ದೀಪ ಉರಿಯುತ್ತಲೇ ಇತ್ತಂತೆ. ಎಣ್ಣೆ ಬಟ್ಟಲ ಉಳಿದದ್ದನ್ನು ನೋಡಿ, ಇದು ಮುತ್ಯಾನ ಆಶೀರ್ವಾದ ಎಂದು ಜನ ಕೊಂಡಾಡಿದರು. (ಇದನ್ನ ಸ್ವತಃ ನೀಲಕಂಠಯ್ಯನವರೇ ಹೇಳಿದ ಮಾತು.)

೪೪. ಬ್ರಹ್ಮ ಪಿಶಾಚಿ :

ಆಂಧ್ರ ಪ್ರದೇಶದ ಇಂದ್ರಭಡಿಯಲ್ಲಿ ಅನುಷ್ಠಾನಕ್ಕೆ ಕುಳಿತಿದ್ದ ಕಾರ್ತಿಕೇಶ್ವರರಿಗೆ ಬ್ರಹ್ಮ ಪಿಶಾಚಿಯೊಂದು ಕಿರಿ ಕಿರಿ ಮಾಡಿತ್ತು. ಕುತಗಿಮಠ ನೀರ ಬಂದಿದ್ದವು. ಪುಸ್ತಕಗಳು ನೀರಾಗ ಮುಳುಗಿದರೂ ಏನೂ ಆಗಿದ್ದಿಲ್ಲ. ಗಾಬರಿಯಾದ ಕಾರ್ತಿಕೇಶ್ವರರು ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳನ್ನು ಪ್ರಾರ್ಥಿಸಿದರು. ಅವರು ತತ್‌ಕ್ಷಣ ಅಲ್ಲಿ ಪ್ರತ್ಯಕ್ಷರಾಗಿ ಖಾಂಡ ಮಾಡಿಸಿ ಅಲ್ಲಿದ್ದ ಬ್ರಹ್ಮ ಪಿಶಾಚಿಯನ್ನು ಓಡಿಸಿಬಿಟ್ಟರು. ಅದೇ ರೀತಿ 'ಗಾಣಗಾಪುರ'ದಲ್ಲಿ ಒಮ್ಮೆ ಅನುಷ್ಠಾನಕ್ಕೆ ಕುಳಿತಿದ್ದರು. ಆವಾಗ ಹಾರಕೂಡ ಮುತ್ಯಾ ಕನಸಿನಲ್ಲಿ ಬಂದು ರುದ್ರಾಕ್ಷಿಮಾಲೆ ಕೊಟ್ಟು ಹೋದರಂತೆ. (ಇದನ್ನು ಸ್ವತಃ ಕಾರ್ತಿಕೇಶ್ವರರೇ ಹೇಳಿದ್ದು).

ಕೊನೆ-ಕೊನೆಯ ದಿನಗಳು

ಹಾರಕೂಡದ ಶ್ರೀ ಚನ್ನಬಸವ ಶಿವಯೋಗಿಗಳು ಭಕ್ತರ ಮನೆಗಳಿಗೆ, ಅದೂ ಪರಸ್ಥಳಕ್ಕೆ ಹೋಗುವುದನ್ನು ಕಡಿಮೆ ಮಾಡಿದ್ದರು. ವೃದ್ಧಾಪ್ಯದಿಂದಾಗಿ ಮೊದಲಿನಂತೆ ಸಂಚರಿಸಲು ಆಗುತ್ತಿದ್ದಿರಲಿಲ್ಲ. ಆದರೂ ಭಕ್ತರ ಆಗ್ರಹದ ಆಮಂತ್ರಣಕ್ಕೆ ಮಣಿದು ಆಗಾಗ ಹೋಗುತ್ತಿದ್ದರು. ಒಮ್ಮೆ ಚಿಂಚೋಳಿಯ ಪರಮಭಕ್ತ ಸೀಳಿನ ಸಿದ್ಧಪ್ಪ ಎಂಬುವರು ಆಮಂತ್ರಣ ನೀಡಿ ತಮ್ಮ ಊರಿಗೆ ಕರೆದುಕೊಂಡು ಹೋಗಿದ್ದರು. ದಾರಿಯಲ್ಲಿ ಕೊಡದೂರಿನ ಭಕ್ತರಿಗೆ ದರ್ಶನ

ನೀಡಿ, ಆ ಗ್ರಾಮದ ಮರಿಯಪ್ಪ ರಾಜಾಪುರ ಅವರ ಮನೆಯಲ್ಲಿ ಸ್ನಾನ ಪೂಜೆ ಪ್ರಸಾದ ಸ್ವೀಕರಿಸಿ ಆಶೀರ್ವಾದ ಪಡೆದದ್ದನ್ನು ಅವರ ಮಗ ಶ್ರೀ ನೀಲಕಂಠಪ್ಪ ರಾಜಾಪುರ ಅವರು ಪೂಜ್ಯರನ್ನು ಈಗಲೂ ಸ್ಮರಿಸುತ್ತಲಿರುತ್ತಾರೆ. ಶಿವಯೋಗಿಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನೋಡಿಕೊಂಡಿದ್ದರು. ಚಿಂಚೋಳಿಯ ಸೀಳಿನ ಸಿದ್ಧಪ್ಪ ಅವರ ಮನೆಯಲ್ಲೆ ಪೂಜೆ ಪ್ರಸಾದ ಸೇವಿಸಿ ವಿಶ್ರಾಂತಿ ಪಡೆದರು. ಊರಲ್ಲಿ ಶಿವಯೋಗಿಗಳು ಆಗಮಿಸಿರುವ ಸುದ್ದಿ ಹಬ್ಬಿತು. ಅದೇ ಗ್ರಾಮದ ಕೋರೆಪ್ಪ ಏದಲು ಅವರು ತಮ್ಮ ಮನೆಗೆ ಬರಬೇಕೆಂದು ಆಮಂತ್ರಿಸಿದರು. ಒಲ್ಲೆನ್ನಲಾಗದ್ದಕ್ಕೆ ಮರುದಿನ ಕೋರೆಪ್ಪ ಅವರ ಮನೆಗೆ ತೆರಳಿದರು. ಇದು ನನ್ನ ಭಾಗ್ಯ ಎಂದುಕೊಂಡ ಕೋರೆಪ್ಪ ಅವರು ಶಿವಯೋಗಿಗಳನ್ನು ಮರುದಿನ ತಮ್ಮ ಮನೆಗೆ ಆದರದಿಂದ ಕರೆದುಕೊಂಡು ಹೋದರು. ಮನೆಯವರೆಲ್ಲರೂ ಭಕ್ತಿಪೂರ್ವಕ ಸರ್ವಸಿದ್ಧತೆ ಮಾಡಿದರು. ಶ್ರೀಗಳವರನ್ನು ತಮ್ಮ ಮನೆಯಲ್ಲಿಯೇ ಕೆಲವು ದಿವಸ ಇಟ್ಟುಕೊಂಡರು. ಎಲ್ಲರೂ ಅಷ್ಟೇ ಭಯಭಕ್ತಿಯಿಂದ ಗುರುಗಳ ಸೇವೆಯನ್ನು ಮಾಡಿದರು. ಶ್ರೀ ಚನ್ನಬಸವ ಶಿವಯೋಗಿಗಳು ಒಂದು ದಿವಸ ಭಕ್ತ ಶ್ರೀ ಕೋರೆಪ್ಪನನ್ನು ಕರೆಯಿಸಿದರು. 'ಚಿಂಚೋಳಿಯ ಸುತ್ತಮುತ್ತಲಿರುವ ಪುಣ್ಯ ತೀರ್ಥ ಕ್ಷೇತ್ರಗಳನ್ನು ನೋಡಬೇಕೆಂಬ ಅಭಿಲಾಷೆ' ತಿಳಿಸಿದರು. ಆ ಪ್ರಕಾರ ಕೋರೆಪ್ಪ ಆ ಗ್ರಾಮದ ಕೆಲ ಭಕ್ತರನ್ನು ಕೂಡಿಸಿ ಸಮಾಲೋಚನೆ ನಡೆಸಿದರು. ಗುರುಗಳನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ಹೋಗುವ ನಿರ್ಧಾರ ಮಾಡಿದರು. ಶಿವಯೋಗಿಗಳವರ ಅಪ್ಪಣೆ ಪಡೆದು ಭಕ್ತಸಮೂಹದೊಂದಿಗೆ ಕ್ಷೇತ್ರಗಳಿಗೆ ಹೊರಟರು. ಮೊದಲು ಐನೂಲಿಯ ಕರಿಬಸವೇಶ್ವರ ಗದ್ದುಗೆಯಿದ್ದ ಮಹಾಂತೇಶ್ವರ ಮಠಕ್ಕೆ ತೆರಳಿದರು. ಅಲ್ಲಿ ದರ್ಶನ ಪಡೆದುಕೊಂಡು ಕರಕನಳ್ಳಿಯ ಬಕ್ಕ ಪ್ರಭುಗಳ ದೇವಾಯಲಕ್ಕೆ ಹೋದರು. ಇದು ಕರಕನಳ್ಳಿಯ ಊರ ಹೊರಗೇ ಇದ್ದು, ಮಹಾದ್ವಾರದ ಮೇಲೆ ಶಿವನು ತನ್ನ ಪರಿವಾರ ಸಮೇತ ಕುಳಿತಿರುವ ಭವ್ಯ ಕಲಾಕೃತಿಯೊಂದು ಇರುವುದು. ಸುತ್ತಲೂ ಪ್ರಶಾಂತವೂ ಭವ್ಯವೂ ಆಗಿದೆ.

■■

ಭಾಲ್ಕಿಯ ಶ್ರೀಮದ್ ಘನಲಿಂಗ ಚಕ್ರವರ್ತಿ

ಡಾ. ಚನ್ನಬಸವ ಪಟ್ಟದ್ದೇವರು

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ವಿಜೇತರೂ, ಗುಲಬರ್ಗಾ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ ಪ್ರಶಸ್ತಿ ಪಡೆದವರೂ ಆದ ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರು ಕರ್ನಾಟಕ ರಾಜ್ಯದ ಪುಣ್ಯಚರಿತರು. ಕರ್ನಾಟಕ ಗಡಿ ಜಿಲ್ಲೆ ಬೀದರದ ಭಾಲ್ಕಿ ತಾಲೂಕ ಪಟ್ಟಣದ ಹಿರೇಮಠ ಮಹಾಸಂಸ್ಥಾನದ ಪೀಠಾಧಿಕಾರಿಗಳಾಗಿದ್ದ ಶ್ರೀ ಚನ್ನಬಸವ ಪಟ್ಟದ್ದೇವರು ದಿ. ೨೨-೧೨-೧೮೮೯ರಂದು ಔರಾದ ತಾಲೂಕ ಕಮಾಲನಗರದಲ್ಲಿ ಜನಿಸಿದವರು. ತಂದೆ ರಾಚಪ್ಪ ಬುಳ್ಳಾ, ತಾಯಿ ಸಂಗಮ್ಮ, ಈ ದಂಪತಿಗಳಿಗೆ ಮಗುವಾಗಿ ಜನಿಸಿದ ಮಾರುತೆಪ್ಪ (ಮಹಾರುದ್ರ) ಅವರು ತಮ್ಮ ಐದನೇ ವಯಸ್ಸಿನಲ್ಲಿಯೆ ತಂದೆ-ತಾಯಿಗಳನ್ನು ಕಳೆದುಕೊಂಡರು.

ಕಮಾಲನಗರದ ಶ್ರೀ ಶಂಕರಯ್ಯ ದೇಶಿಕರ ಹಾಗೂ ಭಾಲ್ಕಿಯ ಮಠಾಧ್ಯಕ್ಷ ಶ್ರೀ ಸಿದ್ಧಬಸವ ಸ್ವಾಮಿಗಳ ಸೇವೆಗೈದ ನಿಷ್ಠಾವಂತ ವೀರಶೈವ ಸುಸಂಸ್ಕೃತ ಮನೆತನದ ಸತ್ಪುತ್ರರಿವರು. ಕಮಾಲನಗರದ ಸಾಳಿ ಸಿದ್ರಾಮಯ್ಯ, ಮುಧೋಳದ ಶ್ರೀ ಶಿವಲಿಂಗೇಶ್ವರ ಹಾಗೂ ಹಾನಗಲ್ಲ ಕುಮಾರ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದ್ದ ಶಿವಯೋಗ ಮಂದಿರ ಮೊದಲಾದ ಕಡೆ ಅಧ್ಯಯನ ಮಾಡಿ ವಿದ್ಯೆ ಬುದ್ಧಿ ಸಂಪಾದಿಸಿದ ಮಹಾನುಭಾವಿಗಳಿವರು. ಅಂತೆಯೆ ಕಮಾಲನಗರದ ಈ ಮಾರೊತೆಪ್ಪ (ಮಹಾರುದ್ರ) ಚನ್ನಬಸವರಾಗಿ ಭಾಲ್ಕಿ ಹಿರೇಮಠದ ಅಧಿಪತಿಗಳಾಗಿ ೧೯೨೪ರಲ್ಲಿ ಪಟ್ಟಾಧಿಕಾರಿಗಳಾಗಿದ್ದರು.

ಮಹಾರುದ್ರರು ಭಾಲ್ಕಿಯ ಶಾಖಾಮಠವಾದ ಕಮಾಲನಗರ ಮಠ ದಲ್ಲಿಯ ಶ್ರೀ ಶಂಕರಯ್ಯ ದೇಶಿಕರ ಸೇವೆ ಮಾಡುತ್ತಲಿದ್ದರು. ಮಠವನ್ನು ಸ್ವಚ್ಛಗೊಳಿಸುವುದು, ದೇಶಿಕರ ಸ್ನಾನ ಪೂಜೆಯ ವ್ಯವಸ್ಥೆ, ಪ್ರಸಾದಕ್ಕೆ ಊರಲ್ಲಿ ಕಂತಿ ಭಿಕ್ಷೆ ಎತ್ತುವುದು, ಮಧ್ಯಾಹ್ನ ಮಠದ ಆಕಳುಗಳನ್ನು ಹೊಲಕ್ಕೆ ಹೋಗಿ ಮೇಯಿಸಿಕೊಂಡು ಬರುವುದು ಇವರ ನಿತ್ಯದ ಕಾಯಕವಾಗಿತ್ತು.

ಶ್ರೀ ಮಹಾರುದ್ರರು ಎಂಟು ವರುಷದವರಾದಾಗ ಅವರಿಗೆ ಭಾಲ್ಕಿ ಶ್ರೀ ಸಿದ್ಧಬಸವ ಸ್ವಾಮಿಗಳು 'ಚನ್ನಬಸವ' ಎಂದು ನಾಮಕರಣ ಮಾಡಿ ಅಯ್ಯಾಚಾರ ದೀಕ್ಷೆ ಕೊಟ್ಟರು. ಅಲ್ಲಿಯೆ ಅಷ್ಟಿಷ್ಟು ಕನ್ನಡ ಮತ್ತು ಮರಾಠಿ ಕಲಿತರು.

ಮುಧೋಳದ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಇವರ ಸೇವಾನಿಷ್ಠೆ ಯನ್ನು ಮೆಚ್ಚಿಕೊಂಡು ಅಧ್ಯಯನಕ್ಕೆಂದು ತಮ್ಮ ಜೊತೆಗೆ ಕರೆದುಕೊಂಡು ಹೋದರು. ಶ್ರೀಗಳವರು ಸಂಗಮದಲ್ಲಿ ಅನುಷ್ಠಾನಕ್ಕೆ ಕುಳಿತಾಗ ಶ್ರೀ ಚನ್ನಬಸವರು ನಿಷ್ಠೆಯಿಂದ ಸೇವೆ ಸಲ್ಲಿಸಿದರು. ಔರಾದದ ಅಮರೇಶ್ವರ ಗುಡಿ ಯಲ್ಲಿದ್ದ ಕೇದಾರ ಗಳಂಗಳಪ್ಪ ಕನ್ನಡ ಶಾಲೆಯಲ್ಲಿ ಓದಲು ಬರೆಯಲು ಕಲಿತುಕೊಂಡರು. ಇಲ್ಲಿ ಶಬರ ಶಂಕರ ವಿಳಾಸ, ರಾಜಶೇಖರ ವಿಳಾಸ, ವೃಷಭೇಂದ್ರ ವಿಜಯ, ಕರ್ನಾಟಕ ಶಬ್ದಮಂಜರಿ ಮೊದಲಾದ ಕಾವ್ಯಕೃತಿಗಳನ್ನು ಅಭ್ಯಾಸ ಮಾಡಿದರು. ಇವರು ಹದಿನಾರು ವರುಷದವರಾದಾಗ ಶ್ರೀ ಶಿವಲಿಂಗೇಶ್ವರ ಸ್ವಾಮಿಗಳು ಪ್ರಸಾದ ದೀಕ್ಷೆ ನೀಡಿದರು.

ಭಾಲ್ಕಿಯ ಶ್ರೀ ಸಿದ್ಧ ಬಸವ ಸ್ವಾಮಿಗಳ ಸೇವೆಯನ್ನೂ ಮಾಡಿದರು. ಹಾನಗಲ್ಲಿನ ಪೂಜ್ಯ ಕುಮಾರ ಸ್ವಾಮಿಗಳು ಪ್ರಾರಂಭಿಸಿದ್ದ ಶಿವಯೋಗ ಮಂದಿರ ಪರಿಸರದಲ್ಲಿದ್ದುಕೊಂಡು, ಶ್ರೀ ಕುಮಾರ ಸ್ವಾಮಿಗಳ ಸೇವಕರಾಗಿ, ಸಾಧಕರೆನಿಸಿ ವಿಶೇಷ ಅಭ್ಯಾಸ ಮಾಡಿದರು. ಸಂಸ್ಕೃತ ಕಲಿತರು. ವಚನಗಳ ಅಭ್ಯಾಸ ಮಾಡಿದರು. ವೀರಶೈವ ತತ್ವ ಸಿದ್ಧಾಂತಗಳ ಅಭ್ಯಾಸ ಮಾಡಿದರು. ಕುಮಾರ ಸಂಭವ, ರಘುವಂಶ, ನಿಜಗುಣರ ಕೃತಿಗಳು, ಶತಕತ್ರಯ, ಶೂನ್ಯ ಸಂಪಾದನೆ ಮೊದಲಾದ ಗ್ರಂಥಗಳ ಅಭ್ಯಾಸ ಮಾಡಿದರು. ತಮ್ಮ ಶಿವಯೋಗ ಮಂದಿರದ ಆರು ವರುಷಗಳ ಸಾಧಕಾವಸ್ಥೆಯಲ್ಲಿ ಶ್ರೀ ಚನ್ನಬಸವರು ಅಧ್ಯಾತ್ಮದ ಅಭ್ಯಾಸ ಮಾಡಿ, ಸಾಧನೆಯ ಬಲದಿಂದ ಮಹಾನುಭಾವಿಗಳಾಗಿ ಕಂಗೊಳಿಸಿದರು. ಬೆಳಗಾವಿಯ ನಾಗನೂರ ರುದ್ರಾಕ್ಷಿಮಠದ ಡಾ. ಶಿವಬಸವಸ್ವಾಮಿಗಳೂ ಇವರ ಸಹಪಾಠಿಗಳಾಗಿದ್ದರು. ಭಾಲ್ಕಿಯ ಶ್ರೀ ಸಿದ್ಧ ಬಸವ ಸ್ವಾಮಿಗಳು ಲಿಂಗೈಕ್ಯ ರಾದುದರಿಂದ ಈ ಪೀಠಕ್ಕೆ ಹಿರಿಯರ ಇಚ್ಛೆಯಂತೆ ೧೯೨೪ರ ಫೆಬ್ರುವರಿ ತಿಂಗಳಲ್ಲಿ ಶ್ರೀ ಚನ್ನಬಸವ ಶಿವಯೋಗಿಗಳು ಭಾಲ್ಕಿಯ ಹಿರೇಮಠದ ಪಟ್ಟಾಧ್ಯಕ್ಷರಾದರು.

ಶ್ರೀಗಳವರ ಪಟ್ಟಾಧಿಕಾರ ಮಹೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಕೆಳದಿ ಸಂಸ್ಥಾನ ಹಿರೇಮಠದ ಪಟ್ಟಾಧಿಕಾರಿಗಳಾಗಿದ್ದ ಶ್ರೀಮದ್ ಘನಲಿಂಗ ಚಕ್ರವರ್ತಿ

ರೇವಣಸಿದ್ಧ ಸ್ವಾಮಿಗಳು ಆಗಮಿಸಿ, ಸ್ಥಿರ ಪಟ್ಟಾಧಿಕಾರ ನೆರವೇರಿಸಿಕೊಟ್ಟರು. ಶ್ರೀ ಚನ್ನಬಸವರ ಇಚ್ಛೆಯಂತೆ ಉಪದೇಶ ನೀಡಲು ಹಾನಗಲ್ಲ ಕುಮಾರ ಸ್ವಾಮಿಗಳು ಆಗಮಿಸಿದ್ದರು. ಅವರು ಶ್ರೀ ಚನ್ನಬಸವ ಪಟ್ಟದ್ದೇವರಿಗೆ ಗಡಿಭಾಗದ ಈ ಪ್ರದೇಶದಲ್ಲಿ ಕನ್ನಡದ ಕಂಪನ್ನು ಪಸರಿಸಬೇಕೆಂದೂ ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸಬೇಕೆಂದೂ ಮತ್ತು ಹಾಳಾಗುತ್ತಿರುವ ಧರ್ಮದ ಜೀರ್ಣೋದ್ಧಾರ ಕಾರ್ಯವನ್ನು ಭರದಿಂದ ಕೈಕೊಳ್ಳಬೇಕೆಂದೂ ಆಶೀರ್ವದಿಸಿದರು. ಗುರುಗಳ ಆಶೀರ್ವಚನವನ್ನು ಶಿರಸಾವಹಿಸಿ ನಡೆಸಿಕೊಂಡು ಹೋಗುವೆ ಎಂದು ಪ್ರತಿಜ್ಞೆಗೈದ ಶ್ರೀಗಳವರು ನೈತಿಕ ಭದ್ರವಾದ ನೆಲೆಗಟ್ಟಿನ ಮೇಲೆ ವ್ಯಕ್ತಿತ್ವ ರೂಪಿಸಿಕೊಂಡವರಾಗಿದ್ದರು. ಕಟ್ಟಾ ಮಡಿವಂತರಿದ್ದರು. ಹೆಣ್ಣು ಮಕ್ಕಳಿಂದ ದೂರವಿದ್ದರು. ಸೇವಕರೇ ಇವರ ಸ್ನಾನ–ಪೂಜೆ ಪ್ರಸಾದದ ವ್ಯವಸ್ಥೆ ಮಾಡುತ್ತಿದ್ದರು. ಅಂತರಂಗ ಬಹಿರಂಗ ಶುದ್ಧಿ ಪಡೆದುಕೊಂಡ ಪೂಜ್ಯಶ್ರೀ ಚನ್ನಬಸವರದು ಸತ್ಯ ನುಡಿ, ಅಹಿಂಸಾ ಮಾರ್ಗ, ಸದಾಚಾರ, ಸದುವಿನಯದ ಸಾಕಾರ ಮೂರ್ತಿಗಳಾಗಿದ್ದರು. ಕಾಯಕ ದಾಸೋಹ ಪ್ರೇಮಿಗಳೂ ಇವರಾಗಿದ್ದರು. ಬಸವಾದಿ ಶಿವಶರಣರ ವಚನಗಳು ಶ್ರೀಗಳವರ ಜೀವನದ ಹಾಸು ಹೊಕ್ಕಾಗಿದ್ದವು. ಪ್ರತಿ ನಿತ್ಯ ವಚನ ಪಠಣ, ಚಿಂತನ, ಪ್ರಾರ್ಥನೆ ಉಪದೇಶದಲ್ಲಿ ತಲ್ಲೀನರಾಗಿರುತ್ತಿದ್ದರು.

ಶ್ರೀಗಳವರು ಶ್ರೀಮದ್ ಘನಲಿಂಗ ಚಕ್ರವರ್ತಿಗಳಾಗಿ ಭಾಲ್ಕಿಯ ಪೀಠಾಧ್ಯಕ್ಷರಾದ ಬಳಿಕ ಮೂಲ ಮಠದ ಹಾಗೂ ಶಾಖಾಮಠಗಳ ಸ್ಥಿರ, ಚರ ಆಸ್ತಿಗಳ ಸಂರಕ್ಷಣೆ ಮಾಡಿದರು. ಹೊಲಕ್ಕೆ ಹೋಗಿ, ನೇಗಿಲ ಹೊಡೆದರು. ಉತ್ತಿ–ಬಿತ್ತಿದರು. ಆರ್ಥಿಕ ಸಂಪತ್ತನ್ನು ಹೆಚ್ಚಿಸಿಕೊಂಡರು. ಒಕ್ಕಲುತನದೊಂದಿಗೆ, ಶೈಕ್ಷಣಿಕ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಿದರು. ಕಾರಾಮುಂಗಿ, ಮೈನಳಿ. ಮೋರಗಿ ಮಠಗಳ ಪ್ರಗತಿ ಸಾಧಿಸಿದರು. ಗುರು ಹಾನಗಲ್ ಕುಮಾರ ಸ್ವಾಮಿಗಳವರ ಉಪದೇಶದಂತೆ ಗಡಿಭಾಗದಲ್ಲಿ ಕನ್ನಡ ಕಲಿಸಿದರು. ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಶೈಕ್ಷಣಿಕ ಅಭಿವೃದ್ಧಿ ಸಾಧಿಸಿದರು. ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆ ಕೈಕೊಂಡರು. ಸರಳ ಸಜ್ಜನಿಕೆಗೆ ಹೆಸರಾದ ಶ್ರೀಗಳವರು ಅಪ್ಪ, ಅಣ್ಣಾ ಎಂದು ಮಾತನಾಡುತ್ತ ಶರಣ ಸಂಸ್ಕೃತಿಯ ಹರಿಕಾರರಾಗಿ ಶಾಂತಿ, ಸಮಾಧಾನಗಳನ್ನು ತಂದುಕೊಂಡರು. ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬ ಅಣ್ಣನವರ ಸೂಳ್ನುಡಿಯಂತೆ ಮಹಾಭಕ್ತರಾಗಿ ಹಿರಿಯ ಶಿವಯೋಗಿಗಳೆನಿಸಿದರು.

ಕನ್ನಡ ಪ್ರಚಾರ :

ಕ್ರಿ.ಶ. ೧೯೩೭ರಲ್ಲಿ ಆಂಧ್ರಪ್ರದೇಶದ ನಾರಾಯಣಖೇಡ ತಾಲೂಕಿನ ಮೋರಗಿಯಲ್ಲಿ ಶಾಂತಿವರ್ಧಕ ಗುರು ಕುಲಾಶ್ರಮ ಹೆಸರಿನಲ್ಲಿ ಶಾಲೆಯೊಂದನ್ನು ಸ್ಥಾಪಿಸಿದರು. ಮೂವತ್ನಾಲ್ಕು ಎಕರೆ ಭೂಮಿಯಲ್ಲಿ ಶಾಲೆ ತೆರೆದರು. ಹಲವಾರು ಗುಡಿಸಲುಗಳಲ್ಲಿ ಅಧ್ಯಯನ ನಡೆಸಿದರು. ನಾಲ್ಕನೇ ವರ್ಗದವರೆಗೆ ಇಲ್ಲಿ ಶಾಲೆಯಿತ್ತು. ನೂರಾರು ವಿದ್ಯಾರ್ಥಿಗಳು ಇಲ್ಲಿ ಓದುತ್ತಲಿದ್ದರು. ವಚನಗಳ ಪಠಣ ಹಾಗೂ ಸಾಮೂಹಿಕ ಪ್ರಾರ್ಥನೆ ನಡೆಸುತ್ತಿದ್ದರು. ಆ ಕಾಲದಲ್ಲಿ ಈ ಪ್ರದೇಶವು ನಿಜಾಮನ ಆಧೀನದಲ್ಲಿತ್ತು. ಎಲ್ಲೆಲ್ಲಿಯೂ ಉರ್ದುವಿನ ಪ್ರಭಾವವಿತ್ತು. ಕನ್ನಡಕ್ಕೆ ಸ್ಥಾನ ಮಾನ ಇದ್ದಿರಲಿಲ್ಲ. ಇಂಥ ಕಠಿಣ ಪರಿಸ್ಥಿತಿಯಲ್ಲಿ ಭಾಲ್ಕಿಯ ಶ್ರೀ ಚನ್ನಬಸವ ಪಟ್ಟದ್ದೇವರು ಭಕ್ತರ ಸಹಾಯ ಸಹಕಾರದೊಂದಿಗೆ ಧೈರ್ಯದಿಂದ ಕನ್ನಡ ಶಾಲೆಗಳನ್ನು ನಡೆಸತೊಡಗಿದರು. ಹೊರಗಡೆ 'ಉರ್ದುಪಾಠಶಾಲೆ' ಎಂದು ಬೋರ್ಡ ತೂಗು ಹಾಕಿ, ಒಳಗೆ ಮಕ್ಕಳಿಗೆ ತರಗತಿಯಲ್ಲಿ ಕನ್ನಡ ಕಲಿಸುವ ಏರ್ಪಾಟು ಮಾಡಿದ್ದರು. ಖರ್ಚು ವೆಚ್ಚಕ್ಕೆಂದು ಕಲಿಸುವ ಶಿಕ್ಷಕರ ಸಂಬಳ ಮತ್ತು ಮಕ್ಕಳ ಪ್ರಸಾದಕ್ಕೆಂದು 'ಶಾಂತಿ ವರ್ಧಕ ಮುಷ್ಟಿ ಫಂಡ' ಯೋಜನೆಯೊಂದನ್ನು ರೂಪಿಸಿ ಜಾರಿಗೆ ತಂದಿದ್ದರು. ಕನ್ನಡಾಭಿಮಾನಿಗಳ ಮನೆ ಮನೆಗೆ ಒಂದೊಂದು ಜೋಳಿಗೆ ಕೊಟ್ಟಿದ್ದರು. ಆ ಆ ಮನೆಯವರು ಧಾನ್ಯ ಬೀಸುವ ಮೊದಲು ಒಂದು ಮುಷ್ಟಿ ಕಾಳನ್ನು ಈ 'ಮುಷ್ಟಿ ಫಂಡ' ಜೋಳಿಗೆಯಲ್ಲಿ ಹಾಕುತ್ತಿದ್ದರು. ಹೀಗೆ ಸಂಗ್ರಹಿಸಿದ ಧಾನ್ಯ ಗಳಿಂದ ಶಾಲೆಗಳನ್ನು ನಡೆಸುತ್ತಿದ್ದರು. ಜಹಿರಾಬಾದ, ಉದಗೀರ, ಹಣೆಗಾಂವ, ಭಾಲ್ಕಿ, ಸಂಗಮ, ಕಮಾಲನಗರ ಮೊದಲಾದ ಕಡೆಗಳಲ್ಲಿ ಹಲವಾರು ಕನ್ನಡ ಶಾಲೆಗಳನ್ನು ನಡೆಸುತ್ತಲಿದ್ದ ಭಾಲ್ಕಿಯ ಶ್ರೀ ಚನ್ನಬಸವರು ದುಷ್ಕರ್ಮಿಗಳ ಉಪಟಳದಿಂದ, ರಜಾಕಾರರ ಹಾವಳಿಯಿಂದ ಈ ಸ್ಥಳಗಳಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳೊಂದಿಗೆ ಬೇರೆ ಕಡೆಗೆ ತೆರಳಲು ಯೋಚಿಸ ತೊಡಗಿದರು. ಲಾತೂರಿನಲ್ಲಿ ವಕೀಲ ವೃತ್ತಿಯಲ್ಲಿದ್ದ ಕಾಶಿಮ್ ರಜವಿ ಎಂಬವನು ರಜಾಕಾರರ ಸೈನ್ಯ ರಚಿಸಿ ಹಿಂದೂ ಜನರನ್ನು ಹೀನಾಯ ಮಾನವಾಗಿ ಕಾಡತೊಡಗಿದನು, ಪೀಡಿಸತೊಡಗಿದನು. ಮುಸ್ಲಿಂರ ರಾಜ್ಯ ಸ್ಥಾಪಿಸುವ ದುರುದ್ದೇಶದಿಂದ ಏನೆಲ್ಲ ಹೇಸಿ ಕೃತ್ಯಗಳನ್ನು ಎಸಗುತ್ತಿದ್ದನು. ಇಂಥ ಸಂದಿಗ್ಧ

ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಭಾಲ್ಕಿ ಪಟ್ಟದ್ದೇವರು ಸೊಲ್ಲಾಪುರಕ್ಕೆ ತೆರಳಿ ಅಲ್ಲಿ ಆಶ್ರಯ ಪಡೆದರು. ಪೋಲಿಸ ಕಾರ್ಯಾಚರಣೆ ನಡೆದು ರಜಾಕಾರರ ದಮನವಾಗಿ ಹೈದ್ರಾಬಾದ ಸಂಸ್ಥಾನವು ಭಾರತದಲ್ಲಿ ವಿಲೀನಗೊಂಡಿತು. ಆಗ ಪುನಃ ಭಾಲ್ಕಿ ಶ್ರೀಗಳು ಸೊಲ್ಲಾಪುರದಿಂದ ವಿದ್ಯಾರ್ಥಿಗಳೊಂದಿಗೆ ಸಂಗಮಕ್ಕೆ ಬಂದು ತಮ್ಮ ಕಾಯಕವನ್ನು ಮುಂದುವರಿಸಿದರು. ಅವರು ಪ್ರಾರಂಭಿಸಿದ ಕನ್ನಡ ಶಾಲೆಗಳು ಬರು ಬರುತ್ತ ಪ್ರೌಢಶಾಲೆಗಳಾಗಿ, ಪದವಿ ಪೂರ್ವ ಕಾಲೇಜುಗಳಾಗಿ, ಪದವಿ ಕಾಲೇಜುಗಳಾಗಿ ಕಂಗೊಳಿಸುತ್ತಲಿವೆ.

೧. ಶಾಂತಿವರ್ಧಕ ಹೈಸ್ಕೂಲು, ಕಮಾಲನಗರ, ೨. ಸಿದ್ಧರಾಮೇಶ್ವರ ಜ್ಯೂನಿಯರ್ ಕಾಲೇಜ ಕಮಾಲನಗರ, ೩. ಸಿದ್ಧರಾಮೇಶ್ವರ ಪದವಿ ಕಾಲೇಜ ಕಮಾಲನಗರ, ೪. ಚನ್ನಬಸವೇಶ್ವರ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ವೃತ್ತಿ ಮಹಾವಿದ್ಯಾಲಯ, ಭಾಲ್ಕಿ, ೫. ರೂರಲ್ ಇಂಜನಿಯರಿಂಗ್ ಕಾಲೇಜ, ಭಾಲ್ಕಿ, ೬. ಐ.ಟಿ.ಆಯ್. ಶಿಕ್ಷಣ ಭಾಲ್ಕಿ, ೭. ಅಕ್ಕಮಹಾದೇವಿ ಕನ್ಯಾ ಪ್ರೌಢಶಾಲೆ, ಭಾಲ್ಕಿ, ೮. ಅಕ್ಕಮಹಾದೇವಿ ಕನ್ಯಾ ಪ್ರೌಢಶಾಲೆ, ಬೀದರ, ೯. ಅಕ್ಕಮಹಾದೇವಿ ಕನ್ಯಾ ಪದವಿ ಮಹಾವಿದ್ಯಾಲಯ, ಬೀದರ. ೧೦. ಶರಣ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಪ್ರೌಢಶಾಲೆ, ಹಣೆಗಾಂವ, ೧೧. ಶರಣ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಪ್ರೌಢಶಾಲೆ, ಮಾಸೂರ, ೧೨. ಶರಣ ಶಾಂತಿವರ್ಧಕ ಶಿಕ್ಷಣ ಸಂಸ್ಥೆ ಪ್ರೌಢಶಾಲೆ, ಕುನಮಾರಪಳ್ಳಿ, ೧೩. ರೆಸಿಡೆನ್ಸಿಯಲ್ ಸ್ಕೂಲ್, ಭಾಲ್ಕಿ ಇಂಥ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯಿಂದ ನಡೆಸಿಕೊಂಡು ಈ ಭಾಗದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸಿರುವರು.

ಶ್ರೀಗಳವರದು ವಿಶ್ವ ವಿಶಾಲ ದೃಷ್ಟಿ. ಅವರು ವಿಶ್ವ ಕುಟುಂಬಿಗಳು– ಅವರದು ಸ್ವಾರ್ಥವಿಲ್ಲದ ಪರೋಪಕಾರ ಜೀವನ. ಆಡಂಬರ ಪ್ರಿಯರಲ್ಲದ ಸರಳ ಸಜ್ಜನರು 'ಸಕಲ ಜೀವಾತ್ಮರಿಗೆ ಲೇಸು ಬಯಸುವ' ನುಡಿಮಂತ್ರ ಇವರದು. ಬಸವಾದಿ ಶಿವಶರಣರ ಸಾಂಸ್ಕೃತಿಕ ಬದುಕಿನ ಪ್ರಚಾರಕ್ಕಾಗಿ ಹೈದ್ರಾಬಾದ ವೀರಶೈವ ಪರಿಷತ್ತಿನ ಸದಸ್ಯರಾಗಿ, ವೀರಶೈವ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದವರು.

ವೀರಶೈವರಲ್ಲಿದ್ದ ಒಳಪಂಗಡಗಳನ್ನು ಯಾವ ಮುಲಾಜು ಇಲ್ಲದೆ ಧೈರ್ಯ ದಿಂದ ಹೋಗಲಾಡಿಸಿ ಅಂಗದ ಮೇಲೆ ಲಿಂಗವಿದ್ದ ಸದ್ ಭಕ್ತರೆಲ್ಲರನು ಸಂಗ

ಎಂದೆ ಬಗೆದವರಿವರು. ವಿಶ್ವ ಬಸವಧರ್ಮ ಟ್ರಸ್ಟಿನ ಅಧ್ಯಕ್ಷರೂ ಆಗಿದ್ದರು. ಅಸ್ಪೃಶ್ಯತೆಯನ್ನು ಹೋಗಲಾಡಿಸುವಲ್ಲಿ ಶ್ರೀಗಳವರು ಬಹಳಷ್ಟು ಶ್ರಮಿಸಿದವರಾಗಿದ್ದಾರೆ. ಅಂತರ್ಜಾತೀಯ ವಿವಾಹಗಳನ್ನು ನೆರವೇರಿಸಿದರು. ಅಸ್ಪೃಶ್ಯರ ಗುಣಾವಗುಣಗಳನ್ನು ಪರಿಗಣಿಸಿದ ಶ್ರೀಗಳು ಸದಾಚಾರಿ, ಸದ್ಗುಣಿಗಳಿಗೆ ಲಿಂಗದೀಕ್ಷೆಯನ್ನು ನೀಡಿ ಉದ್ಧರಿಸಿದರು. ಹೈದ್ರಾಬಾದಿನಲ್ಲಿ ವಿದ್ಯಾವರ್ಧಕ ಹಾಸ್ಟೆಲ್ ಒಂದನ್ನು ಪ್ರಾರಂಭಿಸಿದ ಶ್ರೇಯಸ್ಸು ಶ್ರೀಗಳವರದು. ಬಸವಕಲ್ಯಾಣದಲ್ಲಿ ಅನುಭವ ಮಂಟಪ ಕಟ್ಟಡ ಒಂದನ್ನು ಕಟ್ಟಿಸಿ ಬಸವಾದಿ ಶರಣರ ಸಂದೇಶ ಬಿತ್ತರಿಸಲು ಅನುವು ಮಾಡಿಕೊಟ್ಟರು. ಇದಕ್ಕಾಗಿ ತಮ್ಮದೆನ್ನುವುದೆಲ್ಲವನ್ನು ಸಮರ್ಪಿಸಿ ತನು–ಮನ–ಧನದಿಂದ ಸೇವೆ ಸಲ್ಲಿಸಿದವರು ಆಗಿದ್ದಾರೆ.

ಭಾಲ್ಕಿಯ ಪೂಜ್ಯ ಶ್ರೀಮದ್ ಘನಲಿಂಗ ಚಕ್ರವರ್ತಿ ಚನ್ನಬಸವರು ಕಲಿತರು, ಕಲಿಸಿದರು, ವಿದ್ಯೆ ಬುದ್ಧಿ ಸಂಪಾದಿಸಿದರು, ಏತಕ್ಕಾಗಿಯೆಂದರೆ ಮಾನವೀಯತೆಯನ್ನು ಮೆರೆಯುವುದಕ್ಕಾಗಿ, ರಾಷ್ಟ್ರಪ್ರೇಮ ಬೆಳೆಸಿಕೊಳ್ಳುವುದಕ್ಕಾಗಿ. ಇಂಥ ಘನವ್ಯಕ್ತಿತ್ವದ ಮಹಾತ್ಮರ ಶೈಕ್ಷಣಿಕ ಸಾಮಾಜಿಕ ಸೇವೆಯನ್ನು ಗುರುತಿಸಿದ ಗುಲಬರ್ಗಾ ವಿಶ್ವವಿದ್ಯಾಲಯವು ಪೂಜ್ಯರಿಗೆ ಗೌರವ ಡಾಕ್ಟರೇಟ ಪದವಿಯನ್ನೂ ಕರ್ನಾಟಕ ಸರಕಾರವು ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನೂ ನೀಡಿ ಗೌರವಿಸಿದುದು ತಮ್ಮನ್ನು ತಾವೇ ಗುರುತಿಸಿಕೊಂಡಂತಾಗಿವೆ. ತಮ್ಮ ನೂರೊಂಭತ್ತು ವಯಸ್ಸಿನಲ್ಲಿ ಲಿಂಗೈಕ್ಯರಾದುದು ಕನ್ನಡ ನಾಡಿಗೆ, ಅದರಲ್ಲೂ ಶರಣ ಸಾಹಿತ್ಯ ಸಂಸ್ಕೃತಿಗೆ ತುಂಬಿಬಾರದ ಹಾನಿಯಾಗಿದೆ. ಪೂಜ್ಯ ಡಾ. ಚನ್ನಬಸವ ಪಟ್ಟದ್ದೇವರ ತರುವಾಯ ಉತ್ತರಾಧಿಕಾರಿಗಳಾಗಿರುವ ಪೂಜ್ಯಶ್ರೀ ಬಸವಲಿಂಗ ಪಟ್ಟದ್ದೇವರು ಗುರುಗಳು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಧರ್ಮ ಸಾಹಿತ್ಯ–ಸಂಸ್ಕೃತಿ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅಪ್ರತಿಮ ಸೇವೆಯನ್ನು ಸಲ್ಲಿಸುತ್ತಲಿರುವರು.

ಆಂಧ್ರಪ್ರದೇಶದಲ್ಲಿರುವ ಮೇದಕ ಜಿಲ್ಲಾ ನಾಗೂರ (ಬಿ) ಗ್ರಾಮದ ರಾಚಪ್ಪ ಕಾಡೋದೆ ಅವರ ಸುಪುತ್ರರಾಗಿ ದಿ. ೨೮–೮–೧೯೫೦ರಂದು ಜನಿಸಿರುವ 'ಶಿವರಾಜ'ರೇ ಇಂದಿನ ಪೂಜ್ಯ ಬಸವಲಿಂಗ ಪಟ್ಟದ್ದೇವರು. ಇವರು ಭಾಲ್ಕಿಯ ಶ್ರೀಮಠದ ಉಚಿತ ಪ್ರಸಾದ ನಿಲಯದಲ್ಲಿದ್ದು ಶಿಕ್ಷಣ ಪಡೆದಿರುವರು. ಕ್ರಿ. ಶ. ೧೯೭೭ರಲ್ಲಿ ಜಂಗಮದೀಕ್ಷೆ ಪಡೆದಿದ್ದು ಕ್ರಿ. ಶ.

೧೯೮೫ರಲ್ಲಿ ಭಾಲ್ಕಿಯ ಹಿರೇಮಠ ಸಂಸ್ಥಾನದ ೧೦ನೆಯ ಪೀಠಾಧಿಕಾರಿಗಳಾಗಿರುವರು.

ಶ್ರೀಗಳವರು ಸಾಮೂಹಿಕ ಬಸವ ಪ್ರಾರ್ಥನೆ ಮತ್ತು ವಚನ ಚಿಂತನೆ, ಮಾಸಿಕ ಶಿವಾನುಭವ ಗೋಷ್ಠಿ, ಮಾಸಿಕ ಶರಣ ಸಂಗಮ, ಶ್ರಾವಣದಲ್ಲಿ ಪುರಾಣ ಪ್ರವಚನ, ಸರ್ವ ಧರ್ಮಗಳ ಸಮನ್ವಯ ಸಮಾವೇಶ, ಬಸವಧರ್ಮ ಸಮಾವೇಶ, ಮನೆಗೊಂದು ವಚನ ಪ್ರವಚನ ಮೊದಲಾದ ಹಲವಾರು ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವರ್ಷದುದ್ದಕ್ಕೂ ನಡೆಸುತ್ತಲಿರುವರು.

ಕೊಲ್ಹಾಪುರ ಶಿವಾಜಿ ವಿಶ್ವವಿದ್ಯಾಲಯದಿಂದ ಎಂ.ಎ. (ಕನ್ನಡ) ಪದವೀಧರರಾಗಿರುವ ಪೂಜ್ಯ ಬಸವಲಿಂಗ ಪಟ್ಟದ್ದೇವರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿ ಈ ಭಾಗದಲ್ಲಿ ಶೈಕ್ಷಣಿಕ ಕ್ರಾಂತಿಯನ್ನೇ ಮಾಡುತ್ತಲಿರುವರು. ತಮ್ಮ ಗುರುಗಳು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆದಿದ್ದಾರೆ. ಭಾಲ್ಕಿಯಲ್ಲಿ ಶ್ರೀ ಸಂಗಮೇಶ್ವರ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆ, ಸಂಗಮೇಶ್ವರ ಪ್ರೌಢಶಾಲೆ, ನೀಲಾಂಬಿಕಾ ಸಂಗೀತ ಪಾಠಶಾಲೆ, ಗುರುಪ್ರಸಾದ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆ, ಅಲ್ಲಮಪ್ರಭು ವಾಚನಾಲಯ, ಶ್ರೀ ಹಾನಗಲ್ಲ ಕುಮಾರೇಶ್ವರ ಉಚಿತಪ್ರಸಾದ ನಿಲಯ, ಕರಡ್ಯಾಳದಲ್ಲಿ ಶ್ರೀ ಚನ್ನಬಸವೇಶ್ವರ ಗುರುಕುಲ ವಸತಿ ಶಾಲೆ, ಶಿಶುವಿಹಾರ ಪ್ರಾಥಮಿಕ ಮತ್ತು ಪ್ರೌಢಶಾಲೆ, ಶ್ರೀ ಚನ್ನಬಸವೇಶ್ವರ ಗುರುಕುಲ ವಸತಿ ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯ, ಶ್ರೀ ಚನ್ನಬಸವೇಶ್ವರ ಗುರುಕುಲ ಡಿ.ಎಡ್. ಕಾಲೇಜುಗಳನ್ನು ಕಾಳಸರತೂಗಾಂವದಲ್ಲಿ ಶ್ರೀಮತಿ ಸಂಗಮ್ಮ ಸಂಗ್ರಾಮಪ್ಪ ಬಿರಾದಾರ ಪ್ರೌಢಶಾಲೆಯನ್ನು, ಅಲ್ಲಮಪ್ರಭು ಗುರುಕುಲ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಯನ್ನು, ಸಂತಪುರದಲ್ಲಿ ಅನುಭವ ಮಂಟಪ ಗುರುಕುಲ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಯನ್ನೂ; ಸಂಗಮದಲ್ಲಿ ಡಾ. ಚನ್ನಬಸವ ಪಟ್ಟದ್ದೇವರು ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಯನ್ನು ; ನೀಲಾಂಬಿಕಾ ಅಂಗವಿಕಲ ಮಹಿಳೆಯರ ವಸತಿ ಸಂಗೀತ ಪಾಠಶಾಲೆಯನ್ನು ; ಕಮಲನಗರದಲ್ಲಿ ಡಾ. ಚನ್ನಬಸವ ಪಟ್ಟದ್ದೇವರು ಪ್ರೌಢಶಾಲೆ, ಶ್ರೀ ಗುರಪ್ಪ ಟೊಣ್ಣೆ ಶಿಶುವಿಹಾರ ಮತ್ತು ಪ್ರಾಥಮಿಕ

ಶಾಲೆಗಳನ್ನು; ಔರಾದದಲ್ಲಿ ಬಸವ ಗುರುಕುಲ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆ, ಬಸವ ಗುರುಕುಲ ಪ್ರೌಢಶಾಲೆ, ಡಾ. ಚನ್ನಬಸವ ಪಟ್ಟದ್ದೇವರು ಐ.ಟಿ.ಐ. ಕಾಲೇಜುಗಳನ್ನು ಆಂಧ್ರಪ್ರದೇಶದ ಮೇದಕ ಜಿಲ್ಲೆಯ ಮೋರ್ಗಿಯಲ್ಲಿ ಬಸವ ಗುರುಕುಲ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆ, ಕಾರಾಮುಂಗಿಯಲ್ಲಿ ಅನುಭವ ಮಂಟಪ ಗುರುಕುಲ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆ, ಹುಮ್ನಾಬಾದ ತಾಲೂಕ ಕಂದಗೂಳದಲ್ಲಿ ಡಾ. ಚನ್ನಬಸವ ಪಟ್ಟದ್ದೇವರು ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಗಳನ್ನು ನಡೆಸುತ್ತಲಿರುವರು.

ತಮ್ಮ ಶ್ರೀಮಠದಿಂದ ಮೂವತ್ತಕ್ಕೂ ಹೆಚ್ಚು ಗ್ರಂಥಗಳನ್ನು, 'ಶಾಂತಿ ಕಿರಣ'ವಾರ ಪತ್ರಿಕೆಯನ್ನು ಪ್ರಕಟಿಸಿ, ಒಳ್ಳೆಯವರನ್ನು ಗುರುತಿಸಿ ಪ್ರಶಸ್ತಿ ಪುರಸ್ಕಾರ ನೀಡುತ್ತ ಬಂದಿರುವರು. ಈ ಮಠದ ಶಾಖಾಮಠಗಳು ಕಮಲನಗರ, ಖೇಡ, ಕಾರಾಮುಂಗಿ, ಮೋರ್ಗಿಗಳಲ್ಲಿರುವವು. ಪೂಜ್ಯರು ಬೀದರ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಹಲವಾರು ಪ್ರಶಸ್ತಿಗಳನ್ನು ಪಡೆದವರಾಗಿದ್ದಾರೆ. ತಮ್ಮ ಶ್ರೀಮಠದ ಕಾರ್ಯಕ್ರಮಗಳಿಗೆ ಹಲವಾರು ಬಾರಿ ನನಗೆ ಉಪನ್ಯಾಸ ನೀಡಲು ಆಮಂತ್ರಿಸಿ ದರ್ಶನಾಶೀರ್ವಾದ ಭಾಗ್ಯ ಪಡೆಯಲು ಸೌಭಾಗ್ಯ ಕಲ್ಪಿಸಿಕೊಟ್ಟಿದ್ದಾರೆ.

■■

ತೇರದಾಳದ

೮೦. ಕಾಡದೇವರ ಸ್ವಾಮಿಗಳು

ತೇರದಾಳ ಗ್ರಾಮದ ಪೂಜ್ಯ ಷಟ್‌ಸ್ಥಲ ಬ್ರಹ್ಮಿ ಶ್ರೀ ಕಾಡದೇವರು ಇಲ್ಲಿಯ ಮಠದ ಮಹಾಸ್ವಾಮಿಗಳಾಗಿದ್ದರು. ಇವರು ಕ್ರಿ.ಶ. ೧೮೮೨ರಲ್ಲಿ ಶ್ರೀ ಗುರುಲಿಂಗಯ್ಯ ಮತ್ತು ಶ್ರೀಮತಿ ಮುರುಗೆವ್ವ ದಂಪತಿಗಳ ಸತ್ಪುತ್ರರಾಗಿ ಜನಿಸಿದವರಾಗಿದ್ದಾರೆ. ತಾಯಿ ಮುರುಗೆವ್ವ ಅವರ ತವರು ಮನೆಯ ಖಂವಟಕೊಪ್ಪ ಸಮೀಪದ ಸಿದ್ದಾಪೂರ ಗ್ರಾಮ. ಚಿಕ್ಕಂದಿನಿಂದಲೂ ಶ್ರೀ ಕಾಡದೇವರು ತೇರದಾಳದಲ್ಲಿ ಕಲ್ಪಪಡಿ ಎಂಬವರ ಮನೆಯಲ್ಲಿ ವಾಸ ಮಾಡಿಕೊಂಡಿರುತ್ತಿದ್ದರು. ಇವರಿಗೀಗ ಪಾನಶೆಟ್ಟಿ ಎಂದು ಕರೆಯುತ್ತಿರುವರು. ಶ್ರೀ ಕಾಡದೇವರ ಅವರಿಗೆ ಸಿದ್ದವ್ವ ಹೆಸರಿನ ಅಕ್ಕ ಇದ್ದಳು. ಅವಳನ್ನು ತುಂಗಳ ಗ್ರಾಮಕ್ಕೆ ಕೊಟ್ಟು ಲಗ್ನ ಮಾಡಿದ್ದರು. ಶ್ರೀ ಕಾಡದೇವರಿಗೆ ಷ.ಬ್ರ.ಶ್ರೀ ಗಂಗಾಧರ ಸ್ವಾಮಿಗಳು ಗುರುಗಳಾಗಿದ್ದರು. ಅನುಗ್ರಹ ಗುರುಗಳು ಯಾದವಾಡ ಚರಂತಿಮಠದ ಷ.ಬ್ರ. ಶ್ರೀ ಮಳೇಂದ್ರ ಸ್ವಾಮಿಗಳಾಗಿದ್ದರು. ತೇರದಾಳ ಅಂದು ಸಾಂಗ್ಲಿ ಸಂಸ್ಥಾನದಲ್ಲಿತ್ತು, ಇಂದು ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಒಂದು ದೊಡ್ಡ ಊರಾಗಿದೆ.

ತೇರದಾಳ ಪಟ್ಟದ್ದೇವರ ಪಟ್ಟಾಧಿಕಾರ ಮಹೋತ್ಸವ :

ತೇರದಾಳ ಷ.ಬ್ರ. ಶ್ರೀ ಗಂಗಾಧರ ಸ್ವಾಮಿಗಳು ಶ್ರೀ ಕಾಡದೇವರ ಅವರ ಗುರುಗಳಾಗಿದ್ದರು. ಈ ಗುರುಗಳಾದ ಶ್ರೀ ಗಂಗಾಧರ ಸ್ವಾಮಿಗಳು ಕ್ರಿ. ಶ. ೧೯೩೦ರಲ್ಲಿ ಲಿಂಗೈಕ್ಯರಾದರು. ಆಗ ಊರ ಹಿರಿಯರೆಲ್ಲರೂ ಸೇರಿ ಅವರ ಶಿಷ್ಯರಾದ ಶ್ರೀ ಕಾಡದೇವರು ಅವರನ್ನು ಕ್ರಿ.ಶ. ೧೯೩೧ ರಲ್ಲಿ, ತೇರದಾಳದ ಕಲ್ಲುಮಠದಲ್ಲಿ ಕಾಡದೇವರ ಅವರ ಪಟ್ಟಾಧಿಕಾರ ಮಹೋತ್ಸವ ಜರುಗಿಸಿದರು. ಹನ್ನೊಂದು ಮಂಟಪ ಪೂಜೆಗಳ ಸಮಾರಂಭದೊಂದಿಗೆ ಭಕ್ತರು ಅದ್ದೂರಿಯಿಂದ ಶ್ರೀ ಕಾಡದೇವರ ಅವರ ಪಟ್ಟಾಧಿಕಾರ ಮಹೋತ್ಸವವನ್ನು ಅತ್ಯಂತ

ವಿಜೃಂಭಣೆಯಿಂದ ನೆರವೇರಿಸಿದರು. ಅಂದಿನಿಂದ ಶ್ರೀ ಕಾಡದೇವರ ಅವರನ್ನು ಜನತೆ ತೇರದಾಳದ ಪಟ್ಟದ್ದೇವರು ಎಂದೇ ಕರೆಯತೊಡಗಿದರು.

ಶ್ರೀ ಕಾಡದೇವರ ಸ್ವಾಮಿಗಳವರ ಪಟ್ಟಾಧಿಕಾರ ಮಹೋತ್ಸವ ಸಮಯದಲ್ಲಿ ವೀರವಿರಕ್ತರೆನಿಸಿದ ಬಿಳ್ಳೂರ ಮಹಾಸ್ವಾಮಿಗಳೂ ಆಗಮಿಸಿದ್ದರು. ಅವರ ಜೊತೆಗೆ ಅಥಣಿಯ ಶ್ರೀ ಮಹಾಲಿಂಗಪ್ಪಣ್ಣ ತಾಂವಶಿ, ಶ್ರೀ ಬಿ. ಎಸ್. ಮಾಮಲೇದಾರ. ಶ್ರೀ ಚನ್ನಮಲ್ಲಪ್ಪಣ್ಣ ಹಂಜಿ ಮೊದಲಾದವರೂ ದರ್ಶನಾಶೀರ್ವಾದಕ್ಕೆ ಬಂದಿದ್ದರು. ಆಗ ಮಹಾಲಿಂಗಪ್ಪಣ್ಣ ತಾಂವಶಿಯವರು ತಮ್ಮ ಕೈಗೆ ಬಂದಷ್ಟು ಹಣವನ್ನು ಪ್ರತಿಯೊಬ್ಬರಿಗೂ ಮಂಟಪ ಪೂಜೆಗೆ ಕುಳಿತ ಸ್ವಾಮಿಗಳವರಿಗೆ ದಕ್ಷಿಣೆಯಾಗಿ ಕೊಟ್ಟರು.

ತೇರದಾಳ ಪಟ್ಟದ್ದೇವರು ಆಜನ್ಮ ಬ್ರಹ್ಮಚಾರಿ :

ತೇರದಾಳದ ಷ. ಬ್ರ. ಶ್ರೀ ಕಾಡದೇವರ ಸ್ವಾಮಿಗಳು (ಪಟ್ಟದ್ದೇವರು) ಆಜನ್ಮ ಬ್ರಹ್ಮಚಾರಿಗಳಾಗಿದ್ದರು. ಇವರದು ಸದೃಢಕಾಯ. ಉಕ್ಕಿನ ಮನುಷ್ಯರೆನಿಸಿದ್ದರು. ನಿತ್ಯವೂ ತಪ್ಪದೆ ವ್ಯಾಯಾಮ, ಯೋಗಾಸನಗಳನ್ನು ಹಾಕುತ್ತಿದ್ದರು. ಸಾಯಂಕಾಲ ವಾಯುವಿವಾರಕ್ಕೆ ತೆರಳುತ್ತಿದ್ದರು. ಪ್ರಾಣಾಯಾಮದಿಂದ ಎಂಥ ಕಷ್ಟ ತಾಪತ್ರಯಗಳನ್ನು ದೂರ ಮಾಡಿಕೊಳ್ಳುತ್ತಿದ್ದರು. ಧ್ಯಾನದಲ್ಲಿ ಕುಳಿತಾಗ ತಮ್ಮತನದ ಅರಿವು ಮೂಡಿಸಿಕೊಳ್ಳುತ್ತಿದ್ದರು. ಇಷ್ಟಲಿಂಗಪೂಜೆಯಿಂದ ಷಟ್‌ಸ್ಥಲ ಮಾರ್ಗಾವಲಂಬಿಗಳಾಗಿ– ಕ್ರಿಯಾಜ್ಞಾನಗಳ ಸುಂದರ ಸಮನ್ವಯ ಸಾಧಿಸುತ್ತಿದ್ದರು. ಅಂತೆಯೆ ನುಡಿದಂತೆ ನಡೆ, ನಡೆದಂತೆ ನುಡಿ ಇವರ ಜೀವನದ ತಿರುಳಾಗಿತ್ತು, ಗಟ್ಟಿ ಮಾತು, ದಿಟ್ಟ ನಡತೆ, ಶುದ್ಧ ಆಚರಣೆ, ತೂಕಬದ್ಧ ವಿಚಾರಸರಣಿ ಇವರ ಜೀವನದಲ್ಲಿ ಹಾಸುಹೊಕ್ಕಾಗಿದ್ದವು. ಕುದುರೆ ಸವಾರಿ ಮಾಡುವಲ್ಲಿಯೂ ಇವರು ಪಳಗಿದವರಾಗಿದ್ದರು. ಅಷ್ಟೇ ಧೈರ್ಯಶಾಲಿಗಳೂ ದಯಾಳುಗಳೂ ಆಗಿದ್ದರು.

ತೇರದಾಳದ ಪಟ್ಟದ್ದೇವರು ಹೆಣ್ಣುಮಕ್ಕಳನ್ನು ತಾಯಿ, ದೇವಿ ಎಂಬ ಮನೋಭಾವದಿಂದ ಕಾಣುತ್ತಿದ್ದರು. ಅವರನ್ನು ಎಂದೂ ಹೆಸರುಗೊಂಡು ಕರೆಯುತ್ತಿರಲಿಲ್ಲ. 'ಅವ್ವಾ', 'ಅವ್ವಾರ' ಎಂದೇ ಸಂಬೋಧಿಸುತ್ತಿದ್ದರು. ಭಕ್ತರ ಇಷ್ಟಾರ್ಥ ಸಿದ್ಧಿಗಳನ್ನು ಪೂರೈಸಿಕೊಡುವಲ್ಲಿ ಅವರದು ಸಿದ್ಧ ಹಸ್ತ, ಇಷ್ಟಲಿಂಗ ಪೂಜೆಯು ಶ್ರೀ ತೇರದಾಳ ಪಟ್ಟದ್ದೇವರ ಮಹಾ ಅಸ್ತ್ರವಾಗಿತ್ತು.

ಪ್ರತಿದಿನ ಪಟ್ಟದ್ದೇವರು ಬೆಳಗಿನ ಜಾವದಲ್ಲಿ ಏಳುತ್ತಿದ್ದರು. ಆಸನಗಳನ್ನು ಹಾಕುತ್ತಿದ್ದರು. ಬಾವಿಯಲ್ಲಿ ಈಜಾಡಿ ಬರುತ್ತಿದ್ದರು. ತದೇಕ ಚಿತ್ತದಿಂದ ಲಿಂಗಪೂಜೆಯಲ್ಲಿ ನಿರತರಾಗಿರುತ್ತಿದ್ದರು. ಭಕ್ತಿ ಪರವಶರಾಗಿ ತತ್ವಪದಗಳನ್ನು ಹಾಡುತ್ತಿದ್ದರು. 'ಶಿವಮಂಗಲ ದೇಹಿ....' ಭವಹರ ಸ್ಮರಹರಪುರ ಪಾಹಿ' 'ಶ್ರೀ ಗುರುಧ್ಯಾನವ ಮರೆಯದೆ ನೀ ಮಾಡು' 'ಕರೆಯ ಬಂದ ಯವನರು ತಿರುಗಿ ಹೋಗುವರು' ಎಂದೆಲ್ಲ ತತ್ವ ಪದಗಳನ್ನು ಹಾಡಿಯೇ ಹಾಡುತ್ತಿದ್ದರು. ಕೊನೆಗೆ ತೇರದಾಳ ಹಿರೇಮಠದ ಗುರು ಗಂಗಾಧರನ ಚರಣಕ್ಕೆ ಬೇಡಿಕೊ ಒಳಿತಾಗುವುದು ಎಂದು ಮಂಗಳಾರತಿ ಹೇಳುತ್ತಿದ್ದರು.

ಪ್ರತಿನಿತ್ಯ ಶ್ರೀ ಪಟ್ಟದ್ದೇವರು ದೀಕ್ಷಾ ತೆಗೆದುಕೊಂಡ ಎಲ್ಲ ಭಕ್ತರಿಗೂ ಪೂಜೆ, ಧ್ಯಾನದಲ್ಲಿ ತಲ್ಲೀನರಾಗುವ ಶಿವಯೋಗ ಮಾರ್ಗವನ್ನು ತಿಳಿಸಿಕೊಡುತ್ತಿದ್ದರು. ಪ್ರತಿಯೊಬ್ಬರೂ ತಮ್ಮ ತಮ್ಮ ದಿನನಿತ್ಯದ ಕಾಯಕದಲ್ಲಿ ಪ್ರಾಮಾಣಿಕವಾಗಿ ವರ್ತಿಸಲು ಉಪದೇಶಿಸುತ್ತಿದ್ದರು. ಭಕ್ತರ ಮನದ ಮೈಲಿಗೆ ತೊಳೆಯುವಂತೆ ಸದ್ಬೋಧನೆ ಮಾಡುತ್ತ ಯಾವಾಗಲೂ ಧಾರ್ಮಿಕ ಚಟುವಟಿಕೆಗಳಲ್ಲಿ ತನ್ಮಯರಾಗಿರುತ್ತಿದ್ದರು.

ಶ್ರೀ ಪಟ್ಟದ್ದೇವರು ಸ್ವತಃ ಮನಃಶುದ್ಧೀ ಮಾಡಿಕೊಂಡವರು. ಇತರರೂ ಹಾಗೇ ಆಗಬೇಕೆಂದು ಚಿಂತಿಸುವವರು. ಹೀಗಾಗಿ ಅವರು ಕೈಕೊಳ್ಳುವ ಪ್ರತಿಯೊಂದು ಕಾರ್ಯಗಳಲ್ಲಿ ಎಲ್ಲಿಯೂ ಹುಸಿ, ಮೋಸ, ವಂಚನೆಗಳಿರುತ್ತಿದ್ದಿರಲಿಲ್ಲ. ಭಕ್ತರನ್ನು ತಮ್ಮಂತೆ ಪರಿವರ್ತಿಸುವಲ್ಲಿ ಬಹಳಷ್ಟು ಪರಿಶ್ರಮ ವಹಿಸುತ್ತಿದ್ದರು. ಆಚಾರ ಶುದ್ಧವಿದ್ದರೆ ಮಾತ್ರ, ಅಂಥವರಿಗೆ ಮನಸಿನಂತೆ ಮಹಾದೇವ ಎಂಬುದನ್ನು ಸಿದ್ಧ ಮಾಡಿಕೊಡುತ್ತಿದ್ದರು. ಬಯಸಿ ಬಂದ ಬಯಕೆಗಳು ತಮ್ಮಷ್ಟಕ್ಕೆ ತಾವೇ ಕೈಗೂಡುತ್ತಲಿದ್ದವು. ಇದರಿಂದಾಗಿ ಶ್ರೀ ತೇರದಾಳ ಪಟ್ಟದ್ದೇವರು ಆಡಿದ ಮಾತುಗಳು ಹುಸಿ ಹೋಗುತ್ತಿದ್ದಿರಲಿಲ್ಲ. ಹಾಗೆಂದು ಅವರು ತಮ್ಮ ಈ ಅದ್ಭುತ ಶಕ್ತಿಯನ್ನು ದುರುಪಯೋಗಪಡಿಸಿ ಕೊಂಡವರಲ್ಲ. ನಡೆಯಬಾರದ ಘಟನೆಗಳು ನಡೆದು ಹೋಗುತ್ತಿದ್ದವು. ಇದರಿಂದಾಗಿ ಇವರೊಬ್ಬ ಪವಾಡ ಪುರುಷರೆಂಬ ಭಾವನೆ ಭಕ್ತರಲ್ಲಿ ಹುಟ್ಟುತ್ತಿತ್ತು, ಅಂತೆಯೇ ಜನತೆ ಈ ಪಟ್ಟದ್ದೇವರನ್ನು ಅತ್ಯಂತ ಭಯ ಭೀತಿಯಿಂದ, ಅಷ್ಟೇ ಪ್ರೀತಿಯಿಂದ, ಅಪಾರ ಶ್ರದ್ಧೆಯಿಂದ ಪೂಜಿಸುತ್ತಿದ್ದರು, ಗೌರವಿಸುತ್ತಿದ್ದರು. ಸಾವಿರಾರು ಜನ ಭಕ್ತರ ಅಭಿಲಾಷೆಗಳನ್ನು

ತೇರದಾಳ ಶ್ರೀ ಪಟ್ಟದ್ದೇವರು ಈಡೇರಿಸಿದ ಘಟನೆಗಳು ಈಗಲೂ ಜನಮನದಲ್ಲಿ ಮನೆ ಮಾಡಿಕೊಂಡಿರುತ್ತವೆ.

೧. ಸಂತತಿ ಇಲ್ಲದವರಿಗೆ ಸಂತಾನ ಪ್ರಾಪ್ತಿಯಾಗಿವೆ. ೨. ಭೂತ– ಪಿಶಾಚಿ ಹಿಡಿದವರ ಭೂತ– ಪಿಶಾಚಿ ನಿವಾರಣೆ ಮಾಡಿದ್ದಾರೆ. ೩. ದುಷ್ಟ ಜನರನ್ನು ಶಿಷ್ಟ ಮಾರ್ಗಕ್ಕೆ ತಿರುಗಿಸಿದ್ದಾರೆ. ೪. ಅಂಧಾನುಕರಣೆ, ಮೂಢನಂಬಿಕೆಗಳನ್ನು ಹೋಗಲಾಡಿಸಿದ್ದಾರೆ. ೫. ಶಿಷ್ಯರ ಆಮಂತ್ರಣದ ಮೇರೆಗೆ ಅವರ ಮನೆಗೆ ಹೋಗಿ ಅವರ ಇಷ್ಟಾರ್ಥ ಸಿದ್ಧಿಗಳನ್ನು ಈಡೇರಿಸಿ ಕೊಟ್ಟಿದ್ದಾರೆ. ೬. ದುಃಖದಲ್ಲಿ ಬಳಲುವವರ ಕಷ್ಟಗಳನ್ನು ದೂರ ಮಾಡಿದ್ದಾರೆ.

ಇಂಥ ನೂರಾರು ಅಘಟಿತ ಘಟನೆಗಳು ಅವರ ಜೀವನದಲ್ಲಿ ನಡೆದುದ ರಿಂದ ಶ್ರೀ ತೇರದಾಳ ಪಟ್ಟದ್ದೇವರು ಪವಾಡ ಪುರುಷರೆನಿಸಿದ್ದಾರೆ. ತೇರದಾಳ, ರಬಕವಿ, ಬನಹಟ್ಟಿ, ಜಮಖಂಡಿ, ನಿಪ್ಪಾಣಿ, ಸಂಕೇಶ್ವರ, ಗದಗ, ಸಾಂಗ್ಲಿ ಮಿರಜ, ಮೊದಲಾದ ಭಾಗಗಳಿಂದ ಭಕ್ತ ಜನಸಮೂಹ ಶ್ರೀಗಳವರ ದರ್ಶನಾಶೀರ್ವಾದ ಭಾಗ್ಯಕ್ಕಾಗಿ ಹಾತೊರೆಯುತ್ತಿತ್ತು. ಇವರ ಆಶೀರ್ವಾದ ಪಡೆದೇ ಈ ಭಾಗದಲ್ಲಿ ವೀರಶೈವ ಮನೆತನದವರ ಮಂಗಲ ಕಾರ್ಯಗಳು ನಡೆಯುತ್ತಿದ್ದವು.

ಪ್ರತಿ ಅಮವಾಸ್ಯೆಯ ದಿನ ತೇರದಾಳ ಮಠದಲ್ಲಿ ಸ್ವಾಮಿಗಳವರ ಗದ್ದುಗೆಯ ದರ್ಶನಕ್ಕಾಗಿ ಜಾತ್ರೆ ಸೇರಿದಂತೆ ಜನ ಸೇರುತ್ತಿದ್ದರು. ಇಂಥ ಮನೆತನ ಗಳಲ್ಲಿ ರಬಕವಿಯ ಮುತ್ತೂರ ಬಂಧುಗಳು, ತೆಗ್ಗಿ ಬಂಧುಗಳು, ಜಿಗಿಜಿನ್ನಿ ಬಂಧುಗಳು, ಶೆಟ್ಟಿ ಬಂಧುಗಳು, ಹುನಗುಂದ ಮಲ್ಲಪ್ಪನವರು, ಯಾದವಾಡ ಶೆಟ್ಟರು, ಅಥಣಿ ಚೆಟ್ಟಿ ಬಂಧುಗಳು, ಹಂಜಿ ಮನೆತನದವರು, ತಾಂವಶಿ ಮಹಾಲಿಂಗಪ್ಪಣ್ಣ ಮನೆತನದವರು, ಗುರುಬಸಯ್ಯನವರು, ಮಹಾಜನರು, ಗಂಗಾಧರ ಸೋಳಸೆ ಬಂಧುಗಳು, ಹುಲಕುಂದ ವಕೀಲರು, ಶ್ರೀ ಎಸ್. ವ್ಹಿ ಪಾಟೀಲ ವಕೀಲರು, ಸಗರ ಗೋಟಖಿಂಡಿ ಬಂಧುಗಳು, ಅವಟಿಯವರು ಈಶ್ವರಪ್ಪಣ್ಣ ಶಿವಣಗಿಯವರು, ಸಣ್ಣ ತಮ್ಮಣ್ಣಪ್ಪ ಮಹಾಜನರು, ಲೇಸಪ್ಪ ನವರು, ಪಾರಗಾಂವಮಠದ ಪಟ್ಟದ್ದೇವರು, ತೇರದಾಳ ಮತ್ತು ನಾವಲಗಿ ಗ್ರಾಮದ ಸಮಸ್ತ ಭಕ್ತರು, ಗದುಗಿನ ಮಾನವಿ, ಪಟ್ಟಣಶೆಟ್ಟಿ, ತುಪ್ಪದ,

ಕಲ್ಲೊಳಗಿ, ತಡಸದ, ಚಟ್ಟಿ ಬಂಧುಗಳು, ಮಿರಜದ ಗಾಡವೆ ಬಂಧುಗಳು, ನಿಪ್ಪಾಣಿಯ ನರಕೆ, ಅನಂತಪುರ ಮೊದಲಾದ ಮನೆತನಗಳ ಭಕ್ತಜನಸಮೂಹ ತೇರದಾಳ ಪಟ್ಟದ್ದೇವರ ದರ್ಶನಾಶೀರ್ವಾದ ಪಡೆದು ತಮ್ಮ ಪಾಲಿನ ದೇವರೆಂದೇ ಬಗೆದು ಪೂಜಿಸುತ್ತಿದ್ದರು, ಗೌರವಿಸುತ್ತಿದ್ದರು.

ಯೋಗಬಲದಿಂದ ತೇರದಾಳ ಪಟ್ಟದ್ದೇವರು ವಾಕ್‌ಸಿದ್ಧಿ ಪಡೆದವರಾಗಿದ್ದರು. ಆತ್ಮ ಸಂಯಮಿಗಳಾಗಿದ್ದರು. ಆಗಲಿ ಎಂದೆಂದು ಭಕ್ತರಿಗೆ ಆಶೀರ್ವದಿಸಿದಾಗ ಹಲವಾರು ಆಶೀರ್ವಾದಗಳು ಆಗಿಯೆ ತೀರಿವೆ. ಅವು ಶ್ರೀ ಸಾಮಾನ್ಯರಿಗೆ ಲೀಲೆಗಳಾಗಿ, ಪವಾಡಗಳಾಗಿ ಕಂಗೊಳಿಸಿವೆ. ಇಂಥ ಲೀಲೆ, ಪವಾಡಗಳು ಸತ್ಯವೆಂದು ಅನುಕರುಣೆಗಿಳಿಯುವಂಥವಲ್ಲ. ಸುಳ್ಳೆಂದು ಹೀಗಳೆಯುವಂತಹವಲ್ಲ. ಅವುಗಳನ್ನು ಪರೀಕ್ಷಿಸಲು ಎಂಟೆರ್ದೆ ಬೇಕು. ಚಾರಿತ್ರ ಶುದ್ಧಿಯ ಶ್ರೀಮಂತ ಹೃದಯಿಗಳಿಗೆ ಮಾತ್ರ ಅವು ಅರಿವಾಗುವಂತಹವು.

'ಗುರುಕರುಣೆ' ನಿಜಕ್ಕೂ ಒಂದು ಭಾಗ್ಯವೇ ಸರಿ. ಅದನ್ನು ಪಡೆಯುವವರು ಪುಣ್ಯ ಶಾಲಿಗಳೇ. ಹಣಕ್ಕಾಗಲಿ, ಅಧಿಕಾರಕ್ಕಾಗಲಿ, ಗುರುಕರುಣೆಯೆನ್ನುವುದು ಬರುವಂಥದ್ದಲ್ಲ, ದೊರೆಯುವಂತಹದ್ದಲ್ಲ. ಅದು ಗುರು ಕರುಣೆಯಾದರೆ ಮಾತ್ರ ಸಾಧ್ಯ. ಅಂಥ ಗುರುಕರುಣೆಯನ್ನು ಕರುಣಿಸಿ ಕೊಡುವವನೇ ಗುರು. ಅಂಥ ಗುರುತ್ವ ಶಕ್ತಿ ತೇರದಾಳ ಪಟ್ಟದ್ದೇವರಲ್ಲಿ ಇತ್ತೆಂಬುದನ್ನು ಜನತೆ ಈಗಲೂ ಸ್ಮರಿಸಿಕೊಂಡು ಸಂತೋಷಪಡುತ್ತಿರುತ್ತಾರೆ.

ತೇರದಾಳದ ಪಟ್ಟದ್ದೇವರು ತತ್ವಕ್ಕೆ, ಗುಣಕ್ಕೆ ಬೆಲೆ ಕೊಡುತ್ತಿದ್ದರು. ಗುರು ವಿರಕ್ತ ಯಾರೇ ಇರಲಿ, ಕಚ್ಚೆ ಕೈ ಬಾಯಿಗಳನ್ನು ಶುದ್ಧವಾಗಿಟ್ಟುಕೊಂಡು ಬಂದ ಭಕ್ತರಿಗೆ ತತ್ವೋಪದೇಶ ನೀಡುವವನೇ ಸ್ವಾಮಿಯೆನಿಸುದುದುಂಟು. ಅವರೇ ಗುರುಗಳು, ಅಂಥ ಗುರುಗಳಿಗೆ ಸಮಾಜದಲ್ಲಿ ಎಲ್ಲಿಲ್ಲದ ಮಾನ, ಸನ್ಮಾನ. ಮರ್ಯಾದೆ, ಗೌರವ ಎಂಬುದೆಲ್ಲ ಹಿರಿಯರು ಹೇಳುತ್ತಲಿದ್ದರು. ಬರಿಯ ಹೇಳುವುದಷ್ಟೇ ಅಲ್ಲ, ಹಾಗೆ ತಿಳಿದುಕೊಂಡಿದ್ದರು. ಬರಿಯ ಹೇಳುವ, ತಿಳಿದು ಕೊಳ್ಳುವುದಷ್ಟೇ ಅಲ್ಲ; ಅಂಥ ಜೀವನವೇ ಅವರದಾಗಿತ್ತು.

ತೇರದಾಳ ಪಟ್ಟದ್ದೇವರ ಬಳಿಗೆ ಮೇಲಿಂದ ಮೇಲೆ ಪಂಡಿತ ಕಾಶಿನಾಥ ಶಾಸ್ತ್ರಿಗಳೂ, ಬಿಳ್ಳೂರ ಶ್ರೀಗಳವರೂ ಬರುತ್ತಿದ್ದರು. ತೇರದಾಳ ಪಟ್ಟದ್ದೇವರು

ಹಣವಂತರು ಅಥವಾ ಅಧಿಕಾರಿಗಳೆಂದು, ಏನೂ ಇಲ್ಲದವರೆಂದು, ಭಕ್ತರಲ್ಲಿ ಎಂದೂ ಭೇದ ಭಾವ ಮಾಡುತ್ತಿದ್ದಿರಲಿಲ್ಲ. ಮೇಲು ಕೀಳು ಎಂದೆನಿಸುತ್ತಿದ್ದಿರಲಿಲ್ಲ. ಅವರನ್ನು ಅವರವರ ಗುಣಾವಗುಣಗಳಿಂದ ಗೌರವಿಸುತ್ತಿದ್ದರು. ಹೀಗಾಗಿ ಪಟ್ಟದ್ದೇವರು ಮಾತಿಗಿಂತ ಅವರ ಉತ್ತಮ ನಡತೆಗೆ ಬೆಲೆ ಕೊಡುತ್ತಿದ್ದರು. ಇದರಿಂದಾಗಿ ವಿಷಯಲಂಪಟರು, ಆಲಸಿಗಳು, ಮೋಸ, ವಂಚನೆ, ಸುಳ್ಳು ಹೇಳಿ, ಸುಲಿಗೆ ಮಾಡುವವರನ್ನು ಎಂದೂ ನಂಬುತ್ತಿರಲಿಲ್ಲ. ಒಳ್ಳೆಯದನ್ನು ಗುರುತಿಸಿ ಅದಕ್ಕೆ ಬೆಲೆ ಕಟ್ಟುವ ಧರ್ಮ ಇವರದಾಗಿತ್ತು.

ಧರ್ಮಪ್ರಚಾರ ಕಾರ್ಯದಲ್ಲಿಯೂ ತೇರದಾಳ ಪಟ್ಟದ್ದೇವರು ವಿಶೇಷ ಪರಿಶ್ರಮಪಟ್ಟವರು. ಯಾವ ಮತ– ಪಂಥದ ಭೇದವೆಣಿಸದೆ ಸಕಲ ಜೀವಾತ್ಮರಿಗೂ ಲೇಸ ಬಯಸುವ ಉದಾತ್ತಭಾವನೆ ಶ್ರೀಗಳವರದಾಗಿತ್ತು. ಎಲ್ಲರೂ ಶಿವನ ಮಕ್ಕಳೆಂದೇ ಅವರ ಭಾವನೆ. ಶಿಷ್ಯರು ಮಾಡಿದ ತಪ್ಪುಗಳನ್ನು ಪ್ರೀತಿಯಿಂದ ತಿಳಿಸಿಹೇಳಿ, ಉಪಾಯದಿಂದ ಹೊರ ಹಾಕಿಸುತ್ತಿದ್ದರು. ಧರ್ಮದ ನಿಜ ಮಾರ್ಗದತ್ತ ಅವರನ್ನು ಕರೆತರುತ್ತಿದ್ದರು. ಗುರುಲಿಂಗ ಜಂಗಮ ಪ್ರೇಮಿಗಳನ್ನಾಗಿ ಮಾಡುತ್ತಿದ್ದರು. ಭಕ್ತರ ಬಯಕೆಗಳನ್ನು ಈಡೇರಿಸಿಕೊಡುವಲ್ಲಿ ಆಶೀರ್ವಾದ ನೀಡುತ್ತಿದ್ದರು. ಭೂತ ಪಿಶಾಚಿಗಳ ಕಾಟವೆಂದಂದು ಕೋಟಲೆಗೊಳಗಾಗುತ್ತಿರುವವರನ್ನು ಲಿಂಗಪೂಜೆ ಸಮಯದಲ್ಲಿ ಬರಹೇಳುತ್ತಿದ್ದರು. ಅವರ ಕ್ರಿಯಾನಿಷ್ಠೆಗೆ, ಲಿಂಗಪೂಜೆಗೆ ಬೆರಗಾದ ಪಿಶಾಚಿಗಳು ನಾವು ಹೋಗುತ್ತೇವೆ, ಹೋಗುತ್ತೇವೆ... ಬರುವುದಿಲ್ಲ, ಬರುವುದಿಲ್ಲ... ಎಂದು ಹೋಗಿ ಬಿಡುತ್ತಿದ್ದವು. ಇಂಥ ಅಗಾಧ ತಪೋಮಹಿಮೆಯಿಂದ, ಲಿಂಗ ಪೂಜಾತತ್ಪರರಾಗಿ, ಪಿಶಾಚಿಗಳ ಕಾಟಾಚಾರದಿಂದ ಬಳಲುತ್ತಿದ್ದ ಭಕ್ತರ ಕಷ್ಟ, ತಾಪತ್ರಯ; ಕೋಟಲೆಗಳನ್ನು ಹೋಗಲಾಡಿಸುತ್ತಿದ್ದರು. ತಮ್ಮ ತಪೋಮಹಿಮೆಯಿಂದ ಆದ ಅಸಂಖ್ಯಾತ ಘಟನೆಗಳು ಶ್ರೀ ಸಾಮಾನ್ಯರಿಗೆ ಪವಾಡಗಳಾಗಿ ಕಂಗೊಳಿಸಿವೆ.

ತೇರದಾಳ ಪಟ್ಟದೇವರ ಪವಾಡಗಳು

೧. ರಬಕವಿಯ ಶ್ರೀ ಶಿವಪ್ಪ ಎಂಬವರು ಎತ್ತಿನಗಾಡಿಯೊಂದನ್ನು ಖರೀದಿಸಿ, ಭಾಡಿಗೆ ಹೊಡೆಯುತ್ತಿದ್ದರು. ಕೂಲಿ ಮಾಡಿ ಜೀವನ ನಡೆಸುತ್ತಿದ್ದರು. ಶ್ರೀ ಶಿವಪ್ಪನಿಗೆ ಹೆಂಡತಿ ಪಾರ್ವತಮ್ಮ ಇದ್ದಳು. ಮಗ ಕಲ್ಲಪ್ಪ, ಸೊಸೆ ಕಲಾವತಿ ಎಲ್ಲರೂ ತೇರದಾಳದ

ಪಟ್ಟದ್ದೇವರಲ್ಲಿ ಅತ್ಯಂತ ಶ್ರದ್ಧೆಯುಳ್ಳವರಾಗಿದ್ದರು. ಪಾರ್ವತಮ್ಮ ಪಟ್ಟದ್ದೇವರೆಂದರೆ ತಮ್ಮ ಪಾಲಿನ ದೇವರೆಂದೇ ಬಗೆದಿದ್ದರು.

ಶ್ರೀ ಶಿವಪ್ಪನವರದು ತೀರ ಬಡತನದ ಕುಟುಂಬವಾಗಿತ್ತು, ಕೂಲಿ ದೊರೆಯದಲೆ ಹೋದಾಗ ಒಮ್ಮೊಮ್ಮೆ ಉಪವಾಸ ಬೀಳುತ್ತಿದ್ದರು. ಇದು ತೇರದಾಳದ ಪಟ್ಟದ್ದೇವರಿಗೆ ಹೇಗೊ ತಿಳಿದು ತಮ್ಮ ಇದ್ದುಳ್ಳ ಶಿಷ್ಯರ ಕಡೆಯಿಂದ ಶ್ರೀ ಶಿವಪ್ಪನಿಗೆ ಆಗಾಗ ಜೋಳವನ್ನು ಕೊಡಿಸುತ್ತ ಬಂದಿದ್ದರು. ತಮ್ಮ ದರ್ಶನಕ್ಕೆ ಬಂದಾಗ ಈ ಬಡವರಿಗೆ ಮೈತುಂಬ ಬಟ್ಟೆ ಆಶೀರ್ವದಿಸಿ ಕೊಡುತ್ತಿದ್ದರು. ಜೊತೆಗೆ ಹಾಲಿಗೆಂದು ಒಂದು ಚೊಚ್ಚಲ ಆಕಳು ಮತ್ತು ಆಕಳಿಗೆ ಆಹಾರ ಎಂದು, ಬಂಡಿ ತುಂಬ ಕಣಿಕೆ ಕೊಟ್ಟು ಕಳಿಸಿದ್ದೂ ಉಂಟು. ಒಮ್ಮೆಯಂತೂ ಶಿವಣ್ಣ ಭಾಡಿಗೆ ಹಣ ತಂದು ಮನೆಯಲ್ಲಿ ಕೈಚೀಲ ಒಂದರಲ್ಲಿ ಇಟ್ಟಿದ್ದನಂತೆ. ಅದನ್ನು ಯಾರೋ ತುಡುಗು ಮಾಡಿಕೊಂಡು ಹೋದಾಗ, ಇಷ್ಟೆಲ್ಲ ಹಣ ಹೋಯಿತು, ಜೀವಿಸುವುದು ಹೇಗೆ? ಎಂದು ಚಿಂತಿಸಿ, ತಗಣಿ ಎಣ್ಣೆ ಸೇವಿಸಿ ಬೇಸುದ್ಧ ಆಗಿ ಬಿದ್ದು ಬಿಟ್ಟನಂತೆ. ಆ ಬಳಿಕ ಪಾರ್ವತಮ್ಮ ಧೈರ್ಯದಿಂದ ಸ್ನಾನ ಮಾಡಿ ಹೊರಬಂದಳು. ಶ್ರೀ ತೇರದಾಳ ಪಟ್ಟದ್ದೇವರೇ ಅವಳಲ್ಲಿ ಪ್ರವೇಶ ಮಾಡಿ, ಶಿವಪ್ಪನ ಬಾಯಲ್ಲಿ ತೀರ್ಥ ಹಾಕಿದರು. ಏನಪ್ಪಾ ಶಿವಣ್ಣ ಹೇಗಿದ್ದಿ? ಎಂದು ಕೇಳಿದಾಗ ಕಣ್ತೆರೆದು ಚೆನ್ನಾಗಿದ್ದೇನೆ ಎಂದರಂತೆ. ಕೂಡಿದ ಜನರೆಲ್ಲರೂ ತೇರದಾಳದ ಪಟ್ಟದ್ದೇವರ ಘನಮಹಿಮೆಯನ್ನು ಕಂಡು ಕೊಂಡಾಡತೊಡಗಿದರಂತೆ

೨. ತೇರದಾಳ ಪಟ್ಟದ್ದೇವರ ಭಕ್ತರಲ್ಲಿ ನಾವಲಗಿ ಗ್ರಾಮದವರೂ ನಿಷ್ಠಾವಂತ ಭಕ್ತರಿದ್ದಾರೆ. ಒಮ್ಮೆ ಪಟ್ಟದ್ದೇವರ ದರ್ಶನಕ್ಕೆ ಈ ನಾವಲಗಿ ಗ್ರಾಮದ ಭಕ್ತರು ಹೋದಾಗ ಶ್ರೀಗಳು ಮಾವಿನ ಗಿಡದ ಕೆಳಗೆ ಕುಳಿತುಕೊಂಡಿದ್ದರಂತೆ. ಇದ್ದಕ್ಕಿದ್ದಂತೆ ಶ್ರೀಗಳು ಗಿಡದ ಕಡೆಗೆ ನೋಡತೊಡಗಿದರು. ಹೀಗೇಕೆ ಗುರುಗಳೇ ಎಂದು ಕೇಳಿದರು. ಆಗ ಗುರುಗಳು, 'ಆ ಬರಡು ಗಿಡಕ್ಕೆ ಹತ್ತಿಪ್ಪತ್ತು ಕಾಯಿ ಬಿಟ್ಟಿವೆ' ಎಂದಂದು ಜೋತು ಬಿದ್ದಿದ್ದ ಗೊಂಚಲೊಂದನ್ನು ತೋರಿಸಿ ಚಕಿತಗೊಳಿಸಿದರಂತೆ.

೩. ಒಮ್ಮೆ ಶ್ರೀಗಳವರು ತಮ್ಮ ಶಿಷ್ಯನನ್ನು ನೋಡಲು ಮಿರಜದ ಹಾಸ್ಪಿಟಲಕ್ಕೆ ಹೋಗಿದ್ದರು. ಆರು ತಿಂಗಳಿಂದ ಅಲ್ಲಿದ್ದರೂ ಅವನಿಗೆ ಗುಣವಾಗಿದ್ದಿರಲಿಲ್ಲ. ಡಾಕ್ಟರರನ್ನು ಕೇಳಲಾಗಿ ಅವನಿಗಿನ್ನು ಗುಣವಾಗುವುದಿಲ್ಲ, ನಿಮ್ಮೂರಿಗೆ ಕರೆದುಕೊಂಡು ಹೋಗಿರಿ ಎಂದರಂತೆ, ಕೂಡಲೇ ಶ್ರೀಗಳವರು ಆ ರೋಗಿಗೆ ತೀರ್ಥ ಕೊಟ್ಟು ಪ್ರಸಾದ ನೀಡಿದರಂತೆ, ಅದನ್ನು ಸೇವಿಸಿದ ರೋಗಿಗೆ ಗುಣವಾಯಿತಂತೆ. ಇದನ್ನು ಕೇಳಿದ ಮಿರಜದಲ್ಲಿದ್ದ ಸುಪ್ರಸಿದ್ಧ ಡಾಕ್ಟರರಾಗಿದ್ದ ಡಾ. ಶಷಿಲ್ ಎಂಬುವರು ಸ್ವತಃ ಶ್ರೀಗಳವರ ದರ್ಶನ ಪಡೆದುಕೊಂಡು ಧನ್ಯರಾದರೆಂದೂ ಹೇಳುತ್ತಿರುತ್ತಾರೆ.

೪. ನಿಪ್ಪಾಣಿಯಲ್ಲಿ ಕಾಂಟ್ರ್ಯಾಕ್ಟರರಾಗಿದ್ದ ಆಜರಾ ಗ್ರಾಮದ ಶ್ರೀ ಬಸವಣ್ಣೆಪ್ಪ ನರ್ಕೆ ದಂಪತಿಗಳು ಶ್ರೀ ತೇರದಾಳದ ಪಟ್ಟದ್ದೇವರಲ್ಲಿ ಅನನ್ಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಮನೆತನದ ಆಸ್ತಿಯನ್ನೆಲ್ಲಾ ಬಂಧುಗಳಿಗೆ ಬಿಟ್ಟುಕೊಟ್ಟು ತಮ್ಮ ಕಾಲಮೇಲೆ ತಾವು ನಿಂತುಕೊಂಡು ಸಾಕಷ್ಟು ಗಳಿಸಿ, ಸುಖಜೀವನ ನಡೆಸುತ್ತಿರುವುದು ಶ್ರೀಗಳವರ ಆಶೀರ್ವಾದವೆ ಎಂದು ಬಲ ವಾಗಿ ಅವರು ನಂಬಿದವರಾಗಿದ್ದಾರೆ.

೫. ಗದುಗಿನ ಶ್ರೀ ಮಾನ್ವಿ ಬಂಧುಗಳವರ ತಾಯಿ ಗಂಗವ್ವ ಅವರಿಗೆ ಬಾಯಿ ಹೋಗಿತ್ತು. ತೇರದಾಳದ ಪಟ್ಟದ್ದೇವರಲ್ಲಿ ಭಕ್ತಿಯಿಂದ ಸೇವೆ ಸಲ್ಲಿಸುತ್ತಿದ್ದ ಗಂಗವ್ವ ತಾಯಿಯವರು ಗುಣಮುಖರೆಂದು ಶ್ರೀಗಳವರು ಹದಿನೈದು ದಿನಗಳ ಕಾಲ ಜಪ ಮಾಡಿ ಅವರಿಗೆ ಬಾಯಿ ಬರುವಂತೆ ಮಾಡಿದುದು ಈಗಲೂ ಜನರ ಬಾಯಲ್ಲಿ ಜೀವಂತ ವಾಗಿರುತ್ತದೆ.

೬. ತೇರದಾಳ ಪಟ್ಟದ್ದೇವರ ಆಶೀರ್ವಚ ಪಡೆಕೊಂಡು ರಬಕವಿಯ ಭಕ್ತರು ಬಹು ವ್ಯವಸ್ಥಿತ ರೀತಿಯಲ್ಲಿ ಅರುವತ್ತೂರು ಪುರಾತನರ ಮಂಟಪ ಪೂಜೆ ನಡೆಸಿದುದು ರಬಕವಿಯ ಜನತೆಯ ಕಣ್ಮುಂದೆ ಈಗಲೂ ಕಟ್ಟಿದಂತಿದೆ. ಆಗ ಕೂಡಿಸಿದ ಹಣದಲ್ಲಿ ಉಳಿತಾಯವಾದ ಹಣದಿಂದ ಭಕ್ತರು ಮಹಾದೇವನ ಗುಡಿಯ ಹಿಂದೆ ಪ್ರಾಥಮಿಕ ಶಾಲೆಯೊಂದನ್ನು ಕಟ್ಟಿಸಿದುದು ಶ್ರೀಗಳವರ ಕೃಪಾಶೀರ್ವಾದದಿಂದಲೇ ಎಂದು ಜನತೆ ನಂಬಿರುವಂತಹದು.

೭. ಅಥಣಿಯ ಭಕ್ತರ ಕರೆಯ ಮೇರೆಗೆ ಅಲ್ಲಿಗೆ ಮೇಲಿಂದ ಮೇಲೆ ಹೋಗಿ ಬರುತ್ತಿದ್ದರು. ಶ್ರೀ ತೇರದಾಳ ಪಟ್ಟದ್ದೇವರ ಆಶೀರ್ವಾದ ಪಡೆದುದರಿಂದ ಮಿರಜದ ಸೌಭಾಗ್ಯವತಿ ಮುರಗೆವ್ವ ಸದಾಶಿವಪ್ಪ ಗಾಡವೆ ಅವರಿಗೆ ಪುತ್ರ ಸಂತಾನವಾದುದನ್ನು ಈಗಲೂ ಅವರು ಸ್ಮರಿಸುತ್ತಿರುತ್ತಾರೆ.

೮. ಪಟ್ಟದ್ದೇವರು ಕಾಮಣಿಯಂತಹ ರೋಗಗಳ ಬಾಧೆಯನ್ನು ಪರಿಹರಿಸಲು ಕೊಡುತ್ತಿದ್ದ ಪ್ರಸಾದ ಮಹಿಮೆಯಿಂದ ಎಷ್ಟೋ ರೋಗಗಳು ಪರಿಹಾರವಾದುದು ಜನ ಈಗಲೂ ಮರೆತಿಲ್ಲ.

೯. ಗದುಗಿನ ಶ್ರೀ ವಿರೂಪಾಕ್ಷಪ್ಪಣ್ಣಾ ತಡಸದ ಇವರ ಧರ್ಮಪತ್ನಿ ಗಂಗವ್ವಕ್ಕ ಮತ್ತು ಡಾ. ಡಿ. ಡಿ. ಕಲ್ಲೊಳಗಿ ಇವರ ಧರ್ಮಪತ್ನಿ ಶಾಂತಕ್ಕ ಇವರಿಗೆ ತೇರದಾಳ ಪಟ್ಟದ್ದೇವರ ಆಶೀರ್ವಾದದಿಂದ ಗಂಡು ಮಕ್ಕಳಾದು ದನ್ನು ಸ್ಮರಿಸಬಹುದಾಗಿದೆ.

೧೦. ಸಾರ್ವಜನಿಕವಾಗಿ ನಡೆಸುತ್ತಿದ್ದ ಪ್ರಸ್ತದಂತಹ ಕಾರ್ಯಗಳೂ ಶ್ರೀ ತೇರದಾಳ ಪಟ್ಟದ್ದೇವರ ಆಶೀರ್ವಾದದಿಂದ ಎಂದೂ ಕೊರತೆಯನ್ನು ಕಂಡಿಲ್ಲವಂತೆ.

೧೧. ಸಾಮಾಜಿಕ ಅಯ್ಯಾಚಾರ, ದೀಕ್ಷೆಯಂತಹ ಧಾರ್ಮಿಕ ಕ್ರಿಯೆಗಳೂ, ಶ್ರೀ ತೇರದಾಳ ಪಟ್ಟದ್ದೇವರ ಅಮೃತಹಸ್ತದಿಂದ ಕ್ರಮಬದ್ಧವಾಗಿ ಅಷ್ಟೇ ಶಾಸ್ತ್ರೋಕ್ತವಾಗಿಯೂ ನಡೆಯುತ್ತಿದ್ದವು.

೧೨. ದಿ. ೨೨–೧೧–೫೫ ರಂದು ಮುತ್ತಿನಕಂತಿಮಠದ ಅಡ್ಡಪಲ್ಲಕ್ಕಿ ಮಹೋತ್ಸವ ನಡೆದಿತ್ತು, ಅಯ್ಯಾಚಾರ ದೀಕ್ಷೆಯ ಸಲುವಾಗಿ ಹುಗ್ಗಿ ಹಂಡೆಗಳನ್ನು ಕುದಿಸಿ ಇಟ್ಟಿದ್ದರು. ಆಗ ಕುದಿಯುತ್ತಿದ್ದ ಹಂಡೆಯಲ್ಲಿ ಶ್ರೀ ತೇರದಾಳ ಪಟ್ಟದ್ದೇವರು ಕೈ ಹಾಕಿ ಹೊರತೆಗೆಯುತ್ತಿದ್ದುದು ನೆರೆದ ಜನತೆಗೆ ಆಶ್ಚರ್ಯವನ್ನುಂಟು ಮಾಡುತ್ತಿತ್ತು.

೧೩. ಪ್ರಸ್ತ ನಡೆದಾಗ ಕುದಿಯುವ ಸಾರಿನ ಕೊಳಗದಲ್ಲಿಯೂ ಶ್ರೀ ತೇರದಾಳ ಪಟ್ಟದ್ದೇವರು ಕೈ ತೊಳೆಯುತ್ತಿದ್ದುದಂತೂ ಸೋಜಿಗದ ಸಂಗತಿಯಾದರೂ ಸತ್ಯ ಸಂಗತಿ ಇದಾಗಿತ್ತು, ಭಕ್ತರು ಜಯಘೋಷ ಮಾಡುತ್ತ; ಪ್ರಸಾದ ಎಡೆ ಮಾಡಲು ಸಿದ್ಧರಾಗಿರುತ್ತಿದ್ದರು.

೧೪. ಒಮ್ಮೆ ತೇರದಾಳದ ಒಬ್ಬ ಶ್ರೀಮಂತ ಶಿಷ್ಯರು ಪಟ್ಟದ್ದೇವರನ್ನು ಪ್ರಸಾದಕ್ಕೆ ಆಮಂತ್ರಿಸಿದ್ದರು. ಆ ಶ್ರೀಮಂತ ದಂಪತಿಗಳಿಬ್ಬರೂ ಬಹು ಭಕ್ತಿಯಿಂದ ಶ್ರೀಗಳವರನ್ನು ಬರಮಾಡಿಕೊಂಡು ಸ್ನಾನ ಮಾಡಿಸಿ, ಪೂಜೆಗೆ ಅಣಿ ಮಾಡಿದರು. ಪ್ರಸಾದಕ್ಕೆಂದು ಬಿಸಿ–ಬಿಸಿ ಹೋಳಿಗೆಯನ್ನು ಶ್ರೀಗಳವರಿಗೆ ಎಡೆ ಮಾಡಿದರು. ಆದರೆ ಆ ಶ್ರೀಮಂತ ಯಜಮಾನರಿಗೆ ರೊಟ್ಟಿ ನೀಡಿದ್ದರು. ಇದನ್ನು ಕಂಡ ಶ್ರೀಗಳು ವ್ಯಥೆಪಟ್ಟುಕೊಂಡರು. ಶಿಷ್ಯಕರಣ ಪ್ರಸಾದ ಸ್ವೀಕರಿಸುವಾಗ ಬೇರೆ ಬೇರೆ ಎಡೆಗಳನ್ನು ಗುರುತಿಸಿದ್ದ ಶ್ರೀಗಳವರು ಹೀಗೇಕೆ ಭೇದ–ಭಾವ ಎಂದು ಕೇಳಿದರು. ನೀವು ಹೋಳಿಗೆ ತಿನ್ನುವುದಿಲ್ಲವೆ ಎಂದೂ ಕೇಳಿದರು. ಆಗ ಶ್ರೀಮಂತ ಶಿಷ್ಯನು ಹಾಗೇನಿಲ್ಲ ಗುರುಗಳೇ, ನಾನೊಂದು ನೇಮ ಹಿಡಿದಿರುವೆ. ಅದು ಈಡೇರದ ಹೊರತು ಹೋಳಿಗೆ ತಿನ್ನುವುದಿಲ್ಲ ಎಂದು ಉತ್ತರಿಸಿದನು. ಆಗ ಗುರುಗಳು ಯಾವ ನೇಮ ಎಂದು ಕೇಳಿದರು. ಶಿಷ್ಯ ತಡವರಿಸುತ್ತ ೧೦೦೧ ಜಂಗಮರಿಗೆ ಪ್ರಸಾದ ವ್ಯವಸ್ಥೆ ಮಾಡಿಸಿ, ಪ್ರತಿಯೊಬ್ಬರಿಗೂ ಒಂದೊಂದು ರೂಪಾಯಿ ದಕ್ಷಿಣೆ ಕೊಡುವ ಸಂಕಲ್ಪ ಇಟ್ಟುಕೊಂಡಿದ್ದೇನೆ' ಎಂದು ಹೇಳಿದರು. ಈ ಶಿಷ್ಯನ ಮನೋಗತವನ್ನರಿತ ಗುರುಗಳು ನೇಮ ನನಗಿರಲಿ, ಮೊದಲು ನೀವು ಹೋಳಿಗೆ ಪ್ರಸಾದ ಸ್ವೀಕರಿಸಿ ಎಂದು ಅಪ್ಪಣೆ ಕೊಡಿಸಿದರು. ಇದನ್ನು ಕೇಳಿದ ಈ ಶ್ರೀಮಂತ ಶಿಷ್ಯ ಹೋಳಿಗೆ ಪ್ರಸಾದ ಸ್ವೀಕರಿಸಿದನ್ನು ಜನ ಈಗಲೂ ಸ್ಮರಿಸುತ್ತಲಿರುತ್ತಾರೆ. ಈ ಘಟನೆ ನಡೆದದ್ದು ಕ್ರಿ.ಶ. ಸು. ೧೯೪೦ರಲ್ಲಿ ಎಂದು ತಿಳಿದುಬರುತ್ತದೆ.

೧೫. ಶಿಷ್ಯನಿಗೆ ವಚನಕೊಟ್ಟಂತೆ ನಡೆದುಕೊಂಡ ಶ್ರೀ ತೆರದಾಳದ ಪಟ್ಟದ್ದೇವರು ತಮ್ಮ ಜೀವಿತದ ಕೊನೆ ಗಳಿಗೆಯಲ್ಲಿ ಅಂದರೆ ಕ್ರಿ. ಶ. ೧೯೬೦ರಲ್ಲಿ ಒಂದು ಸಾವಿರದಾ ಒಂದು ಜಂಗಮರನ್ನು ಆಮಂತ್ರಿಸಿ, ಹೋಳಿಗೆ ಪ್ರಸಾದ ಉಣಬಡಿಸಿ, ಒಬ್ಬೊಬ್ಬರಿಗೆ

ಒಂದೊಂದು ರೂಪಾಯಿ ದಕ್ಷಿಣೆ ಕೊಟ್ಟದ್ದುಂಟು. ತೇರದಾಳದ ಪಂಚಾಕ್ಷರಿ ಮಾಸ್ತರರು ಕಲ್ಲಪ್ಪಣ್ಣಪಟ್ಟಣಶೆಟ್ಟಿ, ರಾಮಪ್ಪಣ್ಣ ಚನಮಲ್ಲಪ್ಪಣ್ಣಹಂಜಿ, ಮಹಾಬಳಶೆಟ್ಟರು, ಕಲ್ಪಡಿಯವರು, ಗಡದವರು, ಯಾದವಾಡದವರು ಮೊದಲಾದ ಭಕ್ತರು ಸೇರಿ ಶ್ರೀಗಳವರ ಇಚ್ಛೆಯಂತೆ ಈ ಕಾರ್ಯಕ್ರಮವನ್ನು ನಡೆಸಿದುದು ಚರಿತ್ರಾರ್ಹ ಘಟನೆಯಾಗಿದೆ.

ತೇರದಾಳ ಪಟ್ಟದ್ದೇವರು ಶಿಷ್ಯರ ಉದ್ಧಾರವೇ ತಮ್ಮ ಉದ್ಧಾರವೆಂದು ಬಗೆದಿದ್ದರು. ಶಿಷ್ಯರ ಕಷ್ಟ–ತಾಪ್ರಯಗಳು ತಮ್ಮವೆ ಎಂದು ಬಗೆದು ನಂಜುಂಡನಂತೆ ಅವರ ದುಃಖಗಳನ್ನೆಲ್ಲಾ ತಾವೇ ಸ್ವೀಕರಿಸುತ್ತ ಅವರನ್ನು ಪಾರು ಮಾಡುತ್ತಿದ್ದರು; ಭಕ್ತರ ಸೊಮ್ಮು ಭಕ್ತರಿಗೆ ಸಮರ್ಪಿಸಿ ಧನ್ಯರಾಗು ತ್ತಿದ್ದರು.

ತೇರದಾಳ ಪಟ್ಟದ್ದೇವರ ಆಸ್ತಿ–ಪಾಸ್ತಿಯಾವುದೂ ಹೇಳಿಕೊಳ್ಳುವಂತಿಲ್ಲ. ಅವರಿಗಿದ್ದ ಆಸ್ತಿಯೆಂದರೆ ಅವರ ಚಾರಿತ್ರಶುದ್ಧಿ ಶ್ರೀಮಂತ ಗುರುತ್ವ ಶಕ್ತಿಯೊಂದೇ. ಅದನ್ನು ಪಡೆದುಕೊಂಡು ಶ್ರೀಮಂತರಾದವರು ಸಹಸ್ರಾರು ಜನರು. ಭಕ್ತರು ತಾವು ಗಳಿಸಿದ ಆಸ್ತಿಯಲ್ಲಿ ಕೆಲವೊಂದನ್ನು ತಮ್ಮ ಗರುಗಳಿಗೆ ಸಮರ್ಪಿಸುತ್ತಲಿದ್ದರು. ಭಕ್ತರಿಂದ ಪಡೆದ ಆ ಸಂಪತ್ತು ಭಕ್ತರಿಗಾಗಿಯೆ ಸಮರ್ಪಿಸುತ್ತಿದ್ದರು. ಇದರಿಂದಾಗಿ ಶ್ರೀಗಳ ಸ್ಥಿರಾಸ್ತಿಯೆಂಬುದು ಯಾವುದೂ ಇಲ್ಲ. ಅಂತೆಯೇ ತೇರದಾಳದ ಪಟ್ಟದ್ದೇವರು ಅಂದಿನ ನಡೆದಾಡುವ ಚೈತನ್ಯ ಸ್ವರೂಪದ ಜಂಗಮ ಮೂರ್ತಿಗಳಾಗಿದ್ದರು.

ತೇರದಾಳ ಪಟ್ಟದ್ದೇವರು ಚೈತ್ರ ಶುದ್ಧ ಮಂಗಳವಾರ ದಿ. ೨೭–೩–೧೯೬೦ ರಂದು ಬೆಳಗಿನ ಜಾವ ೫–೫೦ ಗಂಟೆಗೆ ಲಿಂಗೈಕ್ಯರಾದರು. ಇವರು ಲಿಂಗೈಕ್ಯರಾದ ಸುದ್ದಿ ಅವರ ಶಿಷ್ಯ ಬಳಗಕ್ಕೆ ತುಂಬಿಬಾರದ ಹಾನಿಯನ್ನುಂಟು ಮಾಡಿತು. ಅವರ ಪಾರ್ಥಿವ ಶರೀರ ಅಳಿದು ಹೋಗಿದ್ದರೂ ಅವರ ಚೈತನ್ಯ ಸ್ವರೂಪದ ಆತ್ಮ ಇಷ್ಟಲಿಂಗದಲ್ಲಿ ಶಾಶ್ವತವಾಗಿ ಪ್ರಜ್ವಲಿಸುತ್ತದೆ. ಅವರ ಉದಾತ್ತ ವ್ಯಕ್ತಿತ್ವದ ಗುರುತುಗಳು ಅವರು ಹಾಕಿಕೊಟ್ಟ ದಾರಿಯಲ್ಲಿ ಮೂಡಿರುತ್ತವೆ. ಅವರ ಹೆಜ್ಜೆಯಲ್ಲಿ ಹೆಜ್ಜೆಯಿಟ್ಟು ತಮ್ಮ ಜೀವನವನ್ನು ಪಾವನ ಮಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ.

ಲಿಂ.ಷ.ಬ್ರ. ಕಾಡದೇವರ ಸ್ವಾಮಿಗಳು ಅಂದರೆ ತೇರದಾಳ ಪಟ್ಟದ್ದೇವರ ತರುವಾಯ ರಂಭಾಪುರಿ ಜಗದ್ಗುರುಗಳ ನೇತೃತ್ವದಲ್ಲಿ ಶ್ರೀ ಶಂಕರ ದೇವರಿಗೆ ಭಕ್ತಜನರು ಪಟ್ಟಾಭಿಷೇಕ ಮಾಡಿದ್ದರು. ತೇರದಾಳ ಕಲ್ಲುಮಠಕ್ಕೆ ಹೋಗುವಾಗ

ಬಲಭಾಗಕ್ಕೆ ಗುರು ಗಂಗಾಧರ ಶ್ರೀಗಳವರ ಗದ್ದುಗೆ ಇರುತ್ತದೆ. ಎಡಭಾಗಕ್ಕೆ ಅನುಗ್ರಹ ಗುರುಗಳಾದ ಯಾದವಾಡದ ಮಳೇಂದ್ರ ಮಹಾಸ್ವಾಮಿಗಳ ಗದ್ದುಗೆ ಇರುತ್ತದೆ. ಆಸ್ತಿ ಹೆಚ್ಚಿಗೆ ಇಲ್ಲದ್ದಕ್ಕೆ ಶ್ರೀಗಳವರ ಮಠ, ಸಮಾಧಿ ಹಾಗೇ ನಿಂತು ಕೊಂಡಿರುತ್ತವೆ. ಭಕ್ತರು ನಾವಲಗಿಯಲ್ಲಿ ಒಂದು ಮಠವನ್ನು ಕಟ್ಟಿಸಿರುತ್ತಾರೆ.

ತೇರದಾಳ ಪಟ್ಟದ್ದೇವರ ನಿಷ್ಠಾವಂತ ಭಕ್ತರಲ್ಲಿ ಅಥಣಿಯ ಶ್ರೀ ಗುರಪ್ಪ ಚೆಟ್ಟಿಯವರು ಒಬ್ಬರು. ಇವರು ಶ್ರೀಗಳವರ ಹೆಸರು ಶಾಶ್ವತ ಉಳಿಯ ಬೇಕೆಂದು ಹಲವಾರು ವಿಧಾಯಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಅವು ಕಾರ್ಯಗತವಾಗುವುದಕ್ಕೆ ಮುನ್ನವೆ ಶ್ರೀ ಚೆಟ್ಟಿ ಗುರಪ್ಪನವರು ಲಿಂಗೈಕ್ಯರಾದುದು ದುರ್ದೈವದ ಸಂಗತಿಯಾಗಿರುತ್ತದೆ.

ಇಂದು ಶಿವಶಂಕರಸ್ವಾಮಿ ಎಂಬವರು ಗಂಗಾಧರ ದೇವರು (ಕಾಡ ದೇವರು) ಹೆಸರಿನವರನ್ನು ತೇರದಾಳ ಈ ಮಠಕ್ಕೆ ಮರಿ ಬಿಟ್ಟಿದ್ದು ಅವರಿನ್ನೂ ಚಿಕ್ಕವರಿರುವರು. ಇವರೀಗ ಬಾಳೆಹೊನ್ನೂರ ರಂಭಾಪುರಿ ಪೀಠದಲ್ಲಿ ಅಧ್ಯಯನ ಮಾಡುತ್ತಿರುವರು.

■■

ಚಿಕೇನಕೊಪ್ಪದ
ಲಿಂ. ಚನ್ನವೀರ ಶರಣರು

ಹಿನ್ನೆಲೆ :

ಕರ್ನಾಟಕ ರಾಜ್ಯದ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಒಂದು ಹಳ್ಳಿ ಈ ಚಿಕೇನಕೊಪ್ಪ. ಇದು ಮೊದಲು ರಾಯಚೂರು ಜಿಲ್ಲೆಯಲ್ಲಿತ್ತು. ರಾಯಚೂರು ಯಲಬುರ್ಗಾ ಮತ್ತು ಬೀದರ್ ಜಿಲ್ಲೆಗಳು ಹೈದ್ರಾಬಾದ್ ನಿಜಾಮನ ಆಡಳಿತಕ್ಕೆ ಒಳಪಟ್ಟಿದ್ದವು.

ಚಿಕೇನಕೊಪ್ಪ ಗ್ರಾಮವು ಹಳ್ಳದ ದಂಡೆಯ ಮೇಲಿರುವ ನಿಸರ್ಗ ರಮ್ಯ ತಾಣವಾಗಿರುತ್ತದೆ. ಇದು ರಾಜೂರ ದೇಸಾಯಿಯವರ ಉಂಬಳಿ ಗ್ರಾಮ ವಾಗಿತ್ತು. ಇಲ್ಲಿಯ ಹಿರೇಮಠಕ್ಕೆ ದೇಸಾಯಿಯವರು ಹತ್ತು ಎಕರೆ ಭೂಮಿಯನ್ನು ದಾನವಾಗಿ ಕೊಟ್ಟಿದ್ದರು. ಚಿಕೇನಕೊಪ್ಪ ಗ್ರಾಮದ 'ಹಿರೇಮಠ'ದ ಮೂಲ ಪುರುಷರು ಮೂಲತಃ ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮಮದಾಪುರ ಗ್ರಾಮದವರು. ಇಲ್ಲಿ ಭೀಕರ ಬರಗಾಲ ಬಿದ್ದಿದ್ದರಿಂದ ಹಿರೇಮಠ ಮನೆತನದವರು ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನಲ್ಲಿರುವ ಅಮರೇಶ್ವರ ದೇವಸ್ಥಾನಕ್ಕೆ ಹೋಗಿ ಅಲ್ಲಿಯೇ ವಾಸ ಮಾಡಿಕೊಂಡು ಇದ್ದರು. ಅಲ್ಲಿಂದ ಕೆಲ ದಿನಗಳ ತರುವಾಯ ಡಂಬಳ–ಗದಗ ಜಗದ್ಗುರು ತೋಂಟದಾರ್ಯ ಮಠಕ್ಕೆ ತೆರಳಿ ಅಲ್ಲಿ ಬೀಡು ಬಿಟ್ಟರು. ಸುಸಂಸ್ಕೃತ ಮನೆತನದ, ನಂಬಿಗಸ್ಥರೂ ಆಗಿದ್ದ ಇವರನ್ನು ಜಗದ್ಗುರುಗಳು ತಮ್ಮ ಶಾಖಾಮಠವಾಗಿದ್ದ ಯಲಬುರ್ಗಾ ತಾಲೂಕಿನ ಬಿನ್ನಾಳು ಮಠಕ್ಕೆ ಕಳುಹಿಸಿಕೊಟ್ಟರು. ಈ ಪರಿವಾರದ ಚನವೀರಯ್ಯ ಎಂಬವರು ಪಕ್ಕದಲ್ಲಿರುವ ಚಿಕೇನಕೊಪ್ಪಕ್ಕೆ ಬಂದರು. ಅಲ್ಲಿಯ ಜನತೆಯ ಅಭಿಲಾಷೆಯ ಮೇರೆಗೆ ಒಂದು ಮಠವನ್ನು ಸ್ಥಾಪಿಸಿದರು. ಅದುವೆ ಚಿಕೇನಕೊಪ್ಪದ ಹಿರೇಮಠ ವಾಗಿರುತ್ತದೆ.

ಚಿಕೇನಕೊಪ್ಪದ ಈ ಹಿರೇಮಠವು ಪಂಚಾಚಾರ್ಯ ಪೀಠಗಳಲ್ಲಿ ಒಂದಾಗಿ ರುವ ಉಜ್ಜಯಿನಿಯ ಜಗದ್ಗುರು ಮರುಳಾರಾಧ್ಯರ ಶಾಖಾ ಮಠವಾಗಿರುತ್ತದೆ.

ಚಿತ್ರದುರ್ಗದ ಬೃಹನ್ಮಠದ ಪೂಜ್ಯ ಜಗದ್ಗುರು ಜಯದೇವ ಮಹಾಸ್ವಾಮಿಗಳೂ ಮುಂಡರಗಿಯ ಜಗದ್ಗುರುಗಳೂ ಈ ಮನೆತನದಲ್ಲಿಯೇ ಜನಿಸಿದವರಾಗಿರುವರು. ಚಿಕೇನಕೊಪ್ಪ ಹಿರೇಮಠದ ಚನ್ನವೀರಯ್ಯ ಎಂಬವರಿಗೆ ಮುಪ್ಪಯ್ಯ ಮತ್ತು ಶಾಂತಯ್ಯ ಹೆಸರಿನ ಇಬ್ಬರು ಗಂಡು ಮಕ್ಕಳಿದ್ದರು. ಇವರಲ್ಲಿ ಶಾಂತಯ್ಯ ಎಂಬುವರಿಗೆ ಗುರುಶಾಂತಯ್ಯ, ಮಹಾಂತಯ್ಯ ಮತ್ತು ಸಿದ್ಧಲಿಂಗಯ್ಯ ಮೂವರು ಗಂಡುಮಕ್ಕಳೂ ಸಿದ್ಧಲಿಂಗಮ್ಮ ಹೆಸರಿನ ಒಬ್ಬ ಹೆಣ್ಣುಮಗಳೂ ಇದ್ದರು. ಗುರುಶಾಂತಯ್ಯ ಅವರು ನವಲಗುಂದ ತಾಲೂಕ ಶಲವಡಿ ಗ್ರಾಮಕ್ಕೆ ಸ್ವಾಮಿಗಳಾದರು. ಮಹಾಂತಯ್ಯನವರೂ, ಸನ್ಯಾಸಿಗಳಾದರು. ಪೂಜಾ ಸಮಯದಲ್ಲಿ ಉರಿಸುತ್ತಿದ್ದ ಗುಗ್ಗುಳದ ವೈಭವದಿಂದಾಗಿ ಇವರನ್ನು 'ಗುಗ್ಗಳ ಮಹಾಂತಪ್ಪ' ಎಂದು ಕರೆಯುತ್ತಲಿದ್ದರು. ಸಿದ್ಧಲಿಂಗಯ್ಯನವರಿಗೆ ಗುನ್ನಮ್ಮ ಹಾಲಮ್ಮ ಚನ್ನಮ್ಮ ಮೂವರು ಹೆಣ್ಣುಮಕ್ಕಳೂ ಚನ್ನವೀರಯ್ಯ ಮತ್ತು ಕಾನಯ್ಯ ಇಬ್ಬರು ಗಂಡು ಮಕ್ಕಳೂ ಜನಿಸಿದರು. ಈ ಚನವೀರಯ್ಯನವರಿಗೆ ಸಿದ್ಧಲಿಂಗಯ್ಯ, ಗಂಗಮ್ಮ ಇಬ್ಬರು ಮಕ್ಕಳಾದರು. ಸಿದ್ಧಲಿಂಗಯ್ಯ ಸನ್ಯಾಸಿಯಾಗಿ ಚಿಕೇನಕೊಪ್ಪದ ಶಂಭು ಲಿಂಗಾಶ್ರಮದ ಮುಖ್ಯಸ್ಥರಾದರು. ಇವರು ಸ್ವಾತಂತ್ರ್ಯ ಹೋರಾಟಗಾರರೂ ಜೈಲುವಾಸ ಅನುಭವಿಸಿ ಬಂದವರೂ ಆಗಿದ್ದರು.

ಶ್ರೀ ಚನ್ನವೀರ ಶರಣರು :

ಚಿಕೇನಕೊಪ್ಪದ ವೇದಮೂರ್ತಿ ಕಾನಯ್ಯ ಹಿರೇಮಠ ಮತ್ತು ಶಿವಮ್ಮ ದಂಪತಿಗಳ ಪುತ್ರರೇ ಚನ್ನವೀರ ಶರಣರು. ತಂದೆ ಶ್ರೀ ಕಾನಯ್ಯನವರು ಸುಪ್ರಸಿದ್ಧ ಪುರಾಣಕಾರರಾಗಿದ್ದರು. ಕೀರ್ತನ ಪ್ರವಚನಗಳನ್ನು ಹೇಳುತ್ತಿದ್ದರು. ಹಾಡುಗಾರಿಕೆಯನ್ನು ಅವರು ಬಲ್ಲವರಾಗಿದ್ದರು. ಬೂದೀಶ್ವರ ಪುರಾಣ ರಚಿಸಿ ಕವಿಯೂ ಎನಿಸಿದ್ದರು. ತಾಯಿ ಶಿವಮ್ಮ ಒಳ್ಳೆಯ ಗೃಹಿಣಿಯಾಗಿದ್ದಳು, ಶಾಂತಮೂರ್ತಿಯಾಗಿದ್ದರು. ಮಕ್ಕಳ ಪಾಲನೆ ಪೋಷಣೆ ಮಾಡುತ್ತ ಮನೆತನದ ಜವಾಬ್ದಾರಿಯನ್ನು ಹೊತ್ತುಕೊಂಡು ಪತಿಗೆ ತಕ್ಕ ಸತಿಯಾಗಿ ಆದರ್ಶ ದಂಪತಿಗಳಾಗಿ ಬೆಳೆದವರಾಗಿದ್ದರು. ಶ್ರೀ ಚನ್ನವೀರ ಶರಣರಿಗೆ ಮಹಾಂತಯ್ಯ ಮತ್ತು ಶಾಂತವೀರಯ್ಯ ಇಬ್ಬರು ಸಹೋದರರಿದ್ದರು. ಹಾಲಮ್ಮ, ಕೊಟ್ರಮ್ಮ, ಗೌರಮ್ಮ, ಶಾಂತಮ್ಮ ನಾಲ್ವರು ಸಹೋದರಿಯರೂ ಇದ್ದರು. ಶ್ರೀ ಚನ್ನವೀರಯ್ಯ

ಅವರನ್ನು ತಂದೆ ತಾಯಿಗಳು ಪ್ರೀತಿಯಿಂದ ಚಂಡ್ರಯ್ಯ, ಚಂಡ್ರಿ ಎಂದೂ ಕರೆಯುತ್ತಿದ್ದರು. ಶ್ರೀ ಕಾನಯ್ಯ ಅವರಿಗೆ ಅಸಂಖ್ಯಾತ ಶಿಷ್ಯರ ಬಳಗವಿತ್ತು. ಆದರೂ ಬಡತನವನ್ನೇ ಜೀವನದಲ್ಲಿ ಹಾಸುಹೊಕ್ಕಾಗಿರಿಸಿಕೊಂಡವರಾಗಿದ್ದರು. ತುಂಬಿದ ಮನೆಯ ಯಜಮಾನರಾಗಿ ಇದ್ದುದರಲ್ಲಿಯೇ 'ಹಾಸಿಗೆ ಇದ್ದಷ್ಟು ಕಾಲುಚಾಚುತ್ತ' ಸಂತೋಷದಿಂದ ಕಾಲ ಕಳೆಯುತ್ತಲಿದ್ದರು. ಸತಿಪತಿಗಳೊಂದಾದ ಇವರ ಭಕ್ತಿಗೆ ಶಿವ ಮೆಚ್ಚಿಕೊಂಡಿದ್ದ. ಇಂಥ ಸುಸಂಸ್ಕೃತ ಮನೆತನದಲ್ಲಿ ಜನಿಸಿದ ಶ್ರೀ ಚನ್ನವೀರಯ್ಯನವರು ಎಲ್ಲರಂತೆ ಜನಿಸಿದರು, ಬೆಳೆದರು, ಓರಿಗೆಯ ಮಕ್ಕಳೊಂದಿಗೆ ಆಡಿದರು, ಹಾಡಿದರು, ತಂದೆ ತಾಯಿಗಳ ಆಚಾರ ವಿಚಾರಗಳ ಪಡಿಯಚ್ಚಿನಂತೆ ಶ್ರೀ ಚನ್ನವೀರ ಶರಣರ ಆಚಾರ ವಿಚಾರಗಳಾಗಿದ್ದವು. ಅಂತೆಯೇ ಭಕ್ತಿಗೀತೆಗಳನ್ನೂ ಸೋಬಾನ ಪದಗಳನ್ನೂ ಶಿವಶರಣರ ವಚನ ಗಳನ್ನೂ ಸುಶ್ರಾವ್ಯವಾಗಿ ಹಾಡುತ್ತಿದ್ದರು.

ತಂದೆ ಕಾನಯ್ಯನವರು ಹಾಕಿಕೊಟ್ಟ ಪೂಜಾಪಾಠವನ್ನು ಶ್ರೀ ಚನ್ನವೀರ ಶರಣರು ಮನಮುಟ್ಟಿ ಮಾಡುತ್ತಿದ್ದರು. ಇಷ್ಟಲಿಂಗ ಪೂಜೆ ಮಾಡುತ್ತ ಏಕಾಂತದಲ್ಲಿ ಧ್ಯಾನ ಮಗ್ನರಾಗಿರುತ್ತಿದ್ದರು. ತಾಸುಗಟ್ಟಲೆ ಮೌನಿಯಾಗಿ ಕುಳಿತುಕೊಳ್ಳುತ್ತಿದ್ದರು. ತಂದೆಯವರು ಹೇಳುತ್ತಿದ್ದ ಪುರಾಣ, ಪ್ರವಚನಗಳನ್ನು ತಪ್ಪದೆ ಕೇಳುತ್ತಿದ್ದರು. ಅದರಂತೆ ತಾವೂ ಪುರಾಣಕಾರರಾಗಬೇಕೆಂಬ ಕನಸು ಕಾಣುತ್ತಿದ್ದರು. ತಂದೆಯವರ ಗ್ರಂಥ ಭಂಡಾರವನ್ನು ಒಂದೂ ಬಿಡದೆ, ಓದುವ ಹವ್ಯಾಸ ಬೆಳೆಯಿಸಿಕೊಂಡಿದ್ದರು.

ಶ್ರೀ ಚನ್ನವೀರಯ್ಯ ಅವರಿಗೆ ತಂದೆ ಕಾನಯ್ಯನವರು ನಾಲ್ಕು ವರುಷ ದವರಿದ್ದಾಗ ಮನೆಯಲ್ಲಿಯೇ ಓದುಬರಹ ಕಲಿಸಿ ಕೊಟ್ಟಿದ್ದರು. ಅವರಿಗೆ ಮನೆಯೆ ಮೊದಲ ಪಾಠಶಾಲೆಯಾಗಿತ್ತು. ತಾಯಿ ತಂದೆಗಳೆ ಗುರುಗಳಾಗಿದ್ದರು. ಚಿಕೇನಕೊಪ್ಪ ನಿಜಾಮನ ಸಂಸ್ಥಾನಕ್ಕೆ ಒಳಪಟ್ಟಿದ್ದರಿಂದ ಇಲ್ಲಿ ಉರ್ದು ಮಾಧ್ಯಮ ಶಾಲೆಯಿತ್ತು, ಅದಕ್ಕೆಂದು ತಂದೆಯವರು ಮನೆಯಲ್ಲಿಯೇ ಕನ್ನಡ ಕಲಿಸಿದ್ದರು. ಆದರೂ ಶಾಲೆಗೆ ಹೆಸರು ಹಚ್ಚುವ ವಯಸ್ಸಿಗೆ ಬಂದಾಗ ಚಿಕೇನಕೊಪ್ಪದ ಶಾಲೆಗೆ ಹಾಕಿದರು. ಉರ್ದು ಓದು ಬರಹ ಕಲಿತರು, ಮಾತನಾಡಲೂ ಕಲಿತಿದ್ದರು. ತಂದೆ ಕಾನಯ್ಯನವರು ಸಮೀಪದ ಬಳಗಾನೂರ ಗ್ರಾಮಕ್ಕೆ ಮೇಲಿಂದ ಮೇಲೆ ಪುರಾಣ ಪ್ರವಚನ ಹೇಳಲು ಹೋಗುತ್ತಿದ್ದರು. ಬಳಗಾನೂರಿನ ಗೂಳರಡ್ಡಿ

ಮನೆತನದ ಹನುಮರಡ್ಡಿ ಎಂಬವರು ಗುಗ್ಗಳ ಮಹಾಂತಪ್ಪನವರ ಪರಮ ಶಿಷ್ಯರಾಗಿದ್ದರು. ಈ ಹನುಮರೆಡ್ಡಿಯವರು ಚಿಕೇನಕೊಪ್ಪದ ಹಿರೇಮಠ ಕಟ್ಟಡ ಕಟ್ಟಿಸುವಲ್ಲಿ ತನು–ಮನ–ಧನದಿಂದ ಸೇವೆ ಸಲ್ಲಿಸಿ ಎಲ್ಲರ ಪ್ರೀತಿಗೂ ಪಾತ್ರರಾಗಿದ್ದರು. ಇವರ ಬೀಗತನವೂ ಚಿಕೇನಕೊಪ್ಪಕ್ಕಾಗಿತ್ತು. ಚಿಕೇನಕೊಪ್ಪದ ವಕ್ಕಳದ ಸಣ್ಣಬಸಪ್ಪ ಅವರ ಒಬ್ಬಳೇ ಮಗಳು ಲಕ್ಷ್ಮವ್ವ ಅವರನ್ನು ಹನುಮರಡ್ಡಿ ಅವರ ಮಗ ಸಂಗಪ್ಪ ಅವರಿಗೆ ಕೊಟ್ಟು ಲಗ್ನ ಮಾಡಿದ್ದರು. ಈ ಲಕ್ಷ್ಮವ್ವ ಸಂಗಪ್ಪ ಅವರ ಅಕ್ಕ, ಶಿವಗಂಗಮ್ಮ ಅವರ ಮಗಳು ಬೇರೆ. ಹೀಗಾಗಿ ಗೂಳರಡ್ಡಿ ಸಂಗಪ್ಪನ ಜೊತೆಗೆ ಅಭ್ಯಾಸ ಮಾಡಲೆಂದು ಕಾನಯ್ಯನವರ ಮಗ ಚನ್ನವೀರಯ್ಯನವರನ್ನು ಹನುಮರಡ್ಡಿ ಅವರು ಬಳಗಾನೂರಕ್ಕೆ ಕರೆತಂದರು.

ಬಳಗಾನೂರ ಗದಗ ತಾಲೂಕಿನಲ್ಲಿರುವ ಒಂದು ಹಳ್ಳಿ. ಇಲ್ಲಿ ಕನ್ನಡ ಮಾಧ್ಯಮದ ಸರಕಾರಿ ಶಾಲೆಯಿತ್ತು. ಶ್ರೀ ಚನ್ನವೀರಯ್ಯನವರು ಶಿಷ್ಯರ ಮನೆಯಲ್ಲಿ ಇದ್ದು ಅಭ್ಯಾಸವನ್ನು ಚೆನ್ನಾಗಿ ಮಾಡತೊಡಗಿದರು. ಮುಲ್ಕಿ ಪರೀಕ್ಷೆಯನ್ನು ಪಾಸಾದರು. ಇದರಿಂದ ಗೂಳರಡ್ಡಿ ಮನೆತನದವರಿಗೂ ಕಾನಯ್ಯ ಮತ್ತು ಶಿವಮ್ಮ ಅವರಿಗೂ ಸಂತೋಷವಾಯಿತು. ಬಳಗಾನೂರ ಒಂದು ಸುಸಂಸ್ಕೃತ ಗ್ರಾಮವಾಗಿರುತ್ತದೆ. ಭಕ್ತರ, ಪುಣ್ಯಜೀವಿಗಳ– ಪವಿತ್ರ ಭೂಮಿಯಿದು. ಗುಗ್ಗಳ ಮಹಾಂತಪ್ಪನವರು ಈ ಗ್ರಾಮದ ಸಂಸ್ಕೃತಿಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದಂಥವರು. ಪ್ರತಿವರುಷ ಶ್ರಾವಣ ಮಾಸದಲ್ಲಿ ತಿಂಗಳುಗಟ್ಟಲೆ ಇಲ್ಲಿ ವಾಸ್ತವ್ಯ ಮಾಡಿ, ಪುರಾಣ ಪುಣ್ಯ ಕಥೆಗಳನ್ನು ಹೇಳಿ ಜನತೆಯಲ್ಲಿ ಭಕ್ತಿಯ ಬೀಜ ಬಿತ್ತಿ ಬೆಳೆದವರು. ಅರಿವು–ಆಚಾರಗಳ ಇರವನ್ನೂ ಮಹಿಮೆಯನ್ನೂ ಕಥಾ ದೃಷ್ಟಾಂತಗಳ ಮೂಲಕ ಮನವರಿಕೆ ಮಾಡಿಕೊಟ್ಟಿರುವರು. ತಮ್ಮ ಸುಮಧುರ ಕಂಠದಿಂದ ಅನುಭಾವಿಗಳ ಭಕ್ತಿಗೀತೆಗಳನ್ನು ಶರಣರ ವಚನಗಳನ್ನು ಹಾಡಲು ಕಲಿಸಿಕೊಟ್ಟ ಪುಣ್ಯಾತ್ಮರಿವರು. ಇವರ ತರುವಾಯ ಸಿದ್ಧಲಿಂಗಯ್ಯನವರೂ ಇವರ ಮಕ್ಕಳಾದ ಕಾನಯ್ಯನವರೂ ಪ್ರತಿವರುಷ ಪುರಾಣ ಹೇಳಲು ಬಳಗಾನೂರಕ್ಕೆ ಹೋಗುತ್ತ ಬಂದವರಾಗಿರುವರು. ಅದೇ ಪ್ರಕಾರ ಚನ್ನವೀರಯ್ಯ ಅವರೂ ಕೂಡ ಭಕ್ತಿಗೀತೆಗಳನ್ನು, ವಚನಗಳನ್ನು ಕಂಠಪಾಠ ಮಾಡಿ ಚಿಕ್ಕಂದಿನಿಂದಲೇ ಹಾಡುತ್ತಲಿದ್ದರು. ಬಸವಾದಿ ಶರಣರ ಸಿದ್ಧಾಂತವನ್ನು ತಂದೆಯವರಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ತಂದೆಯವರಂತೆ ತಾವೂ

ಪ್ರವಚನ, ಪುರಾಣ, ಹೇಳಬೇಕು. ಹಾಡಬೇಕು ಎಂಬ ಉತ್ಸಾಹ ಅವರಲ್ಲಿ ತುಂಬಿ ತುಳುಕಿತ್ತು, ತಮಗಿಂತಲೂ ಚಿಕ್ಕವರಿಗೆ ಓರಿಗೆಯವರಿಗೆ ಪಾಠ ಪ್ರವಚನ ಹಾಡು ಹೇಳಿ ಸಂತೋಷಪಡಿಸುತ್ತಿದ್ದರು. ಹೀಗೆ ಬಳಗಾನೂರು ಮತ್ತು ಸುತ್ತಣದ ಪರಿಸರದಲ್ಲಿ ಭಕ್ತಿಯ, ಸಂಸ್ಕೃತಿಯ ಪರಿಸರ ಪ್ರಜ್ಞೆಯನ್ನು ಹೆಚ್ಚಿಸುತ್ತಿದ್ದರು. ಇದೂ ಅಲ್ಲದೇ ಶ್ರೀ ಚನ್ನವೀರ ಶರಣರು ನಿಜಗುಣ ಶಿವಯೋಗಿಗಳ, ಸರ್ಪಭೂಷಣ ಶಿವಯೋಗಿಗಳ, ಬಾಲಲೀಲಾ ಮಹಾಂತ ಶಿವಯೋಗಿಗಳ, ಘನಮಠ ಶಿವಯೋಗಿಗಳ, ಕಡಕೋಳ ಮಡಿವಾಳಪ್ಪನವರ, ಕೂಡ್ಲೂರ ಬಸವಲಿಂಗ ಶರಣರ, ಮುಪ್ಪಿನ ಷಡಕ್ಷರಿ ಮೊದಲಾದವರ ನೂರಾರು ಅನುಭವ ಪದ ಗಳನ್ನೂ ಹಾಡಿ ಹಾಡಿ, ಅವುಗಳ ಅರ್ಥವನ್ನೂ ತಿಳಿದುಕೊಂಡು, ಹೆಮ್ಮೆಯಿಂದ ಉಬ್ಬಿ ಕೊಬ್ಬಿ ನಲಿನಲಿದಾಡುತ್ತಿದ್ದರು.

ಶಿಕ್ಷಕರಾಗಿ ಸೇವೆ :

ಶ್ರೀ ಚನ್ನವೀರಯ್ಯನವರು ಮುಲ್ಕಿ ಪರೀಕ್ಷೆ ಪಾಸಾದುದರಿಂದ ಅವರು ಚಿಕೇನಕೊಪ್ಪದ ಗಾಂವಠಿ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಲು ಪ್ರಾರಂಭಿಸಿದರು. ಮಹಾತ್ಮಾ ಗಾಂಧೀಜಿಯವರು ಬ್ರಿಟಿಷರ ವಿರುದ್ಧ 'ಕ್ವಿಟ್ ಇಂಡಿಯಾ' ಚಳುವಳಿಗೆ ಕರೆ ಕೊಟ್ಟಿದ್ದ ಕಾಲವದು. ಎಲ್ಲೆಲ್ಲಿಯೂ ಸ್ವಾತಂತ್ರ್ಯ ಹೋರಾಟದ ಚಟುವಟಿಕೆಗಳು ನಡೆದಿದ್ದವು. ಚಿಕೇನಕೊಪ್ಪ ಗ್ರಾಮದಲ್ಲಿಯ ಗಾಂವಠಿ ಶಾಲೆಯಲ್ಲಿ ಈ ಮೊದಲು ದ್ಯಾಂಪುರದ ಕಳಕಯ್ಯನವರು, ಫಕೀರಸಾಹೇಬ, ಬಡ್ನೆಸಾಹೇಬ ಮೊದಲಾದವರು ಸೇವೆ ಸಲ್ಲಿಸಿ ಹೆಸರು ಗಳಿಸಿದವರಾಗಿದ್ದರು. ಈ ಪ್ರತಿಷ್ಠಿತ ಶಾಲೆಯಲ್ಲಿ ಶ್ರೀ ಚನ್ನವೀರ ಶರಣರು ಶಿಕ್ಷಕರಾಗಿ ಸೇವೆ ಸಲ್ಲಿಸತೊಡಗಿದರು.

ಶಿಕ್ಷಕ ಶ್ರೀ ಚನ್ನವೀರಯ್ಯನವರು ಪ್ರತಿದಿನ ಬೆಳಗಿನ ಜಾವ ನಾಲ್ಕು ಗಂಟೆಗೆ ಏಳುವ ಅಭ್ಯಾಸ ಇಟ್ಟುಕೊಂಡಿದ್ದರು. ಒಂದೆರಡು ಮೈಲು ದೂರ ವಾಯುವಿಹಾರಕ್ಕೆ, ಕೈಯಲ್ಲಿ ತಂಬಿಗೆ ಹಿಡಿದುಕೊಂಡು ಹೋಗಿ ಬರುತ್ತಿದ್ದರು. ದಾರಿಯಲ್ಲಿ ಧ್ವನಿ ತೆಗೆದು ಹಾರುವ ಹಕ್ಕಿಯಂತೆ, ತತ್ತ್ವಪದ, ವಚನಗಳನ್ನು ಹಾಡುತ್ತಿದ್ದರು. ನಸುಕಿನಲ್ಲಿ ಯಾವಾಗಲೂ ತಣ್ಣೀರು ಸ್ನಾನ ಮಾಡುತ್ತಿದ್ದರು. ಕೆರೆಯಿಂದ ನೀರು ಹೊತ್ತು ತರುತ್ತಿದ್ದರು. ಕೆರೆಯ ನೀರಿನಲ್ಲಿ ನಿಂತು ಅನುಷ್ಠಾನ

ಮಾಡುತ್ತಿದ್ದರು. ಲಿಂಗಪೂಜೆ, ಪ್ರಾರ್ಥನೆ ಸೂರ್ಯೋದಯಕ್ಕೆ ಮುಂಚೆಯೇ ತೀರಿಸಿಕೊಂಡು ಶಾಲೆಗೆ ಹಾಜರಾಗುತ್ತಿದ್ದರು. ವಿದ್ಯಾರ್ಥಿಗಳಿಗೂ ಸೂರ್ಯೋದಯಕ್ಕೆ ಸರಿಯಾಗಿ ಶಾಲೆಗೆ ಬರಲು ಹೇಳುತ್ತಿದ್ದರು. ತಡ ಮಾಡಿದವರಿಗೆ ಶಿಕ್ಷೆ ವಿಧಿಸುತ್ತಿದ್ದರು.

ಶ್ರೀ ಚನ್ನವೀರಯ್ಯನವರು ಸ್ವಚ್ಛ ಬಟ್ಟೆ ಧರಿಸುತ್ತಿದ್ದರು. ಹಣೆಯಲ್ಲಿ ವಿಭೂತಿ, ಕೊರಳಲ್ಲಿ ಇಷ್ಟಲಿಂಗ ಶೋಭಿಸುತ್ತಿದ್ದವು. ಮಕ್ಕಳನ್ನು ಅಷ್ಟೇ ಕಕ್ಕುಲತೆಯಿಂದ ಮಾತನಾಡಿಸುತ್ತಿದ್ದರು. ಅವರ ಯೋಗಕ್ಷೇಮ ಕೇಳಿಕೊಳ್ಳುತ್ತಿದ್ದರು. ವಿದ್ಯಾರ್ಥಿಗಳಿಗೆ ಪಠ್ಯ ವಿಷಯದ ಜೊತೆಗೆ ಅವರ ನಡೆ ನುಡಿಯ ಕಡೆಗೂ ವಿಶೇಷ ಗಮನ ಓಡಿಸುತ್ತಿದ್ದರು. ಅವರ ಸುಖದುಃಖಗಳಲ್ಲಿ ಸಹಭಾಗಿಗಳಾಗುತ್ತಿದ್ದರು. 'ಛಮ್‌ಛಮ್ ಛಡಿ, ಘಮ್ ಘಮ್ ವಿದ್ಯಾ' ಎಂಬುದು ಅಂದು ಶಿಕ್ಷಕರ ಮಂತ್ರವಾಗಿತ್ತು. ನೂರಾರು ಮಕ್ಕಳಿಗೆ ತಕ್ಕ ಶಾಸ್ತಿಮಾಡಿ ಮಕ್ಕಳ ಮನಸ್ಸನ್ನು ಗೆದ್ದು, ಅಷ್ಟೇ ಪ್ರೀತಿಯಿಂದ ಕಲಿಸುತ್ತಿದ್ದರು. ಬಡ, ಜಾಣ ಮಕ್ಕಳಿಗೆ ಸಹಾಯ ಸಲ್ಲಿಸುತ್ತಿದ್ದರು. ಅವರೆಂದೂ ಶಾಲೆ ತಪ್ಪಿಸದಂತೆ ಎಚ್ಚರಿಕೆ ನೀಡುತ್ತಿದ್ದರು. ಸತ್ಯ ಮಾತನಾಡಬೇಕು, ಧರ್ಮದಂತೆ ನಡೆಯಬೇಕು. 'ಸತ್ಯಂ ವದ ಧರ್ಮಂ ಚರ' ಎಂಬುದು ಇವರ ನುಡಿ ಮಂತ್ರವಾಗಿತ್ತು. ಸದಾಚಾರವೆ ಸದಾಶಿವನ ಒಲುಮೆಯೆನ್ನುತ್ತಿದ್ದರು. 'ಆಚಾರವೆ ಸ್ವರ್ಗ, ಅನಾಚಾರವೆ ನರಕ', 'ಸತ್ಯವ ನುಡಿವುದೆ ಸ್ವರ್ಗಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ' ಇಂತಹ ನೂರಾರು ಶರಣರ ನುಡಿಮುತ್ತುಗಳನ್ನು ವಿವರಿಸಿ ಹೇಳುತ್ತಿದ್ದರು. ಹೀಗೆ ನೈತಿಕ ನೆಲೆಗಟ್ಟಿನ ಮೇಲೆ ಶಿಕ್ಷಣ ನೀಡುತ್ತಿದ್ದರು.

ಶ್ರೀ ಚನ್ನವೀರಯ್ಯನವರು ವ್ಯರ್ಥ ಕಾಲಹರಣ ಮಾಡಿದವರಲ್ಲ, ಪಾಠ ಹೇಳುವುದನ್ನು ಬಿಟ್ಟು, ಹಾಳುಹರಟೆ ಹೊಡೆದವರಲ್ಲ, ಮಕ್ಕಳಿಗೆ ಕಲಿಸುವವರ ಆಚಾರ ಮೊದಲು ಶುದ್ಧವಿರಬೇಕು, ಚಾರಿತ್ರಶೀಲರಿರಬೇಕು ಎಂದಂದು ತಾವೂ ಹಾಗೆಯೇ ನಡೆದುಕೊಂಡವರು. ಅಂತೆಯೆ ಅವರು ಆಡಿದ ಮಾತಿಗೆ ಹೇಳಿದ ಪಾಠಕ್ಕೆ ಬೆಲೆಯಿರುತ್ತಿತ್ತು. ಮಕ್ಕಳಿಗೆ ಆಗಾಗ ಶರಣರ, ದಾಸರ ಹಾಡು ಮತ್ತು ವಚನಗಳನ್ನು ಕಂಠಪಾಠ ಮಾಡಿಸುತ್ತಿದ್ದರು. ತಾಯಿಯಿಂದ ರಕ್ತಗತವಾಗಿ ಬಂದ ಜನಪದ ಹಾಡುಗಳನ್ನು ಮಕ್ಕಳಿಗೆ ಆಗಾಗ ಹೇಳಿ ಸಂತೋಷಪಡಿಸುತ್ತಿದ್ದರು. ಮಕ್ಕಳಂತೆ ಮಕ್ಕಳಾಗಿ ತಾವೂ ಹಾಡುಹಾಡುತ್ತ ಕುಣಿದಾಡುತ್ತಿದ್ದರು. ಮಕ್ಕಳಿಗೆ

ಅಂಕಗಣಿತ ಮತ್ತು ಭಾಷೆಯ ವಿಷಯ ಕಠಿಣವೆನಿಸುತ್ತಿದ್ದವು. ಅವುಗಳನ್ನು ಮಕ್ಕಳಿಗೆ ತಿಳಿಯುವಂತೆ ಹೇಳುತ್ತಿದ್ದರು. ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ಸೋಮೇಶ್ವರ ಶತಕ, ನಿಜಲಿಂಗ ಶತಕ, ಶಬರಶಂಕರ ವಿಳಾಸ, ರಾಜಶೇಖರ ವಿಳಾಸ, ಪ್ರಭುಲಿಂಗಲೀಲೆ, ಬಸವಪುರಾಣ, ಶರಣರ ವಚನ, ಶಿವಯೋಗಿಗಳ ಅನುಭಾವ ಪದಗಳನ್ನು ಹೇಳುತ್ತಿದ್ದರು. ದೇಶಾಭಿಮಾನದ ಕೆಚ್ಚನ್ನು ಮೂಡಿಸಲು ಮಕ್ಕಳಿಗೆ ನಾಡಗೀತೆ, ದೇಶಭಕ್ತಿಗೀತೆಗಳನ್ನು ಹೇಳಿಕೊಡುತ್ತಿದ್ದರು. ಸ್ವಾತಂತ್ರ್ಯ ಸಮರದ ವಿವರವನ್ನೂ ಮಕ್ಕಳಿಗೆ ತಿಳಿಸಿಹೇಳುತ್ತ ಅದರಲ್ಲಿ ದೇಶಾಭಿಮಾನ ಹುಟ್ಟಿಸುತ್ತಿದ್ದರು. ಸದೃಢ ಶರೀರ ಸಂಪತ್ತಿಗಾಗಿ ವಿಷಯ ವಾಸನೆಗಳಿಂದ ದೂರಿರಲು ಹೇಳುತ್ತಿದ್ದರು. ಹೀಗೆ ಶ್ರೀ ಚನ್ನವೀರಯ್ಯ ಶಿಕ್ಷಕರು, ಶಿಕ್ಷಕರಿಗೆಲ್ಲ ಆದರ್ಶ ಶಿಕ್ಷಕರಾಗಿ ಕಾಣಿಸಿಕೊಂಡರು.

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತ ದೇಶದ ೫೫೬ ಸಂಸ್ಥಾನಗಳ ಮೇಲೆ ಬ್ರಿಟಿಷರು ರಾಜಕೀಯ ನಿಯಂತ್ರಣವನ್ನು ಸಾಧಿಸಿದ್ದರು. ಈ ಎಲ್ಲ ಸಂಸ್ಥಾನಗಳಲ್ಲಿ ಹೈದ್ರಾಬಾದ ನಿಜಾಮನ ಸಂಸ್ಥಾನವು ಶ್ರೀಮಂತವೂ ವಿಶಾಲವೂ ಆದುದಾಗಿತ್ತು, ಬ್ರಿಟಿಷರು ಈ ಹೈದ್ರಾಬಾದ ಸಂಸ್ಥಾನದ ನಿಜಾಮನಿಗೆ ಹಲವಾರು ಸವಲತ್ತುಗಳನ್ನು ದಯಪಾಲಿಸಿದ್ದರು. ಬ್ರಿಟಿಷರು ಭಾರತಬಿಟ್ಟು ಹೋಗುವಾಗ ನಿಜಾಮನು ಫರಮಾನ ಹೊರಡಿಸಿ ತಾನು ಹೈದ್ರಾಬಾದ ರಾಜ್ಯದ ಸ್ವತಂತ್ರ ದೊರೆ ಎಂದು ಘೋಷಿಸಿ ಭಾರತದ ಒಕ್ಕೂಟವನ್ನು ಸೇರಲು ನಿರಾಕರಿಸಿದನು. ನಾಗರಿಕ ಮೂಲ ಹಕ್ಕುಗಳೆನಿಸಿದ ಭಾಷಣ ಸ್ವಾತಂತ್ರ್ಯ, ಅರ್ಚನೆ, ರಾಜಕೀಯ ಸಮಾವೇಶ ಮತ್ತು ಸಮಿತಿಗಳ ರಚನೆ, ಪತ್ರಿಕಾ ಮುಂತಾದವುಗಳು ನಿಜಾಮನಿಂದ ತಿರಸ್ಕರಿಸಲ್ಪಟ್ಟಿದ್ದವು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಹಿಂದೂಗಳ ಧಾರ್ಮಿಕ ಹಾಗೂ ನಾಗರಿಕ ಹಕ್ಕುಗಳನ್ನು ಪ್ರತಿಷ್ಠಾಪಿಸಲು ಪ್ರಥಮ ಬಾರಿಗೆ ಆರ್ಯಸಮಾಜ ಮತ್ತು ಹಿಂದೂ ಮಹಾಸಭೆಗಳು, ನಿಜಾಮನ ವಿರುದ್ಧ ಸತ್ಯಾಗ್ರಹ ಚಳುವಳಿ ಹೂಡಲು ತೀರ್ಮಾನಿಸಿದವು. ಬಾಲಗಂಗಾಧರ ತಿಲಕರು, ಹರ್ಡೇಕರ ಮಂಜಪ್ಪನವರು, ಪಂಡಿತ ತಾರಾನಾಥರು, ಶರಣಗೌಡ ಇನಾಂದಾರರು, ಸ್ವಾಮಿ ದಯಾನಂದ ತೀರ್ಥರು ಮೊದಲಾದವರು ಸ್ವಾತಂತ್ರ್ಯ ಯೋಧರ ಪಡೆ ನಿರ್ಮಿಸಿ ನಿಜಾಮ ಸಂಸ್ಥಾನದ ಹಿಂದೂ ಜನರಲ್ಲಿ ಸ್ವಾತಂತ್ರ್ಯ ಪ್ರಜ್ಞೆ ಮೂಡಿಸಲು ಹೋರಾಟ ಪ್ರಾರಂಭಿಸಿದರು. ಸತ್ಯಾಗ್ರಹ ಪ್ರಾರಂಭಿಸಿದರು. ರಜಾಕಾರರು ಸ್ವಾತಂತ್ರ್ಯ ಯೋಧರ

ಮೇಲೆ ಹಲ್ಲೆ ನಡೆಸಿದರು. ಕೊಲೆ ಸುಲಿಗೆ ನಡೆಸಿದರು. ಹಿಂದೂಗಳು ಭಯಭೀತರಾಗಿ ನೆರೆರಾಜ್ಯಗಳಿಗೆ ಗುಳೆ ಹೋಗತೊಡಗಿದರು. ಮತ್ತೆ ಸ್ವಾತಂತ್ರ್ಯ ಯೋಧರು ಒಳಹೊರಗಿನವರೆಲ್ಲರೂ ಒಂದಾಗಿ ಸತ್ಯಾಗ್ರ್ರಹವನ್ನು ಮುಂದುವರಿಸಿದರು.

ಹೈದ್ರಾಬಾದ ಸಂಸ್ಥಾನಕ್ಕೆ ಸೇರಿದ ಚಿಕ್ಕೇನಕೊಪ್ಪದಲ್ಲಿಯೂ ಸ್ವಾತಂತ್ರ್ಯ ಯೋಧರು ಸಿಡಿದೆದ್ದರು. ಲಿಂಗಪ್ಪ ಬಡಿಗೇರ, ಮುಟಗಿ ಸಂಗಪ್ಪ ಮೊದಲಾದವರಂತೂ ಭೂಗತ ಹೋರಾಟಗಾರರಾಗಿ, ವಿಮೋಚನಾ ಸಮರದಲ್ಲಿ ಭಾಗ ವಹಿಸಿದರು. ಕಾಶಿಮ ರಜವಿಯ ಉಪಟಳ, ಪಠಾಣರ ಹಿಂಸಾತ್ಮಕ ದಾಳಿಗೆ ಚಿಕೇನಕೊಪ್ಪದ ಚನ್ನಪ್ಪ ವಕ್ಕಳದ, ಶಿವಸಂಗಪ್ಪ ಗುಳಗಣ್ಣವರ, ಮಹಾದೇವಪ್ಪ ಗದಗ, ಲಿಂಗಪ್ಪ ಬಿಸನಳ್ಳಿ, ಮಲ್ಲಪ್ಪ ಹಕಾರಿ, ಗುರಪ್ಪ ಅಕ್ಕಸಾಲಿಗರ, ದೇವಪ್ಪ ವಕ್ಕಳದ, ಮಹಾಲಿಂಗಯ್ಯ ಹಿರೇಮಠ ಮೊದಲಾದ ತರುಣರು ಎದುರಾಳಿಗಳಾಗಿ ಹೋರಾಡಲು ಈ ವಿಮೋಚನಾ ಚಳುವಳಿಯಲ್ಲಿ ಧುಮುಕಿದರು. ಶ್ರೀ ಚನ್ನವೀರ ಶರಣರೂ ಇವರೊಂದಿಗೆ ಹೋರಾಟದಲ್ಲಿ ಧುಮುಕಿದರು. ಇಡೀ ಊರಿಗೆ ಊರೇ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿತು. ಕಂಡಲ್ಲಿ ಗುಂಡಿಟ್ಟು ಕೊಲ್ಲುವ ಆಜ್ಞೆಯನ್ನು ನಿಜಾಮ ಸರಕಾರ ಭೂಗತ ಹೋರಾಟಗಾರರಿಗೆ ಹೊರಡಿಸಿತ್ತು. ಬಹಳಷ್ಟು ಜನರನ್ನು ಸೆರೆಹಿಡಿದು ಗುಲಬರ್ಗಾ, ಔರಂಗಾಬಾದ ಕಾರಾಗೃಹದಲ್ಲಿ ನಿಜಾಮ ಸರಕಾರ ಕಳಿಸಿಕೊಟ್ಟಿತ್ತು. ಅಳವಂಡಿ ಶಿವಮೂರ್ತಿ ಸ್ವಾಮಿಗಳು ಶಿಬಿರಾರ್ಥಿಗಳ ನೇತೃತ್ವ ವಹಿಸಿದ್ದರು.

ಸ್ವತಂತ್ರ ಭಾರತದ ಉಪಪ್ರಧಾನಿಗಳೂ ಗೃಹ ಮಂತ್ರಿಗಳೂ ಆಗಿದ್ದ ಸರದಾರ ವಲ್ಲಭಬಾಯಿ ಪಟೇಲ ಅವರ ಆಜ್ಞೆ ಮತ್ತು ಜನರಲ್ ಚೌಧರಿ ಅವರ ಸಮರ್ಥ ಹೋರಾಟದಿಂದ ಹೈದ್ರಾಬಾದ ನಿಜಾಮ ಸಂಸ್ಥಾನ ಪತನಗೊಂಡು ಭಾರತ ಒಕ್ಕೂಟದಲ್ಲಿ ಸೇರಿಕೊಂಡಿತು. (ದಿ. ೧೭–೮–೧೯೪೮ರಲ್ಲಿ) ಚಿಕೇನಕೊಪ್ಪ ಮರಳಿ ತನ್ನ ಮೊದಲಿನ ಸ್ಥಿತಿಗೆ ಬಂದಿತು. ಊರು ಬಿಟ್ಟು ಹೋದವರೆಲ್ಲರೂ ವಾಪಸ ಬಂದರು. ಸೆರೆಮನೆ ಕಂಡು, ಸತ್ಯಾಗ್ರಹದಲ್ಲಿ ಭಾಗವಹಿಸಿ ದೇಶಪ್ರೇಮ ಮೆರೆದ ಯೋಧರನ್ನು ಸನ್ಮಾನಿಸಿದರು. ಎಲ್ಲೆಲ್ಲಿಯೂ ಸಂಭ್ರಮವೇ ಸಂಭ್ರಮ. ಶ್ರೀ ಚನ್ನವೀರ ಶರಣರು ಮುಂದೆ ಚಿಕೇನಕೊಪ್ಪದ ಗಾಂವಠಿ ಶಾಲೆಯಲ್ಲಿ ಕೆಲಸಕ್ಕೆ ಸೇರಿಕೊಳ್ಳಲಿಲ್ಲ. ಸಮೀಪದ ಆಡೂರಿನಲ್ಲಿ ಶಿಕ್ಷಕ ಕೆಲಸಕ್ಕೆ ಸೇರಿಕೊಂಡರು. ಆ

ಭಾಗದಲ್ಲಿ ಶಿಕ್ಷಕರಾಗಿದ್ದುಕೊಂಡು, ಶರಣ ಸಂಸ್ಕೃತಿಯ ಪ್ರಸಾರ ಕಾರ್ಯದಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು.

ಆಡೂರಿನ ಪಕ್ಕದ ಹಳ್ಳಿ ರಾಜೂರದಲ್ಲಿ ಶ್ರೀ ಶರಣಬಸವೇಶ್ವರರ ಪುರಾಣ ಹೇಳಿದರು. ಆ ಪುರಾಣ ಕೇಳಿದ ಭಕ್ತರು ಶರಣರನ್ನು ತಮ್ಮ ಆರಾಧ್ಯ ದೇವರೆಂದು ಪೂಜಿಸತೊಡಗಿದರು. ಅವರ ಅನ್ನದಾಸೋಹದ ಮಹಾ ಮಹಿಮೆಗೆ ಶರಣು ಹೋದರು. ಅದರ ಸ್ಮಾರಕವಾಗಿ ಶ್ರೀ ಶರಣ ಬಸವೇಶ್ವರರ ಕಲ್ಲಿನ ದೇವಸ್ಥಾನ ಒಂದನ್ನು ಕಟ್ಟಿಸಿದರು. ಇದು ಸುಂದರವಾಗಿದ್ದು ಆಕರ್ಷಕ ವಾಗಿರುತ್ತದೆ. ಹೀಗೆ ಶ್ರೀ ಚನ್ನವೀರಯ್ಯನವರು ಶ್ರೀ ಶರಣಬಸವೇಶ್ವರರ ಅನ್ನದಾಸೋಹದ ಮಹತ್ವವನ್ನು ಆ ಭಾಗದಲ್ಲೆಲ್ಲ ಪ್ರಚುರಪಡಿಸಿದರು. ಅವರ ಕಾಯಕದ ಮಹತ್ವ ಮತ್ತು ಸಕಲ ಜೀವರಾಶಿಗಳಿಗೆ ದಯೆ ತೋರಿಸುವ ಮರ್ಮವನ್ನು ತಿಳಿಸಿಕೊಟ್ಟರು. ಹೀಗೆ ಜನತೆಯಲ್ಲಿ ಭಕ್ತಿಯ ಬೀಜ ಬಿತ್ತಿ ಅಧ್ಯಾತ್ಮದ ಒಲವನ್ನು ಮೂಡಿಸಿದರು. ಜಂತ್ಲಿಶಿರೂರದ, ಬಳಗೇರಿ, ಬಳಗಾನೂರ, ಹೊಂಬಳ, ಕುಸೂಗಲ್ಲ, ಗಂಗಾವತಿ, ಕಾರಟಗಿ, ಕಂಪ್ಲಿ, ಹೊಸಪೇಟ, ಬಳ್ಳಾರಿ ಮೊದಲಾದ ಕಡೆ ಭಕ್ತಿಯ ಹೊನಲನ್ನು ಹರಸಿದರು. ಶ್ರೀ ಶರಣ ಬಸವೇಶ್ವರರ ಪುರಾಣವನ್ನು ಎಲ್ಲ ಕಡೆಗೂ ಹೇಳ ತೊಡಗಿದರು. ತಮ್ಮಂತೆ ಹಲವಾರು ಜನ ಪುರಾಣಕಾರರನ್ನೂ ಶ್ರೀ ಶರಣಬಸವೇಶ್ವರ ಪುರಾಣ ಹೇಳಲು ಹಚ್ಚಿದರು. ಶ್ರೀ ಚನ್ನವೀರಯ್ಯನವರು ಮೌನವನ್ನೇ ಮಹಾಮಂತ್ರವನ್ನಾಗಿಸಿಕೊಂಡು ಶರಣ ಸಂಸ್ಕೃತಿಯ ಸೌರಭವನ್ನು ಎಲ್ಲ ಕಡೆಗೂ ಪ್ರಸಾರ ಮಾಡಿದರು.

ಶ್ರೀ ಶರಣ ಬಸವೇಶ್ವರರು ಕ್ರಿ.ಶ. ೧೯೪೬ ರಲ್ಲಿ ಗುಲಬರ್ಗಾ ಜಿಲ್ಲೆಯ ಜೇವರ್ಗಿ ತಾಲೂಕಿನ ಅರಳಗುಂಡಿಗೆ ಗ್ರಾಮದಲ್ಲಿ ಜನಿಸಿದವರಾಗಿದ್ದಾರೆ. ಇವರು ಚಿಕ್ಕಂದಿನಿಂದಲೂ ವೀರಶೈವಧರ್ಮ ಸಿದ್ಧಾಂತದ ಕಡೆಗೆ ವಿಶೇಷ ಒಲವು ಮೂಡಿಸಿಕೊಂಡವರಾಗಿದ್ದರು. ಬೆಳೆದು ದೊಡ್ಡವರಾದರು. ಹಿರಿಯರು ಲಗ್ನ ಮಾಡಿದರು. ಪ್ರಪಂಚದಲ್ಲಿ ಕಾಲಿಟ್ಟ ಶರಣರು ದಾನಗುಣವನ್ನು ಮೆರೆದವರು. ಜನ ಬೇಡಿದ್ದನ್ನು ಕೊಟ್ಟು ಬಿಡುವ ದಾನಿಗಳಿವರು. ಬೆಳೆದ ಹೊಲಕ್ಕೆ ಬೇಲಿ ಹಾಕಿಸುತ್ತಿರಲಿಲ್ಲ, ದನಕರುಗಳು ತಿಂದು ಹೋಗಲಿ ಎನ್ನುವ ಪ್ರವೃತ್ತಿ ಇವರದಾಗಿತ್ತು. ಪಶು ಪಕ್ಷಿಗಳಿಗೆ ಕುಡಿಯಲು ನೀರಿಗಾಗಿ ರಂಜಣಿಗೆಗಳನ್ನು ಇಡಿಸಿ, ಜೋಳದ ದಂಟಿಗೆ ಮಗಿಗಳನ್ನು ಕಟ್ಟಿಸುತ್ತಿದ್ದರು. ಮನುಷ್ಯರು,

ದನಕರುಗಳು, ಪಶುಪಕ್ಷಿಗಳು ತಿಂದು ಹೋದಷ್ಟು ಇವರಿಗೆ ಸಮಾಧಾನ, ಸಂತೋಷ. ಮತ್ತೆ ಇವರ ಬೆಳೆಯೆ ಹೆಚ್ಚಾಗುತ್ತಿತ್ತು. ಜನರಿಗೆ ಅನ್ನದಾಸೋಹದ ಜೊತೆಗೆ ಜ್ಞಾನದಾಸೋಹವನ್ನು ನಡೆಸುತ್ತಿದ್ದರು. ಕಡಕೋಳ ಮಡಿವಾಳಪ್ಪನವರು ಜೊತೆಗೂಡಿದಾಗಿನಿಂದ ಇವರ ದಾಸೋಹಕ್ಕೆ ಹೆಚ್ಚಿನ ಮಹತ್ವ ಪ್ರಾಪ್ತವಾಯಿತು. ಇವರ ಮಹಿಮೆಗೆ ಬೆರಗಾದ ಕಲಬುರ್ಗಿಯ ದೊಡ್ಡಪ್ಪಗೌಡರು ಶರಣರನ್ನು ಕಲಬುರ್ಗಿಗೆ ಕರೆದು ತಂದರು.

ಶ್ರೀ ದೊಡ್ಡಪ್ಪಗೌಡರ ಮನೆಯೆ ದಾಸೋಹದ ಮಹಾಮನೆಯಾಯಿತು. ನಿತ್ಯವೂ ಇಲ್ಲಿ ನಂದಾದೀಪ ಉರಿಯತೊಡಗಿತು. ಭಕ್ತರ ಅಪೇಕ್ಷೆಗಳನ್ನು ನೆರವೇರಿಸತೊಡಗಿದರು. ಜನತೆಯ ನಂಬಿಕೆ–ಶ್ರದ್ಧೆಗಳು ಗಟ್ಟಿಗೊಂಡವು. ಶರಣರು ತಮ್ಮ ಪಾಲಿನ ದೇವರೆಂದು ಜನ ಗೌರವಿಸತೊಡಗಿದರು. ಎಲ್ಲ ಜಾತಿ ಮತ ಪಂಥಗಳ ಕೋಮಿನವರೂ ಶರಣರ ಅನುಯಾಯಿಗಳಾದರು. ''ಪರರಿಗೆ ಉಪಕಾರ ಮಾಡುವುದೇ ಪುಣ್ಯ, ಸದಾಚಾರವೇ ಶ್ರೇಷ್ಠ ಧರ್ಮ, ಅತಿಯಾಸೆಗೆ ಬಲಿ ಬೀಳಬಾರದು. ಸರ್ವರನ್ನು ಸಮಾನ ದೃಷ್ಟಿಯಿಂದ ಕಾಣಬೇಕು. ಭಕ್ತಿಯೆ ಶಕ್ತಿಯ ಮೂಲ. ಆ ಭಕ್ತಿ ಬೇರೂರ ಬೇಕಾದರೆ ಗುರು ಬೇಕು, ಗುರು ಮುಖೇನ ನಿತ್ಯ ಕಾಯಕ–ಪ್ರಸಾದ ದಾಸೋಹ ನಡೆಯಬೇಕು. ಇಂಥ ಸರ್ವಶಕ್ತಿ ಪರಮಾತ್ಮ ನನ್ನು ಪೂಜಿಸುವವರಿಗೆ ಲಭಿಸುತ್ತದೆ. ಅದಕ್ಕಾಗಿ ಪೂಜೆ, ಪ್ರಾರ್ಥನೆ, ಕಾಯಕ, ದಾಸೋಹ ನಿಮ್ಮದಾಗಲಿ'' ಎಂದು ಜನತೆಗೆ ಆಶೀರ್ವದಿಸಿ ಗುರುಮುಟ್ಟಿ ಗುರುವಾಗಿ ಕಲಬುರ್ಗಿಯನ್ನೇ ಕಲ್ಯಾಣವನ್ನಾಗಿ ಮಾಡಿ ಶರಣ ಸಂಸ್ಕೃತಿಯ ಪರಿಮಳವನ್ನು ಎಲ್ಲೆಡೆಗೂ ಹರಡಿದರು. ಇವರು ಕ್ರಿ.ಶ. ೧೮೬೫ರಲ್ಲಿ ಲಿಂಗೈಕ್ಯ ರಾದರು.

ಶ್ರೀ ಚನ್ನವೀರ ಶರಣರು ಇಂಥ ಮಹಾದಾಸೋಹಿ ಶ್ರೀ ಶರಣ ಬಸವೇಶ್ವರರ ಪುರಾಣವನ್ನು ಒಮ್ಮೆ ಪ್ರಾರಂಭಿಸಿದರೆ ಅದನ್ನು ಸತತ ಹನ್ನೆರಡು ವರುಷ ನಡೆಸಿಕೊಂಡು ಹೋಗಬೇಕೆನ್ನುವ ಸಂಪ್ರದಾಯವನ್ನು ಹಾಕಿಕೊಟ್ಟರು. ಪುರಾಣ ಹಚ್ಚುವುದರಿಂದ, ಕೇಳುವುದರಿಂದ ಇಲ್ಲವೆ ಹೇಳುವುದರಿಂದ ಜನತೆ ಸುಖ–ಸಂಪತ್–ಸಮೃದ್ಧಿ–ಕಂಡರು. ನೂರಾರು ಊರುಗಳಲ್ಲಿ, ಅದರಲ್ಲೂ ರಾಯಚೂರ ಜಿಲ್ಲೆಯಾದ್ಯಂತ ಶ್ರೀ ಶರಣಬಸವೇಶ್ವರರ ಪುರಾಣ ಪ್ರವಚನಗಳು ಈಗಲೂ ನಡೆಯುತ್ತ ಬಂದಿರುತ್ತವೆ. ಈ ಭಾಗದಲ್ಲಿ ಹಲವಾರು ಕಡೆಗಳಲ್ಲಿ ಶ್ರೀ

ಶರಣ ಬಸವೇಶ್ವರರ ದೇವಾಲಯಗಳನ್ನು ಕಟ್ಟಿಸಿ ಕೃತಾರ್ಥರಾಗಿರುವರು. ಪುರಾಣ ನಡೆದಾಗ ಆಗಾಗ ಪ್ರಸಾಂಗನುಸಾರ ಬರುವ ತೊಟ್ಟಿಲು ಸಮಾರಂಭ, ಕುಂಕುಮ ಕಾರ್ಯ, ಮದುವೆ, ಸೀಮಂತಿನಿ ಕಾರ್ಯಗಳಂತಹ, ಧಾರ್ಮಿಕ ಸಮಾರಂಭ ಗಳನ್ನು ನಿಜ ಜೀವನದಲ್ಲಿ ಆಚರಿಸುತ್ತಿರುವಂತೆ ಪುರಾಣಕಾರರೂ ಭಕ್ತರಿಂದ ಅವುಗಳನ್ನು ಆಚರಿಸುವ ವಾಡಿಕೆ. ಶ್ರೀ ಶರಣಬಸವೇಶ್ವರ ಕುರಿತಾದ ತತ್ತ್ವಪದ ರಚನೆ, ಹಾಡುಗಾರಿಕೆ, ಪುರಾಣ ರಚನೆ ಮನೆಮನೆಯಲ್ಲಿ ವಿಜೃಂಭಿಸತೊಡಗಿದವು. ಭಜನಾಮೇಳದವರಂತೂ ಶ್ರೀ ಶರಣಬಸವೇಶ್ವರರ ಪದಗಳನ್ನು ಭಜನೆಯಲ್ಲಿ ಸುಶ್ರಾವ್ಯವಾಗಿ ಹಾಡತೊಡಗಿದರು. ಶ್ರೀ ಚನ್ನವೀರ ಶರಣರು ಪ್ರತಿಯೊಂದು ಗ್ರಾಮದಲ್ಲಿಯೂ ಭಜನಾಮೇಳಗಳನ್ನು ಸಂಘಟಿಸಿ, ತಾವೇ ಅವುಗಳ ನೇತೃತ್ವ ವಹಿಸಿಕೊಂಡು, ಕಾಲುನಡಿಗೆಯಿಂದ ಕಲಬುರ್ಗಿಯ ಶ್ರೀ ಶರಣಬಸವೇಶ್ವರ ದೇವಾಲಯಕ್ಕೆ ಬಂದು ಹೋಗುವ ಹವ್ಯಾಸ ಬೆಳೆಯಿಸಿದರು.

ಶ್ರೀ ಚನ್ನವೀರ ಶರಣರು ರಜಾಕಾರರ ವಿರುದ್ಧ ಹೋರಾಟ ನಡೆಸುವಲ್ಲಿ ಒಬ್ಬರಾಗಿದ್ದಾರೆ. ರಾಜಕೀಯ ಅನುಭವ ಪಡೆದುಕೊಂಡು ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಂಡವರು. ದೀನ ದಲಿತರ ಉದ್ಧಾರಕ್ಕಾಗಿ ಹರಿಜನೋ ದ್ಧಾರ, ಖಾದಿ ಗ್ರಾಮೋದ್ಯೋಗ, ಸ್ತ್ರೀ ಸ್ವಾತಂತ್ರ್ಯ, ಗ್ರಾಮೀಣಾಭಿವೃದ್ಧಿಗಳತ್ತ ಗಮನಹರಿಸಿದವರಾಗಿದ್ದಾರೆ. ಸಕಲ ಜೀವರಾಶಿಗಳಿಗೆ ಲೇಸ ಬಯಸುತ್ತ ಮಾನವೀಯ ಮೌಲ್ಯಗಳನ್ನು ಜನತೆಯಲ್ಲಿ ಬಿತ್ತಿ ಬೆಳೆದಿರುವರು. ವರ್ಗ, ವರ್ಣ, ಲಿಂಗಭೇದಗಳನ್ನು ಅಳಿಸಿ ಹಾಕಲು ಹೋರಾಟ ನಡೆಸಿದರು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲರನ್ನೂ ಒಂದೇ ಎಂದು ಬಗೆಯುವ ಉದಾತ್ತ ಧ್ಯೇಯ ಹೊಂದಿದ್ದರು. ಶ್ರೀ ಚನ್ನವೀರ ಶರಣರು ಅಂತರಂಗ ಬಹಿರಂಗ ಶುದ್ಧೀ ಪಡೆದವರಾಗಿದ್ದರು. ಮಲತ್ರಯಗಳ ಬಂಧನದಿಂದ ಬಿಡುಗಡೆ ಹೊಂದಿ ಅಂಗದ ಅವಗುಣಗಳನ್ನು ಅಳಿಸಿ ಹಾಕಿ, ಮಾಂಸಪಿಂಡವನ್ನು ಮಂತ್ರಪಿಂಡವನ್ನಾಗಿಸಿಕೊಂಡು ಲಿಂಗಸ್ವರೂಪಿಯಾಗಿ ಶ್ರೀ ಚನ್ನವೀರ ಶರಣರು ಚೈತನ್ಯಮೂರ್ತಿಗಳಾಗಿ ಮಹಾಶರಣರಾಗಿ ಎಲ್ಲೆಲ್ಲಿಯೂ ಸಂಚರಿಸುತ್ತಿದ್ದರು.

ಶ್ರೀ ಕಾನಯ್ಯ ಮತ್ತು ಶಿವಮ್ಮ ದಂಪತಿಗಳು ತಮ್ಮ ಮಗ ಕೈ ಬಿಡುವನೆಂದು ಬಗೆದು, ಒಂದು ದಿನ ಏಕಾಂತದಲ್ಲಿ ಕರೆದು, ಮದುವೆ ಮಾಡುವ ವಿಚಾರವನ್ನು ತಿಳಿಸಿದರು. 'ನಾಳೆ ಹೇಳುತ್ತೇನೆ' ಎಂದ ಶ್ರೀ ಚನ್ನವೀರಯ್ಯನವರ ಉತ್ತರ

ಬಂದಾಗ ಹೇಳಬಹುದೆಂದು ಬಗೆದು ಸುಮ್ಮನಾದರು, ಸುಮ್ಮನಾಗಿಯೇ ಬಿಟ್ಟರು. ಶ್ರೀ ಚನ್ನವೀರಯ್ಯನವರು ಪ್ರಪಂಚದಿಂದ ದೂರಸಿಡಿ ಯಲು ನಿರ್ಧಾರ ಮಾಡಿದ್ದರು. ಅದರಿಂದ ತಂದೆ ತಾಯಿಗಳಿಗೆ ನಿರಾಸೆಯಾಯಿತು. ಇನ್ನೂ ಬಾಲಕನಿದ್ದಾಗ ಒಮ್ಮೆ ಚಿತ್ರದುರ್ಗ ಬೃಹನ್ಮಠದ ಜಗದ್ಗುರು ಜಯದೇವ ಮಹಾಸ್ವಾಮಿಗಳ ದರ್ಶನಕ್ಕೆ ತಂದೆ ಶ್ರೀ ಕಾನಯ್ಯನವರು ಕರೆದುಕೊಂಡು ಹೋಗಿದ್ದರಂತೆ. ಆಗ ಅಪೂರ್ವ ಕಳೆ ಹೊಂದಿದ್ದ ತೇಜೋಮೂರ್ತಿ ಬಾಲಕ ಶ್ರೀ ಚನ್ನವೀರಯ್ಯನನ್ನು 'ನಮ್ಮ ಮಠಕ್ಕೆ ಮರಿಯಾಗಿ ಕೊಡುವಿರಾ?' ಎಂದು ಕೇಳಿದಾಗ 'ನಮ್ಮ ಮಗನನ್ನು ಸನ್ಯಾಸಿಯನ್ನಾಗಿ ಮಾಡುವ ಇಚ್ಛೆ ಇಲ್ಲ, ಕ್ಷಮಿಸಿರಿ' ಎಂದು ಉತ್ತರಿಸಿದ್ದ ತಂದೆಯವರಿಗೆ ಮಗ ಸನ್ಯಾಸಿಯಾಗಿರುತ್ತಾನೆಂಬುದನ್ನು ಊಹಿಸಿ ದುಃಖತಪ್ತರಾದರು.

ಶ್ರೀ ಚನ್ನವೀರಯ್ಯನವರು ಪ್ರಪಂಚದಿಂದ ದೂರಸಿಡಿದು ಹೋಗಬೇಕೆನ್ನುವ ಪ್ರವೃತ್ತಿಯನ್ನು ಆಗಲೆ ಬೆಳೆಯಿಸಿಕೊಂಡಿದ್ದರು. ಅನೇಕ ಸಾಧು ಸಂತ ಋಷಿಮುನಿಗಳ ಒಡನಾಟದಲ್ಲಿ ಸಂಚರಿಸುತ್ತ ತಪ ಅನುಷ್ಠಾನಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅಲ್ಲಲ್ಲಿ ಸಂಚರಿಸುತ್ತ ಪಂಪಾವಿರೂಪಾಕ್ಷನ ಸಾನಿಧ್ಯದಲ್ಲಿ ತುಂಗಭದ್ರಾ ನದಿಯಲ್ಲಿ ಸ್ನಾನಮಾಡಿ ದಂಡೆಯ ಮೇಲೆ ಪದ್ಮಾಸನದಲ್ಲಿ ಕುಳಿತುಕೊಂಡರು. ಇಷ್ಟಲಿಂಗವನ್ನು ಕರದಲ್ಲಿಟ್ಟುಕೊಂಡು ಏಕಾಗ್ರಚಿತ್ತದಿಂದ ಅವರು ಪೂಜಿಸತೊಡಗಿದರು. ಶರಣ ತಾನು ಸತಿಯಾಗಿ ಲಿಂಗವನ್ನೇ ಪತಿಯನ್ನಾಗಿ ಕಾಣುತ್ತ ಶ್ರದ್ಧೆ, ನಿಷ್ಠೆ, ಅವಧಾನ, ಅನುಭವ, ಆನಂದ ಕೊನೆಗೆ ಸಮರಸ ಭಕ್ತಿಯಲ್ಲಿ ತಮ್ಮನ್ನು ಸಂಪೂರ್ಣ ಅದ್ದಿಕೊಂಡು ಷಟ್‌ಸ್ಥಲ ಸಿದ್ಧಾಂತದ ಶರಣಸ್ಥಲದಲ್ಲಿ ನಿಂದು ಲಿಂಗಾಂಗ ಸಾಮರಸ್ಯದ ಸವಿಯನ್ನು ಅನುಭವಿಸುತ್ತಿದ್ದರು. ತನ್ನ ತಾನರಿದು ತಾನಾರೆಂದು ತಿಳಿಯುವ ಅದ್ಭುತ ದರ್ಶನ ಶ್ರೀ ಚನ್ನವೀರ ಶರಣರಿಗಾಯಿತು.

'ಏನಾದಡೆಯೂ ಸಾಧಿಸಬಹುದು
ಮತ್ತೇನಾದಡೆಯೂ ಸಾಧಿಸಬಹುದಯ್ಯಾ
ತಾನಾರೆಂಬುದ ಸಾಧಿಸಬಾರದು
ಕೂಡಲಸಂಗಮದೇವರ ಕರುಣವುಳ್ಳವಂಗಲ್ಲದೆ

ಎಂಬ ಬಸವಣ್ಣನವರ ವಚನದಂತೆ ದೇವನ ಕೃಪಾಕಟಾಕ್ಷಕ್ಕೆ ಒಳಗಾದ ಶ್ರೀ ಚನ್ನವೀರ ಶರಣರು ನಿಜ ಶರಣರಾಗಿ ಕಂಗೊಳಿಸಿದರು. ಶರಣರು ಜ್ಞಾನಿ

ಗಳೆನಿಸಿದರು. ನಿತ್ಯ ಸತ್ಯಗಳನ್ನು ಅರಿತುಕೊಂಡರು. ದೇಹ ಮೋಹಗಳನ್ನು ವರ್ಜಿಸಿದರು. ಸ್ವ–ಸ್ವರೂಪ ಜ್ಞಾನ ಪಡೆದುಕೊಂಡರು. ಹೀಗೆ ಶ್ರೀ ಚನ್ನವೀರ ಶರಣರು ವಿಶ್ವಾಸದಿಂದ ಭಕ್ತರೆನಿಸಿದರು. ಆ ವಿಶ್ವಾಸದೊಳಗಣ ನಿಷ್ಠೆಯಿಂದ ಮಹೇಶ್ವರರಾದರು. ಆ ನಿಷ್ಠೆಯೊಳಗಣ ಸ್ವಾನುಭಾವ ವಿವೇಕದಿಂದ ಪ್ರಾಣಲಿಂಗಿಯಾದರು. ಆ ಸ್ವಾನುಭಾವ ವಿವೇಕದೊಳಗಣ ಅರಿವಿನಿಂದ ಶರಣರಾದರು. ಪತಿವ್ರತಾ ಹೆಣ್ಣುಮಗಳು ತನ್ನ ಪತಿಯ ಹೊರತು ಪರಪುರುಷರ ವಿಷಯದಲ್ಲಿ ಹೇಗೆ ವಿಮುಖಳಾಗಿರುವಳೋ ಹಾಗೆಯೇ ಯಾವನು ತನ್ನನ್ನು ಶಿವನ ವಿಷಯದಲ್ಲಿ ಸತಿಯನ್ನಾಗಿ ಭಾವಿಸುವವನಾಗಿ ಅನ್ಯ ದೇವರುಗಳ ವಿಷಯದಲ್ಲಿ ವಿಮುಖ ನಾಗಿರುವನೋ ಅವನೇ 'ಶರಣ' ಎನಿಸುತ್ತಾನೆ. ಇಂಥ ಶರಣಸ್ಥಲದಲ್ಲಿ ಶ್ರೀ ಚನ್ನವೀರಯ್ಯನವರು ಸ್ವಾನಾಭಾವಾನಂದವನ್ನೂ ಅನುಭವಿಸತೊಡಗಿದರು.

ಬಸವಣ್ಣನವರು ಸಾರಿದಂತೆ ಪರಮ ಪತಿವ್ರತೆಗೆ ಗಂಡನೊಬ್ಬ ಇದ್ದಂತೆ ಶಿವಭಕ್ತರಿಗೆ, ಶರಣರಿಗೆ 'ದೇವನೊಬ್ಬ ನಾಮ ಹಲವು.'

'ದೇವನೊಬ್ಬನಾಮಹಲವು,
ಪರಮ ಪತಿವ್ರತೆಗೆ ಗಂಡನೊಬ್ಬ
ಮತ್ತೊಂದಕ್ಕೆರಗಿದಡೆ ಕಿವಿಮೂಗ ಕೊಯ್ವನು
ಹಲವು ದೈವದೆಂಜಲ ತಿನ್ನುವವರನೇನೆಂಬೆ
ಕೂಡಲಸಂಗಮದೇವಾ.'

ಮನುಷ್ಯ ಎಂದರೆ ಸಹಜವಾಗಿ ಅವನು ಸ್ವಾರ್ಥಿಯಾಗಿರುತ್ತಾನೆ. ಆಸೆ ಆಮಿಷಗಳ ಬಲೆಯಲ್ಲಿ ಬಿದ್ದು ಒದ್ದಾಡುತ್ತಾನೆ. ಅದರಿಂದ ಪಾರಾಗಲು ಮತ್ತೆ ಅವನಿಗೆ ಧರ್ಮವೆ ಸಹಾಯಕಾರಿ. ವಿಶ್ವದಲ್ಲಿ ಶಾಂತಿ, ಸಂತೃಪ್ತಿಗಳನ್ನು ಸ್ಥಾಪಿಸುವುದಕ್ಕೆ ಸರ್ವೋತ್ಕೃಷ್ಟ ಸಾಧನೆಯೆಂದರೆ ಧರ್ಮವೆ. ಧರ್ಮಜ್ಯೋತಿ ಮರೆಯಾಯಿತೆಂದರೆ ಎಲ್ಲೆಲ್ಲಿಯೂ ಕತ್ತಲೆ, ಅಜ್ಞಾನ, ಅರಾಜಕತೆ ತಲೆದೋರುತ್ತವೆ. ಮನುಷ್ಯನು ತನ್ನ ಶೀಲ ಸ್ವಭಾವಗಳನ್ನು ವಿಕೃತಗೊಳಿಸಿಕೊಳ್ಳುತ್ತಾನೆ. ಕರ್ತವ್ಯಕ್ಕೆ ಚ್ಯುತಿ ತಂದುಕೊಳ್ಳುತ್ತಾನೆ. ಔದಾರ್ಯ ನಿಷ್ಠೆಗಳು ನಶಿಸಿ ಹೋಗುತ್ತವೆ. ಹೀಗಾಗದಂತೆ ಸತ್ಸಂಗ ಬಯಸಿ, ಸದಾಚಾರಿಯಾಗಿ, ಮನುಷ್ಯನು ಸುಖದಿಂದ ಬಾಳವುದೇ ಶರಣ ಜೀವನವಾಗಿರುತ್ತದೆ. ಇಂಥ ಉದಾತ್ತಬಾಳನ್ನು ಬಾಳಬೇಕೆನ್ನುವ ಶ್ರೀ ಚನ್ನವೀರಯ್ಯ ಶರಣರು ಹಠಯೋಗಿಗಳ ಸಂಗ ಬಯಸಿದರು. ಕ್ರಿಯೆಗೆ

ಆಚಾರಕ್ಕೆ ಪ್ರಾಧಾನ್ಯತೆ ಇಲ್ಲವೆಂದು ಮತ್ತೆಯೋಚಿಸಿ 'ಶರಣ ಸತಿ, ಲಿಂಗಪತಿ' ಸಿದ್ಧಾಂತಕ್ಕೆ ಮಾರು ಹೋದರು. ಇಂಥ ಧರ್ಮ ಇನ್ನೆಲ್ಲಿಯೂ ಸಿಕ್ಕದು ಎಂದಾನಂದ ದಲ್ಲಿ ಬೀಗತೊಡಗಿದರು. ಭಕ್ತಿಯ ಭದ್ರ ತಳಹದಿಯ ಮೇಲೆ ಜ್ಞಾನದ ಪರಿಧಿ ಯನ್ನು ಇನ್ನೂ ಹೆಚ್ಚಿಸಿಕೊಂಡರು. ಆಸೆ, ಆಮಿಷ, ಕಾಮ, ವಾಸನೆಗಳನ್ನು ಅಳಿಸಿ ಹಾಕಿದರು. ಅಲ್ಲಮಪ್ರಭುದೇವರ ವಚನವೊಂದನ್ನು ಹಾಡುತ್ತ ಹಾಡುತ್ತ ಆನಂದತುಂದಿಲರಾದರು.

'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ
ಅದು ಜಗಕ್ಕಿಕ್ಕಿದ ವಿಧಿ, ನಿನ್ನೊಡವೆಯೆಂಬುದು ಜ್ಞಾನರತ್ನ
ಅಂತಪ್ಪ ದಿವ್ಯ ರತ್ನವ ಕೆಡಗುಡದೆ ನೀನಲಂಕರಿಸಿದೆಯಾದಡೆ
ನಿನ್ನಿಂದ ಬಿಟ್ಟು ಸಿರಿವಂತರಿಲ್ಲ ಕಾಣಾ ಗುಹೇಶ್ವರಾ.'

ಹೀಗೆ ಶ್ರೀ ಚನ್ನವೀರಶರಣರು ಜ್ಞಾನವೆಂಬ ದಿವ್ಯ ರತ್ನವೇ ಮನುಷ್ಯನ ಶಾಶ್ವತ ಶ್ರೀಮಂತಿಕೆ ಎಂಬುದನ್ನರಿತು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರು.

ಶರಣರ ಮನೋಗತವನ್ನು ಅರಿತ ಕೆಲ ಹಿರಿಯರು ಶ್ರೀ ಚನ್ನವೀರಯ್ಯ ನವರನ್ನು ಕೊಪ್ಪಳ ಗವಿಮಠದ ಹದಿನಾರನೆಯ ಪೀಠಾಧಿಪತಿ ಜಗದ್ಗುರು ಶ್ರೀ ಮರಿಶಾಂತವೀರ ಮಹಾಸ್ವಾಮಿಗಳವರ ದರ್ಶನಕ್ಕೆ ಕರೆದೊಯ್ಯುತ್ತಾರೆ. ಅವರ ದರ್ಶನ ಪಡೆದ ಶರಣರು ಅವರಲ್ಲಿ ಶರಣಾಗತರಾದರು. ತಮ್ಮನ್ನು ಸಂಪೂರ್ಣ ಅವರಿಗೆ ಅರ್ಪಿಸಿಕೊಂಡರು.

ಶ್ರೀ ಗವಿಸಿದ್ಧೇಶ್ವರ ನಾಮದಿಂದ ಈ ನಾಡನ್ನು ಬೆಳಗಿದ ಮಹಾಶಿವ ಯೋಗಿಗಳ ಸಜೀವ ಸಮಾಧಿ (ಗದ್ದುಗೆ) ಇಲ್ಲಿ ಕಂಗೊಳಿಸುತ್ತಲಿದೆ. ಹೈದರಾಬಾದಿನ ನವಾಬ ಮೀರ ಆಲಂನ ಕುಷ್ಠರೋಗವನ್ನು ರಬ್ಬಳಗಿ ಪ್ರಸಾದ ಹಾಗೂ ಮಠದ ಧೂಳಿಯಿಂದ ನಿವಾರಿಸಿದ ಹಿರಿಮೆ ಶ್ರೀ ಗವಿಸಿದ್ಧೇಶ್ವರರದಾಗಿದೆ. ಶ್ರೀಮಠದಲ್ಲಿ ಗುರು ವಿರಕ್ತಭೇದವನರಿಯದ ನಡೆ ಸಂಪ್ರದಾಯಗಳ ಆಚರಣೆಗೆ ಕೊಪ್ಪಳದ ಈ ಗವಿಮಠವು ನಿದರ್ಶನವಾಗಿರು ತ್ತದೆ. ಕಾಶಿ ಚರವರ್ಯ ಶ್ರೀ ರುದ್ರಮುನಿ ಶಿವಾಚಾರ್ಯರಿಂದ ಸ್ಥಾಪಿತವಾದ ಗವಿ ಮಠದಲ್ಲಿ ಧಾರ್ಮಿಕ ಶೈಕ್ಷಣಿಕ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಅದ್ಭುತ ಕ್ರಾಂತಿಯನ್ನುಂಟು ಮಾಡಿರುತ್ತದೆ.

ವಯೋವೃದ್ಧರಾದ ತಮ್ಮ ಗುರು ಜಗದ್ಗುರು ಮರಿಶಾಂತವೀರ ಮಹಾ ಸ್ವಾಮಿಗಳ ಸೇವೆಯನ್ನು ಮನಮುಟ್ಟಿ ಶರಣರು ಮಾಡುತ್ತಾರೆ. ಇದರಿಂದ ಗುರು

ಗಳ ಪೂರ್ಣ ಕೃಪೆಗೆ ಪಾತ್ರರಾದರು. ನಾಲ್ಕು ದಶಕಗಳಿಗೂ ಮೀರಿ ಶ್ರೀ ಗವಿಸಿದ್ಧೇಶ್ವರ ಜಾತ್ರಾಮಹೋತ್ಸವದಲ್ಲಿ ಮರು ದಿವಸ ಶ್ರೀ ಗವಿಮಠದ ಮಹಾದ್ವಾರದಿಂದ ದೀರ್ಘದಂಡ (ದೀಡ) ನಮಸ್ಕಾರ ಹಾಕುತ್ತ ಶ್ರೀ ಮರಿಶಾಂತವೀರರ ಗದ್ದುಗೆಯವರೆಗೆ ಇಳಿವಯಸ್ಸಿನಲ್ಲಿಯೂ ಶರಣರು ಯಾರ ಸಹಾಯವೂ ಇಲ್ಲದೆ ಹೋಗುತ್ತಿದ್ದರು. ವರುಷ ವರುಷಕ್ಕೆ ದೀರ್ಘ ದಂಡ ನಮಸ್ಕಾರ ಹಾಕುವವರ ಸಂಖ್ಯೆ ಹೆಚ್ಚಾಗುತ್ತಲೇ ಇತ್ತು. ಕೈಲಾಸ ಮಂಟಪದಲ್ಲಿ ಜರುಗುತ್ತಿರುವ ಶ್ರೀಗವಿಸಿದ್ಧೇಶ್ವರ ಕೃಪಾಪೋಷಿತ ವಿದ್ಯಾರ್ಥಿ ಬಳಗದ ಜಾತ್ರಾ ಮಹೋತ್ಸವದ ಕಾರ್ಯಕ್ರಮದಲ್ಲಿಯೂ ಶ್ರೀ ಚನ್ನವೀರ ಶರಣರು ಭಾಗವಹಿಸುತ್ತಲಿದ್ದರು. ಶ್ರೀ ಶರಣರು ಸಂಗೀತಮಯ ಹಾಡು, ವಚನ ಹೇಳುತ್ತ ಪ್ರವಚನ ಮಾಡುತ್ತಲಿದ್ದರು. ಜಗದ್ಗುರುಗಳ ಆರೋಗ್ಯದ ಬಗೆಗೆ ಶ್ರೀ ಶರಣರೂ, ಶ್ರೀ ಚನ್ನವೀರ ಶರಣರ ಆರೋಗ್ಯದ ಬಗೆಗೆ ಜಗದ್ಗುರುಗಳೂ ಪರಸ್ಪರ ಯೋಗಕ್ಷೇಮ ನೋಡಿಕೊಳ್ಳುತ್ತಲಿದ್ದರು. ಜಗದ್ಗುರುಗಳಂತೆ ಶ್ರೀ ಚನ್ನವೀರ ಶರಣರೂ ಆಯುರ್ವೇದ ಔಷಧೋಪಚಾರ ತಿಳಿದುಕೊಂಡವರಾಗಿದ್ದರು. ಭಕ್ತರಿಗೆ ಉಚಿತ ರೀತಿಯಲ್ಲಿ ಔಷಧೋಪಚಾರ ನೀಡುತ್ತಲಿದ್ದರು. ಶ್ರೀ ಚನ್ನವೀರಶರಣರು ಗುಡದೂರ ಅಪ್ಪಗಳ ಮತ್ತು ಸಜ್ಜಲಗುಡ್ಡದ ಶರಣಮ್ಮನವರ ದರ್ಶನಾಶೀರ್ವಾದಕ್ಕಾಗಿ ಹಾತೊರೆಯುತ್ತಿದ್ದರು. ಅವರ ಕೃಪಾಶೀರ್ವಾದದಿಂದ ತಮ್ಮ ಅಧ್ಯಾತ್ಮದ ಪರಿಧಿಯನ್ನು ಹೆಚ್ಚಿಸಿಕೊಂಡವರಾಗಿದ್ದರು. ಗವಿಮಠದ ಅಪ್ಪಗಳೆಂದರಂತೂ ಶರಣರಿಗೆ ಪಂಚಪ್ರಾಣ.

ಶ್ರೀ ಚನ್ನವೀರ ಶರಣರು ಕೊಪ್ಪಳದ ಶ್ರೀ ಗವಿಮಠದ ಜಗದ್ಗುರು ಶ್ರೀ ಮರಿಶಾಂತವೀರ ಮಹಾಸ್ವಾಮಿಗಳವರ ಘನವಿದ್ವತ್ತು. ಕ್ರಿಯಾಚರಣೆ, ತಪಃ ಪ್ರಭಾವದಿಂದ ಪ್ರಭಾವಿತರಾದರು. ಅಶನ ವಸನಗಳನ್ನು ತೊರೆದು ಬ್ರಹ್ಮಚರ್ಯ ವ್ರತವನ್ನು ಪಾಲಿಸತೊಡಗಿದರು. ಕಠೋರ ತಪಸ್ಸನ್ನೂ ಆಚರಿಸಿದರು. ಹದಿನಾರು ವರುಷ ಪರ್ಯಂತರ ಚಿಕೇನಕೊಪ್ಪದ ಬಿಲ್ವವನದಲ್ಲಿ ಮೌನವ್ರತವನ್ನು ಆಚರಿಸಿದರು. ಜಪ ತಪಗಳೊಂದಿಗೆ ಅನುಷ್ಠಾನಗೈದರು. ಶರಣ ಮಾರ್ಗದಲ್ಲಿ ನಡೆದು ಸರ್ವಶಕ್ತಸಂಪನ್ನರೆನಿಸಿದರು.

'ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು.
ಇರಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು

ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ
ತಮ್ಮೊಳಗಿರ್ದ ಮಹಾಘನವನರಿಯರು
ಚನ್ನಮಲ್ಲಿಕಾರ್ಜುನ ದೇವಕೇಳಯ್ಯಾ'.

ಎಂಬ ಅಕ್ಕಮಹಾದೇವಿಯ ವಚನವನ್ನು ಪಠಣ ಮಾಡುತ್ತ ತಮ್ಮೊಳಗಿರ್ದ ಮಹಾಘನವನರಿದರು.

ಗವಿಮಠದ ಶ್ರೀ ಮರಿಶಾಂತವೀರ ಸ್ವಾಮಿಗಳು ಕೈಕೊಂಡ ಶೈಕ್ಷಣಿಕ ಸೇವೆಯಲ್ಲಿ ಶ್ರೀ ಚನ್ನವೀರ ಶರಣರೂ ಸಕ್ರಿಯ ಭಾಗವಹಿಸುತ್ತಲಿದ್ದರು. ಮಹಾಸ್ವಾಮಿಗಳೂ ನಾಲ್ಕನೂರು ಎಕರೆ ಭೂಮಿ ದಾನಮಾಡಿ ಶ್ರೀಗವಿಸಿದ್ಧೇಶ್ವರ ಟ್ರಸ್ಟ ಒಂದನ್ನು ರಚಿಸಿದರು. ಕ್ರಿ.ಶ. ೧೯೬೩ ಮಹಾವಿದ್ಯಾಲಯ ಒಂದನ್ನು ಪ್ರಾರಂಭಿಸಿದರು. ಈ ಮಠದಲ್ಲಿ ಬಡ ಹಾಗೂ ಜಾಣ ವಿದ್ಯಾರ್ಥಿಗಳಿಗಾಗಿ ಧಾಸೋಹ ನಡೆಸುತ್ತಿದ್ದರು. ಶ್ರೀ ಚನ್ನವೀರ ಶರಣರು ಈ ಗವಿಮಠದ ಸ್ವಾಮಿಗಳ ಜೊತೆ ಧನ-ಧಾನ್ಯ ಸಂಗ್ರಹಕ್ಕಾಗಿ ಊರೂರು ತಿರುಗಾಡುತ್ತಲಿದ್ದರು. ಅಲ್ಲಲ್ಲಿ ಆಗಾಗ ಪ್ರವಚನ ಮಾಡುತ್ತಿದ್ದರು. ಉಪನ್ಯಾಸ ನೀಡುತ್ತಲಿದ್ದರು. ಶರಣ ಧರ್ಮದ ಹಿರಿಮೆ ಗರಿಮೆಗಳನ್ನು ಶ್ರೀ ಸಾಮಾನ್ಯರಿಗೂ ಅರ್ಥವಾಗುವಂತೆ ತಿಳಿಸಿ ಹೇಳುತ್ತಿದ್ದರು. ಶರಣರ ವಚನಗಳನ್ನು ಶಿವಯೋಗಿಗಳ ಪದಗಳನ್ನೂ ಹಾಡುತ್ತಿದ್ದರು. ಶ್ರೀ ಚನ್ನವೀರಯ್ಯನವರು ಹೆಚ್ಚಾಗಿ ಮೌನಿಗಳಾಗಿ ಇರುತ್ತಿದ್ದರು. ಮೌನ ಮುರಿದು ಮಾತನಾಡಿದಾಗ ಅವರ ಮಾತು ಬಸವಾದಿ ಶರಣರ ವಚನಗಳಂತೆ, ಜ್ಯೋತಿರ್ಲಿಂಗ, ಲಿಂಗದರ್ಶನ.

'ಕೆರೆಹಳ್ಳ ಬಾವಿಗಳು ಮೈದೆಗೆದರೆ ಗುಳ್ಳೆ ಗೊರಚೆ ಚಿಪ್ಪುಗಳ ಕಾಣಬಹುದು
ವಾರಿಧಿ ಮೈದೆಗೆದಡೆ ಮುತ್ತು ರತ್ನಂಗಳ ಕಾಣಬಹುದು
ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ
ಲಿಂಗವ ಕಾಣಬಹುದು.'

ಚಿನ್ಮಯಾನುಗ್ರಹ ದೀಕ್ಷೆ ನೀಡಿ ಹರಿಸಿದರು. ಶ್ರೀ ಚನ್ನವೀರಯ್ಯನವರು ಈ ರೀತಿಯ ಗುರುಕರುಣೆಯಿಂದಾಗಿ ತನುಮನ ಧನದ ಸೂತಕವನ್ನು ಕಳೆದುಕೊಂಡರು. ಬಸವಣ್ಣನವರು ಹೇಳಿದ ಹಾಗೆ ಶ್ರೀ ಶರಣರೂ ನಾನಾ ಸೂತಕಗಳನ್ನು ಹೋಗಲಾಡಿಸಿಕೊಂಡರು.

'ಕಿವಿಯ ಸೂತಕ ಹೋಯಿತ್ತು, ಸದ್ಗುರುವಿನ ವಚನದಿಂದ,
ಕಂಗಳ ಸೂತಕ ಹೋಯಿತ್ತು, ಸದ್ಭಕ್ತರ ಕಂಡೆನಾಗಿ,
ಕಾಯದ ಸೂತಕ ಹೋಯಿತ್ತು, ನಿಮ್ಮ ಚರಣವ ಮುಟ್ಟಿದೆನಾಗಿ,
ಬಾಯ ಸೂತಕ ಹೋಯಿತ್ತು, ನಿಮ್ಮ ಒಕ್ಕುದ ಕೊಂಡೆನಾಗಿ,
ನಾಸಾ ಸೂತಕ ಹೋಯಿತ್ತು, ನಿಮ್ಮ ಶರಣರ ಅನುಭಾವಿಯಾಗಿ
ಕೂಡಲಸಂಗಮದೇವಾ ಕೇಳಯ್ಯಾ, ಎನ್ನ ಮನದ ಸೂತಕ
ಹೋಯಿತ್ತು, ನೀವಲ್ಲದಿಲ್ಲೆಂದರಿದೆನಾಗಿ.'

ಎಂಬ ಬಸವಣ್ಣನವರ ವಚನವನ್ನು ಮೆಲುಕು ಹಾಕುತ್ತ ಶ್ರೀ ಚನ್ನವೀರಯ್ಯ ಶರಣರು ಶ್ರೀ ಗುರು ಮರಿಶಾಂತವೀರ ಜಗದ್ಗುರು ಗಳನ್ನು ಭಕ್ತಿಯಿಂದ ಕೊಂಡಾಡತೊಡಗಿದರು.

ಶ್ರೀ ಚನ್ನವೀರಯ್ಯನವರು ಲೋಕಾನುಭವಿಗಳಾದಂತೆ ಮಹಾನುಭಾವಿ ಗಳೂ ಆದರು. ಅವರು ನುಡಿದ ನುಡಿಗಳು ಮಾಣಿಕ್ಯದ ದೀಪ್ತಿಯಂತಾದವು. ಅಂತೆಯೇ ಅವರು ನುಡಿದ ನುಡಿಗಳನ್ನು ಮೆಲುಕು ಹಾಕಿದಾಗ ಅವರ ನಿಜಾನುಭವದ ಐಸಿರಿಯನ್ನು ಕಂಡು ಆಶ್ಚರ್ಯಪಡಬಹುದಾಗಿದೆ. ಸರ್ವರೊಳ ಗೊಂದೊಂದು ನುಡಿ ಕಲಿತ ಶ್ರೀ ಚನ್ನವೀರ ಶರಣರು ಶ್ರೀ ಮರಿ ಶಾಂತವೀರ ಶ್ರೀಗಳವರ ಕೃಪೆಯಿಂದ ವಿದ್ಯದಾ ಪರ್ವತವೇ ಆಗಿ ಕಂಗೊಳಿಸಿದರು. ಅವರ ಒಡನಾಡಿಗಳಿಂದ ಕಲೆ ಹಾಕಿದ ಸಾವಿರಾರು ಶ್ರೀನುಡಿಗಳನ್ನು ಶ್ರೀ ಚನ್ನ ವೀರೇಶಪ್ರಿಯ, ನಾಪದಾ ಅವರು ಸಂಕಲನ ಮಾಡಿ ಪ್ರಕಟಿಸಿರುವುದು ಮರೆವಿನ ಮಾನವನಿಗೆ ಅರಿವಿನ ನುಡಿಗಳಾಗಿರುತ್ತವೆ. ಅಂಥವುಗಳಲ್ಲಿಯ ಕೆಲವೊಂದು ಶ್ರೀನುಡಿಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

೧. ಕರುಣೆಯೇ ಸ್ವರ್ಗ, ನಿಷ್ಕರುಣೆಯೇ ನರಕ. ೨. ಅತ್ತೆಸೊಸೆ ಇಬ್ಬರೂ ಸೋಸಿ ಸೋಸಿ ನಡದರು ಮನಿ ಮಹಾಮನಿ, ಸ್ವರ್ಗ, ಅದು ಧನ್ಯೋಗೃಹಸ್ಥಾ ಶ್ರಮ. ೩. ಪ್ರಣವ ಪಂಚಾಕ್ಷರಿಯೇ ಷಡಕ್ಷರ ಮಂತ್ರ. ೪. ಸತಿಪತಿಗಳೊಂದಾಗದ ಭಕ್ತಿಯದು ಹಾಲಿನಲ್ಲಿ ಬೆರೆತ ಹುಳಿ. ೫. ಪುರುಷಾರ್ಥದ ಆರ್ಥಿಕ ಸಂಪತ್ತಿ ನೊಂದಿಗೆ ಅಧ್ಯಾತ್ಮಸಂಪತ್ತು ಬೆರಕೆಯಾಗಬೇಕು. ೬. ಹೆತ್ತ ಮಾತೆಯ, ಹೊತ್ತ ಭೂದೇವಿಯ ಸೇವೆ ಮಾಡುವುದು ಮಹಾ ಭಾಗ್ಯ. ೭. ಇದ್ದುದನ್ನು ಇದ್ದ ಹಾಗೆ ಹೇಳುವುದು ಸತ್ಯವೆನಿಸಿದರೂ ಯಾವುದರಿಂದ ಸಜ್ಜನಿಕೆಗೆ ಹಿತವಾಗುವುದೋ

ಅದೇ ಸತ್ಯ. ೮. ಬಯಸುವುದು ಕಾಮ. ೯. ಬಯಸಿದುದು ದೊರಕದಾದಾಗ ಕ್ರೋಧ. ೧೦. ಬೇಕೆಂಬುದೆ ಲೋಭ. ೧೧. ಪಡೆದದ್ದನ್ನು ತನ್ನದೆಂದು ಉಳಿಸಿಕೊಳ್ಳುವುದೇ ಮೋಹ. ೧೨. ನಮ್ಮಲ್ಲಿದ್ದುದು ಬೇರೆಯವರಲ್ಲಿಲ್ಲ ಎಂಬುದೆ ಮದ. ೧೩. ನಮ್ಮಲ್ಲಿಲ್ಲದ್ದು ಬೇರೆಯವರಲ್ಲಿಯೂ ಇದ್ದರೆ ಅದು ಮತ್ಸರ. ೧೪. ಭಗವಂತನ ಭಾಷೆ ಮೌನ, ಮಾತು ಬೆಳ್ಳಿ, ಮೌನ ಬಂಗಾರ. ೧೫. ತಾಯಿತಂದೆ ಮಾತಾಡಲು ಕಲಿಸುತ್ತಾರೆ. ಪ್ರಪಂಚ ಬಾಯಿ ಮುಚ್ಚಿಕೊಂಡಿರಲು ಕಲಿಸುತ್ತದೆ. ೧೬. ಯಾವುದು ಯಾವಾಗಲೂ ಇದ್ದಂಗ ಇರ್ತದ ಅದ ಪರವಸ್ತು. ೧೭. ಧರ್ಮದ ಲಾಂಛನದಿಂದ ಧರ್ಮಾತ್ಮ ಅಲ್ಲ, ಧರ್ಮದರುವಿನಿರುವಿನಿಂದ ಧರ್ಮಾತ್ಮ. ೧೮. ಆಸೆಯೇ ದಾಸ್ಯತ್ವಕ್ಕೆ ಕಾರಣ, ನಿರಾಸೆಯೇ ಈಶತ್ವಕ್ಕೆ ಏಣಿ. ೧೯. ನಾನು ನಂದು ಎಂಬೋದೇ ದುಃಖಕ್ಕೆ ದಾರಿ, ಎಲ್ಲಾ ನಿಂದ ಅನ್ನೋದೇ ಸುಖದ ಹಾದಿ. ೨೦. ಅಂಗಕ್ಕೆ ಆಚಾರ, ಮನಕ್ಕೆ ವಿಚಾರ, ಆತ್ಮಕ್ಕೆ ಅರುಹು ಚಂದ. ೨೧. ನಾವು ಎಷ್ಟೇ ಎತ್ತರಕ್ಕೇರಿದರೂ ಅದಕ್ಕೂ ಮುಂದ ಏರಿದವರು ಇದ್ದಾ ಇದ್ದಾರತ್ರಿಪ್ಪಾ. ೨೨. ನಾಳೆನಾಳೆ ಅನ್ನೋದಕೆ ನಾಳಿನ ತನಕ ನೀ ಇರತೀ ಅನ್ನೋ ಗ್ಯಾರಂಟಿ ಏನು ? ೨೩. ದೇವರಲ್ಲಿ ನಂಬಿಕೆಯೆ ಆಸ್ತಿಕತೆ, ಅದಿಲ್ಲದಿರುವುದೇ ನಾಸ್ತಿಕತೆ. ೨೪. ಬಲ್ಲವರು ತೋರಿದ ದಾರಿಯಲ್ಲಿ ಸದಾ ನಡಿ, ಒಳ್ಳೇದನ್ನ ಪಡಿ. ೨೫. ನಡೆಯಲ್ಲಿ ನುಡಿ, ನುಡಿಯಲ್ಲಿ ನಡೆ ಬೆರೆಯುವುದೇ ಸಾಧನೆ, ಸಾರ್ಥಕತೆ. ೨೬. ಧ್ಯಾನವೆಂಬುದು ಆಂತರಿಕ ಯುದ್ಧ, ನಮ್ಮನ್ನು ನಾವು ರಕ್ಷಿಸಿಕೊಂಡು ಆ ಕ್ರಮುಗೈಯಬೇಕು. ೨೭. ಮನಮೆಚ್ಚಿ ನಡೆಯೋದೆ ಶಿವಮೆಚ್ಚುವ ತಾಣ. ೨೮. ನಾರಿಯನ್ನು ಗೌರವಿಸುವಲ್ಲೆಲ್ಲ ದೇವತೆಗಳು ವಾಸ ಮಾಡತಾರ. ೨೯. ಸತ್ಯವ ನುಡಿ, ಧರ್ಮವ ನಡಿ, ಈ ಜನ್ಮ ಕಡಿ.

ಹೀಗೆ ಶರಣರ ಅರ್ಥಗರ್ಭಿತ ಅನುಭವಜನ್ಯ ನುಡಿಗಳು ಸಾಹಿತ್ಯ, ಸಂಸ್ಕೃತಿ ಧರ್ಮದ ಬೆಸುಗೆಗಳಾಗಿರುವುದನ್ನು ಕಾಣಬಹುದಾಗಿದೆ. ಶರಣರು ವಿದ್ಯಾರ್ಥಿಗಳಲ್ಲಿ ಗುಪ್ತವಾಗಿರುವ ಶಕ್ತಿಸಾಮರ್ಥ್ಯಗಳನ್ನು ಅರಳಿಸಿ ಸಮಾಜದ ಪ್ರಗತಿಗೆ ವಿನಿಯೋಗವಾಗುವಂತೆ ಮಾಡುವುದೇ ವಿದ್ಯೆಯ ಗುರಿ. ಗ್ರಂಥಸ್ಥವಾದ ವಿದ್ಯೆ ಕಂಠಸ್ಥವಾದರೆ ಸಾಲದು, ಅಂತಸ್ಥವಾಗಿ ಆಚರಣೆಗೆ ಬರಬೇಕು. ಆಗಲೇ ಅದರ ಸಾರ್ಥಕತೆ. ವಿದ್ಯಾಭ್ಯಾಸದ ಪರಿಣಾಮವಾಗಿ ಸಂಯಮ ಶಕ್ತಿಯು ಬೆಳೆದು ಇಂದ್ರಿಯ ನಿಗ್ರಹವು ಸಾಧಿಸಲ್ಪಡಬೇಕು. ಸಹನೆ ಸಹಾನುಭೂತಿಗಳು ಬೆಳೆಯಬೇಕು.

ಇದುವೇ ವಿದ್ಯಾಭ್ಯಾಸದಿಂದಾಗಬೇಕಾದ ಪ್ರಯೋಜನ. ವಿದ್ಯಾರ್ಥಿಗಳು ತಮ್ಮನ್ನು ಸತ್ಯ ಧರ್ಮಗಳ ಹಕ್ಕುದಾರರೆಂದು ತಿಳಿದು ಆ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಬೇಕು. ಕಲಿತ ವಿದ್ಯೆಯ ಉಪಯೋಗ ಸಮಾಜದ ಜನರಿಗೆ ದೊರೆಯಬೇಕು. ಆಗಲೇ ಅದರ ಸಾರ್ಥಕತೆ, ವಿದ್ಯಾರ್ಥಿಗಳು ಶೀಲಸಂಪನ್ನರೂ ಮೇಧಾವಿಗಳೂ ಕಾರ್ಯ ಪಟುಗಳೂ ನಿಷ್ಪೃಹರೂ ಆದಾಗಲೇ ದೇಶದ ಮೇಲ್ಮೆ ಎಂಬುದು ವಿದ್ಯಾರ್ಥಿಗಳ ಕುರಿತಾದ ಶರಣರ ದೃಷ್ಟಿಕೋನವಾಯಿತು. ಮತ್ತೆ ಮುಂದುವರಿದು ಶರಣರು ತಮ್ಮನ್ನು ಯಾರೂ ಅರ್ಥ ಮಾಡಿಕೊಳ್ಳಲು ತಯಾರಿಲ್ಲ, ಇದು ಎಲ್ಲರ ಅಳಲು, ನಿಮ್ಮನ್ನು ನೀವೇ ಅರ್ಥ ಮಾಡಿಕೊಂಡಿಲ್ಲ, ಇತರರು ನಿಮ್ಮನ್ನು ಹೇಗೆ ಅರ್ಥಮಾಡಿಕೊಂಡಾರು ? ಎಂದೆಲ್ಲ ಪ್ರಶ್ನೆ ಹಾಕುತ್ತ ತಮ್ಮ ಎಲ್ಲ ಭಕ್ತರಿಗೂ ತಮ್ಮ ತಮ್ಮ ಅರಿವು ಮಾಡಿಕೊಳ್ಳಲು ಉಪದೇಶಿಸುತ್ತಿದ್ದರು. ಶ್ರೀ ಚನ್ನವೀರ ಶರಣರೊಂದಿಗೆ ನೂರಾರು ಭಕ್ತರು ಶ್ರೀಶೈಲಕ್ಕೆ ಪಾದಯಾತ್ರೆ ಹೋಗಿ ಬಂದರು. ಅಂದು ಮಹಾದೇವಿಯಕ್ಕ ಕಂಡ ಕದಳಿ ಬನವನ್ನು ನೋಡಿ ಬಂದರು. ಕರ್ನಾಟಕದಲ್ಲಿರುವ ಬಳಗಾನೂರ, ಜಂತ್ಲಿಶಿರೂರ, ಮುಕ್ಕುಂಪಿ, ಹುಲಿಗಿ, ಹಂಪಿ, ಕಲಬುರ್ಗಿ, ಕೊಪ್ಪಳ, ಅಮರೇಶ್ವರ, ಉಜ್ಜಯಿನಿ ರಂಭಾಪುರಿ, ಉಳವಿ, ಗದಗ ಮೊದಲಾದ ಪುಣ್ಯಕ್ಷೇತ್ರಗಳಿಗೂ ಹೋಗಿ ಬಂದರು.

ಶ್ರೀ ಚನ್ನವೀರ ಶರಣರು ಇನ್ನೊಬ್ಬರಿಗೆ ಭಾರ ಆಗುವವರಲ್ಲ, ತಮ್ಮ ಲಗೇಜನ್ನು ಇತರರ ಮೇಲೆ ಹೊರಿಸದೆ, ತಮ್ಮ ಹೆಗಲ ಮೇಲೆಯೇ ಹೊತ್ತು ಕೊಂಡು ನಾಲ್ಕು ದಶಕಗಳ ಕಾಲ ತೀರ್ಥ ಕ್ಷೇತ್ರ ಯಾತ್ರೆ ಮಾಡಿದರು. ತಮ್ಮ ಹೆಗಲ ಮೇಲೆ ಹೊತ್ತ ಟ್ರಂಕಿನಲ್ಲಿ ಪೂಜಾ ಸಾಮಗ್ರಿಗಳನ್ನು, ಬಗಲಲ್ಲಿ ಶರಣರ ವಚನಗಳ ಕಟ್ಟು, ಜೋಳಿಗೆಯಲ್ಲಿ ಅನುಭಾವಿಗಳ ಹಾಡಿನ ಚೋಪಡಿ, ಕರಣ ಹಸುಗೆ ಮೊದಲಾದ ಗ್ರಂಥಗಳು, ಹಾಸಿಗೆ ಹೊದಿಕೆ ಗಳನ್ನು ತಾವೇ ಹೊರುತ್ತಿದ್ದರು.

ಶ್ರೀ ಚನ್ನವೀರ ಶರಣರು 'ಶರಣರ ಬಳಗ' ಒಂದನ್ನು ಹುಟ್ಟುಹಾಕಿದ್ದನ್ನು ಸ್ಮರಿಸಬಹುದಾಗಿದೆ. ಇದರಲ್ಲಿ ಎಲ್ಲ ಕೋಮಿನವರಿಗೂ ಸರಿಸಮಾನ ಸ್ಥಾನ ನೀಡಿದ್ದರು. ಕೋಮು ಗಲಭೆಗೂ ಶರಣರು ಆಸ್ಪದ ಕೊಡುತ್ತಿದ್ದಿರಲಿಲ್ಲ.

ಶ್ರೀ ಚನ್ನವೀರ ಶರಣರು ಎಲ್ಲಿದ್ದರೂ ಸ್ವಾತಂತ್ರ್ಯೋತ್ಸವ ದಿನ ಮತ್ತು ಮೊಹರಂ ಹಬ್ಬದ ದಿನ ಚಿಕೇನಕೊಪ್ಪಕ್ಕೆ ಬರುತ್ತಿದ್ದರು. ಈ ಪ್ರದೇಶದ ಜನತೆ

ಈ ಕಾರ್ಯಕ್ರಮಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಭಾಗವಹಿಸುತ್ತಲಿದ್ದರು. ಮೊಹರಂ ಹಬ್ಬವನ್ನಂತೂ ಹಿಂದೂ ಜನರೇ ಆಚರಿಸುತ್ತಿದ್ದರು. ಅದೊಂದು ವಿಶೇಷ ಆಕರ್ಷಣೆಯ ಹಬ್ಬವಾಗಿ ಪರಿಣಮಿಸಿತ್ತು. ಪರಧರ್ಮದಲ್ಲಿ ನಿಷ್ಠೆಯುಳ್ಳ ಶರಣರು ಪರಧರ್ಮ ಸಹಿಷ್ಣುಗಳಾಗಿದ್ದರು, ರಾಷ್ಟ್ರೀಯ ಭಾವೈಕ್ಯತೆಗೆ ನಾಂದಿ ಹಾಡಿದ್ದರು. ಪ್ರತಿ ಹುಣ್ಣಿಮೆಗೆ ಕಲಾಕಾರರನ್ನು ವಿದ್ವಾಂಸರನ್ನು ಆಮಂತ್ರಿಸಿ ಅವರಿಂದ ಉಪನ್ಯಾಸ ನೀಡಿಸುವ ವ್ಯವಸ್ಥೆ ಮಾಡುತ್ತಿದ್ದರು ಮತ್ತು ಅವರನ್ನು ಗೌರವಿಸುತ್ತಿದ್ದರು.

ಶ್ರೀ ಚನ್ನವೀರ ಶರಣರು ಸಂಗೀತ ತಜ್ಞರಾಗಿದ್ದರು. ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದ ಪಂಡಿತ ಪಂಚಾಕ್ಷರಿ ಗವಾಯಿಗಳವರ ಪುಣ್ಯಾರಾಧನೆಯ ರಾತ್ರಿ ಪೂರ್ಣ ಸಂಗೀತಗೋಷ್ಠಿಯಲ್ಲಿ ಪಾಲ್ಗೊಂಡು ಆನಂದ ತುಂಬಿದವರಾಗುತ್ತಿದ್ದರು. ಡಾ. ಪುಟ್ಟರಾಜ ಗವಾಯಿಗಳ ದರ್ಶನ ಪಡೆದು ಧನ್ಯರಾಗುತ್ತಿದ್ದರು.

ಒಮ್ಮೆ ಶ್ರೀ ಚನ್ನವೀರಯ್ಯ ಶರಣರ ಕಣ್ಣಿಗೆ ಪರೆ ಬಂದಿದ್ದವು. ಹುಬ್ಬಳ್ಳಿಯ ಡಾ. ಎಲ್. ಎಸ್. ಮಾನ್ವಿ ಅವರಿಂದ ಆಪರೇಶನ್ ಮಾಡಿಸಿಕೊಂಡಿದ್ದರು. ಗುಣಮುಖರಾದ ಶರಣರು ಕಣ್ಣು ನೋವಿನಿಂದ ಬಳಲುತ್ತಿರುವ ಗ್ರಾಮೀಣ ಜನತೆಯ ಚಿಕಿತ್ಸೆಗೆಂದು ನೂರಾರು ನೇತ್ರ ಚಿಕಿತ್ಸಾ ಶಿಬಿರಗಳನ್ನು ಹಳ್ಳಿ ಹಳ್ಳಿಗಳಲ್ಲಿ ಏರ್ಪಡಿಸಿ ಬಡವರ ಬಂಧುಗಳೆನಿಸಿದರು. ಅನೇಕ ಕಡೆ ನಿಸರ್ಗ ಚಿಕಿತ್ಸಾ ಶಿಬಿರ, ಉಚಿತ ಚಿಕಿತ್ಸಾ ಶಿಬಿರಗಳನ್ನು ನಡೆಯಿಸಿ ಒಳಗಣ್ಣನ್ನು ತೆರೆಸಿರುವರು.

ಶರಣರು ಸದಾ ಚರಜಂಗಮರು. ಒಂದು ಕಡೆಗೆ ಸ್ಥಿರವಾಗಿ ನೆಲೆಯೂರದವರು ಜಂತ್ಲಿಶಿರೂರ, ಹೆರೂರ, ಹಿರೇಹಾಳ, ಬಳ್ಳಾರಿ, ಹೆಬ್ಬಾಳ, ಮುಷ್ಟುರ, ಗಂಗಾವತಿ, ಅರಹುಣಸಿ, ಅಗಳಕೇರಿ, ಹೊಸಪೇಟೆ, ಹಿರೇಹಾಳ, ಕೊಟ್ಟೂರು, ಕಂಪ್ಲಿ, ಬಳಗಾನೂರ, ಬಳಿಗೇರಿ, ಹೊಂಬಳ, ಕೊಪ್ಪಳ ಮೊದಲಾದ ನೂರಾರು ಗ್ರಾಮಗಳಲ್ಲಿ ಶರಣರು ದರ್ಶನ ನೀಡಿ, ಉಪದೇಶ ಹೇಳಿ ಜನತೆಗೆ ಧರ್ಮದ ಮರ್ಮವನ್ನು ತಿಳಿಸಿಕೊಡುತ್ತಿದ್ದರು.

ಶರಣರಿಗೆ ಬಳಗಾನೂರ ಗ್ರಾಮವೆಂದರೆ ಹೆಚ್ಚಿನ ಒಲವು. ಅಲ್ಲಿಯ ಭಕ್ತರು ಶರಣರೆಂದರೆ ಹುಚ್ಚೆದ್ದು ಕುಣಿಯುತ್ತಿದ್ದರು. ಅವರು ಹಾಕಿದ ಅಡ್ಡಗೆರೆ

ದಾಟುತ್ತಿದ್ದಿರಲಿಲ್ಲ. ಬಳಗಾನೂರಿನಲ್ಲಿಯೇ ಶರಣರ ಅಭ್ಯಾಸವೂ ಆಗಿತ್ತು. ಅವರ ತಂದೆ, ಕಕ್ಕ, ಅಜ್ಜಂದಿರಾದಿಯಾಗಿ ಬಳಗಾನೂರಿನಲ್ಲಿ ತಿಂಗಳುಗಟ್ಟಲೆ ನಡೆಯುತ್ತಿದ್ದ ಪುರಾಣ ಪುಣ್ಯ ಕಥೆಗಳನ್ನು ಹೇಳಿ ಶರಣರ ಊರೆಂದರೆ ಬಳಗಾನೂರೇ ಎನ್ನುವಷ್ಟರ ಮಟ್ಟಿಗೆ ಹತ್ತಿರದ ಸಂಬಂಧವಿದ್ದಿತು. ಅಂತೆಯೆ ಬಳಗಾನೂರಿನ ಭಕ್ತರೆಲ್ಲರೂ ಸೇರಿ ತಮ್ಮ ಗ್ರಾಮದಲ್ಲಿ ಪೂಜೆ ಪ್ರಾರ್ಥನೆ ಪುರಾಣಕ್ಕೆಂದು, ಶಿವಾನುಭವ ಗೋಷ್ಠಿಗೆಂದು, ಒಂದು ಮಠ ಕಟ್ಟಿಸುವ ವಿಚಾರ ಶರಣರಿಗೆ ತಿಳಿಸಿದರು. ಆಗ ಶರಣರು ಪ್ರತ್ಯುತ್ತರವಾಗಿ 'ಈ ಘಟಕ್ಕೆ ಮಠವೇಕೆ ಬೇಕು' ಬೇಡ ಎಂದರು. ವೀರಶೈವ ಧರ್ಮದ ತತ್ತ್ವ ಸಾಹಿತ್ಯ ಸಂಸ್ಕೃತಿಯನ್ನು ತಿಳಿಹೇಳುವ ಅಧ್ಯಾತ್ಮಕೇಂದ್ರ ಒಂದರ ಅವಶ್ಯಕತೆ ಅರಿತು ಬಳಗಾನೂರದ ಭಕ್ತರು ಕೊಪ್ಪಳ ಗವಿಮಠದ ಅಪ್ಪಗಳ ಅಪ್ಪಣೆಯನ್ನು ಆಗಲೇ ಪಡೆದುಕೊಂಡಿದ್ದರು. ಇದನ್ನು ಶರಣರಿಗೆ ತಿಳಿಸಿ ಮಠದ ಕಟ್ಟಡ ಪ್ರಾರಂಭಿಸಿದರು. ಈ ಮಠದಲ್ಲಿ ಮಂಗಲ ಕಾರ್ಯಾಲಯ, ನೂತನ ರಥ, ಕರ್ತೃ ಗದ್ದುಗೆ, ಕಲ್ಲಿನ ಮಂದಿರ, ಸಂಸ್ಕೃತ ಪಾಠಶಾಲೆ, ಪೂರ್ವ ಪ್ರಾಥಮಿಕ ವಿದ್ಯಾಮಂದಿರ, ಚರಿತ್ರ ಗ್ರಂಥ, ಸುಪ್ರಭಾತ, ವಸತಿ ಮಂಟಪ, ಪೂಜಾ ಮಂದಿರ ಇಂಥ ಹತ್ತು ಹಲವು ವಿಧಿಗಳನ್ನು ತೆರೆದದ್ದು ಸಾರ್ವಜನಿಕ ಹಿತಾಸಕ್ತಿಯ ಸಂಸ್ಕೃತಿ ಹಿರಿಮೆಯಾಗಿದೆ. ಇಲ್ಲಿ ನಿತ್ಯವು ರುದ್ರಾಭಿಷೇಕ ನಡೆಯುವ ಏರ್ಪಾಟಿದೆ. ಶ್ರಾವಣಮಾಸದಲ್ಲಿ ಪುರಾಣ ಪುಣ್ಯಕಥೆಗಳನ್ನು ನೆರವೇರಿಸುವರು. ಅಪ್ಪನವರ ಸಂಕಲ್ಪದಂತೆ ಪೂಜ್ಯರ ಕರಸಂಜಾತರಾದ ಶ್ರೀ ಶಿವಶಾಂತವೀರ ಶರಣರದು ಕಿರಿಯ ವಯಸ್ಸು. ಆದರೂ ಅಪ್ಪಾಜಿ ಅವರ ಆಶೀರ್ವಾದವೆಂದು ಶ್ರೀಗಳು ವೀರಶೈವ ಧಾರ್ಮಿಕ, ಸಾಂಸ್ಕೃತಿಕ ಕೇಂದ್ರವಾಗಿ ಕಂಗೊಳಿಸುವಂತೆ ಹಲವಾರು ಕಾರ್ಯಕ್ರಮಗಳನ್ನು ನಡೆಸುತ್ತಲಿರುವರು. ಬಳಗಾನೂರದ ಭಕ್ತರು ಶರಣರ ನೇತೃತ್ವದಲ್ಲಿ ಧಾರ್ಮಿಕ ಕ್ರಾಂತಿ ನಡೆಸಲು ಈ ದ್ವಾರ ಕಟ್ಟಿಸಿದರು.

ಗುರುಮುಖೇನ ದೊರೆಯಲಾರದ ವಿದ್ಯೆ ಅಷ್ಟು ಪರಿಣಾಮಕಾರಿಯಾಗಿ ಆಗಲಾರದು, ಪ್ರತ್ಯಕ್ಷ ಪರಿಶೀಲನೆಯಲ್ಲಿ ಶಿಷ್ಯರ ಮಟ್ಟ ಪರೀಕ್ಷಿಸಿ, ಅದಕ್ಕೆ ತಕ್ಕಂತೆ ಅವರಿದ್ದಲ್ಲಿಗೇ ಹೋಗಿ, ಅಷ್ಟಿಷ್ಟು ಅರಿವು ಮಾಡಿಕೊಡುವ ಪುಣ್ಯ ಕಾರ್ಯವನ್ನು ಶ್ರೀ ಚನ್ನವೀರ ಶರಣರು ಕೈಕೊಂಡದ್ದು ಅದ್ಭುತ ಕಾರ್ಯವಾಗಿರುತ್ತದೆ. ಶಿಷ್ಯರ ಸರ್ವಾಂಗಸುಂದರ ವ್ಯಕ್ತಿತ್ವ ನಿರ್ಮಾಣಕ್ಕಾಗಿ ಹಗಲಿರುಳೂ ಪರಿಶ್ರಮಿಸಿದರು.

ವೈಜ್ಞಾನಿಕ ಯುಗದ ನಾಗಾಲೋಟದಲ್ಲಿದ್ದ ನಮಗಿಂದು ಅತ್ಯಂತ ಕ್ಲಿಷ್ಟ ವಿದ್ಯೆಗಳೂ ದೊರೆತಿರುತ್ತವೆ. ಮಂಗಳ ಲೋಕಕ್ಕೂ ಹಾರಿ ಬಂದಿದ್ದೇವೆ. ಬುದ್ಧಿ ಹರಿತವಾಗಿದ್ದು ತಲೆಯೂ ದೊಡ್ಡದಾಗಿದೆ. ಆದರೆ ಏಕೋ ಹೃದಯ ಶೂನ್ಯ ರಾಗಿದ್ದೇವೆ. ಧರ್ಮದಲ್ಲಿ ಒಲವೂ ಮೂಡದಂತಾಗಿದೆ. ಮೂಡಿದರು ಸ್ವಾರ್ಥ, ಶೋಷಣೆ, ಮೂಢನಂಬಿಕೆಗಳ ಬಲೆಗೆ ಸಿಲುಕಿಕೊಂಡು ನಿಜ ಧರ್ಮದ ತಿಳುವಳಿಕೆ ಇಲ್ಲದಂತಾಗಿದೆ. ಬುದ್ಧಿಜೀವಿಗಳೆನ್ನಿಸಿಕೊಳ್ಳುತ್ತಿರುವವರ ಮನಕ್ಕೆ ಹಿಡಿಸುವಂತೆ ಬೋಧಿಸುವ ಮಹಾತ್ಮರ ಅಭಾವವೇ ಕಾರಣವಾಗಿರಬೇಕು. ಜ್ಞಾನದ ತವನಿಧಿಯೂ ಅನುಭವದ ಆಗರವೂ ಆಗಿರುವ ಶರಣ ಸಿದ್ಧಾಂತವನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಬೋಧಿಸುವ ಮಹಾಕಾರ್ಯವನ್ನು ಶ್ರೀ ಚನ್ನವೀರ ಶರಣರು ಇಡೀ ಸಮಾಜವೇ ತಲೆ ಬಾಗುವಂತೆ ಬೋಧಿಸತೊಡಗಿದರು. ಬದುಕಿಗೆ ಹಿಡಿ ಅನ್ನ, ಮೈಗೆ ತುಂಡು ಬಟ್ಟೆ, ಶಯನಕ್ಕೆ ಒಂದೀಟು ಜಾಗ ಎಂದರೆ ಸಾಲದು, ಅದರಾಚೆಗಿರುವ ಅರಿವೂ ಮನುಷ್ಯನಿಗೆ ಅವಶ್ಯ ಎಂಬುದನ್ನು ಮನವರಿಕೆ ಮಾಡಿಕೊಟ್ಟ ಶರಣರು ಜನತೆಗೆ ನಿಜದ ಅರಿವಿನ ಪರಿಚಯ ಮಾಡಿಕೊಟ್ಟರು. ಜಗದ್ವಂದ್ಯರೆನಿಸಿದ ಮಹಾಪುರುಷರ ಜೀವನ ಸಂದೇಶವನ್ನು ತಿಳಿಸಿಕೊಟ್ಟರು.

ಲೌಕಿಕ ಸುಖಕ್ಕೆ ಮನ ಸೋಲುವುದು ಮನುಷ್ಯನ ಸಹಜ ಸ್ವಭಾವ. ಹಾಗೆ ಮನಸೋತು, ಆಸೆ ಆಮಿಷಗಳ ಬಲೆಯಲ್ಲಿ ಬಿದ್ದು, ಒದ್ದಾಡಿ, ಅದ್ದೇಗೋ ಎದ್ದರೂ ಮತ್ತೆ ಮತ್ತೆ ಬೀಳುತ್ತಿರುವದರಿಂದ ಭೂಮಿ, ಹೇಮ, ಕಾಮಿನಿಗಳಿಗೆ ಆಸೆ ಮಾಡಿ ಎಷ್ಟು ಬೇಕು ಅಷ್ಟೇ ಅಲ್ಲ, ಹೆಚ್ಚೆಚ್ಚು ಗಿಟ್ಟಿಸಿಕೊಂಡಷ್ಟು ತನ್ನ ಅಂತಸ್ತು ಹೆಚ್ಚುತ್ತದೆಂಬ ಭ್ರಮಾಲೋಕದಲ್ಲಿ ಬೀಗುತ್ತಿರುವವರಿಗೆ ಸಮಾಜದಲ್ಲಿ ಉನ್ನತ ಸ್ಥಾನ, ಗೌರವ ಬೇರೆ. ಇಂಥ ಹವ್ಯಾಸದಲ್ಲಿ ಬೆಳೆದೋಲಾಡುವವರು ನಡೆದದ್ದೇ ಮಾರ್ಗ, ನುಡಿದದ್ದೇ ಮಂತ್ರ. ಇದರಿಂದ ಸಾರ್ವಜನಿಕ ಜೀವನ ಮೌಲ್ಯಗಳು ಬದಲಾಗಿ ಬಿಟ್ಟವು. ಪ್ರಾಮಾಣಿಕತನಕ್ಕೆ ಸತ್ಯನಿಷ್ಠೆಗೆ ಬೆಲೆಯಿಲ್ಲ ದಂತಾಯ್ತು, ಹಿಂಸೆ, ಶೋಷಣೆ, ಸ್ವಾರ್ಥ, ಲಂಚಗುಳಿತನ ತಾಂಡವವಾಡ ತೊಡಗಿದವು. ಇದನ್ನರಿತ ಶ್ರೀ ಚನ್ನವೀರ ಶರಣರು ಮಮ್ಮಲನೆ ಮರುಗಿದರು. ಏಳಿ, ಎದ್ದೇಳಿ ಎನ್ನುತ್ತ ಜನತೆಗೆ ಒಳ್ಳೆಯದರ ತಿಳುವಳಿಕೆ ಮಾಡಿಕೊಡುತ್ತ ಪ್ರಥಮವಾಗಿ ಅವರನ್ನು ಸನ್ಮಾರ್ಗಕ್ಕೆ ಎಳೆ ತಂದರು. ಅಂಗದ ಮೇಲೆ ಲಿಂಗ

ಧರಿಸಹಚ್ಚಿದರು. ಇಷ್ಟ ಲಿಂಗದ ಮೂಲಕ ತನ್ನ ತಾನಾರೆಂದು ತಿಳಿಯುವ ತನು–ಮನ ಶುದ್ಧೀಕರಣ ಕ್ಕಾಗಿ ಹೋರಾಡಿದರು. ಲೋಕದ ಡೊಂಕು ತಿದ್ದುವ ಮೊದಲು ಅಣ್ಣ ಬಸವಣ್ಣ ಹೇಳಿದಂತೆಯೇ ಪ್ರತಿಯೊಬ್ಬರು ತಮ್ಮ ತಮ್ಮ ತಪ್ಪುಗಳನ್ನು ತಿದ್ದಿಕೊಳ್ಳಬೇಕೆಂದು ಆದೇಶ ನೀಡಿದರು. ಯಾರ ದಾಕ್ಷಿಣ್ಯಕ್ಕೂ ಒಳಗಾಗದ ಶರಣರು ನ್ಯಾಯನಿಷ್ಠುರರೂ ಆಗಿದ್ದರು.

ಶರಣ ಧರ್ಮದಲ್ಲಿ ಮೊದಲು ಕಾಯಕಕ್ಕೆ ಮಹತ್ವ ನೀಡಿರುವರು. ಪ್ರತಿಯೊಬ್ಬರಿಗೂ ಕಾಯಕ ಕಡ್ಡಾಯವೆಂದಿರುವರು. ಅದರಲ್ಲಿ ಮೇಲು–ಕೀಳುಗಳಿಲ್ಲ. ಕಾಯಕ ಸತ್ಯವೂ ಶುದ್ಧವೂ ಆಗಿರಬೇಕಾದದ್ದು ಸ್ವಾರ್ಥರಹಿತವಾದದ್ದೂ ಆಗಿರಬೇಕು. ಇಲ್ಲಿ ಶೋಷಣೆ ಇರಕೂಡದು. ಕಾಯಕಧಾರಿ ಜನತೆಯ ನಮ್ರ ಸೇವಕ, ಅವನು ಆಸ್ತಿಕವಾದಿ, ಪ್ರಾಮಾಣಿಕ ದುಡಿಮೆಯಿಂದ ಗಳಿಸಿದುದನ್ನು ಲೋಕಹಿತಾರ್ಥವೆಂದು ದಾಸೋಹ ಮೂಲಕ ಬಳಸಬೇಕು. ಇದು ಆರ್ಥಿಕ ಸಮಾನತೆಗೆ ಹಿಡಿದ ಕನ್ನಡಿಯಾಗಿರುತ್ತದೆ. ಕಾಯಕ ತತ್ವವು ಪ್ರಾಮಾಣಿಕ ದುಡಿತವನ್ನು ಸಾರಿದರೆ, ದಾಸೋಹ ಸಿದ್ಧಾಂತವು ತ್ಯಾಗ ಬುದ್ಧಿಗೆ ನಿದರ್ಶವಾಗಿರುತ್ತದೆ. ಇದುವೆ ಜಂಗಮದಾಸೋಹ, ದೇಶ ಸೇವೆ. ಮಲತ್ರಯಗಳ ಬಂಧನದಿಂದ ಬಿಡುಗಡೆ ಹೊಂದಿ ಪರಿಶುದ್ಧ ಜೀವನ ಸಾಗಿಸುವುದೇ ಅಂತರಂಗ ಕಾಯಕವಾದರೆ ಸಾಮಾಜಿಕ ಸ್ವಾಸ್ಥ್ಯ ತಂದು ಕೊಡುವುದು ಬಹಿರಂಗ ಕಾಯಕವಾಗಿರುತ್ತದೆ. ಇಂಥ ಉದಾತ್ತವಾದ ಕಾಯಕ ಸಿದ್ಧಾಂತದ ಒಳಗುಟ್ಟನ್ನು ಶರಣರು ಶ್ರೀಸಾಮಾನ್ಯರಿಗೂ ತಿಳಿಯುವಂತೆ ಉಪದೇಶ ನೀಡಿದ್ದನ್ನು ಸ್ಮರಿಸಬಹುದು. 'ಆರಾಮ ಹರಾಮ ಹೈ' ಎಂದಂತೆ ದುಡಿಯದೆ ಸೋಮಾರಿಯಾಗಿ ಇರುವದನ್ನು ತಪ್ಪಿಸಿ ಕೈತುಂಬ ಕೆಲಸ ಮಾಡಬೇಕೆನ್ನುವ ಕಾಯಕ ಸಿದ್ಧಾಂತವನ್ನು ಈ ಚನ್ನವೀರ ಶರಣರು ಎಲ್ಲರಿಗೂ ಮನವರಿಕೆ ಮಾಡಿಕೊಟ್ಟು ಅದರಂತೆ ನಡೆಯಲು ಹಚ್ಚಿರುವರು.

ಶರಣರ ದಾಸೋಹ ಸಿದ್ಧಾಂತವನ್ನು ಶ್ರೀ ಚನ್ನವೀರ ಶರಣರು ಬಹುವಾಗಿ ಮೆಚ್ಚಿಕೊಂಡಿದ್ದರು. ದಾಸೋಹದಲ್ಲಿರುವ ಅನ್ನದಾಸೋಹ ಮತ್ತು ಜ್ಞಾನ ದಾಸೋಹದ ಎರಡೂ ಬಗೆಗಳನ್ನು ಗುರುತಿಸಿಕೊಂಡಿದ್ದರು. ಕಾಯಕದಿಂದ ಗಳಿಕೆಯಾದುದನ್ನು ದಾಸೋಹದ ಮೂಲಕ ಬಳಕೆ ಮಾಡಬೇಕೆಂದರು. ವ್ಯಷ್ಟಿ ಸಂಪತ್ತನ್ನು ಸಮಷ್ಟಿ ಸಂಪತ್ತನ್ನಾಗಿ ಮಾರ್ಪಡಿಸುತ್ತಿದ್ದರು. ಉಪನ್ಯಾಸಮೂರ್ತಿಗಳಾದ

ಗುರುಲಿಂಗ ಜಂಗಮರಿಗೆ ತನು–ಮನ–ಧನ ಅರ್ಪಿಸಿ ತ್ರಿವಿಧ ದಾಸೋಹಿಗಳಾಗುವಂತೆ ಶರಣರು ಜನತೆಯನ್ನು ಪರಿವರ್ತಿಸುತ್ತಿದ್ದರು. ಅದೇ ರೀತಿ ತಮಗಾದ ದಿವ್ಯಜ್ಞಾನಾನುಭವವನ್ನು ಇತರರಿಗೂ ಹಂಚಿಕೊಡುತ್ತಿದ್ದರು. ಅದು ಇತರರಿಗೆ ಕೊಟ್ಟಷ್ಟು ಹೆಚ್ಚೆಚ್ಚಾಗುತ್ತಿತ್ತು. ಅಂತೆಯೇ ಪುರೋಹಿತಶಾಹಿಯನ್ನು ರಾಜಶಾಹಿಯನ್ನು ಧಿಕ್ಕರಿಸುವ ದಾಸೋಹ ತತ್ವವನ್ನು ಆಚರಣೆಯಲ್ಲಿ ತರುವಂತೆ ಜನತೆಗೆ ಶರಣರು ಮನವರಿಕೆ ಮಾಡಿಕೊಡುತ್ತಿದ್ದರು.

'ಸೋಹಂ ಎಂಬುದದು ಅಂತರಂಗದ ಮದ ನೋಡಯ್ಯಾ
ಶಿವೋಹಂ ಎಂಬುದದು ಬಹಿರಂಗದ ಮದ ನೋಡಯ್ಯಾ
ಈ ದ್ವಂದ್ವವನಳಿದು ದಾಸೋಹಂ ಎಂದೆನಿಸಯ್ಯಾ
ಕಪಿಲಸಿದ್ಧಮಲ್ಲಿಕಾರ್ಜುನಾ.'

ಎಂಬ ಶಿವಯೋಗಿ ಸಿದ್ಧರಾಮರ ವಚನವನ್ನು

'ಜನ್ಮ ಜನ್ಮಕ್ಕೆ ಹೋಗಲೀಯದೆ ಸೋಹಂ ಎಂದೆನಿಸದೆ
ದಾಸೋಹಂ ಎಂದೆನಿಸಯ್ಯಾ ಲಿಂಗ ಜಂಗಮ ಪ್ರಸಾದದ
ನಿಲವ ತೋರಿ ಬದುಕಿಸಯ್ಯಾ ಕೂಡಲ ಸಂಗಮದೇವಾ ನಿನ್ನ ಧರ್ಮ'

ಎಂಬ ಬಸವಣ್ಣನವರ ವಚನವನ್ನು ಹಾಡಿ ಹಾಡಿ ಜನತೆಗೆ ದಾಸೋಹದ ಮಹತ್ವವನ್ನೂ ಮನವರಿಕೆ ಮಾಡಿಕೊಡುತ್ತಿದ್ದರು. ಮನುಷ್ಯ ಸ್ವಾರ್ಥಿಯಾಗದೆ ಸಮಾಜದ ಇತರರೊಂದಿಗೆ ಕೂಡಿ ತಿನ್ನುವ, ಬಾಳುವ, ಸದಾಚಾರಿಯಾಗಿ, ದಾಸೋಹಿಯಾಗಿ ಬದುಕಲು ಹಚ್ಚುತ್ತಿದ್ದರು. ಶರಣರು ಭಕ್ತಿ ಪಕ್ಷವೆನಿಸಿದ ದಾಸೋಹ ಮಾರ್ಗವನ್ನು ಅನುಸರಿಸದವನ ಬಾಳು ಅದು ಕಾಗೆ, ಕೋಳಿಗಿಂತಲೂ ಕೀಳು ಎನ್ನುತ್ತಿದ್ದರು. ತಿಳುವಳಿಕೆ ಹಾಗೂ ಮಾತನಾಡಲು ಬಲ್ಲ ನಾವು ಕಾಗೆ, ಕೋಳಿಗಳಿಗಿಂತ ಕೀಳಾಗಬಾರದು ಎನ್ನುತ್ತಿದ್ದರು.

'ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಕುಲವನೆಲ್ಲವನು
ಕೋಳಿ ಒಂದು ಗುಟುಕ' ಕಂಡಡೆ ಕರೆಯದೆ ತನ್ನ ಬಳಗನೆಲ್ಲವನು
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ ಆ ಕಾಗೆ ಕೋಳಿಗಳಿಗಿಂತ
ಕರಕಷ್ಟ ಕಾಣಾ ಕೂಡಲಸಂಗಮದೇವಾ'

ಎಂಬ ಬಸವಣ್ಣನವರ ವಚನವನ್ನು ಉದಾಹರಣೆಗೆ ಹಾಡುತ್ತಿದ್ದರು.

ಶ್ರೀ ಚನ್ನವೀರ ಶರಣರು ಬಸವಾದಿ ಶರಣರು ಸಾರಿರುವ ಜೀವನ ಮೌಲ್ಯಗಳಲ್ಲಿ ಒಂದಾದ ಅಜ್ಞಾನವನ್ನು ಹೋಗಲಾಡಿಸುವ ಜ್ಞಾನಜ್ಯೋತಿಯನ್ನು ಜನತೆಯಲ್ಲಿ ಹೊತ್ತಿಸಿದರು. ಗುರುವಿನ ಮಹತ್ವ ತಿಳಿಹೇಳುತ್ತ 'ಶ್ರೀ ಗುರು ವಚನೋಪದೇಶವನಾಲಿಸಿದಾಗಳಹುದು ನರರಿಗೆ ಮುಕುತಿ' ಎಂಬ ನಿಜಗುಣ ಶಿವಯೋಗಿಗಳ ಹಾಡನ್ನು ಹಾಡುತ್ತಿದ್ದರು. 'ಶಿವಪಥವನರಿವೊಡೆ ಗುರುಪಥವೆ ಮೊದಲು' ಎಂಬ ಬಸವಣ್ಣನವರ ವಚನವನ್ನು ತಿಳಿಸಿ ಹೇಳುತ್ತಿದ್ದರು. ಸತ್ಸಂಗ ಬಯಸಲು ಹೇಳಿ, ತನ್ನ ತಾನಾರೆಂದು ತಿಳಿಯುವ ತನ್ನೊಳಗಿರ್ದ ಮಹಾಘನ ವನರಿಯಬೇಕೆಂದು ಉಪದೇಶ ಮಾಡುತ್ತಿದ್ದರು. ಜ್ಞಾನದ ಬಲದಿಂದ ಅಜ್ಞಾನ ದೂರ ಮಾಡಿಕೊಳ್ಳಲು ಬೋಧಿಸುತ್ತಿದ್ದರು. ವೈಯಕ್ತಿಕವಾಗಿ ಮಾನವೀಯತೆ ಯನ್ನು ಸಾಮಾಜಿಕವಾಗಿ ರಾಷ್ಟ್ರಪ್ರೇಮವನ್ನು ಮೆರೆಯ ಹಚ್ಚುತ್ತಿದ್ದರು. 'ಅರಿದೊಡೆ ಶರಣ, ಮರೆದೊಡೆ ಮಾನವ' ಎಂದಂದು ಅರಿವೆ ಗುರು ಎಂದೆಲ್ಲ ಸಾರುತ್ತಿದ್ದರು. ತನ್ನ ತಾನರಿದು ತಾನಾರೆಂದು ತಿಳಿದು ತಾನೇ ದೇವನಾದ ಪರಿಯನ್ನು ಹಲವಾರು ಶರಣರ ದೃಷ್ಟಾಂತಗಳ ಮೂಲಕ ತಿಳಿಸಿ ಕೊಡುತ್ತಲಿದ್ದರು.

'ಅರಿಯದವರೊಡನೆ ಸಂಗವ ಮಾಡಿದೊಡೆ
ಕಲ್ಲ ಹೊಯ್ದು ಕಿಡಿಯ ತೆಗೆದು ಕೊಂಬಂತೆ
ಬಲ್ಲವರೊಡನೆ ಸಂಗವ ಮಾಡಿದೊಡೆ
ಮೊಸರ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ
ಚನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರ ಸಂಗವ
ಮಾಡಿದೊಡೆ ಕರ್ಪೂರದ ಗಿರಿಯನುರಿ ಕೊಂಬಂತೆ'

ಎಂಬ ಮಹಾದೇವಿಯಕ್ಕನ ವಚನವನ್ನು ಹಾಡಿ ಹಾಡಿ ಶರಣೆಯ ಅನುಭಾವದ ಐಸಿರಿಯನ್ನು ತಿಳಿ ಹೇಳುತ್ತಿದ್ದರು.

ಶರಣ ಶ್ರೀ ಚನ್ನವೀರಯ್ಯನವರು ಜಾತಿ ಭೇದ ಎಣಿಸುವವರನ್ನು ಕಂಡು ತಳಮಳ ಮಾಡಿಕೊಳ್ಳುತ್ತಿದ್ದರು. ಕಾಯಕದಲ್ಲಿ ಮೇಲು ಕೀಳು ಎಣಿಸಬಾರ ದೆಂದೂ ಹೇಳುತ್ತಿದ್ದರು. ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಕೂಡಲಸಂಗನ ಶರಣರೇ ಕುಲಜರೆಂದೂ ಶರಣರ ಸಂದೇಶವನ್ನು ಶ್ರೀ ಸಾಮಾನ್ಯರಿಗೆ ತಿಳಿಸುತ್ತ ಹೊಲೆಯ, ಮಾದಿಗ ಎನ್ನುವುದು ಒಂದು ಜಾತಿಯಲ್ಲ, ಅದು ಪ್ರತಿಯೊಂದು ಕೋಮಿಗೂ ಅಂಟಿಕೊಂಡು ಬಂದ ಒಂದು ಬಗೆಯ ರೋಗ ಎಂದು ತಿಳಿಸಿ

ಹೇಳುತ್ತಿದ್ದರು. ಶರಣರು ಸೃಷ್ಟಿಸಿದ ಆದರ್ಶ ಸಮಾಜದಲ್ಲಿ ಅಸ್ಪೃಶ್ಯತೆ ಎಂಬುದೇ ಇಲ್ಲ. ಅಂಗದ ಮೇಲೆ ಲಿಂಗ ಇದ್ದವರೆಲ್ಲರನ್ನು ಒಂದೇ ಎಂದು ಬಗೆದ ಶರಣರ ತತ್ತ್ವ ಪ್ರಣಾಲಿಯನ್ನು ಶ್ರೀಸಾಮಾನ್ಯರಿಗೆ ಎಳೆಎಳೆಯಾಗಿ ಶ್ರೀ ಚನ್ನವೀರ ಶರಣರು ಬಿಡಿಸಿ ಹೇಳುತ್ತಿದ್ದರು. ಶರಣರು ಕೈ ಹಿಡಿದ ಜಾತ್ಯಾತೀತ ಸಮಾಜ ಒಂದರ ನಿರ್ಮಾಣದ ಬಗೆಯನ್ನು ತಿಳಿಸಿಕೊಟ್ಟು, ನಾವೂ ಆ ಮಾರ್ಗದಲ್ಲಿ ನಡೆಯಬೇಕೆಂದು ಉಪದೇಶ ಮಾಡುತ್ತಿದ್ದರು.

‘ದಾಸೀ ಪುತ್ರನಾಗಲಿ, ವೇಶ್ಯಾಪುತ್ರನಾಗಲಿ
ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ
ಪೂಜಿಸಿ ಪಾದೋದಕ ಪ್ರಸಾದವ ಕೊಂಬುವುದದೇ ಯೋಗ್ಯ
ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ
ಪಂಚಮಹಾಪಾತಕ ನರಕ ಕಾಣಾ ಕೂಡಲ ಸಂಗಮೇದೇವಾ’

ಹಾಗೂ

‘ಇವನಾರವ ಇವನಾರವ ಇವನಾರನೆಂದೆನಿಸದಿರಯ್ಯಾ
ಇವನಮ್ಮವ ಇವನಮ್ಮವ ಇವನಮ್ಮವನೆಂದೆನಿಸದಿರಯ್ಯಾ
ಕೂಡಲಸಂಗಮದೇವಾ ನಿಮ್ಮ ಮನೆಯ ಮಗನೆನಿಸಯ್ಯಾ

ಎಂಬ ಬಸವಣ್ಣನವರ ವಚನಗಳನ್ನು ಹಾಡುತ್ತ ಅವುಗಳಲ್ಲಿ ಅಡಕವಾಗಿರುವ ಸಮಾನತೆಯ ಹಿರಿಮೆಯನ್ನು ಸಾರಿ ಹೇಳುತ್ತಿದ್ದರು.

ಸ್ತ್ರೀ ಮತ್ತು ಪುರುಷರು ಸಮಾಜದ ಎರಡು ಮುಖಗಳು, ಮಾನವನ ಪ್ರಪಂಚವನ್ನು ಒಂದು ರಥಕ್ಕೆ ಹೋಲಿಸಿ ಸ್ತ್ರೀ ಮತ್ತು ಪುರುಷ ಅದರ ಚಕ್ರಗಳೆಂದು ಹೇಳುವ ವಾಡಿಕೆ. ರಥ ಸುರುಳಿತವಾಗಿ ಸಾಗಬೇಕಾದರೆ ಈ ಚಕ್ರಗಳೆರಡೂ ಸಮನಾಗಿರಬೇಕು, ಒಗ್ಗಾಲಿಯಾಗಬಾರದು. ಹೀಗಿದ್ದರೂ ಪುರುಷರೇ ಮೇಲು, ಸ್ತ್ರೀಯರೆಂದರೆ ಕೀಳು ಎನ್ನುವ ಭಾವನೆಯಿತ್ತು. ಇನ್ನೊಂದೆಡೆ ಸ್ತ್ರೀಯರನ್ನು ಗೌರವಿಸಿದಲ್ಲಿ ದೇವತೆಗಳ ಸಂತೃಪ್ತಿ ಎಂದು ಗೌರವಿಸುತ್ತಿದ್ದುದು ಉಂಟು. ಹೆಣ್ಣು ಹುಟ್ಟಿದಂದಿನಿಂದ ವಯಸ್ಸಿಗೆ ಬರುವವರೆಗೆ ತಂದೆ ತಾಯಿಗಳಿಂದಲೂ ಲಗ್ನವಾದ ಮೇಲೆ ಗಂಡನ ಆಶ್ರಯದಲ್ಲಿಯೂ, ಮುಪ್ಪು ಆವರಿಸಿದಾಗ ಮಕ್ಕಳಿಂದ ಪೋಷಣೆ ಪಡೆಯುವುದರಿಂದಾಗಿ ‘ನ ಸ್ತ್ರೀ ಸ್ವಾತಂತ್ರ್ಯಮರ್ಹತಿ’ ಎಂದೂ ಸಾರಿದ್ದರು. ಹೀಗೆ ಸ್ತ್ರೀ ಪರಾರ್ಥಿಗಳಾಗಿ ಇನ್ನೊಬ್ಬರ ಆಶ್ರಯದಲ್ಲಿಯೇ ಬಾಳಬೇಕಾಗಿತ್ತು, ಕೇವಲ ಅಡಿಗೆ ಮನೆಯೇ ಅವಳಿಗೆ ಕಾರ್ಯಕ್ಷೇತ್ರವಾಗಿತ್ತು.

ಹೆಣ್ಣು ತಾಳ್ಮೆಯ ಮೂರುತಿ, ತನಗೊದಗಿದ ದುಃಖಗಳನ್ನೆಲ್ಲ ನುಂಗಿಕೊಂಡು ಒಳ್ಳೆಯದನ್ನೇ ಬಯಸುವ ಸ್ವಭಾವದವಳು. ಆದರೆ ಆಕೆ ಒಮ್ಮೆ ಸಿಡಿದೆದ್ದರೆ ತೀರಿತು, ಒಲಿದರೆ ನಾರಿ, ಮುನಿದರೆ ಮಾರಿ ಎಂದೂ 'ಯಥಾ ಸ್ತ್ರೀಣಾಂ ತಥಾ ವಾಚಾಂ ಸಾಧುತ್ವೆ ದುರ್ಜನೋ ಜನಃ' ಎಂದಂದರು. ಸ್ತ್ರೀಯರಿಗೆ ಅತ್ಯಂತ ಗೌರವ ಸಂದ ಕಾಲವೆಂದರೆ ಹನ್ನೆರಡನೆಯ ಶತಮಾನ. ಕರ್ನಾಟಕದ ಶಿವಶರಣರ ಸಾಮಾಜಿಕ ಕ್ರಾಂತಿಯಿಂದಾಗಿ ಸ್ತ್ರೀಯರಿಗೆ ಸಮಾನಸ್ಥಾನ ದೊರೆಯಿತು. ಸ್ತ್ರೀ ಎಂದರೆ ರಾಕ್ಷಸಿಯಲ್ಲ ದೇವರೆಂದು ಪ್ರತ್ಯಕ್ಷ ದೇವಿ ಎಂದು ಸಾರಿದರು. ಮಹೋನ್ನತ ವಿಚಾರಗಳನ್ನು ಜನತೆಗೆ ತಿಳಿಸಿದರು.

'ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮಾ ಗಂಡೂ ಅಲ್ಲ ಹೆಣ್ಣೂ ಅಲ್ಲ
ಕಾಣಾ ರಾಮನಾಥಾ'

ಎಂದಂದು ಸ್ತ್ರೀಯರಿಗೂ ಸರಿಸಮಾನ ಸ್ಥಾನ ನೀಡಿದ್ದರಿಂದ ಅಕ್ಕ ಮಹಾದೇವಿ, ಮೋಳಿಗೆ ಮಹಾದೇವಿಯಮ್ಮ ನೀಲಾಂಬಿಕೆ, ನಾಗಲಾಂಬಿಕೆ, ಆಯ್ದಕ್ಕಿ, ಲಕ್ಕಮ್ಮ ಮೊದಲಾದ ನೂರಾರು ಶರಣೆಯರೂ ವಚನಕಾರರಾಗಿ ಕಂಗೊಳಿಸಿರುವರೆಂದೂ ತಿಳಿಸಿಕೊಟ್ಟರು.

'ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ'

ಎಂದು ಹಾಡಿ ಹೆಣ್ಣು ದೇವಿ ಎಂದೂ ಕೊಂಡಾಡಿರುವರು.

ಇಂಥ ಸ್ತ್ರೀಯರ ಕುರಿತಾದ ವಿಷಯವನ್ನು ಶ್ರೀ ಚನ್ನವೀರ ಶರಣರು ಜನತೆಗೆ ಮನ ಮುಟ್ಟುವಂತೆ ತಿಳಿಸಿ ಹೇಳುತ್ತಿದ್ದರು. ಮಹಾದೇವಿಯಕ್ಕ, ಲಕ್ಕಮ್ಮ ನೀಲಮ್ಮ ಮೊದಲಾದ ಶರಣೆಯರ ಹಲವಾರು ವಚನಗಳನ್ನು ಹಾಡಿ ಹಾಡಿಸುತ್ತಿದ್ದರು. ಮನುಷ್ಯರಾಗಿ ಹುಟ್ಟಿಬಂದ ಮೇಲೆ ಸ್ತುತಿ ನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು ಎಂದು ಹಾಡಿದ ಮಹಾದೇವಿಯಕ್ಕನ ವಚನವನ್ನು ನಿತ್ಯವೂ ಶ್ರೀ ಚನ್ನವೀರ ಶರಣರು ಹಾಡುತ್ತಿದ್ದರು.

'ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ ?

ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯಾ ?
ಸಮುದ್ರದ ತಡೆಯಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದೊಡೆಂತಯ್ಯಾ ?
ಚನ್ನಮಲ್ಲಿಕಾರ್ಜುನ ದೇವ ಕೇಳಯ್ಯ ?
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು
ಬಂದಡೆ ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು'.

ಹೀಗೆ ಶ್ರೀ ಚನ್ನವೀರ ಶರಣರು ಬಸವಾದಿ ಶಿವಶರಣರ ಹಾಗೂ ವೀರಶೈವ ಧರ್ಮದ ತತ್ತ್ವ ಸಿದ್ಧಾಂತಗಳನ್ನು ಆಳವಾಗಿ ತಿಳಿದುಕೊಂಡರು. ಸ್ತ್ರೀ–ಪುರುಷರೆಲ್ಲರಿಗೂ ಮಾರ್ಗದರ್ಶನ ನೀಡುತ್ತ ಉಪದೇಶ ನೀಡಿದರು. ಅದೇ ರೀತಿ ಎಲ್ಲೆಲ್ಲೂ ಸಂಚರಿಸಿ ಉಪದೇಶ ನೀಡಿದರು. ಜನತೆಯ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸಿದರು.

ಶ್ರೀ ಚನ್ನವೀರ ಶರಣರು ಶರಣ ಧರ್ಮದ ತತ್ವ ಸಿದ್ಧಾಂತಗಳ ಜೊತೆಗೆ ಜೈನ, ಬೌದ್ಧ, ಕ್ರೈಸ್ತ ಇಸ್ಲಾಂ ಮೊದಲಾದ ಧರ್ಮದ ತತ್ತ್ವಗಳನ್ನು ಜನತೆಗೆ ತಿಳಿಸಿ ಕೊಡುತ್ತಿದ್ದರು. ಹೀಗಾಗಿ ಎಲ್ಲ ಜಾತಿ–ಜನಾಂಗದ ಕೋಮಿನ ಜನರೂ ಶ್ರೀ ಚನ್ನವೀರ ಶರಣರ ಉಪನ್ಯಾಸ, ಪ್ರವಚನ, ಕೀರ್ತನೆಗಳನ್ನು ಕೇಳುತ್ತಿದ್ದರು.

ಶ್ರೀ ಚನ್ನವೀರ ಶರಣರು ಗುರು–ವಿರಕ್ತ ಎರಡೂ ಸಂಪ್ರದಾಯದ ಪೂಜ್ಯರಿಗೂ ಭಕ್ತರಿಗೂ ಬೇಕಾದ ಮಹಾತ್ಮರೆನಿಸಿದ್ದರು. ಅವರೆಂದೂ ಗುರು ವಿರಕ್ತಭೇದವೆಣಿಸಲಿಲ್ಲ. ಒಳ್ಳೆಯದರ ಬೆಲೆ ಕಟ್ಟುವಷ್ಟು ಕುಶಾಗ್ರಮತಿ ಅವರ ದಾಗಿತ್ತು. ಅವರೆಂದೂ ಹೆಣ್ಣು, ಹೊನ್ನು, ಮಣ್ಣಿಗೆ ಆಸೆ ಪಟ್ಟವರಲ್ಲ. ಭೂಲೋಕಕ್ಕೆ ಅಲ್ಲಮಪ್ರಭು ದೇವರಂತೆ, ಭಕ್ತಿ ಪಥವ ತೋರಿ ಬಂದವ ರಾಗಿದ್ದರು. ತಮ್ಮ ಪ್ರವಚನದಲ್ಲಿ ವೈರಾಗ್ಯನಿಧಿ ಪ್ರಭುದೇವರ ಕುರಿತಾದ ಚನ್ನಬಸವಣ್ಣನವರು ರಚಿಸಿದ ವಚನವೊಂದನ್ನು ಹಾಡುತ್ತಿದ್ದುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

'ಹೆಣ್ಣಿಂಗೆ ಬಂದಾತನಲ್ಲ, ಹೊನ್ನಿಂಗೆ ಬಂದಾತನಲ್ಲ
ಮಣ್ಣಿಂಗೆ ಬಂದಾತನಲ್ಲ, ವ್ಯಸನಕ್ಕೆ ಬಂದಾತನಲ್ಲ
ಕೂಡಲ ಚನ್ನ ಸಂಗಯ್ಯನಲ್ಲಿ ಭಕ್ತಿಯ ಪಥವ
ತೋರ ಬಂದನಯ್ಯ ಪ್ರಭುದೇವರು.'

ಶರಣರು ಚೈತನ್ಯ ಸ್ವರೂಪಿಗಳಾಗಿದ್ದರು. ಅವರು ಸ್ನಾನವಾದ ಮೇಲೆ ಕಾಫಿ ಕುಡಿಯುತ್ತಿದ್ದರು. ಕಠೋರ ವ್ರತ ನಿಯಮ ಅವರದಾಗಿತ್ತು.

ಬಸವಾದಿ ಶರಣರಂತೆ ಲೋಕದ ಡೊಂಕ ತಿದ್ದುವ ಮೊದಲು ಶ್ರೀ ಚನ್ನವೀರ ಶರಣರು ತಮ್ಮ ಡೊಂಕು ತಿದ್ದಿಕೊಂಡಿದ್ದರು. ಸಚ್ಚಾರಿತ್ರ ಶುದ್ಧಿಯ, ನಿಸ್ವಾರ್ಥಪರ, ಯಾರ ದಾಕ್ಷಿಣ್ಯಕ್ಕೂ ಒಳಗಾಗದ ಚನ್ನವೀರ ಶರಣರ ಮಾತಿಗೆ ಬೆಲೆಯಿತ್ತು. ತನಗಿಂತಲೂ ಸಮಾಜ ದೊಡ್ಡದೆಂಬ ತಿಳುವಳಿಕೆಯಿಂದಾಗಿ ಶರಣರು ಸಮಾಜಕ್ಕೆ ಶಿರಬಾಗುತ್ತಿದ್ದರು. 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎನ್ನುತ್ತಿದ್ದರು. ಶಿವಶರಣರಿಗೆ ಹಿಂದೆ ಗುರು ಇದ್ದರು, ಮುಂದೆ ಗುರಿಯಿತ್ತು. ಅದನ್ನು ಸಾಧಿಸಲು ಹಿಂದೆ ಹಿಂದೆ ಉಳಿದು ತಮ್ಮ ಗುರುಗಳನ್ನೇ ಮುಂದೆ ಮಾಡುತ್ತಿದ್ದ ಶರಣರ ಬದುಕು ಉದಾತ್ತವಾಗಿತ್ತು.

ಶರಣರು ದಯವೇ ಧರ್ಮದ ಮೂಲವೆಂದಿದ್ದರು. ಎಂಥ ಜನತಾ ಸೇವಕನಿಗೂ ಲಿಂಗಪೂಜೆ ಅವಶ್ಯ ಎಂಬುದನ್ನು ಒತ್ತಿ ಹೇಳಿದ್ದರು. ನೀತಿಯ ನೆಲಗಟ್ಟಿನ ಮೇಲೆ ವ್ಯಕ್ತಿತ್ವ ನಿರ್ಮಿಸಿಕೊಳ್ಳಲು ಕರೆಕೊಟ್ಟಿದ್ದರು. ದೇವನೊಬ್ಬ ನಾಮ ಹಲವು ಎಂದಿದ್ದರು. ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ ಎಂದೂ ಸಾರಿದ್ದರು. ಅಯ್ಯಾ ಎಂದೊಡೆ ಸ್ವರ್ಗ, ಎಲವೋ ಎಂದೊಡೆ ನರಕ, ಆಚಾರವೇ ಸ್ವರ್ಗ, ಅನಾಚಾರವೇ ನರಕ ಎಂದೆಲ್ಲ ಸಾರಿದ್ದರು. ಆದರೆ ಇವು ಅಂದು ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣರು ಹೇಳಿದ ತತ್ವಗಳೆಂದು ಅಲ್ಲಗಳೆಯುವಂತಿಲ್ಲ. ಅವು ಎಂದೆಂದಿಗೂ ಎಲ್ಲರಿಗೂ ಪ್ರಸ್ತುತವಾಗಿರುತ್ತವೆ. ಅಂತೆಯೆ ಇಪ್ಪತ್ತನೆಯ ಶತಮಾನದಲ್ಲಿ ಶ್ರೀ ಚನ್ನವೀರ ಶರಣರು ಈ ತತ್ವ ಸಿದ್ಧಾಂತಗಳನ್ನು ಜನತೆಗೆ ಬೋಧಿಸುತ್ತ, ಅವುಗಳನ್ನು ಜೀವನದಲ್ಲಿ ಅಳವಡಿಸಿ ಕೊಳ್ಳಲು ಕರೆಕೊಟ್ಟದ್ದು ಮಹತ್ ಸಾಧನೆಯೆಂದೇ ಹೇಳಬಹುದಾಗಿದೆ. ಇಂದಿನ ಕಲುಷಿತ ಪರಿಸರದಲ್ಲಿಯೂ ಕೂಡ ಶರಣರ ಸಂದೇಶ ಪ್ರಸ್ತುತವಾಗಿರುತ್ತದೆ.

ಶ್ರೀ ಚನ್ನವೀರ ಶರಣರು ಲಿಂಗದೊಳಗಾದರು :

ಎಪ್ಪತ್ತೇಳು ವರುಷಗಳ ತುಂಬುಜೀವನ ನಡೆಸಿದ ಶ್ರೀ ಚನ್ನವೀರ ಶರಣರ ಪವಿತ್ರ ಆತ್ಮ ಕ್ರಿ.ಶ. ೧೯೭೫ನೇ ಇಸ್ವಿ ರಥಸಪ್ತಮಿಯಂದು ಬೆಳಗಿನ ೪–೧೦ಕ್ಕೆ ಲಿಂಗದಲ್ಲಿ ಒಂದಾಯಿತು. ಅಲ್ಲಿಯೇ ಇದ್ದ ಕೊಪ್ಪಳ ಮತ್ತು ಉಜ್ಜಯಿನಿ

ಜಗದ್ಗುರುಗಳು ಶ್ರೀ ಶರಣರ ಕ್ರಿಯಾ ಸಮಾಧಿ ತಯಾರಿಗೆ ಅಪ್ಪಣೆ ಕೊಟ್ಟರು. ಮೃದುಸಂಗೀತ, ಸುಪ್ರಭಾತ, ಶ್ರೀ ಗುರುಭಜನೆ ಪ್ರಾರಂಭವಾದವು. ಪ್ರಶಾಂತವೂ ಅಷ್ಟೇ, ಗಂಭೀರವೂ, ಹೃದಯ ಹಿಂಡಿ, ಕರುಳು ಕಿತ್ತು ಬರುವ, ಕಂಗಳ ಕೋಡಿ ಹರಿಯುವ ಆ ದೃಶ್ಯ ಕಲ್ಲೆದೆಯವರನ್ನು ಕರಗಿಸುವಂತಿತ್ತು. ಶರಣರ ಅಂತಿಮ ದರ್ಶನಕ್ಕೆ ದೂರದೂರದ ಪೂಜ್ಯರು, ಗಣ್ಯರು ಧಾವಿಸಿ ಬಳಗಾನೂರಕ್ಕೆ ಬಂದರು. ಜನರ ನೂಕು ನುಗ್ಗಲು, ರಂಭಾಪುರಿ, ಮುಂಡರಗಿ, ಹುಬ್ಬಳ್ಳಿ, ಗದಗ, ಸಾವಳಗಿ, ನರಗುಂದ, ನವಲಗುಂದ, ಶಲವಡಿ, ಸೂಡಿ, ಚಿಕ್ಕಮಣ್ಣೂರ, ಧಾರವಾಡ, ಹೊಂಬಳ, ಹಾನಗಲ್, ಅಡ್ನೂರ, ಆಲಮೇಲ, ಹೂಲಿ, ಗುಡದೂರ, ಸಜ್ಜಲಗುಡ್ಡ, ಹಿರೇಬಗದಾಳ, ಗಂಗಾವತಿ, ಮುಷ್ಟೂರ, ಹೆಬ್ಬಾಳ, ಕಾಕಬಾಳ, ಓಬಳಾಪುರ, ನಾಯಕನೂರು, ಯಲಬುರ್ಗಾ, ತುಪ್ಪದ ಕುರಹಟ್ಟಿ, ಇಟಗಿ, ಚಿಕೇನಕೊಪ್ಪ, ಹೊಸಪೇಟ, ಬಳ್ಳಾರಿ ಹೀಗೆ ಹಲವಾರು ಸ್ಥಳಗಳಲ್ಲಿದ್ದ ಪೂಜ್ಯರು, ಗಣ್ಯರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದರು. ಅಪ್ಪನ ಯಾತ್ರೆ ವೈಭವೋಪೇರಿತವಾಗಿ ನಡೆಯಿತು. ಬಂದವರಿಗೆಲ್ಲ ದಾಸೋಹ ನಡದೇ ಇತ್ತು. ಮಧ್ಯಾಹ್ನ ೧೨-೧೫ಕ್ಕೆ ಪ್ರಸಾದ ಕಾಯವನ್ನು ಸಮಾಧಿಯಲ್ಲಿ ಇಳಿಸಲಾಯಿತು. ಶರಣರು ಸಾಕಾರ ರೂಪದಿಂದ ನಿರ್ಗಮಿಸಿ, ನಿರಾಕಾರ ರೂಪದಲ್ಲಿ, ನೆನೆದವರ ಮನದಲ್ಲಿ ಎಂದೆಂದಿಗೂ ಇರುವರು.

ಷಣ್ಮುಖ ಶಿವಯೋಗಿಗಳು ತಮ್ಮ ಗುರುಗಳನ್ನು ಕಂಡು, ಪೂಜಿಸಿದ ಹಸ್ತ, ಕಂಗಳು ಜಿಹ್ವೆ, ಭಾವಗಳೆಲ್ಲ ಪರುಷವಾದವು ಎಂದು ಹಾಡಿದಂತೆ, ಸಾವಿರಾರು ಭಕ್ತರ ಹಸ್ತ ಕಂಗಳು, ಜಿಹ್ವೆ, ಭಾವಗಳು ಗುರು ಶ್ರೀ ಚನ್ನವೀರ ಶರಣರ ಚರಣವ ಪೂಜಿಸಿ, ನೋಡಿ, ಹಾಡಿ, ಧ್ಯಾನಿಸಿ ಪರುಷವಾದುದನ್ನು ಗುರುತಿಸಬಹುದಾಗಿದೆ.

> "ಗುರುಚರಣವ ಪೂಜಿಸಿ
> ಎನ್ನಹಸ್ತಗಳು ಪರುಷವಾದವು,
> ಗುರುಚರಣವ ನೋಡಿ
> ಎನ್ನ ಕಂಗಳು ಪರುಷವಾದವು,
> ಎನ್ನ ಚರಣವ ಹಾಡಿ ಹರಿಸಿ
> ಎನ್ನ ಜಿಹ್ವೆಪರುಷವಾಯಿತು,
> ಗುರುಚರಣವ ಧ್ಯಾನಿಸಿ,
> ಎನ್ನ ಭಾವ ಪರುಷವಾಯಿತು."

ಶ್ರೀ ಚನ್ನವೀರರ ಶರಣಲೀಲಾಮೃತ

ಶ್ರೀ ಚನ್ನವೀರ ಶರಣರ ಮಹಿಮೆಗೆ ಸಂತೋಷ, ಅಭಿಮಾನ ತಾಳಿದವರು ಕೆಲವರಾದರೆ ಅಸೂಯೆ, ಮತ್ಸರಪಡುವವರೂ ಅಲ್ಲಲ್ಲಿ ಇದ್ದರು. ಶರಣರನ್ನು ಪರೀಕ್ಷಿಸಲು ಹಲವಾರು ಬಲೆಬೀಸಿ ಸೋತು-ಶರಣಾದದ್ದೂ ಉಂಟು. ದುರುಳರು ಬೀಸಿದ ಬಲೆಯಿಂದ ಪಾರಾಗಿ ಶರಣರು ತಮ್ಮ ಅಂತಸ್ಥನ್ನು ಇನ್ನೂ ಹೆಚ್ಚಿಸಿಕೊಂಡರು. ಅಘಟಿತ ಘಟನೆಗಳೇ ನಡೆದವು. ಅವು ಶ್ರೀಸಾಮಾನ್ಯರ ನಾಲಿಗೆಯ ಮೇಲೆ ಅಲ್ಲಿಂದ ಇಲ್ಲಿ, ಇಲ್ಲಿಂದ ಅಲ್ಲಿ ಸಂಚರಿಸುತ್ತ ಜನಪದರ ಬಾಯಿಂದ ಬಾಯಿಗೆ ಹರಿದು ಬಂದಿರುತ್ತವೆ. ಇವು ಸಮಷ್ಟಿಪ್ರಜ್ಞೆಯ ಮುದ್ರೆ ಧರಿಸಿಕೊಳ್ಳುತ್ತ ಪವಾಡ ಸದೃಶವಾಗಿರುವುದನ್ನು ಕಾಣುವಂತಾಗಿದೆ.

ಪವಾಡಗಳನ್ನು ಸುಳ್ಳೆಂದು ಅಲ್ಲಗಳೆಯಲೂಬಾರದು, ಸತ್ಯವೆಂದು ಅನುಕರಿಸಲೂ ಹೋಗಬಾರದು. ಮಹಾಪುರುಷರಲ್ಲಿ ಶ್ರೀಸಾಮಾನ್ಯರು ಇಟ್ಟಿರುವ ಶ್ರದ್ಧೆ, ನಿಷ್ಠೆಗಳ ಪರಿಣಾಮವಾಗಿ ಅಸಂಭಾವ್ಯ ಘಟನೆಗಳು ಸಂಭವಿಸಿದಾಗ, ಅವುಗಳಿಗೆ ಕಾರಣ ಗೊತ್ತಾಗದಾದಾಗ, ಅಂಥ ಘಟನೆಗಳನ್ನು 'ಪವಾಡ' ಎಂದು ಕರೆಯುತ್ತ ಬಂದಿರುತ್ತೇವೆ. 'ಪ್ರವಾದ' ಎಂಬ ಸಂಸ್ಕೃತ ಪದದಿಂದ 'ಪವಾಡ' ಎಂಬ ಕನ್ನಡ ಶಬ್ದ ಬಳಕೆಯಲ್ಲಿರುತ್ತದೆ. ಪವಾಡ ಎಂದರೆ ಅಸಾಮಾನ್ಯ ಘಟನೆ. ಅದು ಅದ್ಭುತವೂ ಆಶ್ಚರ್ಯಕರವೂ ಲೋಕವಿಲಕ್ಷಣವೂ ಆದುದಾಗಿರುತ್ತದೆ. ಪವಾಡಗಳು ದೇವರ ಪ್ರತಿರೂಪವೆನ್ನಿಸಿದವರಿಂದ ಪ್ರದರ್ಶಿತವಾದಂಥವುಗಳು. ದೈವೀಶಕ್ತಿಯ ಬಲವಿದ್ದು ಮಾನವೀಯ ಅನುಕಂಪವುಳ್ಳ ಮಹಾತ್ಮರಿಂದ ಅಬಲರ, ಕಷ್ಟದಲ್ಲಿರುವವರ ರಕ್ಷಣೆಗಾಗಿ ಜರಗುವ ಘಟನೆಗಳೇ ಪವಾಡಗಳೆನಿಸಿರುತ್ತವೆ.

ಲೀಲೆ ಎಂದರೆ ಸಾಮಾನ್ಯಾರ್ಥದಲ್ಲಿ ಹೇಳುವುದಾದರೆ 'ಆಟ' ಎಂದು ಅರ್ಥ. ದೇವಾನುದೇವತೆಗಳಿಂದ ನಡೆಯುವಂಥವು ಲೀಲೆ ಎನಿಸಿದರೆ, ಮಾನವರಿಂದ ನಡೆಯುವಂಥವು ಪವಾಡಗಳೆನಿಸಿವೆ. 'ಲೀಲೆಯಾದೊಡೆ ಉಮಾಪತಿ, ಲೀಲೆ ತಪ್ಪಿದೊಡೆ ಸ್ವಯಂಭೂ' ಎಂದಂತೆ ಶಿವನ ಪಂಚವಿಂಶತಿ ಲೀಲೆಗಳು ಅತ್ಯಂತ ಪ್ರಸಿದ್ಧೀ ಪಡೆದಿರುತ್ತವೆ.

'ತನ್ನ ವಿನೋದಕ್ಕೆ ತಾನೆ ಸೃಷ್ಟಿಸಿದ ಸಕಲ ಜಗತ್ತು
ತನ್ನ ವಿನೋದಕ್ಕೆ ತಾನೆ ಸುತ್ತಿದನದಕ್ಕೆ ಸಕಲ ಪ್ರಪಂಚನು

ತನ್ನ ವಿನೋದಕ್ಕೆ ತಾನೆ ತಿರುಗಿಸಿದನನರತ ಭವದುಃಖಗಳಲ್ಲಿ
ತನ್ನ ಜಗದ್ವಿಲಾಸ ಸಾಕಾದರೆ ಮತ್ತೆ
ತಾನೆ ಪರಿವನದರಮಾಯಾಪಾಶವೆನುತೆ

ಎಂದು ಮಹಾದೇವಿಯಕ್ಕ ತನ್ನ ಈ ವಚನದಲ್ಲಿ ಲೀಲೆಯೆನ್ನುವದನ್ನು ಜಗದ್ವಿಲಾಸ ಎಂದೂ ಕರೆದಿರುವಳು. ಯೋಗಿಗಳು ತಮ್ಮ ಆಂತರಂಗಿಕ ಶಕ್ತಿಗಳನ್ನು ವಿಸ್ತಾರಗೊಳಿಸುತ್ತ ಅವರೂ ದೇವರು ಎಸಗಿದಂತಹ ಲೀಲೆಗಳನ್ನು ಭೂಮಿಯ ಮೇಲೆ ಮಾಡುತ್ತಾರೆ. ಅವು ಪವಾಡಗಳೆನಿಸಿವೆ. ಲೀಲೆಗಳು ದೇವರಿಂದ ನಡೆದರೆ, ಪವಾಡಗಳು ಮಾನವರಿಂದ ನಡೆಯುತ್ತವೆ. ಪವಾಡಗಳು ಮಾನವನ ವಿಕಾಸಕ್ರಮವನ್ನು ಗುರುತಿಸುವಲ್ಲಿ ಮೈಲಿಗಲ್ಲುಗಳಾಗಿವೆ. ಧಾರ್ಮಿಕ ತತ್ವಗಳ ಪ್ರತಿಪಾದನೆಗೆ, ನಂಬಿಕೆಗೆ, ಮಹಾಪುರುಷರ ಮಹಿಮಾತಿಶಯಕ್ಕೆ ಈ ಪವಾಡಗಳು–ಲೀಲೆಗಳು ಮೆಚ್ಚಿಕೊಂಡಂತಿವೆ. ಶ್ರೀ ಚನ್ನವೀರ ಶರಣರು ಪವಾಡಗಳನ್ನು ಸೃಷ್ಟಿಸಿ ಮಹಾತ್ಮರಾದವರಲ್ಲ. ಅವರ ಮಹಿಮಾತಿಶಯವನ್ನು ಹೇಳುವಾಗ ಶ್ರೀಸಾಮಾನ್ಯರ ನಂಬಿಕೆಯ ಮೇಲೆ ಇವು ಸೃಷ್ಟಿಯಾದಂಥವು.

ಗುರುಗಳ ನೆರಳು :

ಕೊಪ್ಪಳ ಗವಿಮಠದ ಜಗದ್ಗುರುಗಳ ಜೊತೆಗೆ ಶ್ರೀ ಚನ್ನವೀರ ಶರಣರೂ ಶ್ರೀಮಠಕ್ಕೆ ಕಾಣಿಕೆ ಎತ್ತಲು ಒಮ್ಮೆ ಒಂದು ಗ್ರಾಮಕ್ಕೆ ಹೋಗಿದ್ದರು. ಸನ್ನಿಧಿಯವರ ಜೊತೆಗೇ ಹೋಗದೆ, ಅವರ ನೆರಳು ತುಳಿಯಬಾರದೆಂದು ಶರಣರು ಅವರ ಹಿಂದೆ ಹಿಂದೆ ಸರಿಯುತ್ತಿದ್ದರು. ನೆಲಮನೆ ಕಟ್ಟಡದ ೧೪'–೧೫' ಆಳದ ತೆಗ್ಗಿನಲ್ಲಿ ಹಿಂದೆ ಸರಿಯುತ್ತ ಬಿದ್ದುಬಿಟ್ಟರು. ಎಲ್ಲರಿಗೂ ನೋವು ಕಳವಳ ಉಂಟಾದರೂ ಶರಣರು ಆ ತೆಗ್ಗಿನಲ್ಲಿ ನಗೆಮುಖದಿಂದ ನಿಂತುಬಿಟ್ಟಿದ್ದರು. ಅವರಿಗೆ ಯಾವ ಪೆಟ್ಟೂ ಬಿದ್ದಿರಲಿಲ್ಲ.

ದೇವಿಯ ಕೊರಳ ಮಣಿ :

ಒಮ್ಮೆ ಶ್ರೀ ಚನ್ನವೀರ ಶರಣರು ಮುಕ್ಕುಂಪಿ ಗ್ರಾಮದ ದೇವಿಯ ಗುಡಿಯ ದರ್ಶನಕ್ಕೆ ಹೋಗಿದ್ದರು. ಹೋಗುವಷ್ಟರಲ್ಲಿಯೆ ಆ ಗರ್ಭಗುಡಿಗೆ ಕೀಲಿಹಾಕಿತ್ತು, ಶರಣರು ದೇವಿಯ ಪ್ರಾರ್ಥನೆ ಮಾಡತೊಡಗಿದರು. ಛಟ್ ಛಟಲ್ ಎಂದು ಹಾಕಿದ ಕೀಲಿಯು ಮುರಿದು ಬಾಗಿಲು ತೆರೆಯಿತು. ಶರಣರ ಭಕ್ತಿಭಾವಕ್ಕೆ ಮೆಚ್ಚಿದ ದೇವಿ ಶರಣರಿಗೆ ದರ್ಶನ ನೀಡಿದ್ದಲ್ಲದೆ, ತನ್ನ ಕೊರಳ ಮಾಲೆಯನ್ನು ಶರಣರಿಗೆ ಹಾಕಿಹೋದಳು. ಶರಣರು ಅದನ್ನು ತಮ್ಮ ಕಂಬಳಿ ಒಡ್ಡಿ ಸ್ವೀಕರಿಸಿದರು.

ದೇವಿಯ ದರ್ಶನ :

ಜಂತ್ಲಿ ಶಿರೂರದಲ್ಲಿ ಒಮ್ಮೆ ದೇವಿಪುರಾಣ ನಡೆಯುವುದಿತ್ತು, ಶರಣರು ಈ ಪುರಾಣ ಹೇಳುವವರಿದ್ದರು. ಸಭಿಕರಲ್ಲಿ ಕುಳಿತ ಒಬ್ಬ ಯಜಮಾನ 'ಏನ್ರಿಪಾ ತಂದೆ, ಪುರಾಣ ಬಿಡುವಂತಿಲ್ಲ, ಮಳಿನರs ಇಲ್ಲ, ಬರಗಾಲ ಭೀತಿಯಿಂದ ಜನ ತತ್ತರಿಸುತ್ತಲಿದ್ದಾರೆ.' ಎಂದು ಸಹಜ ಮಾತನಾಡಿದ್ದನ್ನು ಕೇಳಿದ ಶರಣರು ಬಿಚ್ಚಿದ ಪುರಾಣದ ಗಂಟನ್ನು ಚಟ್ಟಿಗೆ ಜೋರಾಗಿ ಒಗೆದರು, 'ಮಳೀನ ಅದು ಅಪ್ಪನ ಇಚ್ಛಾ' ಎಂದು ಏಳುವಷ್ಟರಲ್ಲಿ ಸರ್ರನೆ ದೇವಿ ಹೊಸ್ತಿಲವರೆಗೆ ಬಂದು ಮತ್ತೆ ಹಿಂದೆ ಸರಿದಳು.

ಮಹಾಗಣಾರಾಧನೆ :

ನವಲಗುಂದ ದೈವದವರು ಮಹಾಗಣಾರಾಧನೆಗೆ ಆಮಂತ್ರಿಸಿದ್ದರು. ಮರುದಿನ ಬೆಳಿಗ್ಗೆ ೧೦ ಗಂಟೆಗೆ ಕಾರ್ಯಕ್ರಮ ನಡೆಯುವುದಿತ್ತು, ಆದರೆ ಶರಣರು ಅದರ ಹಿಂದಿನ ರಾತ್ರಿಯೆ ನವಲಗುಂದಕ್ಕೆ ತೆರಳಿ, ಹಿರಿಯರನ್ನು ಕರೆಯಿಸಿ ಮುಂಜಾನೆ ೮ ಗಂಟೆಗೆ ಪ್ರಸಾದ ಪ್ರಾರಂಭಿಸಬೇಕೆಂದು ಅಪ್ಪಣೆ ಕೊಡಿಸಿದರು. ಆ ಪ್ರಕಾರ ಹಿರಿಯರು ೮ ಗಂಟೆಗೆ ಪ್ರಾರಂಭಿಸಿದರು. ಅದು ಮುಗಿಯುವಷ್ಟರಲ್ಲಿ ಊರಿನ ಗಣ್ಯ ವ್ಯಕ್ತಿಗಳೊಬ್ಬರು ನಿಧನ ಹೊಂದಿದರು.

ಅಪ್ಪನ ಪ್ರಸಾದ :

ಹೊಸಪೇಟೆಯ ಭಕ್ತರೊಬ್ಬರ ಮನೆಗೆ ಶರಣರು ಬಂದಿದ್ದರು. ಶರಣರ ದರ್ಶನಕ್ಕೆಂದು ಗೌಡರೊಬ್ಬರು ಬಳ್ಳಾರಿಯಿಂದ ಬಂದರು. ಎಂಟು–ಒಂಬತ್ತು ವರುಷದ ಬಾಲಿಕೆ ಶರಣರ ಪೂಜಾ ವ್ಯವಸ್ಥೆ ಮಾಡಿದ್ದಳು. ಅವಳೇ ಬಳ್ಳಾರಿಯಿಂದ ಬಂದ ಅತಿಥಿಗಳನ್ನು ಸ್ವಾಗತಿಸಿ, ಮೊದಲು ಸ್ನಾನ–ಪೂಜೆ ಮಾಡಿ ಪ್ರಸಾದ ಸ್ವೀಕರಿಸಿರಿ. ಆಮೇಲೆ ಶರಣರ ದರ್ಶನ ಪಡೆಯುವಂತೀರಿ ಎಂದು ಹೇಳಿದಳು. ಅದಕ್ಕೆ ಅತಿಥಿಗಳು ವಿನಮ್ರದಿಂದ ಪ್ರಸಾದಕ್ಕಾಗಿ ಒತ್ತಾಯಿಸಬೇಡಿರಿ ಎಂದಾಗ ಆ ಬಾಲಕಿ ದೊಪ್ಪನೆ ನೆಲಕ್ಕೆ ಬಿದ್ದುಬಿಟ್ಟಳು. ಆಗ ಅತಿಥಿಗಳು ಗಾಬರಿಪಟ್ಟರು. ಪೂಜಾ ಮಂದಿರದಿಂದ ಯಾರು ಹೊರಗೆ ಬಂದು 'ನೀವು ಪ್ರಸಾದ ನಿರಾಕರಿಸಿದಿರಿ ಹೀಗಾಯ್ತು, ಪ್ರಸಾದ ತೆಗೆದುಕೊಳ್ಳುವ ಬನ್ನಿರಿ. ಎಲ್ಲವೂ ಸರಿ ಹೋಗುತ್ತದೆ ಎಂದರು. ಅತಿಥಿಗಳು ಹಾಗೆ ಹೇಳಿದಾಗ ಆ ಬಾಲಿಕೆ ಛಟ್ಟನೆ ಮೇಲಕ್ಕೆ ಎದ್ದು ಅಪ್ಪನ ಪ್ರಸಾದ ಕೊಟ್ಟಳು.

ಅನಾವೃಷ್ಟಿಯಲ್ಲಿ ಮಳೆ :

ಗಂಗಾವತಿ ಪಕ್ಕದ ಮುಷ್ಟುರಲ್ಲಿ ಅನಾವೃಷ್ಟಿ ತಲೆದೋರಿತ್ತು, ಗೌಡರ ಮನೆಯಲ್ಲಿ ಶರಣರ ಪೂಜೆ ನಡೆದಿತ್ತು, ಅವರ ಮನೆಯಲ್ಲಿ ಸೆರಗು ಜೋಳ ಇದ್ದವು. ಅದನ್ನೇ ಸಂಗಟಿ

ಪ್ರಸಾದ ಮಾಡಿರೆಂದರು. ಆಗ ಶರಣರು 'ಮಳೆರಾಯ ನೀ ಮರತರ ಮಾನವರ ಮೂಕ ಪ್ರಾಣಿಗಳ ಗತಿಯೇನು?' ಎಂದು ಕೇಳಿದಾಗ, ಪ್ರಾರ್ಥಿಸಿದಾಗ ಧಾರಾಕಾರ ಮಳೆ ಆ ಅನಾವೃಷ್ಟಿಯಲ್ಲಿ ಸುರಿದು ಆಶ್ಚರ್ಯವನ್ನುಂಟು ಮಾಡಿತು.

ಅನಾವೃಷ್ಟಿಯ ಸಂಕೇತ :

ಬಳಗಾನೂರ ಭಕ್ತರ ಮನೆಯಲ್ಲಿ ಶರಣರು ಒಮ್ಮೆ ಪೂಜೆಗೆ ಕುಳಿತಿದ್ದರು. ಆಗ ಆ ಗ್ರಾಮದ ಅಕ್ಕನ ಬಳಗದ ಹೆಣ್ಣುಮಕ್ಕಳು 'ಎಪ್ಪಾ ಮಳಿ ಬೇಕಲ್ಲ ಎಂದು ಕೇಳಿದರು. ಆಗ ಶರಣರು ಥಟ್ಟನೆ ೨'' ಅಥವಾ ೩'' ಇಂಚಿನ ಮಳೆ ಎಂದರು. ಮಳೆ ಬಾರದಾದಾಗ ಇದು ಅನಾವೃಷ್ಟಿಯ ಸಂಕೇತ ಎಂದು ಕೊಂಡರು.

ಬ್ರಹ್ಮರಾಕ್ಷಸನ ಪಲಾಯನ :

ಬಳಗಾನೂರಿನಿಂದ ಶರಣರು ಒಮ್ಮೆ ಇಬ್ಬರು ಭಕ್ತರ ಜೊತೆ ಹೊರಟಿದ್ದರು. ಕುಕನೂರಿನಿಂದ ಇಬ್ಬರು ಜೊತೆಗೂಡಿ ಚಕ್ಕಡಿಯಲ್ಲಿ ಪ್ರಯಾಣ ಹೊರಟಿದ್ದರು. ನಡುದಾರಿಯಲ್ಲಿ ಬ್ರಹ್ಮರಾಕ್ಷಸನೊಬ್ಬ ಬಂದು ಹೆದರಿಸ ತೊಡಗಿದನು. ಗರ್ಜಿಸಿದನು. ಹೆದರಿದ ಅವರು ಶರಣರ ಭಕ್ತರಾಗಿದ್ದರು. ಶರಣಾ ಎಂದು ಸ್ಮರಿಸಿಕೊಂಡಾಗ ಅಲ್ಲಿ ಶರಣರ ದರ್ಶನವಾಯಿತು. ಅಲ್ಲಿಂದ ಆಗ ಬ್ರಹ್ಮರಾಕ್ಷಸ ಪಲಾಯನ ಮಾಡಿದನು.

ನಾಟಕ ಕಂಪನಿಗೆ ಜೀವದಾನ :

ಪುಟ್ಟರಾಜ ಗವಾಯಿಗಳ ನಾಟಕ ಕಂಪನಿ ಗಂಗಾವತಿಯಲ್ಲಿ ಕ್ಯಾಂಪ ಹಾಕಿತ್ತು ಪ್ರೇಕ್ಷಕರಿಲ್ಲದ್ದಕ್ಕೆ ಕಂಪನಿ ನಷ್ಟಕ್ಕೊಳಗಾಗಿತ್ತು ಆಗ ಶರಣರು ಒಮ್ಮೆಲೇ ಅಲ್ಲಿ ಆಗಮಿಸಿ, ಸ್ವತಃ ತಾವೇ ಟಿಕೇಟ್ ತೆಗೆಯಿಸಿ ಜೊತೆಗಿದ್ದ ಭಕ್ತರಿಗೂ ಟಿಕೇಟ್ ತೆಗೆದುಕೊಳ್ಳಲು ಹೇಳಿ ನಾಟಕ ನೋಡಲು ಕುಳಿತರು. ನಾಟಕದ ನಾಂದಿ ಪ್ರಾರಂಭವಾಗುವಷ್ಟರಲ್ಲಿ ಥೇಟರ ಜನರಿಂದ ತುಂಬಿ ತುಳುಕಿತು. ಅಲ್ಲಿ ಇಬ್ರಾಹಿಂ ಧನಿ ಎಂಬವರು ಶರಣರೂ ಕಂಪನಿಗೆ ಕಾಣಿಕೆ ನೀಡಿದರು. ಕಂಪನಿಗೆ ಅಲ್ಲಿರುವಷ್ಟು ದಿನ ತಗಲುವ ಅಕ್ಕಿ ಕೊಡಲು ಶ್ರೀ ಅರಳಿ ಅಮರಗುಂಡಪ್ಪನವರು ಒಪ್ಪಿಕೊಂಡರು.

ಬೆಂಕಿ ಮಳೆ :

'ಶಲವಡಿ ಗ್ರಾಮದ ಡಾಕ್ಟರರೊಬ್ಬರ ಮನೆಯಲ್ಲಿ ಶರಣರು ಪೂಜೆಗೆ ಕುಳಿತು ಕೊಂಡಿದ್ದರು. ಶರಣರು ಒಮ್ಮೆಲೇ ಬೆಂಕಿ ಮಳಿ ಬೆಂಕಿಮಳಿ' ಎಂದು ಹೊರಟುಬಿಟ್ಟರು. ಕೆಲ ಸಮಯದಲ್ಲಿ ಊರ ಬಣವಿಗಳಿಗೆ ಬೆಂಕಿ ಹೊತ್ತಿಕೊಂಡು ಉರಿ ಹತ್ತಿತು.

ಪ್ರಸಾದದ ತಾಟಿನಲ್ಲಿ ಕಲ್ಲುಸಕ್ಕರೆ :

ಯರೆಹಂಚಿನಾಳ ಗ್ರಾಮಕ್ಕೆ ಗುರುಗಳೊಂದಿಗೆ ಕಾಳುಕಡಿ ಭಿಕ್ಷೆಗೆ ಹೋಗಿದ್ದರು. ಭಕ್ತರೊಂದಿಗೆ ಶರಣರೂ ಪ್ರಸಾದಕ್ಕೆ ಕುಳಿತರು. ಪ್ರಸಾದ ಎಡೆ ಮಾಡುವ ಮೊದಲು ಕಲ್ಲುಸಕ್ಕರೆ ಹರಳು ತಾಟಿನಲ್ಲಿದ್ದವು. ಎಲ್ಲರಿಗೂ ಆಶ್ಚರ್ಯ.

ಪ್ರಸಾದ ಬಟ್ಟಲಲ್ಲಿ ಚೇಳು :

ಮರಿಯಮ್ಮನ ಹಳ್ಳಿಯಲ್ಲಿ ಗೌಡರ ಮನೆಯ ಬಿನ್ನ ಮುಗಿಸಿಕೊಂಡು ಜಗದ್ಗುರು ಮರಿಶಾಂತವೀರ ಶ್ರೀಗಳವರು ಮರಳಿದ್ದರು. ಅಷ್ಟರಲ್ಲಿ ಶರಣರು ಆಗಮಿಸಿದರು. ಸ್ನಾನ–ಪೂಜೆ ಮಾಡಿಕೊಂಡರು. 'ಎಪ್ಪಾ ಗವಿಸಿದ್ಧನ ಪ್ರಸಾದ' ಎಂದು ಮೂರುಬೆರಳಿಗೆ ಬಂದಷ್ಟು ಜೋಳದ ಉಪ್ಪಿಟ್ಟ ಎಡಿ ಮಾಡಿ ಸ್ವೀಕರಿಸಬೇಕೆನ್ನುವಷ್ಟರಲ್ಲಿ ಜಂತಿಯೊಳಗಿಂದ ಪ್ರಸಾದದ ಬಟ್ಟಲಲ್ಲಿ ಎರಡು ಕರಿಚೇಳು ಬಿದ್ದವು. ಶರಣರು ಪ್ರಸಾದ ಎಂದು ಆ ಚೇಳು ಸಹಿತ ತಿಂದುಬಿಟ್ಟರು. ನೀರು ಕುಡಿದರು. ಶರಣರಿಗೆ ಯಾವುದೇ ರೀತಿಯ ತೊಂದರೆ ಆಗಲಿಲ್ಲ. ಎಂದಿನಂತೆ ಹಾಡಿದರು. ಪ್ರವಚನ ಮಾಡಿದರು.

ಸಜ್ಜಲಗುಡ್ಡದ ಜ್ಯೋತಿ ನಂದಿತು :

ಹೊಸಪೇಟೆಯ ಭಕ್ತರ ಮನೆಯಲ್ಲಿ ಶರಣರು ಒಮ್ಮೆ ಪೂಜಾನುಷ್ಠಾನಕ್ಕೆ ಕುಳಿತಿದ್ದರು. ಶರಣರು ಎದ್ದು ಬಂದು ಕಣ್ಣೀರು ಸುರಿಸಹತ್ತಿದರು. ಯಾಕೆ ಶರಣರೇ ಎಂದು ಕೇಳಿದಾಗ. 'ಎಪ್ಪಾ ಸಜ್ಜಲಗುಡ್ಡದ ಅವ್ವಾ ಕೈ ಬಿಟ್ಟಳಪ್ಪ ಎಂದಾಗಲೇ ಎಲ್ಲರಿಗೂ ಅವ್ವ ಲಿಂಗೈಕ್ಯರಾದದ್ದು ತಿಳಿಯಿತು, ಎಲ್ಲರೂ ಅಲ್ಲಿಂದ ಅಂತ್ಯಯಾತ್ರೆಗೆ ಹೊರಟರು.

ಮರಿಶಾಂತವೀರ ಜ್ಯೋತಿ ನಂದಿತು :

ಡಾಕ್ಟರರೊಬ್ಬರ ಮನೆಯಲ್ಲಿ ಶರಣರು ಪೂಜೆಗೆ ಕುಳಿತರು ಆಗ ಮನೆಯ ಒಡತಿಗೆ ಎಪ್ಪಾ! ನಾ ಮಠಕ ಹೋಗ್ತೀನಿ, ಈ ಜ್ಯೋತಿ ನಂದಿತು ಅಂದ್ರs... ಅಪ್ಪಾ ಹೋದ್ರು ಅಂತ ತಿಳಿದು ನೀವೂ ಮಠಕ ಬನ್ನಿರಿ ಎಂದು ಹೇಳಿ ಹೋದರು. ಅವರು ಹೇಳಿದಂತೆ ಜ್ಯೋತಿ ನಂದಿದ ಕೂಡಲೇ ಮಠಕ್ಕೆ ಹೋದಾಗ ಅಲ್ಲಿ ಅಪ್ಪಗಳು ಲಿಂಗೈಕ್ಯರಾಗಿದ್ದರು.

ಶಿಲೆಯಲ್ಲಿ ಮಲ್ಲಯ್ಯ :

ಶರಣರು ಮುನಿರಾಬಾದದ ಭಕ್ತರ ಮನೆಯಲ್ಲಿ ವಸತಿ ಮಾಡಿದ್ದರು. ಬೆಳಿಗ್ಗೆ ಸ್ನಾನಕ್ಕೆಂದು ತುಂಗಾನದಿಗೆ ಹೋಗಿದ್ದರು. ಅಲ್ಲಿ ದೂರದಲ್ಲೊಂದು ಬಂಡೆಗಲ್ಲಿನ ಮೇಲೆ ನಾಗರಹಾವು ಎಡೆಯೆತ್ತಿ ಆಡುತ್ತಿತ್ತು. ಆ ಬಂಡೆಗಲ್ಲನ್ನು ಮಡಿಯಿಂದ ತಂದು ಬಳಗಾನೂರಿಗೆ ಒಯ್ಯಲು ಹೇಳಿದರು. ಅದು ಮಲ್ಲಯ್ಯ ಎಂದರು. ಅದನ್ನು ತೆಗೆದುಕೊಂಡು ಅಂದು ಒಬ್ಬರ ಮನೆಯಲ್ಲಿಟ್ಟು ಪೇಟೆಗೆ ಹೋದರು. ಆ ಮನೆಯ ಯಜಮಾನಿತಿಗೆ ಆ ಬಂಡೆಗಲ್ಲಿ

ನಲ್ಲಿ ಶರಣರ ದರ್ಶನವಾಯಿತಂತೆ. ಅಂದಿನಿಂದ ಈ ಮನೆತನದವರು ಶ್ರೀ ಚನ್ನವೀರ ಶರಣರ ಭಕ್ತರಾದರೆಂದೂ ತಿಳಿದುಬರುತ್ತದೆ.

ಕುರುಡನಿಗೆ ಕಣ್ಣು :

ರಾಂಪುರದ ಭಜನೆ ಹಾಡುಗಾರನೊಬ್ಬನಿಗೆ ಸಾಣಾಪುರಕ್ಕೆ ಶರಣರು ಬರಲು ಹೇಳಿದ್ದರು. ಆತನ ಕಣ್ಣು ಕುರುಡಾದುದರಿಂದ ಇನ್ನೊಬ್ಬರ ಜೊತೆ ಗೂಡಿ ಭಜನೆ ಮೇಳ ಕರೆದುಕೊಂಡು ಹೋದರಂತೆ. ಶರಣರ ದೃಷ್ಟಿ ಬಿದ್ದಾಗ ಆತನಿಗೆ ದೃಷ್ಟಿ ಬಂದು ಬೆಳತನಕ ಭಜನೆ ಮಾಡಿದನಂತೆ.

ಆರದ ಪ್ರಸಾದ :

ಹೊಂಬಳದಲ್ಲಿ ಭಜನಾ ಸಪ್ತಾಹ ನಡೆದಿತ್ತು. ಶಂಕರಲಿಂಗ ಭಜನಾ ಮೇಳದವರೂ ಭಾಗವಹಿಸಿದ್ದರು. ಆಗ ಶರಣರ ಆಗಮನವಾಯಿತು. ಅವರ ಜೊತೆಗೆ ಸತತ ಮೂರುದಿನಗಳವರೆಗೆ ಭಜನೆ ಮಾಡಿದರು. ನಾಲ್ಕನೇ ದಿನಕ್ಕೆ ಶರಣರು ಪ್ರಸಾದ ಸ್ವೀಕರಿಸಲು ಅಪ್ಪಣೆ ಕೊಟ್ಟರು. ಆಗ ಪ್ರಸಾದ ಸ್ವೀಕರಿಸಿ ದರೆ ಅದೇ ಆಗ ಮಾಡಿದಂತೆ ಪ್ರಸಾದ ಬಿಸಿ–ಬಿಸಿಯಿತ್ತಂತೆ. ಪ್ರಸಾದ ಸಿದ್ಧಪಡಿಸಿ ಮೂರು ದಿವಸಗಳಾಗಿದ್ದೂ ಅದು ಆರಿದ್ದಿರಲಿಲ್ಲವಂತೆ.

ಎಣ್ಣೆಯಿಲ್ಲದೆ ಜೀಪ ನಡೆಸಿದುದು :

ಶರಣರು ಒಮ್ಮೆ ಭಕ್ತರ ಜೀಪಿನಲ್ಲಿ ಚಿಕೇನಕೊಪ್ಪ ಮಠದ ಜೀರ್ಣೋದ್ಧಾರ ಕಟ್ಟಡ ಹೇಗೆ ನಡೆದಿದೆ ಎಂಬುದನ್ನು ನೋಡಿಕೊಂಡು ಬರಲು ಹೋಗಿದ್ದರು. ದಾರಿಯಲ್ಲಿ ಪೆಟ್ರೋಲ್ ತೀರಿ ಗಾಡಿ ನಿಂತು ಬಿಟ್ಟಿತು. ಆಗ ಶರಣರು ನೀರು ಹಾಕಿ ನಡೆಸಿದರು ಎಂದರು. ನೀರು ಹಾಕಿ ನಡೆಸಲು ಅದು ಗಂಗಾವತಿಯವರೆಗೂ ಮರಳಿ ಹೋಯಿತಂತೆ.

ಎಣ್ಣೆಯಿಲ್ಲದೆ ದೀಪ ಉರಿಯಿತು :

ಗದುಗಿನ ಭಕ್ತರ ಮನೆಯಲ್ಲಿ ಒಮ್ಮೆ ಶರಣರು ಬಹಳ ಹೊತ್ತು ಪೂಜೆಗೆ ಕುಳಿತು ಕೊಂಡರು. ಸಮೆಯಲ್ಲಿಯ ಎಣ್ಣೆ ತೀರಿದ್ದರಿಂದ ಮನೆಯ ಯಜಮಾನತಿ ಎಣ್ಣೆ ತರಲು ಏಳುವಾಗ, ತಾಯಿ ತಂಬಿಗೆಯಲ್ಲಿಯ ನೀರನ್ನೇ ಹಾಕು ಎಂದರು. ಶರಣರು ಹೇಳಿದಂತೆ ಮಾಡಲು ಎಣ್ಣೆ ಆ ನೀರಿನಿಂದಲೇ ಎಣ್ಣೆ ಹಾಕಿದರೆ ಉರಿಯುವಂತೆ ಉರಿಯುತ್ತಿತ್ತು.

ನಿಂತ ಬಸ್ಸನ್ನು ಮುಂದೆ ಓಡಿಸಿದ್ದು :

ಶರಣರಿಗೆ ಒಮ್ಮೆ ಮೈಸೂರಿನಿಂದ ಕಂಪ್ಲಿ ಮಾರ್ಗವಾಗಿ ಹಂಪಿಗೆ ಹೊರಟಿದ್ದರು. ಜೊತೆಗೆ ಭಜನೆ ಮೇಳದವರೂ ಇದ್ದರು. ಖಾಸಗಿ ಬಸ್ಸೊಂದು ಹಂಪಿಗೆ ಹೋಯಿತು. ಕೈ

ಬೀಸಿ ಕರೆದುಕೊಂಡು ಹೋಗಲು ವಿನಂತಿಸಿದರೂ ಡ್ರೈವ್ಹರ್ ಕೇಳೀ ಕೇಳಿಸಿದಂತೆ ಮುಂದೆ ಹೋದನು. ಕೆಲದಾರಿ ಹೋದ ಮೇಲೆ ಗಾಡಿ ಕೆಟ್ಟು ನಿಂತು ಬಿಟ್ಟಿತು. ಮೇಸ್ತ್ರಿ ಬಂದು ರಿಪೇರಿ ಮಾಡಿದರೂ ಅದು ದುರಸ್ತಿಯಾಗಲಿಲ್ಲ. ಮುಂದಿನ ಸಾಯಂಕಾಲದವರೆಗೂ ಅದು ನಿಂತಲ್ಲಿಯೇ ನಿಂತಿತು. ಶರಣ ಭಜನಾ ಮಂಡಳಿ ತಿರುಗಿ ಬಂದಿತು. ಡ್ರೈವ್ಹರ್ ಶರಣರಲ್ಲಿ ಕ್ಷಮೆ ಕೇಳಿಕೊಂಡನು. ಶರಣರು ದಯೆ ತೋರಿ ಗಾಡಿಗೆ ಬೆತ್ತ ರುದ್ರಾಕ್ಷಿ ಮುಟ್ಟಿಸಿ ಗವಿಸಿದ್ಧ ಶಂಭೋ ಎಂದರು. ಬಸ್ ಚಾಲೂ ಆಯ್ತು.

ಗುಗ್ಗಳ ಬೆಳಗಿಸಿದುದು :

ಬಳ್ಳಾರಿಯಲ್ಲಿ ಗೌಡರ ಹಿರಿತನದಲ್ಲಿ ಒಂದು ಶುಭಕಾರ್ಯ ಗುಗ್ಗಳ ಪ್ರಾರಂಭ ಮಾಡಬೇಕಾಗಿತ್ತು. ಅನಿರೀಕ್ಷಿತ ಗಾಳಿಯಿಂದಾಗಿ ನಂದುವ ಹಂತದಲ್ಲಿತ್ತು ಗೌಡರು ಶರಣರು ಎಂದು ಪ್ರಾರ್ಥಿಸಿದರು. ಬೇರೆಯವರ ಮನೆಯಲ್ಲಿದ್ದ ಶರಣಾ ಕೈಯಲ್ಲಿ ಕರ್ಪೂರ ಬೆಳಗಿಸಿ, ಹಾ! ಹಾ! ವೀರ ಎಂದಾಗ ಕರ್ಪೂರ ಬೆಳಗುವುದು (ಗುಗ್ಗಳ ಬೆಳಗಿಸುವುದು) ನಡೆದು ಹೋಗಿತ್ತು. ಮಲ್ಲಾಪೂರದಲ್ಲಿಯೂ ಇಂಥ ಘಟನೆ ಆಗಿತ್ತು.

ಮರುಮದುವೆಗೆ ಅಪ್ಪಣೆ :

ದುರ್ದೈದವದಿಂದ ಕಂಪ್ಲಿಯ ಇಬ್ಬರು ಡಾಕ್ಟರರು ಚಿಕ್ಕ ವಯಸ್ಸಿನಲ್ಲಿಯೇ ವಿದುರರಾದರು. ಶರಣರು ಅವರ ಬವಣೆಯನ್ನು ಅರಿತು ಮರುಮದುವೆ ಮಾಡಿಕೊಳ್ಳಲು ಆಶೀರ್ವದಿಸಿದರು. ಇದೇ ದಿಕ್ಕಿಗೆ ಹೋಗಿರಿ. ಈ ಹೆಸರಿನ ಕನ್ಯೆ ನಿಮಗೆ ಯೋಗ್ಯ. ಮುಂದೆ ಎಲ್ಲವೂ ಸರಿಹೋಗುತ್ತದೆಂದು ಹೇಳಿದಾಗ ಅವರು ಹೇಳಿದಂತಯೇ ಇಬ್ಬರೂ ಡಾಕ್ಟರರು ಲಗ್ನ ಮಾಡಿಕೊಂಡರು. ಇಬ್ಬರು ಚೆನ್ನಾಗಿ ಬಾಳುವೆ ಮಾಡುತ್ತಲಿರುವರು.

ವೈದ್ಯರ ವೈದ್ಯ :

ಶರಣರು ಬಳಗಾನೂರಿನಲ್ಲಿ ನೇತ್ರ ಶಿಬಿರ ಏರ್ಪಡಿಸಿದ್ದರು. ಚಿಕಿತ್ಸೆಗೊಳಗಾಗಿದ್ದ ಒಬ್ಬ ಬಾಲೆಗೆ ಮೂತ್ರ ಕಟ್ಟಿ ಬಹಳೇ ತೊಂದರೆಯಾಗಿತ್ತು. ವೈದ್ಯರು ಎಷ್ಟು ಪ್ರಯತ್ನಿಸಿದರೂ ಪ್ರಯೋಜನವಾಗಲಿಲ್ಲ. ಬಾಲಿಕೆ ಚಡಪಡಿಸಿದ್ದಳು. ಆಗ ಶರಣರು ಬಂದರು. ಪ್ರದಕ್ಷಿಣೆ ಹಾಕಿ ರುದ್ರಾಕ್ಷಿ ಸರವನ್ನು ತಲೆಯ ಮೇಲಿಟ್ಟಾಗ ಗುಣಮುಖವಾದಳು. ಎಲ್ಲರಂತೆ ಡಾಕ್ಟರರೂ ಆಶ್ಚರ್ಯಚಕಿತರಾದರು.

ತಲೆಬಾಗಿದ ಗೂಳಿ :

ಶರಣರು ಒಮ್ಮೆ ಗವಿಮಠದ ವಂತಿಗೆಗಾಗಿ ಜೀಪಿನಲ್ಲಿ ಬಕ್ಕಳಿಗ್ರಾಮಕ್ಕೆ ಹೊರಟಿದ್ದರು. ಆ ಊರಲ್ಲಿ ಒಂದು ಗೂಳಿ ಇತ್ತು. ಅದು ಕಾರು, ಜೀಪಗಳನ್ನು ಕಂಡರೆ ಓಡಿ ಬಂದು ಪುಡಿ ಪುಡಿ ಮಾಡುತ್ತಿತ್ತು. ಜೀಪ ಬರುವುದನ್ನು ಹೊಲದಲ್ಲಿ ಕೆಲಸ

ಮಾಡುವವರು ಓಡಿ ಬಂದು ಅಡ್ಡಗಟ್ಟಿದ್ದರು. ಅಲ್ಲಿಗೂಳಿ ಇದೆ. ತೊಂದರೆ ಕೊಡುತ್ತದೆ ಎಂದು ಎಚ್ಚರಿಕೆ ನೀಡಿದ್ದರು. ಶರಣರು ಧೈರ್ಯದಿಂದ ಮುಂದೆ ನಡೆ ಎಂದರು. ಜೀಪು ಸಾಗಿತು. ಸ್ವಲ್ಪ ದೂರ ಹೋದಾಗ ಗೂಳಿ ಢರರೆ ಹೊಡೆಯುತ್ತ ಜೀಪ ಮೇಲೆ ಬಂದಿತು. ಡ್ರೈವ್ಹರ ಗಾಬರಿಯಾಗಿ ಜೀಪು ನಿಲ್ಲಿಸಿ ಶರಣರು ಕೆಳಗೆ ಇಳಿದರು. 'ಯಪ್ಪಾ ! ನಾನೂ ಅಪ್ಪನ ಕೆಲಸಕ್ಕ ಬಂದವ ನೀನು ಸಹಕರಿಸಬೇಕಪ್ಪ' ಎಂದು ವಿನಯದಿಂದ ಕೇಳಿಕೊಂಡರು. ಮೂಕಪ್ರಾಣಿ ಶರಣರ ಮಾತಿಗೆ ಮೊಳಕಾಲೂರಿ ತಲೆಬಾಗಿ ನಮಿಸಿ ಹಿಂತಿರುಗಿ ಹೋಯಿತು. ಎಲ್ಲರಿಗೂ ಆಶ್ಚರ್ಯವಾಯಿತು.

ಬೇಡವೆಂದಿದ್ದ ಮದುವೆ :

ಬಳ್ಳಾರಿಯ ಮಹಿಳಾ ವೈದ್ಯರೊಬ್ಬರು ಮದುವೆ ಮಾಡಿಕೊಳ್ಳಲು ಅಪ್ಪಣೆ ಕೇಳಲು ಬಂದಾಗ ಶರಣರು ಬೇಡ, ರೋಗಿಗಳ ಸೇವೆಯಲ್ಲಿ ಮುಂದುವರಿಯಿರಿ ಎಂದು ಹೇಳಿದ್ದರು. ಅದನ್ನು ಲೆಕ್ಕಿಸದೆ ಅವರು ಮದುವೆಯಾದರು. ಸ್ವಲ್ಪ ದಿನಗಳಲ್ಲಿಯೇ ವಿವಾಹ ವಿಚ್ಛೇದನೆಯಾಯ್ತು. ಶರಣರ ಮಾತು ಮೀರಿದ್ದಕ್ಕೆ ನೊಂದುಕೊಂಡರು.

ಅವನ ಕೆಲಸ ಅವಗ, ನಮ್ಮ ಕೆಲಸ ನಮಗ :

ಪ್ರತಿವರುಷ, ಗದುಗಿನ ವೀರೇಶ್ವರ ಪುಣ್ಯಾಶ್ರಮದ ಪಂಚಾಕ್ಷರಿ ಗವಾಯಿಗಳ ಪುಣ್ಯತಿಥಿ ಕಾರ್ಯಕ್ರಮಕ್ಕೆ, ತಪ್ಪದೆ ಶರಣರು ಹಾಜರಾಗುತ್ತಿದ್ದರು. ವಿಪರೀತ ಮಳೆಯಿಂದಾಗಿ ಕರೆಂಟ ಕೈಕೊಟ್ಟಿತು. ಒಂದೇ ಗ್ಯಾಸ ಇತ್ತು. ಅದೇ ಬೆಳಕಿನಲ್ಲಿ ಕಾರ್ಯಕ್ರಮ ಪ್ರಾರಂಭಿಸುವವರಿದ್ದರು. ಹೂಂ ಶಂಭೋ ಕಾರ್ಯಕ್ರಮ ಚಾಲೂ ಮಾಡಿರಿ, ಅವನ ಕೆಲ್ಸ ಅವಗ, ನಮ್ಮ ಕೆಲ್ಸ ನಮಗ ಎಂದು ಜಯಘೋಷದೊಂದಿಗೆ ಕಾರ್ಯಕ್ರಮ ಪ್ರಾರಂಭಿಸಿದರು. ಕೂಡಲೇ ಕರೆಂಟ್ ಬಂದುಬಿಟ್ಟಿತು.

ತೂರ್ಯಾವಸ್ಥೆ :

ಕಂಪ್ಲಿ ಭಕ್ತರ ಮನೆಯಲ್ಲಿ ಶರಣರು ಲಿಂಗಪೂಜೆ ಮಾಡಿಕೊಳ್ಳುತ್ತಿದ್ದರು. ಆಗ ಶರಣರು ಪದ್ಮಾಸನದಲ್ಲಿಂದ ನಿಧಾನವಾಗಿ ಮೇಲೇಳಹತ್ತಿದರು. ತಾತನವರು ಎದ್ದುನಿಂತು ಬಿಲ್ವ ಧರಿಸಹತ್ತಿದರು. ಮತ್ತೆ ಶರಣರು ನಿಧಾನವಾಗಿ ಕೆಳಗಿಳಿಯುತ್ತಲಿದ್ದರು. ಇಂಥ ತೂರ್ಯಾವಸ್ಥೆಯ ಸ್ಥಿತಿಯನ್ನು ಹಲವಾರು ಬಾರಿ ಶರಣರು ಅನುಭವಿಸುತ್ತಿದ್ದರು.

ರಾಷ್ಟ್ರೀಯ ಸೇವಾ ಯೋಜನಾ ಶಿಬಿರ :

ಬಳಗಾನೂರಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಮಟ್ಟದ ಬೃಹತ್ ರಾಷ್ಟ್ರೀಯ ಸೇವಾ ಯೋಜನಾ ಶಿಬಿರ ನಡೆದಾಗ ಭಾರಿ ಮಳೆ ಬರುವ ಲಕ್ಷಣ ಕಾಣಿಸಿತು. ಆಗ ಶರಣರು ಮಳೆರಾಯನಿಗೆ 'ಯಪ್ಪಾ ನೋಡು ಮಕ್ಕಳ ಆಟಾನು ಎನ್ನಲು ಎರಡು– ಎರಡುವರೆ ಗಂಟೆ

ಎದುರಿನ ಹೊಲದಲ್ಲಿ ನೀರು ಹರಿತಾ ಇದ್ದರೂ ಇಲ್ಲಿ ಮಳೆ ನಿಂತದ್ದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿತು.

ಗದುಗಿನ ಶಿವಾನುಭವ ವೇದಿಕೆ :

ಡಾ. ಪುಟ್ಟರಾಜ ಗವಾಯಿಗಳ ಕೀರ್ತನ ನಡೆಯುವುದಿತ್ತು. ಮಳೆ ಪ್ರಾರಂಭವಾಯ್ತು. ಶರಣರು ವೇದಿಕೆಯ ಮೇಲೆ ಬಂದು ಕಂಬಳಿ ಮೇಲೆತ್ತಿ ಶಂಭೋ ಎಂದು ಗುಡುಗಿದರು. ಆಗ ಎರಡು ಗಂಟೆ ಮಳೆ ಬರಲಿಲ್ಲ, ತಡೆಯಿತು.

ನಾಗರಹಾವಿನ ವಿಷ :

ಒಮ್ಮೆ ಶರಣರು ಸಾಯಂಕಾಲ ಮುಷ್ಟೂರ ಗ್ರಾಮದ ಭತ್ತದ ಗದ್ದೆಯೊಳಗಿಂದ ಹಾಯ್ದು ಸಂಚಾರಕ್ಕೆ ಹೊರಟಿದ್ದರು. ಒಮ್ಮೆಲೆ ಭುಸುಗುಡುತ್ತ ನಾಗರಹಾವು ಬಂದು ಶರಣರನ್ನು ಕಚ್ಚಿತು. ಔಷಧೋಪಚಾರ ಮಾಡಿಸಿಕೊಳ್ಳಲು ಭಕ್ತರು ವಿನಂತಿಸಿಕೊಂಡರು. ಶರಣರು ಅದಕ್ಕೆ ಒಪ್ಪಲಿಲ್ಲ. ಊರ ಹೊರಗಿನ ಹಿರೇಮಠದ ಗದ್ದುಗೆಗೆ ಹೋಗಿ ಪ್ರದಕ್ಷಿಣೆ ಹಾಕತೊಡಗಿದರು. ಹೀಗೆಯೇ ಎರಡು ಘಂಟೆಕಾಲ ಸುತ್ತುವರಿದರು. ಆಗ ಅದೇ ಹಾವು ಅಲ್ಲಿಗೆ ಬಂದು ಗದ್ದುಗೆಗೆ ಹಣೆಕೊಟ್ಟು ಪ್ರಾಣಬಿಟ್ಟಿತಂತೆ. ಶರಣರಿಗೆ ವಿಷದ ಯಾವ ಬಾಧೆಯೂ ತಟ್ಟಲಿಲ್ಲ.

ವೀರಭದ್ರನ ಅವತಾರ :

ಹಿರೇಬಗನಾಳದಲ್ಲಿ ಒಮ್ಮೆ ವೀರಭದ್ರ ದೇವರ ಜಾತ್ರೆ ನಡೆದಿತ್ತು. ಅಗ್ನಿಕುಂಡ ಧಗಧಗಿಸುತ್ತಿತ್ತು. ಪುರವಂತರು ಆರ್ಭಟದಿಂದ ಒಡಪು ಹೇಳುತ್ತಿದ್ದರು. ಕರಡಿ ಮಜಲು ವಾದನದೊಂದಿಗೆ ಶರಣರು ಕುಣಿದದ್ದೇ ಕುಣಿದದ್ದು.

ಜಂತ್ಲಿ ಶಿರೂರದಲ್ಲಿ ಅಲೆದೇವರ ಹೊರಡಿಸುವಲ್ಲಿ ತಡವಾದಾಗ ಶರಣರು ಅಗ್ನಿಯಲ್ಲಿ ಜಿಗಿದೇ ಬಿಟ್ಟರು.

ಒಮ್ಮೆ ಶರಣರು ಬಳ್ಳಾರಿಯ ಶಿವಾಚಾರ್ಯರ ಮನೆಯಲ್ಲಿ ಪೂಜೆಗೆ ಕುಳಿತಿದ್ದರು. ಕಾಫಿ ಸೇವಿಸುವವರಿದ್ದರು. ಅಷ್ಟರಲ್ಲಿ ಒಬ್ಬ ತಾಯಿ ಮೈಲಿಗೆಯಿಂದ ಒಳಪ್ರವೇಶಿಸಿದಳು. ತಾಯಿಗೆ ಏನೂ ಅನ್ನದೇ ಶರಣರು ತಮ್ಮನ್ನು ತಾವೇ ಶಿಕ್ಷಿಸಿಕೊಂಡರು.

ಪ್ರಾಣಿದಯೆ :

ಶರಣರು ದಾಟಿ ಹೋಗುವಾಗ ದಾರಿಯಲ್ಲಿ ಒಂದು ನಾಯಿ ಸತ್ತುಬಿದ್ದಿತು. ಆಗ ಶರಣರು ಎಪ್ಪಾ! 'ಏಳು ಇನ್ನೂ ನಿನ್ನ ಸೇವಾ ಸಲ್ಲಬೇಕಾಗೈತಿ' ಎಂದು ಬೆತ್ತ ಮುಟ್ಟಿಸಲು ನಾಯಿ ಥಟ್ಟನೆ ಎದ್ದು ಬಾಲ ಅಲ್ಲಾಡಿಸುತ್ತ ಹತ್ತಿತ್ತು.

ಕಳ್ಳರಿಗೆ ಚೇಳು ಕಡಿದದ್ದು :

ಬಳಗಾನೂರಿನಲ್ಲಿ ನೇತ್ರ ಶಿಬಿರವೊಂದು ನಡೆದಿತ್ತು. ರೋಗಿಗಳಿಗೆ ಬಾಳೆಗೊನೆ ತರಿಸಿಟ್ಟಿದ್ದರು. ಭಕ್ತನೊಬ್ಬ ಹಣ್ಣೊಂದನ್ನು ಕಿತ್ತು ತಿನ್ನುವಾಗ ಅಲ್ಲಿ ಚೇಳು ಕಾಣಿಸಿಕೊಂಡಿತು. ತೋಳೇರಿ ಕಡಿದೇ ಬಿಟ್ಟಿತು. ತುಡುಗುತನಕ್ಕೆ ತಕ್ಕ ಶಿಕ್ಷೆಯಾಯ್ತು.

ಅಹಂಕಾರದ ದುಷ್ಪರಿಣಾಮ :

ಸಾಣಾಪುರದ ಸ್ಥಿತಿವಂತರೊಬ್ಬರು ಸಂಘಟನಾ ಚತುರರೂ ಇದ್ದರು. ವೀರಭದ್ರ ದೇವರಿಗೆ ರುದ್ರಾಕ್ಷಿ ಕಿರೀಟ ಮಾಡಿಸಿ, ಮಹಾಪ್ರಸಾದದ ಹೊಣೆ ಹೊತ್ತಿದ್ದರು. ಮಾಡಿದೆನೆಂಬ ಅಹಂಕಾರಿಕೆಯಿಂದ ಬೀಗುತ್ತಿದ್ದರು. ಮಧ್ಯಪಾನ ಮಾಡಿ ಶರಣರ ಹತ್ತಿರ ಹಾದು ನೋಡಿಯೂ ನೋಡದವರಂತೆ ಹೋದರು. ಆಗ ಶರಣರು ಇಂದು ಎರಡು ತೇರು ಜಗ್ಗುತ್ತವೆ ಎಂದರು. ಇತ್ತ ಶರಣರು ಒಳಗೆ ಸ್ನಾನಕ್ಕೆ ಹೋದರು. ಅತ್ತ ಆ ಅಹಮಿಕೆಯ ಮನುಷ್ಯ ಸತ್ತುಬಿದ್ದಿದ್ದ. ಮೊದಲು ಆತನ ತೇರು ಹೋಯಿತು. (ಅಂತ್ಯಕ್ರಿಯೆ) ತರುವಾಯ ಊರ ವೀರಭದ್ರನ ತೇರು ಎಳಿಯಿತು.

ಬಸವ ರೂಪದಲ್ಲಿ ಶರಣರು :

ಸಾಣಾಪೂರ ಗ್ರಾಮದ ಪುರಾಣ ಮಂಗಲಕ್ಕೆ ಶರಣರು ಹೋಗುವವರಿದ್ದರು. ವಿಜೃಂಭಣೆಯಿಂದ ಮಂಗಲೋತ್ಸವ ನಡೆಸಿದ್ದರು. ಆದರೆ ಶರಣರು ಬರಲಿಲ್ಲ ಎಂದು ಹಳಹಳಿಸಿದರು. ವೀರಭದ್ರದೇವರ ಗುಡಿಯಿಂದ ಮೆರವಣಿಗೆ ಹೊರಟಿತು. ಎಲ್ಲಿಂದಲೋ ಬಂದ 'ಬಸವ' ಮೆರವಣಿಗೆ ಯುದ್ದಕ್ಕೂ ಪಾಲ್ಗೊಂಡ. ಈ ಬಸವನೇ ಶರಣರೆಂಬುದು ಮರುದಿನ ಶರಣರ ಬಾಯಿಂದ ಕೇಳಿದಾಗಲೇ ಗೊತ್ತಾದದ್ದು.

ವಚನ ತಪ್ಪಿ ಹೋದದ್ದಕ್ಕೆ ಪಶ್ಚಾತ್ತಾಪ :

ಕೊಪ್ಪಳದ ಲಾರಿ ಹಾಗೂ ಬಸ್ ಚಾಲಕರೊಬ್ಬರನ್ನು ಶರಣರು ಕಂಡು ಒಂದು ದಿನದ ಆದಾಯವನ್ನು ಗವಿಮಠಕ್ಕೆ ಕೊಡಲು ಕೇಳಿದ್ದರು. ಒಪ್ಪಿಕೊಂಡು ಕಾರಣಾಂತರ ಗಳಿಂದ ಮುಟ್ಟಿಸದಾದಾಗ ವ್ಯಾಪಾರದಲ್ಲಿ ಹಿನ್ನಡೆಯಾಗತೊಡಗಿತು. ಪಶ್ಚಾತ್ತಾಪಪಟ್ಟು ಕೊಂಡು ಕೂಡಲೇ ಶರಣರ ಮಾತು ನಡೆಸಿಕೊಟ್ಟಂದಿನಿಂದ ಮತ್ತೆ ವ್ಯಾಪಾರದಲ್ಲಿ ಪ್ರಗತಿ ಸಾಧಿಸಿದರು. ಅವರು ಇಂದಿಗೂ ಶರಣರ ಹಾಗೂ ಗವಿಸಿದ್ಧೇಶ್ವರರ ಸೇವೆ ಮಾಡುತ್ತಲಿರುವರು.

ಮಲ್ಲಮ್ಮನ ಓದು-ಬರಹ :

ಕುಸುಗಲ್ಲಿನ ಮಲ್ಲಮ್ಮ ಶಾಲೆಗೆ ಹೋದವಳಲ್ಲ. ಆದರೆ ಶರಣರ ಸೇವೆಯನ್ನು ನಿಷ್ಠೆಯಿಂದ ಮಾಡುತ್ತಿದ್ದಳು. ತಂದೆಗೆ ಮಗಳನ್ನು ಓದಿಸಲಿಲ್ಲವೆಂಬ ಕೊರಗು ಇತ್ತು.

ಶರಣರು ಒಮ್ಮೆ ಮಲ್ಲಮ್ಮನನ್ನು ಕರೆದು ಮಡಿಯಿಂದ ಅಪ್ಪನ ಎದುರಿಗೆ ಕುಳಿತು ಓದು ಎಂದರು. ಎಲ್ಲರಿಗೂ ಆಶ್ಚರ್ಯ ಅವಳು ಶಾಲೆಗೆ ಹೋಗಿಯೆ ಇಲ್ಲ, ಅದು ಹೇಗೆ ಓದಬೇಕು ಎಂದುಕೊಂಡರು. ಶರಣರ ಅಪ್ಪಣೆಯೆಂದು ಮಲ್ಲಮ್ಮ ಸ್ನಾನ ಮಾಡಿ ವಿಭೂತಿ ಧರಿಸಿ ಅಪ್ಪನ ಮುಂದೆ ಓದಲು ಕುಳಿತಳು. ಓದಲು ಪ್ರಾರಂಭಿಸಿಯೆ ಬಿಟ್ಟಳಂತೆ. ಅವಳು ಈಗಲೂ ಓದುತ್ತಾಳೆ, ಪ್ರವಚನ ಮಾಡುತ್ತಾಳೆಂದೂ ಹೇಳುವರು.

ಗೊಡ್ಡೆಮ್ಮೆ ಹಿಂಡಿದುದು :

ಜಂತ್ಲಿ ಶಿರೂರ ಗ್ರಾಮದ ಭಕ್ತರೊಬ್ಬರ ಮನೆಯಲ್ಲಿ ಶರಣರು ಇತರ ರೊಂದಿಗೆ ಕುಳಿತುಕೊಂಡಿದ್ದರು. ಮನೆಯ ಯಜಮಾನತಿ ಹಾಲು ಹಿಂಡಿ ತರಲೆಂದು ಪಾರಾಗಿ ದಾಟಿ ಹೋದಳು. ಅದನ್ನು ಕಂಡ ಶರಣರು 'ಯವ್ವಾ! ಬಾ ಇಲ್ಲಿ ಯಾಕ ಹೋಗಾಕ ಹತ್ತಿದಿ ನನಗ ಗೊತ್ತು ಗವಿಸಿದ್ಧನ್ನ ನೆನಿಸಿ ಹಿಂಡು, ಅಮ್ಮ ಕರೀತಾಳ' ಎಂದರು. ಏಳು ತಿಂಗಳ ಗರ್ಭಿಣಿಯಿದ್ದ ಎಮ್ಮೆ ತಂಗಿಗೆ ಹಾಲು ಕೊಟ್ಟಿತು.

ಸಂತಾನ ಫಲ :

ಅರುಣಸಿ ಗ್ರಾಮದ ಗೌಡರು ಶರಣರ ಭಕ್ತರಾಗಿದ್ದರು. ಅವರಿಗೆ ಸಂತಾನವಿರಲಿಲ್ಲ. ಒಮ್ಮೆ ಪುರಾಣ ಮಂಗಲ ಮಾಡುವಾಗ ವರ್ಷದಲ್ಲಿ ನಿಮಗೆ ಗಂಡು ಮಗ ಎಂದು ಆಶೀರ್ವದಿಸಿ ಜಾಹೀರಪಡಿಸಿದರು. ಅವರ ಆಶೀರ್ವಾದ ಹುಸಿ ಹೋಗಲಿಲ್ಲ. ವರ್ಷ ತುಂಬುವದರೊಳಗಾಗಿ ಅವರಿಗೆ ಗಂಡು ಮಗು ಜನಿಸಿತು. ಇಬ್ಬರು ವೃದ್ಧ ಪತ್ನಿಯರಿಗೆ ಗರ್ಭದೋಷದಿಂದ ಸಂತಾನಫಲ ಇಲ್ಲವೆಂದಿದ್ದರು. ಆದರೆ ಶರಣರ ಕೃಪೆಯಿಂದ ಆ ಇಬ್ಬರಿಗೂ ಮಕ್ಕಳಾದದ್ದು ವಿಜ್ಞಾನವನ್ನು ಸೋಲಿಸಿದಂತಾಯ್ತು.

ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದುದು :

ಹೊಸಪೇಟೆಯಿಂದ ಗದುಗಿಗೆ ಶರಣರು ಕಾರಿನಲ್ಲಿ ಒಂದು ವಿವಾಹ ಸಮಾರಂಭಕ್ಕೆ ಹೊರಟಿದ್ದರು. ಇನ್ನೂ ಅರ್ಧ ತಾಸಿನ ದಾರಿಯಿದ್ದಾಗ ಕಾರನ್ನು ನಿಲ್ಲಿಸಲು ಹೇಳಿ ಹಿಂದಕ್ಕೆ ಚಿಕೇನಕೊಪ್ಪಕ್ಕೆ ನಡೆಯಿರಿ ಎಂದರು. ಯಾಕೆ ಎಂದು ಯಾರಿಗೂ ತಿಳಿಯಲಿಲ್ಲ. ಚಿಕೇನಕೊಪ್ಪ ಅಗಸಿಗೆ ಕಾರು ಬಂದಿತು. ಅಷ್ಟರಲ್ಲಿ ಆ ಗ್ರಾಮದ ವಯೋವೃದ್ಧ ತಾಯಿಯ ಶವ ಹೊರಟಿತ್ತು. ಕಾರಿನಿಂದ ಶರಣರು ಇಳಿದು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ ಸ್ನಾನಮಾಡಿ ತತ್ಕ್ಷಣ ಗದುಗಿಗೆ ಕಾರಿನಲ್ಲಿ ಮತ್ತೆ ಹೊರಟರು. ಅಕ್ಷತೆ ಸಮಯಕ್ಕೆ ಶರಣರು ಅಲ್ಲಿ ಹಾಜರಿದ್ದರು.

ಶರಣರ ಅದ್ಭುತ ಶಕ್ತಿ :

ಶರಣರು ಒಮ್ಮೆ ಭಕ್ತರೊಂದಿಗೆ ಜೋಧಪುರಕ್ಕೆ ಹೋಗಿದ್ದರು. ಭಕ್ತರ ಮಾರುತಿ ಕಾರಿನಲ್ಲಿ ಶರಣರ ಅಮೃತ ಶಿಲಾಮೂರ್ತಿ ತೆಗೆದುಕೊಂಡು ಸು. ೫೦೦೦ ಕಿಲೋಮೀಟರ

ದೂರದ ಪ್ರವಾಸ ಮಾಡಿ ಗದುಗಿಗೆ ಬಂದರು. ಮನೆಯ ಮುಂದೆ ಬಂದು ಗಾಡಿ ನಿಂತಾಗ ಮೇಲೆ ಕಾರಿನ ನಾಲ್ಕೂ ಟೈರ ಗಳೂ ಪಂಚೇರ ಆದವು. ದಾರಿಯಲ್ಲಿ ಯಾವ ತೊಂದರೆಯೂ ಆಗಲಿಲ್ಲದ್ದು ಶರಣರ ಅದ್ಭುತ ಶಕ್ತಿಯೆಂದರು.

ಕುರ್ಚಿ ದೊಡ್ಡದಾಗುವುದು :

ಗಂಗಾವತಿಗೆ ಬಂದಾಗ ಶರಣರು ಭಕ್ತರೊಬ್ಬರಿಗೆ ಆಶೀರ್ವಾದ ಮಾಡಿ ನಿನ್ನ ಕುರ್ಚಿ ದೊಡ್ಡದಾಗುವುದು ಮತ್ತುಗಂಡು ಮಗುವಾಗುವುದು ಎಂದು ಆಶೀರ್ವದಿಸಿದ್ದರು. ಆ ಪ್ರಕಾರ ಅವರಿಗೆ ಗಂಡು ಮಗುವಾಯಿತಲ್ಲದೆ ಅವರು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳೂ ಆದದ್ದನ್ನು ಅವರ ಬಾಯಿಂದಲೇ ಕೇಳಿಬರುವದಾಗಿದೆ.

ರೊಟ್ಟಿಕಾಫಿ ಪ್ರಸಾದ :

ಒಮ್ಮೆ ಶ್ರೀ ಚನ್ನವೀರ ಶರಣರು ಯಲಬುರ್ಗಾದ ಭಕ್ತರ ಮನೆಗೆ ಹೋಗಿದ್ದರು. ಶರಣರು ಬಂದುದನ್ನು ಕೇಳಿ ಹಲವಾರು ಜನರು ದರ್ಶನಕ್ಕೆ ಬಂದು 'ಎಪ್ಪಾ' ಎಲ್ಲರಿಗೂ ರೊಟ್ಟಿ, ಕಾಫಿ ಪ್ರಸಾದ ಕೊಡಿರಿ ಎಂದರು ಶರಣರು ಒಂದೆ ರೊಟ್ಟಿ–ಪಲ್ಲೆ ಕಾಫಿ ಕೊಡುತ್ತಾ ಹೋದರಂತೆ ಎಲ್ಲರ ಊಟ ಮುಗಿದರೂ ಕೊಟ್ಟ ಪಲ್ಲೆ ಮುಗಿದಿರಲಿಲ್ಲವಂತೆ. ಶರಣರ ಮಹಿಮೆಯೆಂದು ಸಂತೋಷಪಟ್ಟರು.

ಬದುಕಿ ಉಳಿದದ್ದು :

ಒಮ್ಮೆ ಒಬ್ಬ ಯಜಮಾನರು ಹೃದಯ ಬೇನೆಯಿಂದ ಬಳಲುತ್ತಿದ್ದರು. ಅವರನ್ನು ವೈದ್ಯರು ತತ್ಕ್ಷಣ ಹಾಸ್ಪಿಟಲಕ್ಕೆ ಸೇರಿಸಲು ಹೇಳಿದ್ದರು. ಆಗ ಅವರ ಮನೆಗೆ ಬಂದ ಶರಣರು ಇಲ್ಲಿಯೆ ಇರಲಿ, ಒಯ್ಯಬೇಡಿರೆಂದರು. ಬಹುಶಃ ರೋಗ ಗುಣಮುಖವಾಗಲಿಕ್ಕಿಲ್ಲ ಮನೆಯಲ್ಲಿಯೇ ಸಾಯಲಿ ಎಂದು ಶರಣರು ಹೇಳಿರಬೇಕೆಂದದು ಅವರನ್ನು ಹಾಸ್ಪಿಟಲಕ್ಕೆ ಒಯ್ಯದೇ ಮನೆ ಯಲ್ಲಿಯೇ ಬಿಟ್ಟರಂತೆ, ಆದರೆ ಆ ಯಜಮಾನರು ರೋಗಮುಕ್ತರಾಗಿ, ಯಾವ ಔಷಧಿಯು ಇಲ್ಲ, ಶರಣರ ಕೃಪಾದೃಷ್ಟಿಯಿಂದ ಈಗಲೂ ಬದುಕಿ ಉಳಿದಿರುವುದನ್ನು ಜನ ಹೇಳುತ್ತಿರುತ್ತಾರೆ.

■■

ಮಹಾಲಿಂಗಪುರದ

ಲಿಂ. ಚನ್ನವೀರ ಶಿವಯೋಗಿಗಳು

"ಶಿವಯೋಗಿಯು ಸುಳಿದ ಸುಳುಹು ಜಗತ್ಪಾವನ,
ಮೆಟ್ಟಿದ ಧರೆಯೆಲ್ಲ ಪವಿತ್ರ,
ನಿಮಿಷಾರ್ಧವಿದ್ದ ಸ್ಥಲವೆಲ್ಲ ಅವಿಮುಕ್ತ ಕ್ಷೇತ್ರ,
ಹೊಕ್ಕ ಜಲವೆಲ್ಲ ಪುಣ್ಯ ತೀರ್ಥ,
ಏರಿದ ಬೆಟ್ಟವೆಲ್ಲ ಶಿವಪಾರ್ವತಿ,
ಕೃಪೆಯಿಂದ ನೋಡಿದ ಜನರೆಲ್ಲ ಸಾಲೋಕ್ಯರು
ಒಡನೆ ಸಂಭಾಷಿಸಿದವರೆಲ್ಲ ಸದ್ಯೋನ್ಮುಕ್ತರು
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ."

ಎಂದು ಹಾಡಿರುವ ಎಡೆಯೂರು ಸಿದ್ಧಲಿಂಗೇಶ್ವರರ ವಚನದಂತೆ ಮಹಾಲಿಂಗಪುರದ ಪೂಜ್ಯ ಲಿಂ. ಚನ್ನವೀರ ಶಿವಯೋಗಿಗಳು ಮೆಟ್ಟಿದ ಧರೆ, ಹೊಕ್ಕ ಜಲ, ಪುಣ್ಯ ಸ್ಥಲ, ತೀರ್ಥಂಗಳಾಗಿರುವವು. ಅವರ ಆಶೀರ್ವಾದ ಪಡೆದ ವರೆಲ್ಲರೂ ಪುನೀತರಾಗಿರುವರು. ಸಂಭಾಷಿಸಿದ ಭಕ್ತರೆಲ್ಲರೂ ಸದ್ಯೋನ್ಮುಕ್ತ ರಾಗಿರುವರು.

ಶ್ರೀ ಚನ್ನವೀರ ಶಿವಯೋಗಿಗಳು ಬಾಳಿ ಬೆಳಗಿದುದು ಜಮಖಂಡಿ ತಾಲೂಕಿನ ಮಹಾಲಿಂಗಪುರದಲ್ಲಿ, ಮಹಾಲಿಂಗಪುರವು ನೇಕಾರಿಕೆ, ಒಕ್ಕಲುತನ ಹಾಗೂ ವಾಣಿಜ್ಯೋದ್ದಿಮೆಗೆ ಹೆಸರುವಾಸಿಯಾಗಿರುವುದು. ಸಮೀಪದಲ್ಲಿಯೇ ಸಕ್ಕರೆ ಕಾರಖಾನೆ ಇರುವುದು. ಕಬ್ಬು ಬೆಳೆಯುವ ಫಲವತ್ತಾದ ಪ್ರದೇಶ ಇದಾಗಿರುವುದರಿಂದ ಬೆಲ್ಲದ ವ್ಯಾಪಾರಕ್ಕೂ ಪ್ರಸಿದ್ಧಿ ಪಡೆದುದಾಗಿದೆ. ಈ ಮಹಾಲಿಂಗಪುರವು ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನಲ್ಲಿರುವ ಒಂದು ದೊಡ್ಡ ಗ್ರಾಮವಾಗಿರುವುದು. ಇದು ಚನ್ನವೀರ ಮಹಾಲಿಂಗೇಶ್ವರ ಮೊದಲಾದ ಶಿವಯೋಗಿಗಳ ಪುಣ್ಯ ತಾಣವೂ ಆಗಿರುವುದು.

ಮಹಾಲಿಂಗಪುರದ ಶ್ರೀ ಚನ್ನವೀರ ಶಿವಯೋಗಿಗಳು ಅಲ್ಲಯ್ಯನವರ ಸುಪುತ್ರರು. ಇವರು ತಾಯಿಯ ತವರು ಮನೆ ಮಳಲಿ ಗ್ರಾಮದಲ್ಲಿ ಕ್ರಿ.ಶ. ಸುಮಾರು ೧೯೦೧ರಲ್ಲಿ ಜನಿಸಿದವರಾಗಿದ್ದಾರೆ. ಸುಸಂಸ್ಕೃತ ಮನೆತನದ ಸತ್ಪುತ್ರರಾದ ಶ್ರೀ ಚನ್ನವೀರರು ಬಾಲ್ಯದಲ್ಲಿ ಒಳ್ಳೆಯ ಪರಿಸರದಲ್ಲಿ ಬೆಳೆದು ಬಂದರು. ಶಾಲೆಗೆ ಹೋಗತೊಡಗಿದರು. ಓರಿಗೆಯ ಸ್ನೇಹಿತರೊಂದಿಗೆ, ಅಧ್ಯಾತ್ಮದ ಪರಿಸರದಲ್ಲಿ ಬೆಳೆದು ಬಂದರು. ಇವರಿಗೆ ತೇರದಾಳದ ಪಟ್ಟದ್ದೇವರಿಂದ ಅಯ್ಯಾಚಾರದ ದೀಕ್ಷೆಯಾಗಿತ್ತು. ಇವರ ತಂದೆ ಅಲ್ಲಯ್ಯನವರು ಮಹಾಲಿಂಗಪುರದ ಶಿರೋಳ ಎಂಬವರು ಸ್ಥಾಪಿಸಿದ್ದ ಮುಂಬೈ ಅಡತಿ ಅಂಗಡಿಯಲ್ಲಿ ನವಕರಿ ಮಾಡುತ್ತಲಿದ್ದರು. ಅಲ್ಲಿ ಧಾರಣಿಯ ಏರಿಳಿತದಿಂದಾಗಿ ಶಿರೋಳ ಅವರ ಅಂಗಡಿಗೆ ನಷ್ಟವಾಯಿತು. ಇದರಿಂದ ಅಲ್ಲಯ್ಯನವರು ನವಕರಿ ಬಿಡುವ ಪ್ರಸಂಗ ಬಂದೊದಗಿತು. ಶಿರೋಳರು ಅಲ್ಲಯ್ಯನವರಿಗೆ ಮಹಾಲಿಂಗಪುರದಲ್ಲಿದ್ದ ತಮ್ಮ ಅಂಗಡಿ ವ್ಯವಹಾರ ನೋಡಿಕೊಳ್ಳಲು ಹೇಳಿದರು. ಒಂದು ವರುಷದ ತರುವಾಯ ಅದೂ ನಿಂತು ಬಿಟ್ಟಿತು.

ಶ್ರೀ ಅಲ್ಲಯ್ಯನವರು ಮತ್ತು ಅವರ ಹೆಂಡತಿ ನೀಲಮ್ಮ ದಂಪತಿಗಳಿಗೆ ಮಹಾಲಿಂಗಯ್ಯ, ಚನ್ನಗಿರಿ, ಮಲಕಾಜಯ್ಯ, ಈರಯ್ಯಾ, ಶ್ರೀಶೈಲಯ್ಯ, ದೊಡ್ಡಪ್ಪ, ಚನ್ನವ್ವ ಹೀಗೆ ಏಳು ಜನ ಮಕ್ಕಳಿದ್ದರು. ಇವರಲ್ಲಿ ಎರಡನೆಯವರಾದ ಚನ್ನಗಿರಿಯವರೇ ಈ ಚನ್ನವೀರ ಶಿವಯೋಗಿಗಳು. ತಂದೆಯು ನವಕರಿ ಬಿಟ್ಟ ಬಳಿಕ ಹಿರಿಯ ಮಗ ಮಹಾಲಿಂಗಯ್ಯ ನವಕರಿ ಮಾಡತೊಡಗಿದರು. ಮನೆಯ ಕಡೆಗೆ ಅಷ್ಟು ಕಾಳಜಿ ವಹಿಸದ್ದರಿಂದ ನಿರ್ವಾಹವಿಲ್ಲದೆ ಶ್ರೀ ಅಲ್ಲಯ್ಯನವರು ೨ನೇ ಮಗ ಚನ್ನಗಿರಿ ಅವರನ್ನು ನವಕರಿಗೆ ಕಳಿಸಬೇಕಾಯಿತು.

ಶ್ರೀ ಚನ್ನಗಿರಿ ಅವರು ನಾಲ್ಕನೆ ಈಯತ್ತೆಯಲ್ಲಿ ಓದುತ್ತಿದ್ದರು. ಎಳೆಯ ವಯಸ್ಸು, ವಿದ್ಯಾಭ್ಯಾಸ ಅಷ್ಟೇ ಸಾಕೆಂದು ಶಾಲೆ ಬಿಡಿಸಿ, ನವಕರಿಗೆ ಹಚ್ಚಿದರು. ಒಂದು ವರುಷಕ್ಕೆ ಒಂದು ನೂರು ರೂಪಾಯಿ ಪಗಾರದ ಮೇಲೆ ದುಡಿಯತೊಡಗಿದರು. ಇದು ಸಾಲದೆಂದು ಚನ್ನಗಿರಿ ಅವರು ಬಿಡುವಿನ ವೇಳೆಯಲ್ಲಿ ಹಾಳು ಹರಟೆ ಹೊಡೆಯದೆ ನೇಯ್ಗೆಯ ಕೆಲಸ ಕಲಿತುಕೊಂಡರು. ನೇಯ್ಯುವ ಕೆಲಸವನ್ನು ಮಾಡತೊಡಗಿದರು.

ಒಮ್ಮೆ ಅಲ್ಲಯ್ಯನವರ ಮನೆಗೆ ಬಿಳ್ಳೂರಿನ ಪೂಜ್ಯ ಶ್ರೀ ಬಸವಲಿಂಗ ಮಹಾಸ್ವಾಮಿಗಳು ದಯಮಾಡಿಸಿದ್ದರು. ಇವರು ಅಥಣಿಯ ಮುರುಘೇಂದ್ರ ಶಿವಯೋಗಿಗಳವರ ಸಮಕಾಲೀನರಾಗಿದ್ದರು. ಅವರ ಸೇವೆ ಮಾಡುತ್ತಿದ್ದ ಬಾಲಕ ಚನ್ನಗಿರಿ ಅವರನ್ನು ಕಂಡು ಶ್ರೀಗಳವರು 'ಈತನು ಮಹಾತಪಸ್ವಿ' ಎನಿಸುತ್ತಾನೆ. ಎಂದು ಉದ್ಗಾರ ತೆಗೆದರು. ಪುರಾಣ, ಕೀರ್ತನ ಕೇಳುವ ಅಭ್ಯಾಸ ಇಟ್ಟುಕೊಂಡಿದ್ದರು. ಸಾಯುವ ಮುನ್ನ ತಂದೆಯವರಿಗೆ, ತಮ್ಮಂದಿರನ್ನು ಓದಿಸುವೆ ಎಂದು ಮಾತನ್ನೂ ಕೊಟ್ಟಿದ್ದರು. ಪಾದ ಮುಟ್ಟಿ ನಮಸ್ಕಾರ ಮಾಡಿದಾಗ ಇವರ ತಂದೆ ಅಲ್ಲಯ್ಯ ಪ್ರಾಣ ಬಿಟ್ಟರು.

ತಂದೆ ತೀರಿಕೊಂಡರು, ಅಣ್ಣ ಮಹಾಲಿಂಗಯ್ಯ ಮನೆಯ ಜವಾಬ್ದಾರಿ ಯಿಂದ ಜಾರಿಕೊಂಡಿದ್ದರು. ಹೀಗಾಗಿ ಚನ್ನಗಿರಿ ಅವರ ಮೇಲೆಯೇ ಮನೆತನದ ಜವಾಬ್ದಾರಿ ಬಿದ್ದು ಬಿಟ್ಟಿತು. ಮನೆತನದ ಜವಾಬ್ದಾರಿ ಇನ್ನಷ್ಟು ಹೆಚ್ಚಿತು. ತಮ್ಮಂದಿರ ಶಾಲೆ ಬಿಡಿಸುವ ಪ್ರಸಂಗ ಬಂದಾಗ ಸಾಲ ಮಾಡಬೇಕಾಯಿತು. ಹೀಗಿದ್ದರೂ ತಮ್ಮಂದಿರು ಅಣ್ಣ ಚನ್ನಗಿರಿಯವರನ್ನು ನಂಬಲಿಲ್ಲ. ಯಾರೇನೆಂದರೂ ಅದಕ್ಕೆ ಕಿವಿಗೊಡದೆ ತನ್ನ ಕರ್ತವ್ಯವೆಂದು ಮಾಡಿದ್ದೇನೆ ಎಂದಂದು ದುಡಿಯತೊಡಗಿದರು.

ಮುಂದೊಂದು ದಿನ ಅಣ್ಣ ತಮ್ಮಂದಿರು ಬೇರೆಯಾದರು. ಸಾಲದ ಹೊರೆಯನ್ನು ಶ್ರೀ ಚನ್ನಗಿರಿ ಅವರ ಮೇಲೆ ಹೊರಿಸಿದರು. ಇದ್ದ ಭೂಮಿ ಪಾಲು ಮಾಡಿಕೊಂಡರು. 'ಚನ್ನಗಿರಿ' ಇನ್ನೂ ದುಡಿಯಬೇಕೆಂದಂದು ಸಂತೆಯ ದಿನ ಹತ್ತಿ ಕಾಳಿನ ವ್ಯಾಪಾರ ಮಾಡತೊಡಗಿದರು. ತಮಗೆ ಬಂದ ಭೂಮಿಯನ್ನು ಚನ್ನಗಿರಿ ಅವರಿಗೆ ಲಾವಣಿಗೆ ಹಚ್ಚಿದರು. ಮನೆತನದ ಮರ್ಯಾದೆಗಾಗಿ ಸಾಲವನ್ನು ಹೊತ್ತುಕೊಂಡರು. ತಾವಾಯ್ತು, ತಮ್ಮ ಕೆಲಸ ವಾಯ್ತು ಎಂದು ದುಡಿದೇ ದುಡಿದರು. ಆದರೆ ದುಡಿತಕ್ಕೆ ತಕ್ಕ ಫಲ ಭೂಮಿಯಲ್ಲಿ ಸಿಗಲಿಲ್ಲ. ಒಕ್ಕಲುತನ ಮಾಡಿಸುವಲ್ಲಿ ಬೀಗ ಸಂಗಯ್ಯನವರು ಹೆಚ್ಚಿನ ಸಹಾಯ ಸಲಹೆ ನೀಡಿದರೂ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಹೀಗೆ ಚನ್ನಗಿರಿ ಅವರು ಇತರರ ಅಂಗಡಿಯಲ್ಲಿ ನೌಕರಿ ಮಾಡಿದರು, ನೇಕಾರರಾಗಿ ದುಡಿದರು, ವ್ಯಾಪಾರ ಮಾಡಿದರು, ರೈತರಾಗಿ ಹೊಲದಲ್ಲಿ ಉತ್ತಿ– ಬಿತ್ತಿ ಬೆಳೆ ತೆಗೆಯಲು ಪ್ರಾರಂಭಿಸಿದರೆ

ಅಲ್ಲಿಸರಿಯಾದ ಫಲ ದೊರಕಲಿಲ್ಲ, ನಿರಾಶರಾದರು. ಆದರೂ ಬಸವಣ್ಣನವರ ವಚನವನ್ನು ಮೆಲುಕು ಹಾಕುತ್ತ ಸೇವೆಗೆ ತೊಡಗಿದರು.

''ನಾನು ಆರಂಭವ ಮಾಡುವೆನಯ್ಯ ಗುರುಪೂಜೆಗೆಂದು,
ನಾನು ಬೆವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು,
ನಾನು ಪರಸೇವೆಯ ಮಾಡುವೆನಯ್ಯ ಜಂಗಮ ದಾಸೋಹಕ್ಕೆಂದು,
ನಾನಾವಾವ ಕರ್ಮಂಗಳ ಮಾಡಿದಡೆಯು ಆ ಕರ್ಮಫಲ ಭೋಗವ
ನೀ ಕೊಡುವೆ ಎಂಬುದ ನಾನು ಬಲ್ಲೆನು, ನೀ ಕೊಟ್ಟ ದ್ರವ್ಯವ
ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು, ನಿಮ್ಮ ಸೊಮ್ಮಿಂಗೆ
ಸಲಿಸುವೆನು ನಿಮ್ಮಾಣೆ ಕೂಡಲಸಂಗಮದೇವಾ.''

ಶ್ರೀ ಚನ್ನವೀರಯ್ಯನವರು ಪ್ರಾಪಂಚಿಕರು. ಇವರ ಲಗ್ನ ಅಕ್ಕ ಮುರಿಗೆವ್ವನ (ಮೊದಲನೆ ತಾಯಿ) ಮಗಳು ಪಾರ್ವತಿಯೊಂದಿಗೆ ಆಗಿತ್ತು. ಈ ದಂಪತಿಗಳಿಗೆ ಶಿವಾನಂದ, ಸದಾನಂದ ಮತ್ತು ಕಲಾವತಿ ಮೂವರು ಮಕ್ಕಳು ಜನಿಸಿದ್ದರು. ಮಗಳು ಕಲಾವತಿ ೭–೮ ತಿಂಗಳದವಳಿದ್ದಾಗಲೇ ತೀರಿ ಹೋಗಿದ್ದಳು. ಸದಾನಂದ ಹಾರ್ಟಫೇಲ್ ಆಗಿ ನಿಧನ ಹೊಂದಿದ್ದನು. ಹೆಂಡತಿ ಪಾರ್ವತಿ ಕ್ಯಾನ್ಸರ್ ರೋಗದಿಂದ ಸತ್ತು ಹೋದಳು. ಚನ್ನಗಿರಿ ಅವರಿಗೆ ಕಾಲಿಗೆ ಮುಳ್ಳು ನಟ್ಟು ಆಪರೇಶನ್ ಆಗಿ ಸಹೋದರಿಯ ಮನೆ ನಿಪ್ಪಾಣಿಯಲ್ಲಿ ಆರೈಕೆಯಾಗುತ್ತಿದ್ದರು. ಹಿರಿಯ ಮಗ ಮುಂಬೈಯಲ್ಲಿ ಟೇಲರಿಂಗ ಕೆಲಸ ಕಲಿತು ಮಹಾಲಿಂಗಪುರದಲ್ಲಿ ಅಂಗಡಿ ತೆರೆದಿದ್ದರು. ಶಿವಾನಂದ ಅವರ ಲಗ್ನವು ಹಿಪ್ಪರಗಿಯ ಬಸಮ್ಮ ಅವರೊಂದಿಗೆ ಆಗಿತ್ತು. ಮನೆಯಲ್ಲಿ ಮೂವರೇ ಜನ ಸುಖದಿಂದ ಬಾಳುತ್ತಿದ್ದರು. ಬಸಮ್ಮ ಮಾವ, ಗಂಡನನ್ನು ಚೆನ್ನಾಗಿ ನೋಡಿಕೊಳ್ಳುತ್ತಲಿದ್ದಳು. ಬರುಬರುತ್ತ ಹೆರವರ ಕಲಿಕೆಯ ಮಾತಿಗೆ ಕಿವಿಗೊಟ್ಟಿದ್ದರಿಂದ ಮನೆಯ ಕಡೆಗೆ ಅಷ್ಟು ಕಾಳಜಿ ವಹಿಸದಾದಾಗ ಗಂಡನ ಕೋಪ ನೆತ್ತಿಗೇರುತ್ತದೆ. ಹೆಂಡತಿಯ ಕೊಲೆ ಮಾಡುತ್ತಾನೆ. ಸತ್ಯ ನುಡಿದು ಜೀವಾವಧಿ ಜೈಲು ಶಿಕ್ಷೆ ಅನುಭವಿಸುತ್ತಾನೆ. ತನಗಿನ್ನಾರು ? ತಾನೇಕೆ ಇರಬೇಕು ಎಂದು ವ್ಯಥೆಪಟ್ಟುಕೊಳ್ಳುತ್ತಾರೆ. ಚನ್ನಗಿರಿ ದುಃಖದ ಮೇಲೆ ದುಃಖ, ಕಷ್ಟಗಳ ಸುರಿಮಳೆಯನ್ನು ಕಂಡು ಕೇಳಿದ ಊರಿನ ಹಾಗೂ ಸುತ್ತ ಮುತ್ತಲಿನ ಜನರು ಸ್ನೇಹಿತರು, ಆಪ್ತೇಷ್ಟರು ಬಂದು ಶ್ರೀ ಚನ್ನಗಿರಿಯವರನ್ನು ಕಂಡು ಸಾಂತ್ವನ ಹೇಳುತ್ತಾರೆ. ಹೀಗೆ ಬಂದವರಲ್ಲಿ ಹುನ್ನೂರ ಗ್ರಾಮದ

ಶ್ರೀ ಶಿವರುದ್ರಪ್ಪನವರು ಒಬ್ಬರು. ಶ್ರೀ ಶಿವರುದ್ರಪ್ಪನವರು ಅನುಭಾವಿಗಳು, ನಿಜಗುಣ ಶಾಸ್ತ್ರದಲ್ಲಿ ಬಲ್ಲಿದರು. ಶ್ರೀ ಚನ್ನಗಿರಿ ಅವರು ನಿಜಗುಣರ ಪದಗಳನ್ನು ಹಾಡುತ್ತ ಶಿವಯೋಗಿಗಳ ತತ್ತ್ವಪಗಳನ್ನು ಹೇಳುತ್ತ ಅವರ ಮನಃಪರಿವರ್ತನೆ ಮಾಡಲು ಪ್ರಯತ್ನಿಸಿದರು. ಬಸವಾದಿ ಶಿವಶರಣರ ವಚನಗಳನ್ನು ತಿಳಿಹೇಳ ತೊಡಗಿದರು. ಜೀವನದ ಪರಮಗುರಿ ಆತ್ಮ ಸಾಕ್ಷಾತ್ಕಾರ; ಸಾವು ಎಂಬುದು ಮನುಷ್ಯನಿಗೆ ಬಿಟ್ಟದ್ದಲ್ಲ, ಹುಟ್ಟಿದವನು ಒಂದಿಲ್ಲ ಒಂದು ದಿನ ಸಾಯಲೇಬೇಕು. ಸತ್ತವರಿಗಾಗಿ ಅಳುತ್ತ ಕೂಡ್ರುವುದು ಸರಿಯಲ್ಲ ಎಂದೆಲ್ಲ ತಿಳಿಸಿ ಹೇಳತೊಡಗಿ ದರು. ಮುಂದುವರಿಯುತ್ತ ತನ್ನ ನಿಜವನ್ನು ತಾನು ತಿಳಿಯಬೇಕು. ಹಾಗೆ ಮಾಡ ದಿದ್ದರೆ ಮನುಷ್ಯನಾಗಿ ಹುಟ್ಟಿ ಫಲವೇನು? ಹೆಂಡತಿ ಮಕ್ಕಳು, ಹೊಲ–ಮನೆ, ಬದುಕು–ಬಂಗಾರ ಇವೆಲ್ಲ ಕ್ಷಣಿಕ ಕಾಲದ ಸುಖ ಕೊಡುವುದಕ್ಕಾಗಿ, ಶಾಶ್ವತ ಸುಖ ಪಡೆಯಬೇಕಾದುದು ಮನುಷ್ಯ ಧರ್ಮ. ಅದನ್ನು ಪಡೆಯಲು ಸದ್ಗುರುವಿನ ಮೊರೆ ಹೋಗಬೇಕು. ಅಂಥ ಸದ್ಗುರು ಮಾತ್ರ ಶಿವಪಥವನ್ನು ತೋರಿಸಬಹು ದಾಗಿದೆ. ಅಂದಾಗ ತನ್ನ ತಾನಾರೆಂದು ಅರಿತು ಜೀವನ ಸಾರ್ಥಕಪಡಿಸಿ ಕೊಳ್ಳಬೇಕು. ಎಂದೆಲ್ಲ ಮಾರ್ಮಿಕವಾಗಿ ಮನವರಿಕೆಯಾಗುವಂತೆ ಹೇಳಿದ್ದನ್ನು ಚನ್ನಗಿರಿ ಅವರು ಕೇಳಿ ಸದ್ಗುರುವಿನ ಹುಡುಕಾಟದಲ್ಲಿ ತೊಡಗಿದರು.

ಶ್ರೀ ಚನ್ನವೀರರು ಜೀವನೋಪಾಯಕ್ಕೆಂದು ಕುಬಸದ ಎಂಬವರಲ್ಲಿ ನೇಯ್ಗೆ ಕೆಲಸಕ್ಕೆ ಸೇರಿಕೊಂಡರು. 'ಶ್ರೀ ಗುರು ವಚನೋಪದೇಶವನಾಲಿಸಿದಾ ಗಳುಹುದು ನರರಿಗೆ ಮುಕುತಿ', 'ಶಿವಪಥನರಿವೊಡೆ ಗುರುಪಥವೆ ಮೊದಲು' ಎಂಬಿತ್ಯಾದಿ ಗುರುವಿನ ಮಹತ್ವ ಸಾರುವ ಉಕ್ತಿಗಳನ್ನು, ಶ್ರೀ ಶಿವರುದ್ರಪ್ಪನವರು ಹೇಳಿಕೊಟ್ಟಿದ್ದರು. ಅವುಗಳನ್ನು ಮೆಲುಕು ಹಾಕತೊಡಗಿದರು. ನಿಜಗುಣರ ಕೈವಲ್ಯ ಪದ್ಧತಿ, ಸರ್ಪಭೂಷಣ ಶಿವಯೋಗಿಗಳ ಕೈವಲ್ಯ ಕಲ್ಪವಲ್ಲರಿ ಹಾಗೂ ಬಸವಾದಿ ಶಿವಶರಣರ ವಚನಗಳನ್ನು ಯೋಗಕ್ಕೆ ಸಂಬಂಧಿಸಿದ ಗ್ರಂಥಗಳನ್ನೂ ಓದತೊಡಗಿದರು. ಅವರಿವರೊಡನೆ ಚರ್ಚಿಸತೊಡಗಿದರು. ಒಮ್ಮೆಯಂತೂ ಮಹಾದೇವಿಯಕ್ಕನ ವಚನವೊಂದನ್ನು ಓದುತ್ತಿದ್ದಂತೆ ಚನ್ನವೀರರ ಜಿಡ್ಡು ಬಿಟ್ಟುಹೋಯಿತು. ಆ ವಚನವನ್ನಿಲ್ಲಿ ಉಲ್ಲೇಖಿಸಬಹುದು.

'ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದೊಡೆಂತಯ್ಯ ?

ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕೆ ನಾಚಿದೊಡೆಂತಯ್ಯಾ ?
ಸಮುದ್ರದ ತಡೆಯಲೊಂದು ಮನೆಯ ಮಾಡಿ
ನೊರೆತೆರೆಗಳಿಗಂಜಿದೊಡೆಂತಯ್ಯಾ ?
ಚನ್ನಮಲ್ಲಿಕಾರ್ಜುನ ದೇವ ಕೇಳಯ್ಯ ?
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು
ಬಂದದೆಡೆ ಮನದಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

ಹೀಗೆ ಶ್ರೀ ಚನ್ನವೀರರು ತಮಗಾದ ಕಷ್ಟಗಳನ್ನು ಮರೆತು ಶರಣರ ವಚನಗಳಲ್ಲಿ ತಲ್ಲೀನರಾಗತೊಡಗಿದರು.

ಒಂದು ದಿನ ಸದ್ಗುರುವಿನ ಹುಡುಕಾಟದಲ್ಲಿ ಮನವನ್ನು ಹರಿಯಬಿಟ್ಟಾಗ ಬಗಲಲ್ಲಿ ಕುರಿ ಇಟ್ಟುಕೊಂಡು ಊರೆಲ್ಲ ತಿರುಗಿದರೆಂಬಂತೆ ತಮ್ಮ ಗ್ರಾಮದ ಮಹಲಿಂಗೇಶ್ವರ ಮಠದ ಶ್ರೀ ಗುರುಪಾದ ಸ್ವಾಮಿಗಳವರನ್ನು ನೆನಪಿಸಿ ಕೊಳ್ಳುತ್ತಾರೆ. ಅವರ ದರ್ಶನಪಡೆದು ತಮ್ಮ ಮನದ ಅಳಲನ್ನು ತೋಡಿ ಕೊಳ್ಳುತ್ತಾರೆ. ಆಗ ಶ್ರೀ ಗುರುಪಾದ ಸ್ವಾಮಿಗಳು ಉಪದೇಶ ನೀಡುವ, ಯೋಗಶಕ್ತಿ ಕೊಡುವ ಶಕ್ತಿಯನ್ನು ನಾನು ಪಡೆದುಕೊಳ್ಳಲಿಲ್ಲ, ನನ್ನಲ್ಲಿ ಆ ಶಕ್ತಿಯಿಲ್ಲ, ತಪ್ಪು ತಿಳಿದುಕೊಳ್ಳಬಾರದೆಂದು ಹೇಳುತ್ತಾರೆ. ಆಗ ಚನ್ನವೀರಯ್ಯ ನವರು ಹಾಗಾದರೆ ಅಂಥ ಗುರು ಯಾರು ? ನನಗೆ ಮಾರ್ಗ ತೋರಿಸಿರಿ ಎಂದು ಕನಿಕರದಿಂದ ಕೇಳಿಕೊಳ್ಳುತ್ತಾರೆ. ಅದಕ್ಕೆ ಉತ್ತರವಾಗಿ, ಸಾರಾಯದಾ ನಿಜವತೋರುವ ಗುರು ಒಬ್ಬರಿದ್ದಾರೆ. ಅವರೇ ಮುರಗೋಡದ ಶ್ರೀ ಮ.ನಿ.ಪ್ರ ಮಹಾಂತಸ್ವಾಮಿಗಳು ಎಂದು ಹೇಳುತ್ತಾರೆ. ಅವರ್ಯಾರು ? ಎಂಥವರು ? ನನಗೊಂದೂ ಗೊತ್ತಿಲ್ಲವಲ್ಲ ಎಂದಾಗ ಸಾದ್ಯಂತವಾಗಿ ಗುರು ಮಹಾಂತಸ್ವಾಮಿಗಳ ವಿಷಯಕ್ಕೆ ಶ್ರೀ ಗುರುಪಾದ ಸ್ವಾಮಿಗಳು ತಿಳಿಸಿ ಕೊಡುತ್ತಾರೆ.

ಶ್ರೀ ಮ.ನಿ.ಪ್ರ.ಸ್ವ. ಶ್ರೀ ಮಹಾಂತ ಸ್ವಾಮಿಗಳು ಬಿಳ್ಳೂರ ಬಸವಲಿಂಗ ಸ್ವಾಮಿಗಳಿಂದ ಯೋಗದೀಕ್ಷೆ ಪಡೆದ ಪುಣ್ಯಾತ್ಮರು. ಅಧ್ಯಾತ್ಮದ ಸಾಧನಾ ಬಲದಿಂದ ಸಿದ್ಧಿಯನ್ನು ಪಡೆದುಕೊಂಡವರಾಗಿರುವರು. ಯೋಗ ಸಿದ್ಧಿಯಿಂದ ತಾವೊಬ್ಬರೆ ಉದ್ಧಾರವಾದರೆ ಸಾಲದೆಂದು ಭಕ್ತ ಕುಲಕೋಟಿಯನ್ನು ಉದ್ಧರಿಸುತ್ತಿಲಿರುವ ಅವರು ನಡೆದಾಡುವ ದೇವರು ಎಂದು ಹೇಳಿದರು. ಲೋಕೋದ್ಧಾರ

ದೊಂದಿಗೆ ಆತ್ಮೋದ್ಧಾರವನ್ನು ಮಾಡಿಕೊಂಡ ಆ ಮಹಾತ್ಮರ ಬಳಿಗೆ ನೀವು ಹೋಗಿ ಯೋಗದೀಕ್ಷೆ ಪಡೆಯಿರಿ ಎಂದು ಮಾರ್ಗದರ್ಶನ ಮಾಡಿದರು.

ಶ್ರೀ ಮಹಾಂತ ಸ್ವಾಮಿಗಳು ಮೂಲತಃ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನ ಸಾಲಳ್ಳಿ ಗ್ರಾಮದವರು. ಅಲ್ಲಿಯ ಹಿರಿಯ ಮಠದ ವೀರಸಂಗಯ್ಯ ರಾಚಮ್ಮ ದಂಪತಿಗಳ ಸತ್ಪುತ್ರರು. ೧೯೧೧ರಲ್ಲಿ ಅರಭಾವಿ ಮಠದ ಪಟ್ಟಾಧಿಕಾರಿ ಗಳಾದರು. ಶರಣಧರ್ಮ, ಸಂಸ್ಕೃತಿ–ಸಾಹಿತ್ಯ ಶ್ರೀ ಮಹಾಂತಶಿವಯೋಗಿಗಳ ಜೀವನದ ಉಸಿರಾಗಿತ್ತು, ಸಮಾಜ ಸೇವೆಯಲ್ಲಿದ್ದುಕೊಂಡು ಆತ್ಮೋದ್ಧಾರವನ್ನು ಸಾಧಿಸಿದ ಮಹಾನುಭಾವಿಗಳಿವರು. ಇವರು ಭಕ್ತರ ಆಗ್ರಹದ ಮೇರೆಗೆ ೧೯೨೮ ರಲ್ಲಿ ಬೆಳಗಾವಿ ಜಿಲ್ಲೆಯ ಮುರಗೋಡ ಮಠಕ್ಕೆ ತೆರಳಿದರು. ಅಲ್ಲಿಯೂ ಯೋಗಾನುಷ್ಠಾನ, ತ್ರಿಕಾಲ ಪೂಜೆ, ತ್ರಿವಿಧ ದಾಸೋಹ, ಭಕ್ತರ ಕ್ಷೇಮ ಸಮಾಚಾರ, ಶಿವಾನುಭವಗೋಷ್ಠಿಗಳನ್ನು ನಡೆಸುತ್ತಲಿದ್ದರು. ಜನಸಾಮಾನ್ಯರ ಆಗುಹೋಗುಗಳಿಗೆ ಸ್ಪಂದಿಸಿದವರಾಗಿದ್ದಾರೆ. ಹೀಗೆ ಮುರಗೋಡ ವೀರಶೈವ ಅಷ್ಟೇ ಏಕೆ ? ಮಾನವ ಕುಲಕೋಟಿಗೂ ಸಾಂಸ್ಕೃತಿಕ ಕೇಂದ್ರ ತಾಣವಾದುದಾಗಿದೆ ಯೆಂದರು.

ಪೂಜ್ಯ ಮಹಾಂತಶಿವಯೋಗಿಗಳ ವಿಷಯಕ್ಕೆ ತಿಳಿದುಕೊಂಡ ಶ್ರೀ ಚನ್ನವೀರಯ್ಯನವರು ಮುರಗೋಡಕ್ಕೆ ಹೋಗುವ ಸಿದ್ಧತೆ ನಡೆಸಿದರು. ಕಲ್ಯಾಣದಲ್ಲಿ ಕ್ರಾಂತಿಯಾದಾಗ ಮುರಗೋಡ ಮಾರ್ಗವಾಗಿ ಶಿವಶರಣರು ಉಳವಿಗೆ ಹೋದದ್ದು. ವೈರಿಗಳ ಕೋಡು ಮುರಿದ ಗ್ರಾಮವೇ ಈ ಮುರಗೋಡ. ಶ್ರೀ ಮಹಾಂತ ಶಿವಯೋಗಿಗಳ ಯೋಗಾನುಷ್ಠಾನದಿಂದ ಇದು ಶಿವಯೋಗಿಗಳ ಪವಿತ್ರ ತಾಣವಾಗಿದೆ. ಶ್ರೀ ಚನವೀರಯ್ಯನವರು ಮುರಗೋಡ ಮಠಕ್ಕೆ ಹೋಗಿ ಮಹಾಂತ ಅಜ್ಜಾ ಅವರ ಏಕಾಂತ ಕೋಣೆಗೆ ತೆರಳಿದರು. ತಮ್ಮ ಬಯಕೆಯನ್ನು ಈಡೇರಿಸಿ ಕೊಡಲು ಪ್ರಾರ್ಥಿಸಿಕೊಂಡರು. 'ಲಿಂಗಪೂಜೆ ಮಾಡುತ್ತ ಶಿವಧ್ಯಾನ ಮಾಡಿರಿ' ನಿಮಗೆ ಕಲ್ಯಾಣ ಆಗುವುದು ಎಂದು ಹೇಳಿದರು. ಆಗ ಚನ್ನವೀರಯ್ಯನವರು ನನಗೆ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಲು ಯೋಗದೀಕ್ಷೆ ಕರುಣಿಸಬೇಕೆಂದು ಮತ್ತೆ ಬೇಡಿಕೊಂಡರು. ಅಲ್ಲಿಯೆ ಮೂರು ನಾಲ್ಕು ದಿನ ಕಳೆಯುತ್ತ ಬಂದರೂ ಅವರ ಬಯಕೆ ಈಡೇರಲಿಲ್ಲ.

ಕೊನೆಗೆ ಆಳು ಮನುಷ್ಯರು ಚನ್ನವೀರಯ್ಯ ಅವರನ್ನು ಹೊರಗೆ ಎತ್ತಿಹಾಕಿದರು. ಆಗ ಮಹಾಂತ ಅಜ್ಜ ಅವರು ಇದನ್ನು ಪ್ರತ್ಯಕ್ಷ ಕಂಡರು. ಆಳು ಮಕ್ಕಳನ್ನು ಕರೆದು ಸಿಟ್ಟು ಮಾಡಿದರು. ಚನ್ನವೀರಯ್ಯನವರ ಹತ್ತಿರ ಹೋಗಿ 'ನಿನ್ನ ಸಂಕಲ್ಪವನ್ನು ಈಡೇರಿಸಿ ಕೊಡುವೆ' ಏಳು ಎಂದು ಕೈ ಹಿಡಿದು ಎಬ್ಬಿಸಿದರು. ಚನ್ನವೀರಯ್ಯನವರ ಜನ್ಮ ಸಾರ್ಥಕವಾಯಿತು, ಗುರುವರ್ಯ ಎಂದು ಸಾಷ್ಟಾಂಗ ನಮಸ್ಕಾರ ಹಾಕಿದರು. ಆಗ ಮಹಾಂತ ಅಜ್ಜನವರು ಚನ್ನವೀರಯ್ಯನನ್ನು ತಮ್ಮ ಕಾರಿನಲ್ಲಿ ಕೂಡ್ರಿಸಿಕೊಂಡು ಆರಭಾವಿ ಮಠಕ್ಕೆ ಕರೆದುಕೊಂಡು ಹೋದರು. ಅಲ್ಲಿಂದ ಹಳ್ಳಕ್ಕೆ ಕರೆದೊಯ್ದು ಶಿವಯೋಗಿಗಳ ಕರ್ತೃ ಗದ್ದುಗೆಯ ಸಮ್ಮುಖದಲ್ಲಿ ಯೋಗದೀಕ್ಷೆಯನ್ನು ಶ್ರೀ ಚನ್ನವೀರಯ್ಯ ಅವರಿಗೆ ದಯಪಾಲಿಸಿದರು.

ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳ ಆವರಣಗಳನ್ನು ಕ್ರಮಬದ್ಧವಾಗಿ ತಿಳಿಸಿಕೊಟ್ಟರು. ರೇಚಕ, ಪೂರಕ, ಕುಂಭಕ ಪ್ರಾಣಾಯಾಮ ಹೇಳಿಕೊಟ್ಟರು. ಜಪ ಮಾಡುವ ಕ್ರಮ ಅರುಹಿದರು. ಜ್ಞಾನ, ಕ್ರಿಯಾ ಮಾರ್ಗಗಳ ಕ್ರಮವನ್ನು ಬೋಧಿಸಿದರು. ಸತ್ಕ್ರಿಯಾಚರಣೆಯೆ ಸಾಧನೆ ಎಂದೆಲ್ಲ ಹೇಳಿದರು. ಆಧಾರಾದಿ ನವಚಕ್ರಗಳ ಮಹತಿಯನ್ನು ತಿಳಿಸಿ ಹೇಳಿದರು. ಹೀಗೆ ವಿವಿಧ ಬಗೆಯಲ್ಲಿ, ಶಾಸ್ತ್ರಬದ್ಧವಾಗಿ, ಜೀವಾತ್ಮನು ಪರಮಾತ್ಮನಾಗುವ ಸಾಧನೆಯ ಮಾರ್ಗವನ್ನು, ಶಿವಯೋಗ ಮಾರ್ಗವನ್ನು ತಿಳಿಸಿದರು. ಶ್ರೀ ಚನ್ನವೀರ ಶಿವಯೋಗಿಗಳು ಫಲವರಿತರು, ಆಸಕ್ತಿಯಿಂದ ಈ ಸಾಧನೆಗೆ ತೊಡಗಿದರು. ಗುರು ಬೇಕೆಂದು ಹುಡುಕಿಕೊಂಡು ಬಂದವರು ಆರುಮೂರು ಕಟ್ಟಿ ಬಲು ಗಟ್ಟಿಗರೆನಿಸಿದರು. ಶರಣ ಸತಿ, ಲಿಂಗಪತಿ ಭಾವತಳೆದು ಪರಮಾತ್ಮನನ್ನು ಪತಿಯನ್ನಾಗಿ ಮಾಡಿಕೊಂಡರು. ಹೀಗೆಯೇ ಅತ್ಯಂತ ನಿಷ್ಠೆಯಿಂದ ನಾಲ್ಕೈದು ವರುಷಗಳ ಕಾಲ ಸಾಧನೆಯಲ್ಲಿ ತಮ್ಮನ್ನು ಸಂಪೂರ್ಣ ತೊಡಗಿಸಿಕೊಂಡರು. ಅಷ್ಟಾವರಣ ಸಿದ್ಧಿಗಳನ್ನು ಪಡೆದರು. ಯೋಗಸಿದ್ಧಿ ಪಡೆದವರಿಗೆ ಈ ಶಕ್ತಿಗಳ ಪ್ರಯೋಜನವುಂಟಾಗುವಂತೆ ಸಿದ್ಧಿಯೆನಿಸುವುದು. ವಾಯು, ಅಗ್ನಿ, ಜಲ, ಪೃಥ್ವಿ, ಆಕಾಶ, ಸೂರ್ಯ, ಚಂದ್ರ, ಆತ್ಮ– ಈ ಎಂಟು ಶಕ್ತಿಗಳು ಅಷ್ಟಮಾ (ಎಂಟು) ಸಿದ್ಧಿಗಳು ಈ ಸಿದ್ಧಿಗಳಿಂದ ಅಸಂಭವ ಸಂಭವಿಸುವುದು ಅಸಾಧ್ಯ ಸಾಧ್ಯವಾಗುವುದು. ತಿಳಿಯಲಾರದ್ದು ತಿಳಿಯುವುದು. ತ್ರಿಕಾಲ ಜ್ಞಾನವುಂಟಾಗುವುದು. ಇಂಥ ಅಷ್ಟಮಾ ಸಿದ್ಧಿಗಳಿಂದ ಜನರ ಕಷ್ಟ, ನಷ್ಟ ಪರಿಹರಿಸಬಹುದು. ತಮಗೆ ಇಷ್ಟವಾದವರ ಭಕ್ತಿಗೆ ಒಲಿದು

ಅವರ ಅನಿಷ್ಟಗಳನ್ನು ಪರಿಹರಿಸಬಹುದು. ಆದರೆ ಅನವಶ್ಯಕವಾಗಿ ಉಪಯೋಗಿಸಿ ಕೊಳ್ಳಬಾರದೆಂದು ಇದೆ. ಹೀಗೆ ಶ್ರೀ ಮಹಾಂತ ಅಜ್ಜಾ ಅವರು ಶ್ರೀ ಚನ್ನವೀರಯ್ಯನವರನ್ನು ಸಿದ್ಧಿಪುರುಷರನ್ನಾಗಿ ಪರಿವರ್ತಿಸಿದರು.

ಈ ಸಾಧನೆ ಇಲ್ಲಿಗೆ ಅಂತ್ಯ ಎಂದಲ್ಲ, ಅದು ಸತತ ನಡೆಯುತ್ತಿರಬೇಕು. ಅಂತೆಯೇ ಶ್ರೀ ಚನ್ನವೀರ ಶಿವಯೋಗಿಗಳು ಮಹಾಲಿಂಗಪುರಕ್ಕೆ ಬಂದು ಅಲ್ಲಿ ಊರ ಹೊರಗಿನ ಆಶ್ರಮದಲ್ಲಿರುವ ಅತ್ತಿಮರದ ಕೆಳಗೆ ಯೋಗಾನುಷ್ಠಾನಕ್ಕೆ ಕುಳಿತುಕೊಳ್ಳತೊಡಗಿದರು. ಪ್ರತಿ ಅಮವಾಸ್ಯೆ ಹಿಂದಿನ ರಾತ್ರಿ ಆಶ್ರಮದಲ್ಲೆಲ್ಲ ಭಜನೆ-ಕೀರ್ತನೆ ಪ್ರವಚನಗಳನ್ನು ನಡೆಸತೊಡಗಿದರು. ವೈಶಾಖಶುದ್ಧ ೧೧, ಲೋಕಮಾತೆಯನ್ನು ಪೂಜಿಸುವ ಪರಿಪಾಠ ಹಾಕಿಕೊಂಡರು. ಇದರ ಸಂಕೇತವಾಗಿ ಸಾವಿರಾರು ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ, ಪ್ರವಚನ, ಶಿವಾನುಭವಗೋಷ್ಠಿ ನಡೆಸತೊಡಗಿದರು. ಇದರಿಂದ ಶಿವಯೋಗಿಗಳ ಖ್ಯಾತಿ ಎಲ್ಲೆಡೆ ಪಸರಿಸಿತು. ತಮ್ಮ ಪಾಲಿನ ದೇವರೆಂದು ಜನ ತಂಡೋಪತಂಡವಾಗಿ ಬಂದು ದರ್ಶನಾಶೀರ್ವಾದ ಪಡೆದು ಕಾಣಿಕೆ ಸಮರ್ಪಿಸಿ, ಧನ್ಯರಾದೆವೆಂದು ಹಿಗ್ಗುತ್ತ ತಮ್ಮ ಎಂದಿನ ಕಾರ್ಯಕ್ಕೆ ತೆರಳುತ್ತಿದ್ದರು.

ಗುರುಮಹಾಂತ ಶಿವಯೋಗಿಗಳ ಉಪದೇಶದಂತೆ, ಶ್ರೀ ಚನ್ನವೀರ ಶಿವಯೋಗಿಗಳು ಮಿತಾಹಾರಿಗಳಾದರು. ಡಾ. ಅಂಬಿ, ಶ್ರೀ ಶಿವಣ್ಣ ಘಟನಟ್ಟಿ, ಶ್ರೀ ಬಾಬಣ್ಣ ಘಟನಟ್ಟಿ, ಡಾ. ಘಟನಟ್ಟಿ, ಶ್ರೀ ಅಂಬಿ, ಶ್ರೀ ಮಲಕಾಜೆಪ್ಪ ಕುರಿ ಅವರಲ್ಲಿ ಶ್ರೀ ಶಿವಯೋಗಿಗಳು ವಾರಕ್ಕೊಂದು ದಿನದಂತೆ ಪ್ರಸಾದಕ್ಕಾಗಿ ಹೋಗಲು ಭಕ್ತರು ಏರ್ಪಾಟು ಮಾಡಿದ್ದರು. ಆಶ್ರಮದಲ್ಲಿ ಬರಹೋಗುವವರಿಗೆ ದಾಸೋಹ ನಡೆಸುತ್ತಲಿದ್ದರು.

ಶ್ರೀ ಚನ್ನವೀರ ಶಿವಯೋಗಿಗಳು ಸಿದ್ಧೀ ಪುರುಷರೆಂಬುದಕ್ಕೆ ಅವರು ಸತ್ತವರನ್ನು ಬದುಕಿಸಿದ ಘಟನೆಗಳೇ ಸಾಕ್ಷಿಯಾಗಿರುತ್ತವೆ.

೧. ಕ್ರಿ.ಶ. ೧೯೮೪ರಲ್ಲಿ ನಡೆದು ಹೋದ ಘಟನೆಯಿದಾಗಿದೆ. ವಿಜಾಪುರ ದಿಂದ ತಮ್ಮ ಶಿಷ್ಯರೊಂದಿಗೆ ಮಹಾಲಿಂಗಪುರಕ್ಕೆ ಬಸ್ಸಿನಲ್ಲಿ ಬರುತ್ತಿದ್ದರು. ಸಾಯಂಕಾಲ ೪-೫ ಗಂಟೆಯಾಗಿರಬೇಕು. ಬಸ್ಸು ಮತ್ತು ಲಾರಿ ಮಧ್ಯದಲ್ಲಿ ಸಿಲುಕಿದ ಬಾಲಕನೊಬ್ಬನು ಬಸ್ಸು ಬಡಿದು ಪೆಟ್ಟಾಗಿ ಪ್ರಜ್ಞೆ ತಪ್ಪಿತು. ಆಗ

ಬಸ್ಸಿನಲ್ಲಿದ್ದ ಶ್ರೀ ಚನ್ನವೀರ ಶಿವಯೋಗಿಗಳು ನೀರು ತರಿಸಿ, ಮಂತ್ರಿಸಿ ಆ ಬಾಲಕನಿಗೆ, ಶಿಷ್ಯರ ಮೂಲಕ, ಬಾಯಲ್ಲಿ ಹಾಕಲು ಹೇಳಿದರು. ಆಗ ಬಾಲಕ ಕಣ್ಣು ತೆರೆದು ಮಾತಾಡತೊಡಗಿದನು.

೨. ಮಹಾಲಿಂಗಪುರದ ಬಸಲಿಂಗಪ್ಪ ಪಾಶ್ಚಾಪುರ ಎಂಬುವರಿಗೆ ಕಾಲರಾ ಬೇನೆ ತಗುಲಿತ್ತು, ಇನ್ನೇನು ಉಳಿಯುವುದಿಲ್ಲ, ಮಿರಜಕ್ಕೆ ಒಯ್ಯಿರಿ ಎಂದು ಡಾಕ್ಟರರು ಹೇಳಿ ಕಳಿಸಿದರು. ಆಗ ಶ್ರೀ ಚನ್ನವೀರ ಶಿವಯೋಗಿಗಳವರಿಗೆ ಇದು ಗೊತ್ತಾಗಿ, ೨ ಟೆಂಗು, ೨ ಲಿಂಬೆಹಣ್ಣು ತರಿಸಿ ಮಂತ್ರಿಸಿ ಇದನ್ನು ಸ್ಮಶಾನ ಭೂಮಿಯಲ್ಲಿ ಹೂಳಿ ಬರಲು ಹೇಳಿದರು. ಆಗ ಪಾಶ್ಚಾಪುರ ಅವರು ಬದುಕಿ ಉಳಿದದ್ದು ಒಂದು ಪವಾಡವೇ ಎನಿಸಿರುವುದು. ಪಾಶ್ಚಾಪುರ ಅವರು ಈ ಆಶ್ರಮದ ಪರಮಭಕ್ತರೂ ವಿಶ್ವಸ್ಥ ಮಂಡಳಿಯ ಸಕ್ರಿಯ ಸದಸ್ಯರೂ ಆಗಿರುವರು.

೩. ಮಕ್ಕಳಿಲ್ಲದವರಿಗೆ ಸಂತಾನಫಲ ಕೊಟ್ಟ ದೃಷ್ಟಾಂತಗಳಿಗಂತೂ ಲೆಕ್ಕ ವಿಲ್ಲ. ಬೆಳಗಾವಿಯ ಜಾಧವ ಹೆಸರಿನ ಇಂಜನಿಯರರೊಬ್ಬರಿಗೆ ಸಂತಾನ ಫಲ ದೊರೆತದ್ದು ಎಲ್ಲರಿಗೂ ಚಿರಪರಿಚಿತ. ಈ ಸಂತೋಷಕ್ಕಾಗಿ ಶ್ರೀ ಜಾಧವರು ಶಿವಯೋಗಿಗಳ ಆಶ್ರಮದಲ್ಲಿ ಒಂದು ಬಾವಿಯನ್ನು ತೋಡಿಸಿ ಅದರಿಂದ ಆಶ್ರಮದ ಎಲ್ಲ ಕಡೆಗೂ ನೀರು ದೊರೆಯುವ ವ್ಯವಸ್ಥೆ ಮಾಡಿಕೊಟ್ಟಿರುವುದನ್ನು ನೆನೆಯಬಹುದಾಗಿದೆ. ಹೀಗೆ ಶ್ರೀ ಶಿವಯೋಗಿಗಳ ಪವಾಡಗಳದೇ ಒಂದು ದೊಡ್ಡ ಗ್ರಂಥವಾಗುವಂತಿದೆ.

ವೀರವಿರಾಗಿ, ಶಿವಯೋಗಿವರೇಣ್ಯ ಶ್ರೀ ಚನ್ನವೀರ ಶಿವಯೋಗಿಗಳು ಪ್ರಪಂಚದಲ್ಲಿದ್ದುಕೊಂಡು, ಪಡಬಾರದ ಕಷ್ಟ ನಷ್ಟಗಳನ್ನು ಅನುಭವಿಸಿ, ಧೈರ್ಯ ಗುಂದದೆ ಧೀರತನದಿಂದ ಸತ್ಯವಂತರಾಗಿ, ಪ್ರಾಮಾಣಿಕರಾಗಿ, ಛಲವಂತರಾಗಿ ಗುರುಮಹಾಂತ ಶಿವಯೋಗಿಗಳವರ ಕೃಪೆಯಿಂದ ಮಹಾಶಿವಯೋಗಿಗಳಾಗಿ ನಂಬಿ ನೆಚ್ಚಿದ ಭಕ್ತರ ಉದ್ಧಾರ ಮಾಡಿ ದಿ. ೧೦–೮–೧೯೯೧ ರಂದು ದೇಹ ತ್ಯಾಗ ಮಾಡಿ 'ಉರಿಯುಂಡ ಕರ್ಪೂರ'ದಂತಾದರು.

ಶ್ರೀ ಚನ್ನವೀರ ಶಿವಯೋಗಿಗಳವರು ನಡೆಸಿಕೊಂಡು ಬರುತ್ತಿದ್ದ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅವರ ಭಕ್ತರು ಒಂದು ವಿಶ್ವಸ್ಥ ಮಂಡಳಿ

ರೂಪಿಸಿಕೊಂಡು ವ್ಯವಸ್ಥಿತ ರೀತಿಯಿಂದ ನಡೆಸಿಕೊಂಡು ಬರುತ್ತಿರುವರು. ಪ್ರೊ. ಬ. ಗಿ. ಯಲ್ಲಟ್ಟಿಯವರು ರಚಿಸಿರುವ 'ಉರಿಯುಂಡ ಕರ್ಪೂರ' ಹೆಸರಿನ ಅವರ ಜೀವನ ಚರಿತ್ರೆಗೆ ಸಂಬಂಧಿಸಿದ ಪುಸ್ತಕ ಒಂದನ್ನು 'ಶ್ರೀ ಚನ್ನವೀರ ಶಿವಯೋಗಿಗಳ' ಯೋಗಾಶ್ರಮ ವಿಶ್ವಸ್ಥ ಮಂಡಳಿ (ಮಹಾಲಿಂಗಪುರ)ಯು ಕ್ರಿ.ಶ. ೧೯೮೭ ರಲ್ಲಿ ಪ್ರಕಟಿಸಿರುವುದು. ಅದೇ ರೀತಿ ಯೋಗ ಸಿದ್ಧಾಂತ ಗ್ರಂಥ ವೊಂದನ್ನು (ಶಿವಯೋಗಿಗಳೇ ರಚಿಸಿದುದು) ಪರಿಷ್ಕರಣಗೊಳಿಸಿ ೧೯೭೨ರಲ್ಲಿ ಮುದ್ರಣ ಮಾಡಿಸಿರುವರು.

ಶ್ರೀ ಚನ್ನವೀರ ಶಿವಯೋಗಿಗಳ ಶರೀರ ನಮಗಿಂದು ಕಾಣದಿರಬಹುದು, ಆದರೆ ಅವರು ಆಶ್ರಮದಲ್ಲಿ, ನೆನೆದವರ ಮನದಲ್ಲಿ ಜೀವಂತ ಇದ್ದಾರೆಂಬುದೇ ಬಹುಜನಭಕ್ತರ ಭಾವನೆಯಾಗಿದೆ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ವಿಶ್ವಸ್ಥ ಮಂಡಳಿಯು ಉತ್ತಮೋತ್ತಮ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವುದು ಈ ಆಶ್ರಮದ ಜೀವಂತಿಕೆಗೆ ಸಾಕ್ಷಿಯಾಗಿರುವುದು.

ಜ್ಞಾನಿಗಳಿರಲಿ, ಯೋಗಿಗಳಿರಲಿ, ಅನ್ಯಾಯ, ಅಧರ್ಮ, ಹಿಂಸೆಯಾಗ ದಂತೆ ನಡಾವಳಿ ಇರಬೇಕು. ಶ್ರೀಮಂತಿಕೆ, ಅಧಿಕಾರ, ಪಾಂಡಿತ್ಯ, ಜ್ಞಾನ, ಯೋಗಸಿದ್ಧಿ ಇವು ಪರಮಾತ್ಮನ ಅನುಗ್ರಹದಿಂದಲ್ಲದೆ ತಾವೇ ತಾವಾಗಿ ಲಭಿಸುವಂಥವುಗಳಲ್ಲ, ಅವನಿಂದ ಪಡೆದುದನ್ನು ಸಕಲ ಜೀವರಾಶಿಗಳಿಗೆ ಕೊಟ್ಟು ಸುಖಪಡಬೇಕು ಎಂದೆಲ್ಲ ಶ್ರೀ ಚನ್ನವೀರ ಶಿವಯೋಗಿಗಳು ಉಪದೇಶ ನೀಡುತ್ತಿದ್ದರು.

ಶ್ರೀ ಚನ್ನವೀರಯ್ಯ ಅವರ ಸಹೋದರಿಯನ್ನು ನಿಪ್ಪಾಣಿಗೆ ಕೊಟ್ಟಿದ್ದರು. ಬೀಗ ಡಾ. ಎಸ್. ಕೆ. ಸ್ವಾಮಿಯವರಲ್ಲಿ ಆರೈಕೆಗೆಂದು ಬಂದಾಗ ನಿಪ್ಪಾಣಿಯ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದ ನಾನು ಶ್ರೀ ಚನ್ನವೀರಯ್ಯನವರನ್ನು ಅರಿಯದೆ ಹೋದೆ. ಪೂಜ್ಯ ಶ್ರೀ ಮಹಾಂತ ಸ್ವಾಮಿಗಳು (ಮುರಗೋಡ) ನಿಪ್ಪಾಣಿಯ ಮಹಾದೇವ ಮಂದಿರ, ಸಮಾಧಿ ಮಠ. ಆರ್. ಎಸ್. ಕೋಠಿವಾಲೆ, ಶೆಟ್ಟಿ ಸರಾಫಿ ಮೊದಲಾದವರ ಕಡೆಗೆ ಹಲವಾರು ಸಲ ಬಂದಿದ್ದರು. ಆಗ ಅವರ ದರ್ಶನಾಶೀರ್ವಾದಗಳನ್ನು ನಾನೂ ಪಡೆದಿರುವೆ. ಆಗ ಅವರ ಜೊತೆಗೆ ಇರುತ್ತಿದ್ದ ಬಿಳಿಯ ವಸ್ತ್ರ ಧರಿಸುತ್ತಿದ್ದ ಶ್ರೀ ಚನ್ನವೀರಯ್ಯನವರನ್ನು ಗುರುತಿಸದೇ

ಹೋದೆ. ಮತ್ತೊಮ್ಮೆ ರಬಕವಿಯ ಶ್ರೀ ಮಹಾದೇವಪ್ಪ ಮುತ್ತೂರ ಅವರು ಮಹಾಲಿಂಗಪುರದ ಆಶ್ರಮದಲ್ಲಿ ಶ್ರೀ ಚನ್ನವೀರಯ್ಯನವರ ದರ್ಶನ ಪಡೆದುಕೊಳ್ಳಲು ಸೂಚಿಸಿದ ಪ್ರಕಾರ ಅಲ್ಲಿಗೆ ಹೋದಾಗ ಅವರು ಪರಸ್ಥಳಕ್ಕೆ ಹೋಗಿದ್ದರು. ಹೀಗಾಗಿ ಶ್ರೀ ಚನ್ನವೀರಯ್ಯ ಅವರನ್ನು ಜೀವಂತ ಇದ್ದಾಗ ಅವರ ದರ್ಶನಾಶೀರ್ವಾದ ಭಾಗ್ಯ ನನ್ನದಾಗಲಿಲ್ಲ. ಕಳೆದುಕೊಂಡ ಮೇಲೆ ಹುಡುಕಿದರೆ ಅವರೆಲ್ಲಿ ದೊರಕಬಹುದು ?

■■

ಕಾದ್ರೊಳ್ಳಿ ಸೀಮಿಮಠದ

ಲಿಂ. ಅಪ್ಪಯ್ಯ ಮಹಾಸ್ವಾಮಿಗಳು

'ಕಾದರವಳ್ಳಿ' ಎಂಬುದು ಕರ್ನಾಟಕ ರಾಜ್ಯದ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಒಂದು ಪುಣ್ಯ ತಾಣವಾಗಿದೆ. ಇದನ್ನು ಕಾದ್ರೊಳ್ಳಿ ಎಂದೂ ಕರೆಯುವದುಂಟು. ಇದೊಂದು ಮಲಪ್ರಭಾ ನದಿಯ ದಂಡೆಯ ಮೇಲಿರುವ ಚಿಕ್ಕ ಗ್ರಾಮವಾಗಿದ್ದು ಇದರ ಜನಸಂಖ್ಯೆ ಸು. ೫೫೫೦ ರಷ್ಟಿದೆ. ಎಲ್ಲ ಜಾತಿ ಜನಾಂಗದ ಜನರೂ ಇಲ್ಲಿ ವಾಸವಾಗಿರುವರು. ಕದಂಬ ಅರಸರ ಕಾಲದ ಐತಿಹಾಸಿಕತೆಗೆ ಸಾಕ್ಷಿಯಾಗಿ ಇಲ್ಲಿ ಹರಿಯುವ ನದಿಯಲ್ಲಿ ಶಿವಪಾರ್ವತಿ ದೇವಾಲಯ ಒಂದು ಕಂಗೊಳಿಸುತ್ತಲಿದೆ.

ಹನ್ನೆರಡನೇ ಶತಮಾನದ ಬಸವಾದಿ ಶರಣರ ಕ್ರಾಂತಿ ಕಾಲದಲ್ಲಿ ಚನ್ನಬಸವಣ್ಣನವರು ಉಳಿವೆಗೆ ಹೋಗುವಾಗ ಶರಣರಿಗೂ ಬಿಜ್ಜಳನ ಸೈನಿಕರಿಗೂ ಕಾದಾಟವಾದ ಸ್ಥಳವೇ ಈ ಕಾದರವಳ್ಳಿ (ಕಾದಿದ ಹಳ್ಳಿ) ಆಗಿರುವು ದೆಂಬ ನಂಬಿಕೆ. ರಾಷ್ಟ್ರೀಯ ಹೆದ್ದಾರಿ ನಂ. ೪ ರ ಮೇಲೆ ನದಿಯಲ್ಲಿ ಇರುವ ಬಸವಣ್ಣನವರ ಧರ್ಮಪತ್ನಿ ಗಂಗಾಂಬಿಕೆಯ ಸಮಾಧಿ ಸ್ಥಳವೂ ಒಂದು ಶರಣರ ಸ್ಮಾರಕವಾಗಿ ಇಲ್ಲಿ ಕಂಗೊಳಿಸುತ್ತಲಿರುವುದು. ಬಸವಣ್ಣನವರ ದಾಸೋಹದಲ್ಲಿ ತಾಂಬೂಲ ಕಾಯಕದ ರೇಚಣ್ಣ ಎಂಬವರನ್ನು ಚನ್ನಬಸವಣ್ಣನವರು ಈ ಪ್ರದೇಶದಲ್ಲಿ ಧರ್ಮ ಹಾಗೂ ಶರಣ ಸಂಸ್ಕೃತಿಯ ಪ್ರಸಾರ ಕಾರ್ಯಕ್ಕಾಗಿ ಬಿಟ್ಟು ಹೋದರೆಂದೂ ಪ್ರತೀತಿ. ಹಾಗೆಯೇ ಅವರು ಅಂಕಲಗಿ ಅಡಿವೆಪ್ಪನವರಾಗಿ ಮಹಿಮಾಪುರುಷರಾಗಿ ಕಂಗೊಳಿಸಿರುವರು. ಅವರೇ ಮುಂದೆ ದತ್ತವಾಡದ ಬಸನಗೌಡರಿಗೆ ಮಗನಾಗಿ ಜನಿಸಿ ದತ್ತವಾಡದ ಬಾಬಾ ಮಹಾರಾಜರಾಗಿ ಕೀರ್ತಿಶೇಷರಾಗಿರುವರು. ಈ ಮಹಾರಾಜರ ಶಿಷ್ಯರೇ ಕಾದ್ರೊಳ್ಳಿಯ ಅದೃಶ್ಯಯನವರು. ಇವರಿಂದಾಗಿ ಮಹಾರಾಜರು ಕಾದ್ರೊಳ್ಳಿಗೆ ಬಂದಾಗ ಇಲ್ಲಿಯ ಸೀಮಿಮಠದ ರುದ್ರಯ್ಯನವರು ತಮ್ಮ ಸೀಮಿಮಠಕ್ಕೆ ಬರಮಾಡಿಕೊಂಡು ಗೌರವಿಸಿ, ಮಗ ಗದಿಗೆಯ್ಯನನ್ನು ಮಹಾರಾಜರ ಉಡಿಯಲ್ಲಿ ಹಾಕಿ

ಆಶೀರ್ವದಿಸಲು ಕೇಳಿ ದರು. ಮಹಾರಾಜರು ತಮ್ಮ ಕೃಪಾಕಟಾಕ್ಷದಿಂದ ಆ ಬಾಲಕ ಗದಿಗೆಯ್ಯನ ಮೈದಡವಿ ಅನುಗ್ರಹಿಸಿದರು.

ಕಾದರವಳ್ಳಿಯ ಸೀಮಿಮಠದ ರುದ್ರಯ್ಯನವರು ಮತ್ತು ಅವರ ಧರ್ಮಪತ್ನಿ ಮಲ್ಲಮ್ಮ ದಂಪತಿಗಳಿಗೆ ಕ್ರಿ. ಶ. ೧೯೦೪ರಲ್ಲಿ ಮಗನಾಗಿ ಜನಿಸಿದ ಗದಿಗೆಯ್ಯನವರೇ ಮುಂದೆ ಅಪ್ಪಯ್ಯ ಸ್ವಾಮಿಗಳಾದರು. ಮಗು ಮೂರು ವರುಷದವರಿದ್ದಾಗ ತಂದೆ ತಾಯಿಗಳು ಲಿಂಗೈಕ್ಯರಾದರು. ಇವರ ಏಕಮಾತ್ರ ಪುತ್ರನನ್ನು ಅವರ ಸೋದರ ಮಾವಂದಿರಾದ ಹೊಳೆಹೊಸೂರಿನ ಸೊಪ್ಪಯ್ಯ ಸ್ವಾಮಿಗಳು ತಮ್ಮ ಊರಿಗೆ ಕರೆದುಕೊಂಡು ಹೋಗಿ ಜೋಪಾನ ಮಾಡಿದರು. ಚಿಕ್ಕ ವಯಸ್ಸಿನಲ್ಲಿಯೇ ಗದಿಗೆಯ್ಯನವರಿಗೆ ಅಕ್ಷರಾಭ್ಯಾಸ, ಧರ್ಮ, ಸಾಹಿತ್ಯ ಸಮಾಜದ ವಿಷಯ ಕುರಿತು ಮಾವ ತಿಳಿಸಿಕೊಟ್ಟರು. ಆಗಾಗ ಆ ಊರಿಗೆ ಬರುತ್ತಿದ್ದ ಅದೃಶ್ಯಯ್ಯ ಶಿವಯೋಗಿಗಳ ದರ್ಶನಾಶೀರ್ವಾದ ಭಾಗ್ಯ ಗದಿಗೆಯ್ಯನವರಿಗೆ ದೊರೆಯಿತು. ಅವರ ಕೇವಲ ಶಿಷ್ಯರಾಗಿ ಅವರು ಹಾಕಿಕೊಟ್ಟ ಮಾರ್ಗದಲ್ಲಿ ತಮ್ಮ ಸಾಧನೆಯನ್ನು ಗಟ್ಟಿಗೊಳಿಸಿಕೊಂಡರು. ಎಳೆಯ ವಯಸ್ಸನಲ್ಲಿಯೆ ಬಾಬಾ ಮಹಾರಾಜರು ಧಾರೆಯೆರೆದಿದ್ದ ಜ್ಞಾನಾಮೃತವನ್ನು ಅದೃಶ್ಯಯ್ಯನವರು ಗದಿಗೆಯ್ಯನವರಿಗೆ ಧಾರೆಯೆರೆದರು. ಬ್ರಹ್ಮಬೀಜದ ಬೆಳೆ ಬಿತ್ತಿ ಅದು ಹುಲುಸಾಗಿ ಬೆಳೆದು ಬರುವಂತೆ ನೋಡಿಕೊಳ್ಳತೊಡಗಿದರು. ಜೊತೆಗೆ ವೀರಶೈವ ಧರ್ಮದ ತತ್ತ್ವ ಸಿದ್ಧಾಂತಗಳನ್ನು ಅರಿತು ಅಳವಡಿಸಿ ಕೊಂಡರು. ಕಾಯಕ ದಾಸೋಹಕ್ಕೆ ಹೆಚ್ಚಿನ ಒತ್ತುಕೊಟ್ಟರು.

ಕಾದ್ರೊಳ್ಳಿಯಲ್ಲಿ ಹಲವಾರು ಮಠಗಳಿದ್ದು ಅವುಗಳಲ್ಲಿ ಸೀಮಿಮಠವೂ ಒಂದು. ಇದು ಶ್ರೀಮದ್ರಂಭಾಪುರೀ ವೀರಸಿಂಹಾಸನ ಮಠದ ಶಾಖಾಮಠ ವಾಗಿರುವುದು. ಈ ಮಠದ ಅಧಿಪತಿಗಳಾಗಿ ಶ್ರೀ ಗದಿಗೆಯ್ಯನವರು ಅಪ್ಪಯ್ಯ ಸ್ವಾಮಿಗಳ ಹೆಸರಿನಲ್ಲಿ ಪೀಠಾಧಿಪತಿಗಳಾದರು. ಈ ಅಪ್ಪಯ್ಯ ಸ್ವಾಮಿಗಳು ವಯಸ್ಸಿಗೆ ಬಂದರು ಆಗ ಹಿರಿಯರು ಹಿರೇಮಠದ ಪಡದಯ್ಯನವರ ಹದಿನಾಲ್ಕು ವರುಷದ ಮಗಳು ಪಾರ್ವತಮ್ಮ ಅವರೊಂದಿಗೆ ಲಗ್ನ ಮಾಡಿದರು. ಸತಿಪತಿಗಳೊಂದಾಗಿ ಪ್ರಪಂಚದಲ್ಲಿದ್ದು ಪಾರಮಾರ್ಥ ಜೀವನ ನಡೆಸತೊಡಗಿ ದರು. ಈ ದಂಪತಿಗಳಿಗೆ ಅಧ್ಯಾತ್ಮದ ಶ್ರೀಮಂತಿಕೆಯೊಂದಿಗೆ ಮಕ್ಕಳ ಭಾಗ್ಯವೂ ದೊರೆಯಿತು. ಅಂತೆಯೆ ಇವರಿಗೆ ಎಂಟು ಜನ ಗಂಡು ಮಕ್ಕಳೂ ಮೂವರು

ಹೆಣ್ಣುಮಕ್ಕಳೂ ಜನಿಸಿದರು. (ರುದ್ರಯ್ಯ, ಬಸಯ್ಯ, ಶಂಕರಯ್ಯ, ಗುರುಪಾದಯ್ಯ, ಚಿನ್ನಯ್ಯ, ಶಿವಲಿಂಗಯ್ಯ, ಪ್ರಭು, ಅದೃಶ್ಯಯ್ಯ ಹಾಗೂ ಗೌರಮ್ಮ. ಗಂಗಮ್ಮ ಹಾಗೂ ಬಾಯಮ್ಮ).

ಸೀಮಿಮಠದಲ್ಲಿ ನಿತ್ಯವೂ ವಚನ ಗಾಯನ ನಡೆಯುತ್ತಿತ್ತು ಶಿವಯೋಗಿಗಳ ತತ್ವಪದಗಳನ್ನು ನಿಜಗುಣರ ಪದಗಳನ್ನು ಹಾಡುತ್ತಲಿದ್ದರು. ಶಿವಶರಣರ ವಚನಗಳ ಕುರಿತು ಗೋಷ್ಠಿಗಳೂ ನಡೆಯುತ್ತಲಿದ್ದವು. ವಚನಗಳನ್ನು ರಾಗ ತಾಳಗಳಲ್ಲಿ ಹಾಡುತ್ತಲಿದ್ದರು. ಸ್ವತಃ ಅಪ್ಪಯ್ಯ ಸ್ವಾಮಿಗಳು ಸಂಗೀತ ಕಲಾವಿದರಾಗಿದ್ದರಲ್ಲದೆ ನಾಟ್ಯ ಪ್ರವೀಣರೂ ಆಗಿದ್ದರು. ಅಂತೆಯೇ ಐದು ನೂರಕ್ಕೂ ಹೆಚ್ಚಿನ ವಚನಗಳಿಗೆ ರಾಗ–ತಾಳಗಳ ಸಂಯೋಜನೆ ಜೋಡಿಸಿ, ಭಜನಾಮೇಳದವರಿಗೆ ಹಾಡಲು ಹೇಳಿಕೊಡುತ್ತಿದ್ದರು. ವೇದಾಂತ ವಿಷಯ ಕುರಿತು ಇಲ್ಲಿ ನಿತ್ಯ ಚರ್ಚೆ ನಡೆಯುತ್ತಲೇ ಇತ್ತು.

ಬೈಲಹೊಂಗಲ ತಾಲೂಕಿನ ನೇಗಿನಹಾಳದಲ್ಲಿ ಕ್ರಿ.ಶ. ೧೯೬೦ರಲ್ಲಿ ಭಜನಾ ಮೇಳಗಳ ಸ್ಪರ್ಧೆಯನ್ನು ಹಗಲು ರಾತ್ರಿ ಮೂರು ದಿನಗಳ ಕಾಲ ನಡೆಸಿ ಸೂಕ್ತ ಬಹುಮಾನಗಳನ್ನು ಕೊಟ್ಟ ಶ್ರೇಯಸ್ಸು ಅಪ್ಪಯ್ಯ ಸ್ವಾಮಿಗಳವರಿಗೆ ಸಲ್ಲುವಂತಹದು. ದಿ. ೧೧–೧೧–೧೯೬೨ ರಂದು ನಾನೂ ಒಂದು ದಿನ ರಾತ್ರಿ ಈ ಸ್ಪರ್ಧೆಗಳ ನ್ಯಾಯಾಧೀಶನಾಗಿ ಹೋಗಿದ್ದ ಸುಯೋಗ ದೊರೆತಿದ್ದಿತು. ಸರ್ವಧರ್ಮ ಸಮ್ಮೇಲನದ ತಾಣವೂ ಈ ಸ್ಥಳವಾಗಿದೆ. ಇದಕ್ಕೆ ಚ್ಯುತಿಬಾರದ ರೀತಿಯಲ್ಲಿ ಅಪ್ಪಯ್ಯ ಸ್ವಾಮಿಗಳು ಎಲ್ಲರನ್ನೂ ತಮ್ಮವರೆಂದು ಬಗೆದು ಎಲ್ಲರಿಗೂ ಅವಕಾಶ ಕಲ್ಪಿಸಿಕೊಟ್ಟುದ್ದುಂಟು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ, ಇಸ್ಲಾಂ, ಬೌದ್ಧ, ಸೀಖ, ಜೈನ ಧರ್ಮದ ತತ್ವ ಸಿದ್ಧಾಂತಗಳನ್ನು ತಿಳಿದುಕೊಂಡ ಅಪ್ಪಯ್ಯ ಸ್ವಾಮಿಗಳು ಆಧ್ಯಾತ್ಮದ ತವನಿಧಿಯಾಗಿದ್ದರು. ಎಲ್ಲ ಜಾತಿ ಜನಾಂಗದ ಕಾಯಕದ ಶ್ರದ್ಧಾವಂತರಿಗೆ ಸೀಮಿಮಠವೂ ಆಶ್ರಯ ತಾಣವಾಯಿತು. ಹೀಗೆ ಸೀಮಿಮಠದ ಖ್ಯಾತಿ ಎಲ್ಲೆಲ್ಲಿಯೂ ಪಸರಿಸಿತು.

ನಿತ್ಯವೂ ಮಠದಲ್ಲಿ ಪ್ರವಚನ ಕಾರ್ಯಕ್ರಮಗಳು ನಡೆಯತೊಡಗಿದವು. ಅದೃಶ್ಯಯ್ಯ ಶಿವಯೋಗಿಗಳು ತಮ್ಮ ಶಿಕ್ಷಕ ವೃತ್ತಿಗೆ ಶರಣು ಹೊಡೆದು ಕಾದ್ರೊಳ್ಳಿಯಲ್ಲಿಯೇ ಬಂದು ನೆಲೆಸಿದರು. ದತ್ತವಾಡ ಬಾಬಾ ಮಹಾರಾಜರ

ಸಂಪ್ರದಾಯದ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ನಡೆಯತೊಡಗಿದವು. ಅವರ ಪ್ರೇರಣೆಯಿಂದ ಮೇಲಿಂದ ಮೇಲೆ ಉಳವಿ ಜಾತ್ರೆಗೆ ಹೋಗಿ ಬರ ತೊಡಗಿದರು. ಕಾಶೀಯಾತ್ರೆಯನ್ನೂ ಮಾಡಿ ಬಂದರು. ಅದೃಶ್ಯಯ್ಯ ಶಿವಯೋಗಿಗಳ ಮತ್ತು ಅಪ್ಪಯ್ಯ ಶಿವಯೋಗಿಗಳ ಘನ ಮಹಿಮೆಗೆ ಮಾರು ಹೋಗಿ ಸುತ್ತಲಿನ ಹಾಗೂ ದೂರ ದೂರದ ಸಾಧು ಸತ್ಪುರುಷರೂ ಕಾದ್ರೊಳ್ಳಿಗೆ ಬರತೊಡಗಿದರು. ಈ ಮೊದಲೇ ದತ್ತವಾಡ ಬಾಬಾ ಮಹಾರಾಜರು, ಬಂದು ಹೋಗಿದ್ದರು. ತರುವಾಯ ಬಸನಗೌಡ ಮಹಾರಾಜರು ಶಿವಪುತ್ರಪ್ಪ ಮಹಾ ಸ್ವಾಮಿಗಳು, ನಿತ್ಯಾನಂದ ಪರಮಹಂಸರು, ಶಾಮಾನಂದ ಮಹಾರಾಜರು ಮೊದಲಾದ ಮಹಾತ್ಮರು ಕಾದ್ರೊಳ್ಳಿಗೆ ಬಂದು ಈ ಪ್ರದೇಶದ ಜನತೆಗೆ ಅಧ್ಯಾತ್ಮದ ಸವಿಯನುಣಬಡಿಸಿದುದನ್ನು ಸ್ಮರಿಸಬಹುದಾಗಿದೆ. ಇಲ್ಲಿಯ ಕಲ್ಲೂ ಕೂಡ ಅಧ್ಯಾತ್ಮದ ಉಸಿರಿನಲ್ಲಿಯೆ ಬದುಕುವಂತಿರುತ್ತದೆ. ಇದಕ್ಕೆ ಕಾರಣಕರ್ತರು ಬಾಬಾ ಮಹಾರಾಜರ ಶಿಷ್ಯರಾದ ಅದೃಶಯ್ಯ ಶಿವಯೋಗಿಗಳು.

ಅಪ್ಪಯ್ಯ ಸ್ವಾಮಿಗಳವರದು ಸ್ವಾಮಿತ್ವಕ್ಕೆ ಹೇಳಿ ಮಾಡಿಸಿದ ವ್ಯಕ್ತಿತ್ವ. ಬ್ರಹ್ಮತೇಜ ಅವರಲ್ಲಿ ಉಕ್ಕಿ ಹರಿಯುತ್ತಿತ್ತು. ಅವರ ವಾಣಿ ಅದು ಪ್ರಸಾದವಾಣಿ. ನಿತ್ಯವೂ ಒಂದು ವಚನ ಹಾಡಿ, ಅದನ್ನು ಕೂಲಿ ಕಾರ್ಮಿಕರೂ ಒಕ್ಕಲಿಗರೂ ಕೂಡ ತಿಳಿಯುವಂತೆ ಅರ್ಥಬಿಡಿಸಿ ಹೇಳುತ್ತಿದ್ದುದನ್ನು ಹಲವರು ಚಿಕ್ಕ ವರಿದ್ದಾಗಿನಿಂದಲೇ ಕೇಳಿದ ಅಭಿಮಾನ. ಶ್ರೀಸಾಮಾನ್ಯರೂ ಆ ಅಧ್ಯಾತ್ಮದ ಶ್ರೀಮಂತಿಕೆಯಿಂದ ಬೀಗುತ್ತಿದ್ದರು. ವಿವಿಧ ಕಾಯಕದವರು ಸಾಯಂಕಾಲದ ಹೊತ್ತಿಗೆ ಮಠದಲ್ಲಿ ಪ್ರವೇಶಿಸಿ ಆಧ್ಯಾತ್ಮದ ಚಿಂತನದಲ್ಲಿ ಪಾಲ್ಗೊಳ್ಳುತ್ತಿದ್ದರು. ಭಜನಾ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದರು. ಶಾಸ್ತ್ರ ವಿಷಯ ಕೇಳಿ ಮೈಮನ ಹಗುರು ಮಾಡಿಕೊಳ್ಳುತ್ತಲಿದ್ದರು. ಪಾರಮಾರ್ಥದ ಆನಂದದಲ್ಲಿತೇಲಾಡುತ್ತಿದ್ದರು. ಇದರಿಂದಾಗಿ ಕಾದ್ರೊಳ್ಳಿಯ ಈ ಮಠದ ಪರಿಸರದಿಂದಾಗಿ ಎಲ್ಲೆಲ್ಲಿಯೂ ಅಧ್ಯಾತ್ಮ ಗಾಳಿಯೇ ಬೀಸುತ್ತಲಿತ್ತು. ಈ ಮಠಕ್ಕೆ ಶಾಸ್ತ್ರ ವಿಷಯ ಹೇಳುತ್ತೇನೆ ಎಂದು ಬೀಗಿಕೊಂಡು ಬಂದಿದ್ದ ಪಂಡಿತರನೇಕರು ಸೋತು ಹೋದದ್ದನ್ನು ಇಲ್ಲಿಯ ಹಿರಿಯರು ಇನ್ನೂ ಮರೆತಿಲ್ಲ. ಆಧ್ಯಾತ್ಮದ ತುಂಬಿದ ಕೊಡ ತುಳುಕದ ಅಪ್ಪಯ್ಯ ಸ್ವಾಮಿಗಳು ಅಹಮಿಕೆಯಿಂದ ಎಂದೂ ಬೀಗಿದವರಲ್ಲ. 'ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಘನ ವ್ಯಕ್ತಿತ್ವ ಅವರದು.

ಕಾದ್ರೊಳ್ಳಿಯ ಊರ ಹಿರಿಯರಾದ ಬಸವಣ್ಣೆಪ್ಪ ಗೌಡ್ರು, ಅವರ ಮಗ ಸಿದ್ಧನಗೌಡರು, ಶಿವಲಿಂಗಪ್ಪ ಗೌಡರು ಅವರ ಮಗ ರುದ್ರಗೌಡರು; ವೀರಯ್ಯನವರು ಅವರ ಮಗ ಚಿನ್ನಯ್ಯನವರು, ಉಡಚ್ಚಣ್ಣನವರ ಅಡಿವೆಪ್ಪನವರು, ಮುಚ್ಚಂಡಿ ವೀರಭದ್ರಯ್ಯನವರು ಅವರ ಮಗ ಚಿನ್ನಯ್ಯ ಮಾಸ್ತರರು, ಚಂಬಣ್ಣ ಕೊಟಗಿಯವರು ಅವರ ಮಗ ಗಂಗಾಧರರು, ಫಕೀರಪ್ಪ ಕುಂಬಾರರು ಅವರ ಮಗ ಬಸಪ್ಪ, ವೀರಪ್ಪ ಮಾಸ್ತರರು ಅವರ ಮಕ್ಕಳಾದ ಬಾಬು ಮತ್ತು ವಿರೂಪಾಕ್ಷಿಯವರು, ದಳವಾಯಿ ಚಿನ್ನಯ್ಯನವರು, ಅವರ ಮಗ ಶಿವಜಾತಯ್ಯ, ಬಿ.ಎಸ್. ಪಾಟೀಲ, ಎ.ಆರ್. ಪಾಟೀಲ, ಹೈಬತ್ತಿ ಮೊದಲಾದ ಅಸಂಖ್ಯಾತರು ಅಪ್ಪಯ್ಯ ಸ್ವಾಮಿಗಳವರ ಶಿಷ್ಯರಾಗಿ ಖ್ಯಾತರಾಗಿರುವರು.

ನೀಲಕಂಠಪ್ಪ ಪತ್ತಾರ ಮಾಸ್ತರರು ಜನಪದ ಕಲಾಕಾರರು ಮತ್ತು ಅವರ ಮಗ ಚಿದಾನಂದರು ಈ ಗ್ರಾಮದ ಶ್ರೀಮಠದ ಸದ್ಭಕ್ತರು. ನೀಲಕಂಠಪ್ಪ ಅವರಂತೂ ಬಯಲಾಟಗಳನ್ನು ರಚಿಸಿದ, ಜನಪದ ಕವಿ ಸಾಹಿತಿಗಳು, ಶಿಲ್ಪಿಗಳು. ಮಠದ ಸೇವೆಯಲ್ಲಿ ಎಲ್ಲರೂ ತಮ್ಮ ತಮ್ಮ ಸೇವೆ ಸಲ್ಲಿಸಿ ಹೋಗುತ್ತಿದ್ದುದು ವೈಶಿಷ್ಟ್ಯವಾಗಿತ್ತು. ಹಾಡುವ, ವಾದ್ಯ ಬಾರಿಸುವ, ದಮಡಿ ಬಾರಿಸುವ ಏಕದಾರಿ ನುಡಿಸುವ, ಕಾಲಪೇಟಿ ಬಾರಿಸುವ, ಕೊಳಲೂದುವ, ಚಹಾ ತಯಾರಿಸುವ ಪ್ರಸಾದ ಬಡಿಸುವ ಹೀಗೆ ಭಿನ್ನ ಭಿನ್ನ ಸೇವೆಯಲ್ಲಿ ಭಕ್ತರು ತಮ್ಮನ್ನು ಮಠದ ಸೇವೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಸುಣಗಾರ ಶಿವರಾಯಿಯಂತೂ ಸುಶ್ರಾವ್ಯವಾಗಿ ಹಾಡುತ್ತಿದ್ದರು.

ಮಠದಲ್ಲಿ ಮೊದಲಿನಿಂದಲೂ ಅಪ್ಪಯ್ಯ ಸ್ವಾಮಿಗಳು ಒಳ್ಳೊಳ್ಳೆ ಗ್ರಂಥಗಳನ್ನು ಓದುವ, ವ್ಯಾಖ್ಯಾನಿಸುವ ಪರಿಪಾಠ ಇಟ್ಟುಕೊಂಡು ಬಂದವರಾಗಿದ್ದರು. ನೀಲಕಂಠಪ್ಪ ಪತ್ತಾರ ಅವರು ಚಿದಾನಂದ ಅವಧೂತರ 'ಜ್ಞಾನಸಿಂಧು'ವನ್ನು, ಹೈಬತ್ತಿಯವರು ಯೋಗ ವಾಶಿಷ್ಟವನ್ನು, ಅಣ್ಣಪ್ಪ ಪಾಟೀಲರು ಕರ್ತಾರನ ಕಮ್ಮಟ, ಕದಳಿ ಕರ್ಪೂರ ಗ್ರಂಥ ಓದುತ್ತಲಿದ್ದರು.

ಬೆಳಗಾವಿಯಿಂದ ಸಿದ್ರಾಮಪ್ಪ ರಾಮಣ್ಣನವರೊಂದಿಗೆ ಬಿ.ಜಿ. ಇಂಗಳೇಶ್ವರ ಡಾ. ಗದಗ, ಶಂಕರೆಪ್ಪಣ್ಣ ಬಾಗಿ, ವ್ಹಿ.ಕೆ. ಕರಡಿ ಮೊದಲಾದ ಹಿರಿಯರೊಂದಿಗೆ ಚಿಕ್ಕವನಾದ ನಾನೂ ವಾರಕ್ಕೊಮ್ಮೆ ಕಾದರವಳ್ಳಿಗೆ ಹೋಗಿ

ಅಲ್ಲಿಯ ಸಪ್ತಾಹದಲ್ಲಿ ಭಾಗವಹಿಸಿ ಬರುತ್ತಿದ್ದೆವು. ಪ್ರಪ್ರಥಮವಾಗಿ ನಾನು ಸಾರ್ವಜನಿಕರ ಮುಂದೆ, ಅಧ್ಯಾತ್ಮ ವಿಷಯ ಕುರಿತು (ಅಕ್ಕಮಹಾದೇವಿಯ ವಚನ) ಮತನಾಡಿ ವಿಶ್ಲೇಷಣೆ ಮಾಡಿದ್ದು ಪೂಜ್ಯ ಅಪ್ಪಯ್ಯ ಸ್ವಾಮಿಗಳವರ ಈ ಪುಣ್ಯ ತಾಣದಲ್ಲಿ, ಅದನ್ನು ಕೇಳಿದ ನನ್ನ ಗುರುಗಳಾದ ವ್ಹಿ. ಕೆ. ಕರಡಿ ಅವರು ಶಹಾಬಾಶ್‌ಗಿರಿ ಕೊಟ್ಟು ಬೆನ್ನು ಚಪ್ಪರಿಸಿದ್ದು ನನ್ನ ಭಾಗ್ಯವೆನಿಸಿರುವುದು.

ಪರಮಹಂಸ ರಾಮಾನಂದ ಮಹಾರಾಜರು

ಒಮ್ಮೆ ಹಿಮಾಲಯದ ಕಡೆಯವರೆಂದು ಹೇಳುತ್ತಿದ್ದ ಶ್ರೀ ಪರಮಹಂಸ ರಾಮಾನಂದ ಮಹಾರಾಜರು ಕಾದರವಳ್ಳಿ ಸಮೀಪದ ಮಲಪ್ರಭಾ ನದಿ ದಂಡೆಯ ಈಚೆಗಿರುವ ನೃಸಿಂಹ ದೇವಸ್ಥಾನದ ಪಕ್ಕದಲ್ಲಿಯ ಚ್ಯವನ ಮಹರ್ಷಿಗಳ ಸ್ಥಳದಲ್ಲಿರುವ ಪೇರಲ ತೋಟದಲ್ಲಿ ವಾಸವಾಗಿದ್ದರು. ಇವರ ಇರುವಿಕೆಯನ್ನರಿತ ಅದೃಶ್ಯಯ್ಯ ಶಿವಯೋಗಿಗಳು ಅವರೊಂದಿಗೆ ಒಡನಾಟ ಬೆಳೆಸಿದರು. 'ಸಮಾನ ಶೀಲೇಷು ಸಮಾನ ವ್ಯಸನೇಷು ಚ ಸಖ್ಯಂ ಭವತಿ' ಎಂಬಂತೆ ಸಮಾನ ಸ್ಥಿತಿಯಲ್ಲಿರುವ ಶ್ರೀ ಪರಮಹಂಸ ರಾಮಾನಂದ ಮಹಾರಾಜರನ್ನು ಕಾದರವಳ್ಳಿಗೆ ಬರಮಾಡಿಕೊಂಡರು. ಶ್ರೀ ಅಪ್ಪಯ್ಯ ಸ್ವಾಮಿಗಳ ಸೀಮಿಮಠದಲ್ಲಿ ಅವರ ವಾಸ್ತವ್ಯಕ್ಕಾಗಿ ವ್ಯವಸ್ಥೆ ಮಾಡಿದರು. ಶ್ರೀ ಪರಮಹಂಸ ರಾಮಾನಂದರೂ ಕೂಡ ತಮ್ಮ ಸಮಾನರಾಗಿರುವ ಶ್ರೀ ಅದೃಶ್ಯಯ್ಯ ಶಿವಯೋಗಿಗಳ ಸಮಾಗಮದಲ್ಲಿ ಆರು ತಿಂಗಳ ಪರ್ಯಂತ ಕಾದರವಳ್ಳಿಯ ಸೀಮಿಮಠದಲ್ಲಿಯೇ ಉಳಿದುಕೊಂಡರು. ಇವರಿಬ್ಬರ ಅನುಭವಾಮೃತವನ್ನು ಸವಿಯುವ ಸುಯೋಗ ತಮ್ಮದಾಯಿತೆಂದು ಅವರ ಸೇವೆಯನ್ನು ಮನಃಪೂರ್ವಕವಾಗಿ ಮಾಡತೊಡಗಿದರು. ಅಧ್ಯಾತ್ಮ ಶ್ರವಣ, ಇವರ ಜೀವನುಕ್ತಿಗೆ ಸಹಾಯಕಾರಿಯಾದಂತಾಯಿತು. ಅಪ್ಪಯ್ಯ ಸ್ವಾಮಿಗಳವರಿಗೆ ಲೋಕಸುತ್ತಿಬಂದ ಆನಂದವಾಯಿತು. ಅವರು ಜಾಣರ ದೇವ ಎಂದೆನಿಸಿಕೊಂಡರು. ಕಾದರವಳ್ಳಿ ಹೀಗೆ ಸಂತರ, ಮಹಾರಾಜರ, ಶರಣರ ವಾಸಸ್ಥಾನವಾದುದರಿಂದ ಪ್ರತಿ ಕಲ್ಯಾಣವೆನಿಸಿತು. ದರ್ಶನಾರ್ಥಿಗಳಾಗಿ ಬಂದ, ಬರುವ–ಭಕ್ತರ ಆಶೋತ್ತರಗಳನ್ನು, ಇಷ್ಟಾರ್ಥಗಳನ್ನು ಈಡೇರಿಸಿಕೊಡುವ ಮಹಿಮಾಶಾಲಿ ಇವರಾದರು. ಇಲ್ಲಿಯೆ ವಾಸ ಮಾಡಿಕೊಂಡಿದ್ದ ಹಿಮಾಲಯದ ಆ ಪರಮಹಂಸ ರಾಮಾನಂದ ಮಹಾರಾಜರು ಇಲ್ಲಿಂದ ಒಂದು ದಿನ

ಹೊರಬಿದ್ದವರು ತಿರುಗಿ ಬರಲೇ ಇಲ್ಲ. ಅವರೆಲ್ಲಿಗೆ ಹೋದರು ಎಂಬುದೂ, ಯಾರಿಗೂ, ತಿಳಿಯದಲೇ ಹೋಯಿತು. ಅವರು ಇಲ್ಲಿದ್ದು ಕನ್ನಡ ಭಾಷೆಯನ್ನು ಕಲಿತರು. ಕನ್ನಡದಲ್ಲಿ ವೇದಾಂತ ವಿಷಯವನ್ನು ಚೆನ್ನಾಗಿ ಬೋಧಿಸುತ್ತಿದ್ದರು.

ರಾಮಕೃಷ್ಣ ಪರಮಹಂಸರನ್ನು ಜಗತ್ತಿಗೆ ಪರಿಚಯಿಸಿದವರು ಸ್ವಾಮಿ ವಿವೇಕಾನಂದರು. ಅದೇ ರೀತಿ ಗುರು ಅದೃಶಯ್ಯ ಶಿವಯೋಗಿಗಳವರನ್ನು ಜನತೆಗೆ, ಜಗತ್ತಿಗೆ ಪರಿಚಯ ಮಾಡಿಕೊಟ್ಟವರು ಅಪ್ಪಯ್ಯ ಮಹಾಸ್ವಾಮಿಗಳು ಎಂಬುದನ್ನು ಮರೆಯಲಿಕ್ಕಾಗದು. ಅದೇ ರೀತಿ ಅಪ್ಪಯ್ಯ ಸ್ವಾಮಿಗಳೇ ತಮ್ಮ ಗುರುಗಳ ಗುರುಗಳಾದ ದತ್ತವಾಡದ ಬಾಬಾ ಮಹಾರಾಜರ ಪರಿಚಯವನ್ನೂ ಜಗತ್ತಿಗೆ ಪರಿಚಯಿಸಿದವರು ಮೊದಲು ಅಪ್ಪಯ್ಯ ಸ್ವಾಮಿಗಳೇ.

ದತ್ತವಾಡದ ಬಾಬಾ ಮಹಾರಾಜರು ಮಹಾರಾಷ್ಟ್ರ ರಾಜ್ಯದ ಕೊಲ್ಲಾಪುರ ಜಿಲ್ಲೆಯ ಶಿರೋಳ ತಾಲೂಕಿನ ದತ್ತವಾಡ ಗ್ರಾಮದವರು. ಕರ್ನಾಟಕದ ಗಡಿಗೆ ಹತ್ತಿರುವ ಧೂಧಗಂಗಾ, ವೇದಗಂಗಾ ನದಿ ತೀರದಲ್ಲಿರುವ ಈ ದತ್ತವಾಡ ಗ್ರಾಮದ ವೀರಶೈವ ಮನೆತನದ ಬಸನಗೌಡ ಬಾಳಮ್ಮ ದಂಪತಿಗಳ ಸತ್ಪುತ್ರರಿವರು. ಅಂಕಲಗಿ ಅಡಿವೆಪ್ಪನವರ ಕೃಪಾಶೀರ್ವಾದದಿಂದ ಕ್ರಿ.ಶ. ೧೮೫೦ರಲ್ಲಿ ಹುಟ್ಟಿದ ಮಗನೇ ನಮ್ಮ ಈ ಬಾಬಾ ಮಹಾರಾಜರು. ಲಗ್ನವಾದ ಹೊಸದರಲ್ಲಿಯೇ ಮನೆ ಮಾರು ತೊರೆದು ದೇಶವನ್ನು ಸುತ್ತಾಡಿ ಲೋಕಾನು ಭವವನ್ನು, ಆಧ್ಯಾತ್ಮ ವಿದ್ಯೆಯನ್ನು ಗಳಿಸಿಕೊಂಡ ಬಾಬಾ ಮಹಾರಾಜರು ಶಿವಶರಣರ ವಚನಗಳನ್ನು, ಸಂತರ ಅಭಂಗಗಳನ್ನು, ಗೀತೆಯನ್ನು ಚೆನ್ನಾಗಿ ತಿಳಿದುಕೊಂಡವರಾಗಿದ್ದರು. 'ಜ್ಞಾನೇಶ್ವರಿ'ಯನ್ನಂತೂ ಹಲವಾರು ಬಾರಿ ಓದಿಕೊಂಡಿದ್ದರು. ವೇದಾಂತ ವಿಷಯ ಮನನ ಮಾಡಿಕೊಂಡಿದ್ದರು. ನಾಡಿನ ಅಸಂಖ್ಯಾತರು ಇವರ ಶಿಷ್ಯರಾಗಿದ್ದರು. ಇಂಥ ಶಿಷ್ಯರಲ್ಲಿ ಕಾದ್ರೊಳ್ಳಿಯ ಅದೃಶ್ಯಯ್ಯ ಶಿವಯೋಗಿಗಳೂ ಒಬ್ಬರು. ಅದರಿಂದಾಗಿ ನೇಸರಗಿ, ಹಿರೇಬಾಗೇವಾಡಿ, ಕಾದ್ರೊಳ್ಳಿ ಗ್ರಾಮಗಳಿಗೆ ಮಹಾರಾಜರು ಆಗಮಿಸಿ ಜನತೆಗೆ ಆಧ್ಯಾತ್ಮದ ರಸದೂಟವನ್ನುಣಿಸಿದುದನ್ನು ಮರೆಯುವಂತಿಲ್ಲ. ಕ್ರಿ.ಶ. ೧೯೧೯ರಲ್ಲಿ ಮಹಾರಾಜರು ಲಿಂಗೈಕ್ಯರಾಗಿದ್ದರೂ ಅವರು ಜನತೆಗೆ ನೀಡಿದ ಬೋಧೆ ಅಚ್ಚಳಿಯದಂತಿರುವುದು.

ಬಾಬಾ ಮಹಾರಾಜರ ಶಿಷ್ಯರಲ್ಲಿ ಅಗ್ರಗಣ್ಯರೆನಿಸಿದವರೆಂದರೆ ಕಾದ್ರೊಳ್ಳಿಯ ಶ್ರೀ ಅದೃಶಯ್ಯ ಶಿವಯೋಗಿಗಳು. ಜನೇವರಿ ೯, ೧೮೮೪ ರಲ್ಲಿ ಜನಿಸಿರುವ ಇವರು ವಿದ್ಯೆ, ಬುದ್ಧಿಯಿಂದ ಶ್ರೀಮಂತರು ಅಂತೆಯೇ ೩ನೇ ವರುಷದ ಟ್ರೆಂಡ್ ಶಿಕ್ಷಕರಾಗಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಆಯ್ಕೆ ಯಾದವರು. ಚಿಕ್ಕೋಡಿ, ಬೆಳಗಾವಿ, ನೇಸರಗಿ, ಚಚಡಿ, ಅಂಕಲಗಿ, ನಾಗನೂರ, ಹಿರೇಬಾಗೇವಾಡಿಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ, ಪ್ರಪಂಚದಲ್ಲಿದ್ದೂ ಇಲ್ಲದಂತೆ ಆಧ್ಯಾತ್ಮಿಯಾಗಿ ದತ್ತವಾಡ ಮಹಾರಾಜರ ಪರಮಶಿಷ್ಯರಾಗಿ ಎಲ್ಲವನ್ನೂ ತ್ಯಾಗ ಮಾಡಿ ವೀರ ವೀರಾಗಿಯೆನಿಸಿದ ಮಹಾತ್ಮರಿವರು. ಇವರು ಕ್ರಿ.ಶ. ೧೯೩೮ರಲ್ಲಿ ಲಿಂಗೈಕ್ಯರಾದರು. ಇಂಥ ಪುಣ್ಯಾತ್ಮರಿಂದ ದೀಕ್ಷೆ ಪಡೆದುಕೊಂಡಿದ್ದ ಕಾದ್ರೊಳ್ಳಿಯ ಸೀಮಿಮಠದ ಅಪ್ಪಯ್ಯ ಸ್ವಾಮಿಗಳು ತಮ್ಮ ಗುರುಗಳ ಮಾರ್ಗದರ್ಶನದಲ್ಲಿ ಮಹಾತ್ಮರ ಪುಣ್ಯಾರಾಧನೆಗಳನ್ನು ಜ್ಞಾನದಾಸೋಹ ಅನ್ನ ದಾಸೋಹಗಳನ್ನು ಸಪ್ತಾಹದ ಜೊತೆಜೊತೆಗೆ ಕಾದ್ರೊಳ್ಳಿಯಲ್ಲಿ ನಡೆಸಿಕೊಂಡು ಬರತೊಡಗಿದರು. ಅದೃಶ್ಯಾನಂದ ಆಶ್ರಮ ಒಂದನ್ನು ನಡೆಸತೊಡಗಿದರು. ಭಕ್ತರಿಗೆ ಜ್ಞಾನೋಪದೇಶ ಪಡೆಯಲು ಈ ಸಪ್ತಾಹಗಳಿಂದ ಬಹಳಷ್ಟು ಅನುಕೂಲವಾಯಿತು. ದತ್ತವಾಡದ ಬಸನಗೌಡ ಮಹಾರಾಜರನ್ನೂ (೧೯೧೧-೧೯೯೨) ಆಮಂತ್ರಿಸಿ ಅವರ ನೇತೃತ್ವದಲ್ಲಿ ಮತ್ತೆ ಹಲವಾರು ಆಧ್ಯಾತ್ಮದ ಕಾರ್ಯಕ್ರಮಗಳನ್ನು ನಡೆಸತೊಡಗಿದರು. ಪೂಜ್ಯ ಅಪ್ಪಯ್ಯ ಸ್ವಾಮಿಗಳು ಕ್ರಿ.ಶ. ೧೯೭೮ರಲ್ಲಿ ಲಿಂಗೈಕ್ಯರಾದರು. ಗುರುಗಳ ಮಾರ್ಗದರ್ಶನಂತೆ ಅಪ್ಪಯ್ಯ ಶ್ರೀಗಳವರು ಕಾದ್ರೊಳ್ಳಿಯಿಂದ ದತ್ತವಾಡಕ್ಕೆ ಆಧ್ಯಾತ್ಮ ಸಾಗರದಲ್ಲಿ ಹೋಗಲು ಹಡಗು ಕಟ್ಟಿದ್ದಾರೆ.

ಅಪ್ಪಯ್ಯ ಸ್ವಾಮಿಗಳು ದತ್ತವಾಡದಲ್ಲಿಯ ಬಾಬಾ ಮಹಾರಾಜರ ಗದ್ದುಗೆಯ ಜೀರ್ಣೋದ್ಧಾರ ಮಾಡಿಸುವಲ್ಲಿಯೂ ವಿಶೇಷ ಆಸಕ್ತಿ ತಾಳಿದವ ರಾದರು. ಅದೃಶ್ಯಯ್ಯ ಶಿವಯೋಗಿಗಳ ಮನೀಷೆಯಲ್ಲಿ ಊರ ಹಿರಿಯರ ಜೊತೆಗೆ ಸಮಾಲೋಚಿಸಿ ಕ್ರಿ.ಶ. ೧೯೩೮ ಜನೇವರಿ ೧೪ ರಿಂದ ೨೦ ರವರೆಗೆ ಮಕರ ಸಂಕ್ರಮಣದ ಶುಭಗಳಿಗೆಯಲ್ಲಿ ಬೃಹತ್ ಸಪ್ತಾಹವೊಂದನ್ನು ಪ್ರಾರಂಭಿ ಸಿದರು. ಅಂದು ಹೊತ್ತಿಸಿದ ಈ ಸಪ್ತಾಹ ದೀಪವು ಕಾದ್ರೊಳ್ಳಿಯಲ್ಲಿ ಪ್ರಜ್ವಲಿಸುತುತ್ತಿರುವುದು ಇತಿಹಾಸವಾಗಿದೆ. ಅಂದಿನಿಂದ ಅವ್ಯಾಹತವಾಗಿ ಅನ್ನದಾಸೋಹದೊಂದಿಗೆ ಈ ಜ್ಞಾನದಾಸೋಹ ನಡೆದುಕೊಂಡು ಬರುತ್ತಿರುವುದ

ರಿಂದ ಪೂಜ್ಯ ಅಪ್ಪಯ್ಯ ಮಹಾಸ್ವಾಮಿಗಳು ತಮ್ಮ ಗುರುಗಳಾದ ಅದೃಶ್ಯಯ್ಯ ಶಿವಯೋಗಿಗಳಿಗೂ ಹಾಗೂ ಅವರ ಗುರುಗಳಾದ ದತ್ತವಾಡದ ಬಾಬಾ ಮಹಾರಾಜರ ಸ್ಮರಣಾರ್ಥ ಹೊತ್ತಿಸಿರುವ ಚಿರಂತನ ನಂದಾದೇವಿಗೆಯಾಗಿರುವುದು.

ಸದ್ಗುರು ಶ್ರೀ ಅಪ್ಪಯ್ಯ ಮಹಾಸ್ವಾಮಿಗಳವರು ಕ್ರಿ.ಶ. ೧೯೭೪ ರಲ್ಲಿ ಲಿಂಗೈಕ್ಯರಾದ ಬಳಿಕ ಅವರ ಮಗ ಬಸವಯ್ಯನವರ ಮಗ ಬಾಳಾಕ್ಷರು (ಬಾಳಯ್ಯ) ಅಧಿಕಾರಸ್ಥರಾಗಿರುವರು. ಶ್ರೀ ಬಾಳಾಕ್ಷ ಮಹಾಸ್ವಾಮಿಗಳು, ಶ್ರೀ ಬಸಯ್ಯ ಮತ್ತು ಸುಶೀಲಮ್ಮ ಅವರಿಗೆ ಸತ್ಪುತ್ರರಾಗಿ ಕ್ರಿ.ಶ. ೧೯೬೧ ರಲ್ಲಿ ಜನಿಸಿದವರಾಗಿದ್ದಾರೆ. ಇವರು ಬಿ.ಎ. ಪದವಿ ಪಡೆದವರಾಗಿದ್ದು ಇತ್ತೀಚೆಗೆ ಮೈಸೂರು ಮುಕ್ತ ವಿಶ್ವವಿದ್ಯಾಲಯದಿಂದ ಎಂ. ಎ. ಪದವಿಯನ್ನೂ ಪಡೆದುಕೊಂಡವರಾಗಿದ್ದಾರೆ. ಸತತ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಗಳವರು ಕನ್ನಡ ಮತ್ತು ಸಂಸ್ಕೃತ ಗ್ರಂಥಗಳನ್ನು ವಿಶೇಷವಾಗಿ ಓದುತ್ತಲಿರುತ್ತಾರೆ. ಚಿಕ್ಕಂದಿನಿಂದಲೂ ಸಂಗೀತದಲ್ಲಿ ವಿಶೇಷ ಆಸಕ್ತಿ ತಾಳಿದವರಾಗಿದ್ದು ಸಂಗೀತ ಶಾಸ್ತ್ರವನ್ನು ಬಲ್ಲವರಾಗಿರುವರು. ಸ್ವತಃ ಕನ್ನಡದಲ್ಲಿ ತತ್ತ್ವ ಪದಗಳನ್ನು ಸುಪ್ರಭಾತಗಳನ್ನು ರಚಿಸುತ್ತಲಿರುವರು.

ಶ್ರೀಮಠದಲ್ಲಿ ತಮ್ಮ ಪೂಜ್ಯರು ಹಾಕಿಕೊಟ್ಟಿರುವ ಸಂಪ್ರದಾಯಗಳನ್ನು ಈಗಲೂ ನಡೆಸಿಕೊಂಡು ಬರುತ್ತಲಿರುವರು. ಮಠದ ವಿಸ್ತೀರ್ಣವನ್ನು ಭಕ್ತರ ಅಭಿಲಾಷೆಯಂತೆ ನೆರವೇರಿಸಿಕೊಟ್ಟಿರುವರು. ಮಠದ ಅಂದ. ಚಂದಕ್ಕೂ ಜನೋಪಯೋಗಿ ಕಾರ್ಯಕ್ಕೂ ಹೆಚ್ಚಿನ ಮಹತ್ವ ಕೊಟ್ಟಿರುವರು. ಸಕಲ ಮತ ಸಂಪ್ರದಾಯದ ಮಠವಿದಾಗಿದ್ದು ಎಲ್ಲ ಜಾತಿ ಜನಾಂಗದ ಜನರೂ ಶ್ರೀಮಠದ ಸದ್ಭಕ್ತರಾಗಿರುವರು. ಕಾದ್ರೊಳ್ಳಿಯ ಈ ಅದೃಶ್ಯಾನಂದ ಆಶ್ರಮದಂತೆ ಹಲವಾರು ಕಡೆಗಳಲ್ಲಿ ಧರ್ಮಜಾಗೃತಿಗಾಗಿ ಅಲ್ಲಲ್ಲಿ ಶಾಖೆಗಳನ್ನು ತೆರೆದು ಆ ಮೂಲಕ ಶಾಸ್ತ್ರ ಪ್ರವಚನಗಳನ್ನು ನಡೆಸಿಕೊಂಡು ಬರುತ್ತಲಿರುವರು. ಸಾಮೂಹಿಕ ವಿವಾಹಗಳನ್ನು ನಡೆಸುತ್ತಲಿರುವರು. ಆರ್ಥಿಕ ಮುಗ್ಗಟ್ಟಿನಿಂದ ಧೈರ್ಯಗೆಡುವಂತಹರನ್ನು ಗುರುತಿಸಿ, ಅವರಿಗೆ ಧೈರ್ಯ ಹೇಳಿ, ಸಾಮಾಜಿಕ ಅಭಿವೃದ್ಧಿಯಲ್ಲಿ ಹೆಚ್ಚಿನ ಸೇವೆ ಸಲ್ಲಿಸುತ್ತಿರುವರು. ಎಲ್ಲಕ್ಕೂ ಮಿಗಿಲಾಗಿ ಜನತೆಯಲ್ಲಿ ನೈತಿಕ ಸ್ಥೈರ್ಯವನ್ನು ತುಂಬುತ್ತಲಿರುವರು.

ಶ್ರೀ ಬಾಳಾಕ್ಷ ಅವರ ಲಗ್ನವು ಲಿಂಗನಮಠ ಹಿರೇಮಠ ಮನೆತನದ ಶ್ರೀಮತಿ ವೀಣಾ ಅವರೊಂದಿಗೆ ಕ್ರಿ.ಶ. ೧೯೯೨ ರಲ್ಲಿ ಆಗಿದ್ದು ಇವರಿಗೆ ಮೂವರು ಹೆಣ್ಣು ಮತ್ತು ಒಂದು ಗಂಡು ಮಗು ಜನಿಸಿರುವುದು.

ಶ್ರೀ ಭಾಳಾಕ್ಷ ಮಹಾಸ್ವಾಮಿಗಳು ಪ್ರಪಂಚದಲ್ಲಿದ್ದೂ ಇಲ್ಲದಂತೆ ಪಾರಮಾರ್ಥದ ಅಭ್ಯಾಸ ನಡೆಸುವಲ್ಲಿಯು ತತ್ಪರರಾಗಿರುವರು. ಸಾಧನೆಯ ಬಲದಿಂದ ಭಕ್ತರಿಗೆ ಪ್ರಪಂಚದಲ್ಲಿದ್ದು ಪಾರಮಾರ್ಥ ಗೆದೆಯುವ ಶರಣ ಧರ್ಮ ವನ್ನು ಮಾರ್ಮಿಕವಾಗಿ ಉಪದೇಶ ಮಾಡುತ್ತಲಿರುವರು. ಅದೃಶ್ಯಾನಂದ ಆಶ್ರಮದ ಪರವಾಗಿ ಹಲವಾರು ಗ್ರಂಥಗಳನ್ನು ಮಂಗಳಾರತಿ, ಸುಪ್ರಭಾತ ಗಳನ್ನು ಪ್ರಕಟಿಸುತ್ತ ಬಂದಿರುವರು. ದತ್ತವಾಡ ಬಾಬಾ ಮಹಾರಾಜರ ಜೀವನ ಚರಿತ್ರೆಗೆ ಸಂಬಂಧಿಸಿದ ಗ್ರಂಥವೂ ಈ ಮಠದ ವತಿಯಿಂದ ಪ್ರಕಟವಾಗಿರು ವುದನ್ನು ಉಲ್ಲೇಖಿಸಬಹುದಾಗಿದೆ.

ಬಾಬಾ ಮಹಾರಾಜರ ಪೌತ್ರರಾದ ಬಸನಗೌಡ ಮಹಾರಾಜರ ಚಿ. ಡಾ. ಅದೃಶ್ಯಗೌಡರು ದತ್ತವಾಡದಲ್ಲಿಯೂ ಅಪ್ಪಯ್ಯ ಮಹಾಸ್ವಾಮಿಗಳ ಪೌತ್ರರಾದ ಶ್ರೀ ಬಾಳಯ್ಯ ಮಹಾಸ್ವಾಮಿಗಳು ಕಾದರವಳ್ಳಿಯಲ್ಲಿಯೂ ಗೃಹಸ್ಥರಾಗಿದ್ದು ಕೊಂಡು ದತ್ತವಾಡ ಸಂಪ್ರದಾಯದ ಉದಾತ್ತ ಶರಣ, ಸಂತರ ತತ್ವ ಸಿದ್ಧಾಂತ ಗಳನ್ನು ಈ ಪ್ರದೇಶದ ಭಕ್ತರಿಗೆ ಸತತ ಮಾರ್ಗದರ್ಶನ ಮಾಡುತ್ತಿರುವುದು ಭಕ್ತಿ ಪ್ರವಾಹದ ನಿದರ್ಶನವಾಗಿರುವುದು.

ದತ್ತವಾಡದ ಬಾಬಾ ಮಹಾರಾಜರ ತರುವಾಯ ಶ್ರೀ ಬಸನಗೌಡರು ಕ್ರಿ.ಶ. ೧೯೧೧ರಲ್ಲಿ ಉತ್ತರಾಧಿಕಾರಿಗಳಾಗಿ ಅಧಿಕಾರಸ್ಥರಾದರು. ಕಾದ್ರೊಳ್ಳಿಯ ತಮ್ಮ ಗುರು ಬಂಧುಗಳಾಗಿ ಶ್ರೀ ಅಪ್ಪಯ್ಯ ಸ್ವಾಮಿಗಳವರ ಜೊತೆಗೆ ವಚನ ಗ್ರಂಥಗಳನ್ನು ಉತ್ತಮೋತ್ತಮ ಅಧ್ಯಾತ್ಮ ಗ್ರಂಥಗಳನ್ನು ಓದಿಕೊಂಡರು. ದತ್ತವಾಡದಲ್ಲಿ ಪ್ರತಿವರ್ಷ ಶಿವರಾತ್ರಿಯಿಂದ ಜ್ಞಾನದಾಸೋಹ ಸಪ್ತಾಹವನ್ನು ಕಾದ್ರೊಳ್ಳಿಯ ಶಿವಯೋಗಿಗಳ ಸನ್ನಿಧಿಯಲ್ಲಿ ನಡೆಸುತ್ತ ಬಂದಿರುವರು.

ಸದ್ಗುರು ಶ್ರೀ ಬಸನಗೌಡ ಮಹಾರಾಜರು ಲಿಂಗೈಕ್ಯರಾದ ತರುವಾಯ ಕ್ರಿ. ಶ. ೧೯೬೨ರಲ್ಲಿ ಅವರ ಚಿರಂಜೀವರಾದ ಡಾ. ಅದೃಶ್ಯಗೌಡರು ಮಹಾರಾಜ ರಾಗಿರುವರು. ಡಾ. ಅದೃಶ್ಯಗೌಡರ ತಾಯಿ ಶ್ರೀಮತಿ ಗೋದಾವರಿಯವರು.

ಇವರ ಹೊಟ್ಟೆಯಿಂದ ಅದೃಶ್ಯಗೌಡರು ಕ್ರಿ.ಶ. ೧೯೫೫ರಲ್ಲಿ ಜನಿಸಿದವರಾಗಿದ್ದಾರೆ. ಇವರು ಐದು ವರುಷದವರಿದ್ದಾಗ (೧೯೬೪) ಮಗನಿಗೆ ತಂದೆ ಬಸನಗೌಡರು ಭಗವದ್ಗೀತೆಯನ್ನು ಕಂಠಪಾಠ ಮಾಡಿಸಿದ್ದರು. ಚಿಕ್ಕಂದಿನಿಂದಲೇ ಅಧ್ಯಾತ್ಮದ ಕಡೆಗೆ ಒಲವು ಮೂಡಿಸಿಕೊಂಡಿದ್ದ ಅದೃಶ್ಯಗೌಡರು ಮರಾಠಿ ಮಾಧ್ಯಮದಲ್ಲಿ ಏಳನೇ ಈಯತ್ತೆಯವರೆಗೆ ಓದಿದರು. ಮುಂದೆ ತಮ್ಮ ಬಿ.ಎ.ಎಂ.ಎಸ್. ಪದವಿಗಾಗಿ ಬೆಳಗಾವಿಯ ಕೆ.ಎಲ್.ಇ. ಸಂಸ್ಥೆಯ ಬಿ.ಎಂ. ಕಂಕನವಾಡಿ ಆಯುರ್ವೇದ ಮಹಾವಿದ್ಯಾಲಯದಲ್ಲಿ ಅಧ್ಯಯನ ಮಾಡಿ ಈ ವೈದ್ಯ ಪದವಿಯನ್ನು ಕ್ರಿ.ಶ. ೧೯೮೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಪಡೆದವರಾಗಿದ್ದಾರೆ.

ಡಾ. ಅದೃಶ್ಯಗೌಡರ ಲಗ್ನವು ಬೆಳಗಾವಿ ಜಿಲ್ಲೆಯ ಪಾರಿಶ್ವಾಡ ಗ್ರಾಮದ ಶ್ರೀ ನಾಶಿಪುಡಿ ಮನೆತನದ ಶ್ರೀಮತಿ ಗಂಗಮ್ಮ ಅವರೊಂದಿಗೆ ಆಗಿರುವುದು. ಈ ದಂಪತಿಗಳಿಗೆ ಗಿರಿಜಾ, ಮೈತ್ರೇಯಿ, ಶರ್ವಾಣಿ ಮೂವರು ಹೆಣ್ಣುಮಕ್ಕಳೂ ಹೃಷಿಕೇಶ ಹೆಸರಿನ ಗಂಡು ಮಗ ಇರುವರು. ಸರಳ ಸಜ್ಜನಿಕೆಗೆ ಹೆಸರಾದ ಡಾ. ಅದೃಶ್ಯಗೌಡರು ಬರ ಹೋಗುವ ಭಕ್ತರಿಗೆ ಅನ್ನದಾಸೋಹ ಜ್ಞಾನದಾಸೋಹ ನೀಡುವಲ್ಲಿ ತತ್ಪರರಾಗಿರುವರು. ಯಾವ ಆಸೆ ಆಮಿಷಗಳಿಗೆ ಬಲಿಬೀಳದ, ಉದಾರ ಹೃದಯದ, ಉನ್ನತ ವ್ಯಕ್ತಿತ್ವದ ಮಹಾರಾಜರು ಆಯುರ್ವೇದ ವೈದ್ಯರೂ ಆಗಿರುವುದರಿಂದ ಜನೋಪಯೋಗಿ ವೈದ್ಯಕೀಯ ಸೇವೆಯನ್ನೂ ಸಲ್ಲಿಸುತ್ತಲಿರುವರು.

ಪೀಠ ಪರಂಪರೆಗನುಸಾರವಾಗಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಚಾಚೂ ತಪ್ಪದೆ ನಡೆಸಿಕೊಂಡು ಬರುತ್ತಿರುವರು. ಬಾಬಾ ಮಹಾರಾಜರ ಹಾಗೂ ಬಸನಗೌಡ ಮಹಾರಾಜರು ಹಾಕಿಕೊಟ್ಟಿರುವ ತತ್ವ ಸಿದ್ಧಾಂತಗಳನ್ನು ನಡೆ–ನುಡಿಗಳೆರಡರಲ್ಲಿಯೂ ಅನುಸರಿಸಿಕೊಂಡು ಬರುತ್ತಿರುವುದಲ್ಲದೆ ಭಕ್ತರಿಗೆ ಅವುಗಳ ಮರ್ಮವನ್ನು ಪರಿಣಾಮಕಾರಿಯಾಗಿ ತಿಳಿಯ ಪಡಿಸುತ್ತಿರುವುದು ದತ್ತವಾಡದ ಆಧ್ಯಾತ್ಮ ಸಂಪ್ರದಾಯದ ಜೀವಂತಿಕೆಗೆ ಸಾಕ್ಷಿಯಾಗಿರುವುದು. ಪೂಜ್ಯರ ಆಶ್ರಮ 'ಮನೆ ನೋಡಾ ಬಡವರು. ಮನ ನೋಡಾ ಸಂಪನ್ನರು' ಎನ್ನುವುದನ್ನು ಸಾರುವಂತಿರುವುದು. ಆಶ್ರಮದ ಪರವಾಗಿ ಹಲವಾರು ಗ್ರಂಥಗಳನ್ನು ಪ್ರಕಟಪಡಿಸುತ್ತಲಿರುವರು.

ಕಾದ್ರೊಳ್ಳಿಯ ಶ್ರೀ ಮಠದಲ್ಲಿ ಎಲ್ಲ ಜಾತಿ ಜನಾಂಗದವರಿಗೂ ಮುಕ್ತ ಅವಕಾಶವಿರುವುದು. ಶಿಕ್ಷಣದ ಮೂಲಕ ಶರಣ ಸಾಹಿತ್ಯದ ಪ್ರಚಾರ ಮಾಡಬೇಕೆನ್ನುವ ಮಹತ್ವಾಕಾಂಕ್ಷೆಯನ್ನು ಇಟ್ಟುಕೊಂಡಿರುವ ಶ್ರೀ ಬಾಳಾಕ್ಷ ಮಹಾಸ್ವಾಮಿಗಳು ವೃತ್ತಿ ಶಿಕ್ಷಣ ಕೋರ್ಸ ಪ್ರಾರಂಭಿಸುವ ಯೋಜನೆ ಹಾಕಿಕೊಂಡಿರುವರು. ದತ್ತವಾಡಕ್ಕೂ ಕಾದ್ರೊಳ್ಳಿಗೂ ಅನ್ಯೋನ್ಯ ಅಧ್ಯಾತ್ಮದ ಸಂಬಂಧವಿದೆ. ಎಲ್ಲಿಯೇ ಯಾವುದೇ ಕಾರ್ಯಕ್ರಮವಿರಲಿ ಅಲ್ಲಿ ಎರಡೂ ಸ್ಥಳಗಳ ಪಟ್ಟಾಧ್ಯಕ್ಷರೂ ಭಕ್ತರೂ ಸೇರಿರುತ್ತಾರೆ. ಕಾದ್ರೊಳ್ಳಿಯಿಂದ ದತ್ತವಾಡದವರೆಗೆ ಶಿವಯೋಗಿಗಳು ಅಧ್ಯಾತ್ಮದ ಭಕ್ತಿಯ ಜ್ಯೋತಿಯನ್ನು ಹೊತ್ತಿಸಿಕೊಂಡು ಹೋಗುತ್ತಲಿರುತ್ತಾರೆ. ಪ್ರತಿವರುಷ ಸಂಕ್ರಮಣದಲ್ಲಿ ನಡೆಸಿಕೊಂಡು ಬರುತ್ತಿರುವ ಸಪ್ತಾಹವಂತೂ ಯಾವ ಆಮಂತ್ರಣ ಪತ್ರಿಕೆಗಳಿಲ್ಲದೆಯೂ ಜನ ಜಾತ್ರೆ ಸೇರಿರುತ್ತದೆ. ಅದೃಶ್ಯಯ್ಯ ಶಿವಯೋಗಿಗಳ ಮತ್ತು ಅಪ್ಪಯ್ಯ ಮಹಾಸ್ವಾಮಿಗಳವರ ಈ ಪುಣ್ಯ ಭೂಮಿಗೆ ಜನಸಾಗರ ಹರಿದು ಬರುತ್ತಿರುತ್ತದೆ.

ಈ ಈರ್ವರೂ ಮಹಾತ್ಮರ ಕುರಿತು ನೀಲಕಂಠಪ್ಪ ಪತ್ತಾರ, ಬಸವಣ್ಣೆಪ್ಪ ಗೌಡ್ರು, ಚಿದಾನಂದ ಪತ್ತಾರ, ದತ್ತವಾಡ ಬಸನಗೌಡ ಮಹಾರಾಜರು ಹಾಗೂ ಗಂಗಮ್ಮ ತಾಯಿಯವರೂ ಹಣ್ಣಿಕೇರಿಯ ಬಸವಂತಪ್ಪನವರು, ಬಾಳಾಕ್ಷ ಸ್ವಾಮಿಗಳು, ಶ್ರೀ ಬಿ. ವ್ಹಿ. ಕಟ್ಟಿ ಸಾಹೇಬರು, ಶ್ರೀ ಶಿವಜಾತಯ್ಯ ದಳವಾಯಿ ಯವರು ಮೊದಲಾದವರು ಪದಗಳನ್ನು ಜೀವನ ಚರಿತ್ರೆಗಳನ್ನೂ ಬರೆದಿರು ವುದನ್ನೂ ಕಾಣಬಹುದಾಗಿದೆ.

■■

ಪ್ರಕಟಿತ ಪುಸ್ತಕ ಮತ್ತು ದಾನಿಗಳು

ಕ್ರ.ಸಂ.	ಗ್ರಂಥದ ಹೆಸರು	ವರ್ಷ	ದೇಣಿಗೆ ನೀಡಿದವರು
೧.	ಬಸವಣ್ಣನವರ ಅಷ್ಟಾವರಣ ನಿಷ್ಠೆ	೧೯೭೫	ಭೀಮಳ್ಳಿ ಸಹೋದರರು
೨.	ಶರಣರ ಅಷ್ಟಾವರಣ ನಿಷ್ಠೆ	೧೯೭೮	ಸದ್ಭಾವ ಗೋಷ್ಠಿ
೩.	ಗುರುಕರುಣ ತ್ರಿವಿಧಿ	೧೯೮೧	ಸದ್ಭಾವ ಗೋಷ್ಠಿ
೪.	Thoughts and Action of Basava	೧೯೮೩	ಶ್ರೀ ನಾಗಪ್ಪ ಕಿರಣಗಿ
೫.	The Story of Sri Sharanbasaveshwar	೧೯೮೪	ಸದ್ಭಾವ ಗೋಷ್ಠಿ
೬.	ಶ್ರೀ ತೋಂಟದ ಸಿದ್ಧಲಿಂಗ ಸ್ವಾಮಿಗಳ ವಚನಗಳು	೧೯೮೭	ಸದ್ಭಾವಗೋಷ್ಠಿ
೭.	ದೇವರ ದಾಸಿಮಯ್ಯನ ವಚನಗಳು	೧೯೮೮	ಶ್ರೀ ಮಡಿವಾಳಪ್ಪ ಹತ್ತೂರೆ
೮.	ಅನುಭಾವಿಗಳ ಅನುಭವ ಪದಗಳು (ಭಾಗ ೧)	೧೯೮೯	ಶ್ರೀಮತಿ ಅಂಬುಬಾಯಿ ಉಪಳಾಂವಕರ
೯.	ಶ್ರೀ ಚರಲಿಂಗೇಶ್ವರ ಪುರಾಣ	೧೯೯೦	ವಿರೂಪಾಕ್ಷಪ್ಪ ಬಳ್ಳಾರಿ
೧೦.	ಕಲಬುರ್ಗಿ ಗದ್ದುಗೆಮಠ	೧೯೯೦	ಸದ್ಭಾವಗೋಷ್ಠಿ
೧೧.	ಮಹಾದೇವಿಯಕ್ಕನ ನೂರೊಂದು ವಚನಗಳು	೧೯೯೧	ಶ್ರೀಮತಿ ಸುಜ್ಞಾನಬಾಯಿ ಎಂ. ಮಾಲಾ
೧೨.	ಶರಣಾರ್ಥಿ	೧೯೯೧	ಶ್ರೀ ಅಮೃತಾ ಚಿಪ್ಪಟೆ
೧೩.	ವಚನಸಂಪದ	೧೯೯೨	ಶ್ರೀ ಶಾಂತಲಿಂಗಪ್ಪ ಎಸ್. ಪಾಟೀಲ
೧೪.	ಸದ್ಭಾವ ಸಂಪದ	೧೯೯೨	ಸದ್ಭಾವಗೋಷ್ಠಿ ರಜತಮಹೋತ್ಸವ ಸಮಿತಿ
೧೫.	ವಚನಜ್ಯೋತಿ	೧೧೯೨	ಶ್ರೀಮಠ

೧೬.	ವಕ್ತೃತ್ವ ಕಲೆ	೧೯೯೩	ಪಾರ್ವತಿ ಮೆಡಿಕಲ್ಸ
೧೭.	ಜನಪ್ರಿಯ ಗೀತೆ	೧೯೯೪	ಶಿವರಾಜ ಪಾಟೀಲ
೧೮.	ಶ್ರೀ ಮದನಾದಿ ಸಿದ್ಧಲಿಂಗ ಸ್ತವನಮ್	೧೯೯೪	ಶ್ರೀಮಠ
೧೯.	ಅನುಭಾವಿಗಳ ಅನುಭವ ಪದಗಳು (ಭಾಗ ೨)	೧೯೯೫	ಎ. ಎ. ಬಿರಾದಾರ
೨೦.	ಗದ್ದುಗೆಮಠ ದರ್ಶನಂ	೧೯೯೬	ಶ್ರೀಮಠ
೨೧.	ರಾಷ್ಟ್ರೀಯ ಸದ್ಭಾವ ಗೀತೆಗಳು	೧೯೯೭	ಶ್ರೀಮತಿ ಸುಜ್ಞಾನಿದೇವಿ ನೂಲಾ
೨೨.	ಶಿವಶರಣೆಯರ ವಚನಗಳು	೧೯೯೩	ಶಿವಶರಣ ಮಠಪತಿ
೨೩.	ಸರ್ವಜ್ಞನ ತ್ರಿಪದಿಗಳು	೧೯೯೮	ಸದ್ಭಾವಗೋಷ್ಠಿ
೨೪.	ಶರಣರ ಆರ್ಥಿಕ ಚಿಂತನ	೧೯೯೮	ಗುರುಲಿಂಗಪ್ಪ ಬಿರಾದಾರ
೨೫.	ಗುರುಬಸವ ದರ್ಶನಂ	೧೯೯೯	ಸದ್ಭಾವಗೋಷ್ಠಿ
೨೬.	ಶ್ರೀ ಬಸವಲಿಂಗ ನಾಮಾವಳಿ	೨೦೦೦	ಶ್ರೀಮಠ
೨೭.	ಶುಭ ನುಡಿಗಳು	೨೦೦೧	ಶ್ರೀಮಠ
೨೮.	ಅಷ್ಟಾವರಣ ಮಹಾತ್ಮೆ	೨೦೦೨	ಸಂಕ್ರೆಪ್ಪ ರಾಯಚೂರ
೨೯.	ಚೈತನ್ಯ ಜಂಗಮ	೨೦೦೩	ಎ. ಎ. ಬಿರಾದಾರ, ನಾಗಣ್ಣ ಗಣಜಲಖೇಡ, ಚನ್ನಪ್ಪರಾಜೇಶ್ವರ, ಚಂದ್ರಕಾಂತ ಕಲಶೆಟ್ಟಿ, ಶಿವಕುಮಾರ ಗಡಗಿ ದಂಪತಿಗಳು
೩೦.	ತತ್ವಪದಗಳು	೨೦೦೩	ಶ್ರೀ ರೇವಣಸಿದ್ಧೇಶ್ವರ ಪ್ರಿಂಟರ್ಸ್
೩೧.	ಆದ್ಯರ ಅಂತರಂಗ	೨೦೦೪	ಗಂಗಸಿರಿ ಬಂಧುಗಳು
೩೨.	ಜಂಗಮ ಪುಂಗವರು ಭಾಗ ೧	೨೦೦೪	ಡಾ. ಸಂಗಮೇಶ ಪಾಟೀಲ
೩೩.	ಜಂಗಮ ಪುಂಗವರು ಭಾಗ ೨	೨೦೦೫	ನೀಲಕಂಠಪ್ಪ ರಾಜಾಪೂರ



ಕಲಬುರ್ಗಿಯ ಮಹಾತ್ಮಾ ಬಸವೇಶ್ವರ ನಗರದ ನಿವಾಸಿ ಶ್ರೀ ನೀಲಕಂಠಪ್ಪ ರಾಜಾಪುರ ಅವರು ಚಿತಾಪುರ ತಾಲೂಕ ಕೊಡದೂರ ಗ್ರಾಮದ ಮರಿಯಪ್ಪ ಮತ್ತು ಸಂಗಮ್ಮ ದಂಪತಿಗಳ ಜೇಷ್ಠ ಸುಪುತ್ರರು. ಕ್ರಿ. ಶ. ೧೮-೬-೧೯೪೦ರಂದು ಜನಿಸಿದ ಶ್ರೀ ನೀಲಕಂಠಪ್ಪನವರು ಬಿ.ಎ. ಎಲ್.ಎಲ್.ಬಿ ಪದವೀಧರರು. ಕ್ರಿ. ಶ. ೧೯೬೫ರಲ್ಲಿ ಎ.ಪಿ.ಎಂ.ಸಿ ಯಲ್ಲಿ ಸರಕಾರಿ ಕೆಲಸಕ್ಕೆ ಸೇರಿಕೊಂಡು ಕ್ರಿ. ಶ. ೧೯೯೮ರಲ್ಲಿ ರಾಯಚೂರು ಎ.ಪಿ.ಎಂ.ಸಿ. ಸಹಾಯಕ ನಿರ್ದೇಶಕರ ಹುದ್ದೆಯಿಂದ, ಪ್ರಾಮಾಣಿಕ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿರುವರು. ಡಾ. ಲಠ್ಠೆಯವರ ಈ ಗ್ರಂಥಕ್ಕೆ ದೇಣಿಗೆ ನೀಡಿ, ಗ್ರಂಥ ದಾಸೋಹಿ ಎನಿಸಿರುವರು.

ಶ್ರೀ ನೀಲಕಂಠಪ್ಪನವರು ಮಾವಿನಸೂರ ಗ್ರಾಮದ ಶ್ರೀ ನೀಲಕಂಠರಾವ ಪಾಟೀಲರ ಮಗಳು ಶ್ರೀಮತಿ ಕಾಂತಾಬಾಯಿಯವರೊಂದಿಗೆ ಲಗ್ನವಾದರು. ಸತಿಪತಿಗಳೊಂದಾದ ಇವರಿಗೆ ಮೂವರು ಗಂಡು ಮಕ್ಕಳಿರುವರು. ಹಿರಿಯವರಾಗಿ ಶ್ರೀ ರವೀಂದ್ರಕುಮಾರರು ಮತ್ತು ಮೂರನೇ ಮಗ ಶ್ರೀ ಆನಂದ ಕುಮಾರರು ವೈದ್ಯರಿರುವರು. ಎರಡನೆಯ ಮಗ ಶ್ರೀ ಅರವಿಂದಕುಮಾರರು ಅಮೇರಿಕಾದ ನ್ಯೂಝೇರ್ಸಿ ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಇಂಜನಿಯರರಾಗಿ ಸೇವೆ ಸಲ್ಲಿಸುತ್ತಲಿರುವರು. ಮೂವರ ಲಗ್ನವಾಗಿದ್ದು ಸುಖದ ಸಂಸಾರ ನಡೆಸುತ್ತಲಿರುವರು. ಸರಳ-ಸಜ್ಜನಿಕೆಗೆ ಹೆಸರಾದ ದಯಾಮಯಿ ಶ್ರೀ ನೀಲಕಂಠಪ್ಪ ರಾಜಾಪೂರ ದಂಪತಿಗಳು ತಮ್ಮ ಮಕ್ಕಳು ಮೊಮ್ಮಕ್ಕಳೊಂದಿಗೆ ಸಂತೃಪ್ತಿಯ ಜೀವನ ನಡೆಸುತ್ತಲಿರುವರು. ಸಮಾಜದ ಸೇವೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀ ನೀಲಕಂಠಪ್ಪನವರು ಕಲಬುರ್ಗಿಯ ಮಕ್ತಂಪುರ ಗದ್ದುಗೆಮಠದ ಪೂಜ್ಯ ಶ್ರೀ ಮ. ನಿ. ಪ್ರ. ರೇವಣಸಿದ್ಧಮಹಾಸ್ವಾಮಿಗಳವರ ಪರಮಭಕ್ತರೂ ಆಗಿರುವರು.

ಡಾ. ಸಂಗಮೇಶ ಪಾಟೀಲ
ಬಸವೇಶ್ವರ ಕ್ಲಿನಿಕ್, ಬಸವೇಶ್ವರ ನಗರ
ಗುಲಬರ್ಗಾ

ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಗದಗ ✆ ೨೩೭೨೫೬೬